ಶುಕ್ರವಾರ, ಜುಲೈ 22, 2022 | ₹ 6.00

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನ್ಯಾಷನಲ್ ಹೆರಾಲ್ಡ್ ಪ್ರಕರಣ: 25ಕ್ಕೆ ಮತ್ತೆ ಸೋನಿಯಾ ವಿಚಾರಣೆ

ದೇಶವ್ಯಾಪಿ ಕಾಂಗ್ರೆಸ್ ಪ್ರತಿಭಟನೆ

ಸೋನಿಯಾ ಗಾಂಧಿ ಅವರನ್ನು ಇ.ಡಿ ವಿಚಾರಣೆಗೆ ಒಳಪಡಿಸಿರುವುದನ್ನು ಖಂಡಿಸಿ ಚಂಡೀಗಡದಲ್ಲಿ ಗುರುವಾರ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಪೊಲೀಸರು ಜಲಫಿರಂಗಿ ಪ್ರಯೋಗಿಸಿದರು —ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ನ್ಯಾಷನಲ್ ಹೆರಾಲ್ಡ್ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ಜಾರಿ ನಿರ್ದೇಶನಾಲಯವು (ಇ.ಡಿ) ಗುರುವಾರ ಎರಡು ತಾಸು ವಿಚಾರಣೆಗೆ ಒಳಪಡಿಸಿದೆ. ಜುಲೈ 25ರಂದು ಮತ್ತೆ ವಿಚಾರಣೆಗೆ ಹಾಜರಾಗುವಂತೆ ಸಮನ್ಸ್ ನೀಡಿದೆ.

ಸೋನಿಯಾ ಅವರನ್ನು ಇ.ಡಿ ವಿಚಾರಣೆಗೆ ಒಳಪಡಿಸುವುದರ ವಿರುದ್ಧ ಕಾಂಗ್ರೆಸ್ ದೇಶದ ಹಲವೆಡೆ ತೀವ್ರ ಪ್ರತಿಭಟನೆ ನಡೆಸಿದೆ. ರಸ್ತೆ ತಡೆ, ರೈಲು ತಡೆ ನಡೆಸಿದೆ. ಕಾಂಗ್ರೆಸ್‌ನ ಎಲ್ಲಾ ಸಂಸದರು ಪ್ರತಿಭಟನೆ ನಡೆಸಿದ್ದಾರೆ. ಕೆಲವೆಡೆ ರಾಜಭವನಕ್ಕೆ ಮುತ್ತಿಗೆ ಹಾಕಲು ಕಾಂಗ್ರೆಸ್ ಕಾರ್ಯಕರ್ತರು ಯತ್ನಿಸಿದ್ದಾರೆ. ಪ್ರತಿಭಟನಕಾರರನ್ನು ಪೊಲೀಸರು ವಶಕ್ಕೆ ಪಡೆದು, ನಂತರ ಬಿಡುಗಡೆ ಮಾಡಿದ್ದಾರೆ.

ಇಲ್ಲಿನ ಇ.ಡಿ ಕಚೇರಿಯಲ್ಲಿ ಮಧ್ಯಾಹ್ನ 12.30ರ ಸುಮಾರಿಗೆ ಸೋನಿಯಾ ಅವರ ವಿಚಾರಣೆ ಆರಂಭವಾಗಿತ್ತು. 2.30ಕ್ಕೆ ವಿಚಾರಣೆಯನ್ನು ದಿನದಮಟ್ಟಿಗೆ ಕೊನೆಗೊಳಿಸಲಾಯಿತು. ಅವರಿಗೆ 28 ಪ್ರಶ್ನೆಗಳನ್ನು ಕೇಳಲಾಗಿತ್ತು. ಅವುಗಳಲ್ಲಿ ಅವರು 27 ಪ್ರಶ್ನೆಗಳಿಗೆ ಉತ್ತರಿಸಿದರು ಎಂದು ಇ.ಡಿ ಮೂಲಗಳು ಹೇಳಿವೆ. 'ಸೋನಿಯಾ ಗಾಂಧಿ ಅವರ ಮನವಿಯ ಮೇರೆಗೆ, ವಿಚಾರಣೆಯನ್ನು ಮುಂದೂಡಲಾಯಿತು. ಕೋವಿಡ್‌ನಿಂದ ಬಳಲಿದ್ದ ಅವರ ಆರೋಗ್ಯ ಮತ್ತು ಅನುಕೂಲವನ್ನು ಗಮನದಲ್ಲಿ ಇರಿಸಿಕೊಂಡು ಈ ನಿರ್ಧಾರ ತೆಗೆದುಕೊಳ್ಳಲಾಯಿತು' ಎಂದು ಇ.ಡಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಆದರೆ ಇದನ್ನು ಕಾಂಗ್ರೆಸ್ ನಿರಾಕರಿಸಿದೆ. 'ಸೋನಿಯಾ ಅವರು ರಾತ್ರಿ 9ರ ವರೆಗೂ ವಿಚಾರಣೆ ಎದುರಿಸಲು ಸಿದ್ಧರಿದ್ದರು. ಆದರೆ ಯಾವುದೇ ಪ್ರಶ್ನೆಗಳಿಲ್ಲ, ನೀವು ಹೊರಡಬಹುದು ಎಂದು ಅಧಿಕಾರಿಗಳು ಹೇಳಿದ್ದರು. ಹೀಗಾಗಿಯೇ ಸೋನಿಯಾ ಹೊರಬಂದರು' ಎಂದು ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್ ಹೇಳಿದ್ದಾರೆ.

- ಭಾರತೀಯ ಯುವ ಕಾಂಗ್ರೆಸ್ ಕಾರ್ಯಕರ್ತರು ದೆಹಲಿಯ ಶಿವಾಜಿ ಬ್ರಿಡ್ಜ್ ರೈಲು ನಿಲ್ದಾಣದಲ್ಲಿ ಹಲವು ರೈಲುಗಳನ್ನು ತಡೆದರು. ದೆಹಲಿ ಲೆಫ್ಟಿನಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರ ನಿವಾಸದ ಎದುರು ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು
- ಪಂಜಾಬ್ ಕಾಂಗ್ರೆಸ್ ಕಾರ್ಯಕರ್ತರು ರಾಜಭವನಕ್ಕೆ ಮುತ್ತಿಗೆ ಹಾಕಲು ಯತ್ನಿಸಿದರು
- ಕೇರಳದ ತಿರುವಂತಪುರ ರೈಲು ನಿಲ್ದಾಣದಲ್ಲಿ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರು, ರೈಲುಗಳ ಸಂಚಾರಕ್ಕೆ ಅಡ್ಡಿಪಡಿಸಿದರು
- ಬಿಹಾರದ ಪಟ್ನಾದಲ್ಲಿರುವ ಜಾರಿ ನಿರ್ದೇಶನಾಲಯ ಕಚೇರಿಯ ನಾಮಫಲಕಕ್ಕೆ ಕಾಂಗ್ರೆಸ್ ಕಾರ್ಯಕರ್ತರು ಮಸಿ ಬಳಿದರು
- ಅಗರ್ತಲಾದಲ್ಲಿ ಇ.ಡಿ ಕಚೇರಿ ಎದುರು ಕಾಂಗ್ರೆಸ್ ಕಾರ್ಯಕರ್ತರು ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಪ್ರತಿಕೃತಿ ದಹಿಸಿದರು

ವಿಶ್ವಗುರುವಿನ ರಾಜಕೀಯ ದ್ವೇಷಕ್ಕೆ ಗುರಿಯಾದ ಸೋನಿಯಾ ಗಾಂಧಿ ಅವರ ಜೊತೆ ನಾವೆಲ್ಲ ಇದ್ದೇವೆ ಎಂದು ತೋರಿಸಲು ಪ್ರತಿಭಟನೆ ಹಮ್ಮಿಕೊಂಡಿದ್ದೇವೆ
ಜೈರಾಮ್ ರಮೇಶ್
ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಕಾಂಗ್ರೆಸ್ ನಾಯಕರ ವಿರುದ್ಧ ಇ.ಡಿ ಪ್ರಯೋಗಿಸುವ ಮೂಲಕ ಕೇಂದ್ರ ಸರ್ಕಾರವು, ಕಾಂಗ್ರೆಸ್ ನಾಯಕರು ಜನರ ಪರ ದನಿ ಎತ್ತುವುದನ್ನು ತಡೆಯುತ್ತಿದೆ
ಶ್ರೀನಿವಾಸ ಬಿ.ವಿ.
ಯುವ ಕಾಂಗ್ರೆಸ್ ಅಧ್ಯಕ್ಷ

ಕಾಂಗ್ರೆಸ್ ಗಾಂಧಿ ಕುಟುಂಬ ಹೇಳಿದಂತೆ ಕೇಳುತ್ತಿದೆ. ಕಾಂಗ್ರೆಸ್ ನಡೆಸುತ್ತಿರುವ ಪ್ರತಿಭಟನೆಯು, ಗಾಂಧಿ ಕುಟುಂಬವನ್ನು ರಕ್ಷಿಸಲು ಮಾಡುತ್ತಿರುವ ದುರಾಗ್ರಹವಾಗಿದೆ
ಬಿಜೆಪಿ

ಪ್ರತಿಭಟನೆ: 'ಕೈ' ಕಾರ್ಯಕರ್ತರು ವಶಕ್ಕೆ

ಬೆಂಗಳೂರು: ಸೋನಿಯಾ ಗಾಂಧಿ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ವಿಚಾರಣೆಗೆ ಒಳಪಡಿಸಿರುವುದನ್ನು ಖಂಡಿಸಿ ರಾಜಭವನಕ್ಕೆ ಮುತ್ತಿಗೆ ಹಾಕಲು ಹೊರಟ ಕಾಂಗ್ರೆಸ್ ನಾಯಕರು, ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದು, ಬಳಿಕ ಬಿಡುಗಡೆ ಮಾಡಿದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನಾ ಸಭೆ ನಡೆಸಿದ ಕಾಂಗ್ರೆಸ್ ನಾಯಕರು, 'ಸಾಂವಿಧಾನಿಕ ಸಂಸ್ಥೆಗಳನ್ನು ದುರುಪಯೋಗ ಮಾಡಿಕೊಂಡು ಸೋನಿಯಾ ವಿರುದ್ಧ ಕೇಂದ್ರ ಸರ್ಕಾರ ದ್ವೇಷದ ರಾಜಕಾರಣ ಮಾಡುತ್ತಿದೆ' ಎಂದು ಆರೋಪಿಸಿದರು. ಬಳಿಕ ಪಕ್ಷದ ಕಾರ್ಯಕರ್ತರ ಜೊತೆ ರಾಜಭವನದತ್ತ ಹೊರಟ ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯ, ಬಿ.ಕೆ. ಹರಿಪ್ರಸಾದ್, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಪಕ್ಷದ ಮುಖಂಡ ವೀರಪ್ಪ ಮೊಯಿಲಿ ಮತ್ತಿತರರನ್ನು ಪೊಲೀಸರು ವಶಕ್ಕೆ ಪಡೆದರು.

ಗುಜರಿ ಕಾರಿಗೆ ಬೆಂಕಿ: ಪ್ರತಿಭಟನೆಯತ್ತ ಜನರ ಗಮನಸೆಳೆಯಲು ಶಾಂತಿನಗರದಲ್ಲಿರುವ ಇ.ಡಿ ಕಚೇರಿ ಮತ್ತು ಶೇಷಾದ್ರಿಪುರದಲ್ಲಿ ಯುವ ಕಾಂಗ್ರೆಸ್ ಕಾರ್ಯಕರ್ತರೇ ಎರಡು ಗುಜರಿ ಕಾರುಗಳಿಗೆ ಬೆಂಕಿ ಹಚ್ಚಿದರು. ಹೀಗೆ ಮಾಡುವ ಮೂಲಕ ಕಾನೂನು ಸುವ್ಯವಸ್ಥೆಗೆ ಧಕ್ಕೆ ತಂದ ಆರೋಪದಲ್ಲಿ ಐವರನ್ನು ಪೊಲೀಸರು ಬಂಧಿಸಿದರು.

ಸಿದ್ದರಾಮಯ್ಯ ಮತ್ತೆ ಸಿಎಂ– ಶಾಸಕ; ಯಾವ ಜಮೀರ್–ಕೆಪಿಸಿಸಿ ಅಧ್ಯಕ್ಷ

ಜಮೀರ್– ಡಿಕೆಶಿ ವಾಕ್ಸಮರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮೂಹಿಕ ನಾಯಕತ್ವದಲ್ಲಿ ಚುನಾವಣೆ ಎದುರಿಸಬೇಕು ಎಂದು ರಾಜ್ಯ ನಾಯಕರಿಗೆ ಕಾಂಗ್ರೆಸ್ ವರಿಷ್ಠರು ಸ್ಪಷ್ಟ ನಿರ್ದೇಶನ ನೀಡಿದ ಬಳಿಕವೂ, 'ಸಿದ್ದರಾಮಯ್ಯ ಅವರೇ ಮತ್ತೆ ರಾಜ್ಯದ ಮುಖ್ಯಮಂತ್ರಿ ಆಗಬೇಕು ಎನ್ನುವುದು ಜನರ ಆಸೆ. ರಾಜ್ಯಕ್ಕೆ ಅವರ ಅಗತ್ಯವಿದೆ' ಎಂದು ಶಾಸಕ ಜಮೀರ್ ಅಹಮದ್ ಬಹಿರಂಗವಾಗಿ ಹೇಳಿರುವುದು 'ಕೈ' ಪಾಳಯದಲ್ಲಿ ಚರ್ಚೆಗೆ ಕಾರಣವಾಗಿದೆ.

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಜಮೀರ್, 'ಒಂದೇ ಸಮುದಾಯ ನಂಬಿಕೊಂಡು ಯಾರೂ ಮುಖ್ಯಮಂತ್ರಿ ಆಗಲು ಸಾಧ್ಯವಿಲ್ಲ. ಎಲ್ಲ ಸಮುದಾಯಗಳ ಬೆಂಬಲವೂ ಬೇಕು. ಎಲ್ಲರಿಗೂ ಸಿ.ಎಂ ಆಗುವ ಆಸೆ ಇರುತ್ತದೆ. ನನಗೂ ಇದೆ. ಸಮುದಾಯದ ಆಧಾರದಲ್ಲಿ ಸಿ.ಎಂ ಸ್ಥಾನ ನೀಡುವುದಾದರೆ ನಾನೂ ಆಕಾಂಕ್ಷಿ. ಒಕ್ಕಲಿಗರಂತೆ ನಮ್ಮ ಸಮುದಾಯವೂ ದೊಡ್ಡದಿದೆ' ಎಂದರು.

ಒಕ್ಕಲಿಗರ ಸಭೆಯಲ್ಲಿ ಇತ್ತೀಚೆಗೆ ಮಾತನಾಡಿದ್ದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ಸೋನಿಯಾ ಗಾಂಧಿ ಅವರು ನನ್ನನ್ನು ಪಕ್ಷದ ಅಧ್ಯಕ್ಷನನ್ನಾಗಿ ಮಾಡಿದ್ದಾರೆ. 20 ವರ್ಷಗಳ ನಂತರ ಒಕ್ಕಲಿಗ ಸಮುದಾಯದವರಿಗೆ ಉನ್ನತ ಜವಾಬ್ದಾರಿ ನೀಡಿದ್ದಾರೆ. ಎಲ್ಲರಿಗೂ ಅವಕಾಶ ನೀಡಿದ್ದೀರಿ, ನನಗೂ ಒಂದು ಅವಕಾಶ ನೀಡಿ' ಎಂದಿದ್ದರು. ಜಮೀರ್ ಅವರ ಹೇಳಿಕೆ ಕಾಂಗ್ರೆಸ್‌ನ ಬಣ ರಾಜಕೀಯಕ್ಕೆ ಕಿಚ್ಚು ಹಚ್ಚಿದೆ.

ಜಮೀರ್ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಡಿ.ಕೆ. ಶಿವಕುಮಾರ್, 'ಯಾವ ಜಮೀರ್? ಅವರಿಗೆ ಉತ್ತರ ಕೊಡಲು ನಾನು ತಯಾರಿಲ್ಲ. ಇಂಥವರು ನೂರಾರು ಜನ, ಯಾರು ಏನು ಬೇಕಾದರು ಮಾತಾಡಿದರೂ ಪಕ್ಷ ನಿಭಾಯಿಸುತ್ತದೆ' ಎಂದು ಹೇಳಿದರು.

'ಕಾಂಗ್ರೆಸ್ ಪಕ್ಷದಲ್ಲಿರುವ ಪ್ರತಿಯೊಬ್ಬರೂ ಕಾಂಗ್ರೆಸ್ ದಾರಿಯಲ್ಲೇ ಹೋಗಬೇಕು. ಅದೇ ರೀತಿ ರಾಜಕಾರಣ ಮಾಡಬೇಕು. ಕಾಂಗ್ರೆಸ್ ಪಕ್ಷಕ್ಕೆ ಎಲ್ಲ ಸಮುದಾಯಗಳು ಬೇಕು' ಎಂದರು.



'ಕಾಂಗ್ರೆಸ್‌ನವರು ಸಿಎಂ ಆಗಲ್ಲ'

ಬೆಂಗಳೂರು: 'ಕಾಂಗ್ರೆಸ್ ನಾಯಕರು ತಾವೇ ಮುಖ್ಯಮಂತ್ರಿ ಆಗಬೇಕು ಎಂದು ಕಿತ್ತಾಡುತ್ತಿದ್ದಾರೆ. ಆದರೆ, ಯಾವ ಕಾರಣಕ್ಕೂ ಅವರನ್ನು ಮುಖ್ಯಮಂತ್ರಿ ಆಗಲು ನಾವು ಬಿಡುವುದಿಲ್ಲ' ಎಂದು ಬಿಜೆಪಿ ಶಾಸಕ ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ.

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, 'ಕಾಂಗ್ರೆಸ್‌ನ ಹಲವು ನಾಯಕರು ಮುಖ್ಯಮಂತ್ರಿ ಆಗುವ ಕನಸು ಕಾಣುತ್ತಿದ್ದಾರೆ. ಕೂಸು ಹುಟ್ಟುವ ಮೊದಲೇ ಕುಲಾವಿ ಹೊಲಿಸಿದ ರೀತಿ ನಾನೇ ಸಿಎಂ ಎನ್ನುತ್ತಿದ್ದಾರೆ' ಎಂದು ವ್ಯಂಗ್ಯವಾಡಿದರು. 'ರಾಜ್ಯದಲ್ಲಿ ಮುಂದೆಯೂ ಬಿಜೆಪಿಯವರೇ ಸಿ.ಎಂ ಆಗಲಿದ್ದಾರೆ. ಕಾಂಗ್ರೆಸ್ ಅಧಿಕಾರಕ್ಕೆ ಬರಲ್ಲ' ಎಂದರು.

'ಸಿದ್ದರಾಮಯ್ಯನ ಸೋಲಿಸಲು ಉತ್ತರಕುಮಾರನ ಖೆಡ್ಡಾ'

ಕೋಲಾರ: 'ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಸಿದ್ದರಾಮಯ್ಯ ಅವರನ್ನು ಸೋಲಿಸಲು ಕೋಲಾರ ಕ್ಷೇತ್ರದಲ್ಲಿ ಉತ್ತರಕುಮಾರನ ತಂಡ ಖೆಡ್ಡಾ ತೋಡುತ್ತಿದೆ. ಆ ಖೆಡ್ಡಾಕ್ಕೆ ಸಿದ್ದರಾಮಯ್ಯ ಬೀಳಬಾರದೆಂದು ಅವರ ಅಭಿಮಾನಿಯಾಗಿ ಕೇಳಿಕೊಳ್ಳುತ್ತಿದ್ದೇನೆ' ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಹೇಳಿದರು.

ಬಿಜೆಪಿಯ ಸಾಧನಾ ಸಮಾವೇಶದ ಪೂರ್ವಭಾವಿಯಾಗಿ ಗುರುವಾರ ಇಲ್ಲಿ ನಡೆದ ಕೋಲಾರ ಕ್ಷೇತ್ರದ ಕಾರ್ಯಕರ್ತರ ಸಭೆಯಲ್ಲಿ ಅವರು ಮಾತನಾಡಿದರು.

'ನಾನು ಸಿದ್ದರಾಮಯ್ಯ ಅವರನ್ನು ಬಹಳ ಹತ್ತಿರದಿಂದ ನೋಡಿದ್ದೇನೆ. ಉತ್ತರ ಕುಮಾರನಂಥ ನೂರು ಜನ ಹೋಗಿ ಆಹ್ವಾನಿಸಿದರೂ ಅವರು ಕೋಲಾರ ಕ್ಷೇತ್ರಕ್ಕೆ ಬರುವುದಿಲ್ಲ. ಆದರೆ, ಮಂತ್ರಿ ಆಗುವ ಮುನ್ನ ಸಿದ್ದರಾಮಯ್ಯ ವಿರುದ್ಧ ಈ ಉತ್ತರಕುಮಾರ ಏನೆಲ್ಲಾ ಮಾತನಾಡಿದ್ದರು ಎಂಬುದು ನನಗೆ ಗೊತ್ತು' ಎಂದು ಅವರು ಶಾಸಕ ಕೆ.ಆರ್. ರಮೇಶ್ ಕುಮಾರ್ ವಿರುದ್ಧ ಪರೋಕ್ಷವಾಗ್ದಾಳಿ ನಡೆಸಿದರು.

'ಶ್ರೀನಿವಾಸಪುರದಲ್ಲಿ ಸೋಲಿನ ಆತಂಕ ಎದುರಾಗಿದೆ ಎಂಬ ವಿಚಾರ ಸ್ಪಷ್ಟವಾಗಿದೆ. ಹೀಗಾಗಿ, ಸಿದ್ದರಾಮಯ್ಯ ಹೆಸರಿನಲ್ಲಿ ಗೆಲ್ಲಲು ವೇದಿಕೆ ಸಿದ್ಧ ಮಾಡಿಕೊಳ್ಳುತ್ತಿದ್ದಾರೆ. ಆದರೆ, ಆ ಕ್ಷೇತ್ರದಲ್ಲಿ ಉತ್ತರಕುಮಾರನ ಸೋಲು ಖಚಿತ' ಎಂದರು.

ಸಿದ್ದರಾಮಯ್ಯಗೆ ಟೋಪಿ: 'ಕೋಲಾರ ಕ್ಷೇತ್ರದಲ್ಲಿ ಸ್ಪರ್ಧಿಸುವಂತೆ ಕರೆದು, ಸಿದ್ದರಾಮಯ್ಯ ಅವರಿಗೆ ಕೆಲವರು ಟೋಪಿ ಹಾಕುತ್ತಿದ್ದಾರೆ. ಕ್ಷೇತ್ರದ ಯಾವ ಊರಲ್ಲೂ ಕಾಂಗ್ರೆಸ್ ಇಲ್ಲ. ಈ ಗುಟ್ಟನ್ನು ಹೇಳಬಾರದಿತ್ತು. ಸಿದ್ದರಾಮಯ್ಯ ನಮ್ಮವರೆಂಬ ಕಾರಣಕ್ಕೆ ಹೇಳುತ್ತಿದ್ದೇನೆ' ಎಂದು ಬಿಜೆಪಿ ಮುಖಂಡ, ಕೋಲಾರ ಕ್ಷೇತ್ರದ ಟಿಕೆಟ್ ಆಕಾಂಕ್ಷಿ ವರ್ತೂರು ಪ್ರಕಾಶ್ ಹೇಳಿದರು.

'ಜಾತಿ ಆಧರಿಸಿ ಸಿಎಂ ಆಯ್ಕೆ ದುರಂತ'

ಪ್ರಜಾವಾಣಿ ವಾರ್ತೆ

ಆನೇಕಲ್ (ಬೆಂಗಳೂರು ಗ್ರಾಮಾಂತರ ಜಿಲ್ಲೆ): ರಾಜ್ಯದಲ್ಲಿ ಮುಖ್ಯಮಂತ್ರಿ ಸ್ಥಾನವು ಜಾತಿ ಮತ್ತು ವರ್ಗಗಳ ಆಧಾರದ ಮೇಲೆ ನಿರ್ಧಾರವಾಗುತ್ತಿರುವುದು ದುರಂತ. ದೇಶಕ್ಕೆ ಸ್ವಾತಂತ್ರ್ಯ ಬಂದ 75 ವರ್ಷಗಳಲ್ಲಿ ರಾಜ್ಯದಲ್ಲಿರುವ ನೂರಾರು ಸಣ್ಣ ಜಾತಿಗಳಿಗೆ ಮುಖ್ಯಮಂತ್ರಿಗಳಾಗುವ ಪರಿಕಲ್ಪನೆ ಇಲ್ಲದಿರುವುದು ಪ್ರಜಾಪ್ರಭುತ್ವಕ್ಕೆ ಮಾರಕ ಎಂದು ಕೇಂದ್ರ ಸಚಿವ ಎ. ನಾರಾಯಣಸ್ವಾಮಿ ವಿಷಾದಿಸಿದರು.

ಪಟ್ಟಣದಲ್ಲಿ ಕಾರ್ಯಕ್ರಮವೊಂದರಲ್ಲಿ ಗುರುವಾರ ಪಾಲ್ಗೊಂಡ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

'ಮುಖ್ಯಮಂತ್ರಿ ಕುರ್ಚಿಗಾಗಿ ಎರಡು ವರ್ಗಗಳು ಮಾತ್ರ ಅರ್ಹ ಎಂಬ ಚರ್ಚೆ ನಡೆಯುತ್ತಿದೆ. ವಿಶೇಷವಾಗಿ ಕಾಂಗ್ರೆಸ್ ಮುಖಂಡರು ಮುಖ್ಯಮಂತ್ರಿ ಸ್ಥಾನಕ್ಕೆ ಎರಡು ವರ್ಗಗಳು ಮಾತ್ರ ಅರ್ಹ ಎಂದು ಹೇಳುತ್ತಿದ್ದಾರೆ. ತಮ್ಮ ಜಾತಿಗೆ ಮತ ನೀಡಬೇಕು. ಇದರಿಂದ ಮುಖ್ಯಮಂತ್ರಿಯಾಗಲು ಅವಕಾಶ ದೊರೆಯುತ್ತದೆ ಎಂದು ಪ್ರಚಾರ ಮಾಡುತ್ತಿದ್ದಾರೆ. ಇದು ಒಳ್ಳೆಯ ಬೆಳವಣಿಗೆಯಲ್ಲ' ಎಂದರು.

'ಪಕ್ಷದ ಸಿದ್ಧಾಂತ, ದೂರದೃಷ್ಟಿ, ಅಭಿವೃದ್ಧಿ ಕಾರ್ಯ,ಯೋಜನೆ, ವ್ಯಕ್ತಿತ್ವ ಆಧರಿಸಿ ಮುಖ್ಯಮಂತ್ರಿ ಹುದ್ದೆಯ ಅರ್ಹತೆ ಹೇಳಬೇಕೇ ವಿನಾ ಜಾತಿ, ವರ್ಗದ ಮೇಲೆ ಮುಖ್ಯಮಂತ್ರಿ ಹುದ್ದೆಯ ಅರ್ಹತೆ ಬಿಂಬಿಸುವುದು ಕೆಟ್ಟ ಸಂಪ್ರದಾಯ. ಮೊದಲು ಈ ಸಂಸ್ಕೃತಿ ಬಿಡಬೇಕು' ಎಂದರು.

ಶಿರಾಡಿ: ಲಘು ವಾಹನ ಸಂಚಾರಕ್ಕೆ ಅವಕಾಶ

ಹಾಸನ: ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿ –75 ರಲ್ಲಿ ಬೆಳಿಗ್ಗೆ 6 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಲಘು ವಾಹನಗಳ ಸಂಚಾರಕ್ಕೆ ಅವಕಾಶ ನೀಡಿ ಜಿಲ್ಲಾಧಿಕಾರಿ ಆರ್. ಗಿರೀಶ್ ಆದೇಶ ಹೊರಡಿಸಿದ್ದಾರೆ. ಭಾರಿ ವಾಹನಗಳ ಸಂಚಾರಕ್ಕೆ ನಿರ್ಬಂಧ ಮುಂದುವರಿದಿದೆ.

ಕಾರು, ಜೀಪು, ಟೆಂಪೊ, ಮಿನಿ ವ್ಯಾನ್, ಸಾರಿಗೆ ಸಂಸ್ಥೆಯ ಬಸ್, ರಾಜಹಂಸ, ಐರಾವತ ಬಸ್‌ಗಳು, 6 ಚಕ್ರದ ವಾಹನಗಳು, 20 ಟನ್ ಸಾಮರ್ಥ್ಯದ ಸರಕು ಸಾಗಣೆ ವಾಹನಗಳು ಬೆಳಿಗ್ಗೆ 6 ರಿಂದ ಸಂಜೆ 6 ಗಂಟೆಯವರೆಗೆ ಈ ಮಾರ್ಗದಲ್ಲಿ ಸಂಚರಿಸಬಹುದು. ಆಂಬುಲೆನ್ಸ್, ಅಗ್ನಿಶಾಮಕ ದಳದ ವಾಹನ ಸೇರಿ ತುರ್ತು ಸೇವಾ ವಾಹನಗಳು 24 ಗಂಟೆ ಸಂಚರಿಸಬಹುದು. ಟ್ಯಾಂಕರ್‌ಗಳು, ಕಾರ್ಗೋ ಕಂಟೇನರ್‌ಗಳು ಹಾಗೂ 20 ಟನ್‌ಗಿಂತ ಅಧಿಕ ತೂಕದ ಸರಕು ಸಾಗಣೆ ವಾಹನಗಳ ಸಂಚಾರ ನಿರ್ಬಂಧಿಸಲಾಗಿದೆ. ಭೂಕುಸಿತದಿಂದಾಗಿ ಸಂಚಾರ ನಿಷೇಧಿಸಲಾಗಿತ್ತು.

ಬಿಜೆಪಿಗೆ ಹೋಗಬೇಡ ಎಂದಿದ್ದಾರೆ: ಜಿಟಿಡಿ

ಪ್ರಜಾವಾಣಿ ವಾರ್ತೆ

ಮೈಸೂರು: 'ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ನನ್ನನ್ನು ಕಾಂಗ್ರೆಸ್ ಸೇರುವಂತೆ ಕರೆದಿಲ್ಲ. ಜೆಡಿಎಸ್‌ನಲ್ಲಿ ಉಳಿದುಕೋ ಎಂದೂ ಹೇಳಿಲ್ಲ. ಆದರೆ, ಬಿಜೆಪಿಗೆ ಹೋಗಬೇಡ ಎಂದು ಸಲಹೆ ನೀಡಿದ್ದಾರೆ' ಎಂದು ಶಾಸಕ ಜಿ.ಟಿ. ದೇವೇಗೌಡ ತಿಳಿಸಿದರು.

'ನನ್ನ ಮುಂದಿನ ರಾಜಕೀಯ ನಡೆ ಬಗ್ಗೆ 2–3 ತಿಂಗಳಲ್ಲಿ ನಿರ್ಧಾರ ಕೈಗೊಳ್ಳುತ್ತೇನೆ' ಎಂದು ಪತ್ರಿಕಾಗೋಷ್ಠಿಯಲ್ಲಿ ಗುರುವಾರ ತಿಳಿಸಿದರು.

'ಮತ್ತೊಮ್ಮೆ ಮುಖ್ಯಮಂತ್ರಿಯಾಗಬೇಕು ಎಂಬ ಆಸೆ ಇರುವುದರಿಂದ ಸುರಕ್ಷತೆ ಇರುವ ಕ್ಷೇತ್ರವನ್ನು ಹುಡುಕುತ್ತಿದ್ದಾರೆ. ಕಳೆದ ಚುನಾವಣೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸೋತಿದ್ದರಿಂದ ಅಲ್ಲಿ ಮತ್ತೆ ಸ್ಪರ್ಧಿಸಲು ಅವರಿಗೆ ಆತಂಕವಿದೆ' ಎಂದರು.

'ಒಕ್ಕಲಿಗರ ನಾಯಕತ್ವ ವಹಿಸುವ ಕುರಿತು ಎಚ್.ಡಿ. ಕುಮಾರಸ್ವಾಮಿ ಹಾಗೂ ಡಿ.ಕೆ. ಶಿವಕುಮಾರ್ ಅವರ ಪೈಕಿ ಯಾರೊಡನೆ ಸಮುದಾಯ ನಿಲ್ಲಬಹುದು ಎಂಬ ಬಗ್ಗೆ ಈಗಲೇ ಏನನ್ನೂ ಹೇಳಲಾಗದು' ಎಂದರು.

ಐಎಎಸ್‌ಗೆ ಶಿಫಾರಸಿನಲ್ಲಿ ತಾರತಮ್ಯ?

ಅರ್ಹತೆ ಇಲ್ಲದಿದ್ದರೂ ಬಡ್ತಿಗೆ ಶಿಫಾರಸು • ಸರ್ಕಾರದ ನಡೆಗೆ ಅಸಮಾಧಾನ

• ರಾಜೇಶ್ ರೈ ಚಟ್ಲ

ಬೆಂಗಳೂರು: ಹೈಕೋರ್ಟ್ ತೀರ್ಪಿನಂತೆ ಕೆಪಿಎಸ್‌ಸಿ ಅಂತಿಮವಾಗಿ ಪರಿಷ್ಕರಿಸಿದ್ದ 1998ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ನೇಮಕಾತಿ ಪಟ್ಟಿಯಲ್ಲಿ ಕೆಎಎಸ್ (ಉಪ ವಿಭಾಗಾಧಿಕಾರಿ) ವೃಂದಕ್ಕೆ 2019ರ ಜೂನ್‌ನಲ್ಲಿ ಸ್ಥಾನ ಪಲ್ಲಟಗೊಂಡ ಎಂಟು ಅಧಿಕಾರಿಗಳ ಪೈಕಿ ಒಬ್ಬರನ್ನು ಮಾತ್ರ ಎಸ್‌ಎಎಸ್ (ರಾಜ್ಯ ನಾಗರಿಕ ಸೇವೆ) ವರ್ಗದಿಂದ ಐಎಎಸ್‌ಗೆ ಶಿಫಾರಸು ಮಾಡಿರುವ ರಾಜ್ಯ ಸರ್ಕಾರದ ನಡೆ ಅಸಮಾಧಾನಕ್ಕೆ ಕಾರಣವಾಗಿದೆ.

ಕೆಎಎಸ್‌ನಿಂದ (ಕರ್ನಾಟಕ ನಾಗರಿಕ ಸೇವೆ) ಐವರಿಗೆ ಐಎಎಸ್, ಕೆಪಿಎಸ್‌ನಿಂದ (ಕರ್ನಾಟಕ ಪೊಲೀಸ್ ಸೇವೆ) ಏಳು ಅಧಿಕಾರಿಗಳಿಗೆ ಐಪಿಎಸ್‌ಗೆ ಬಡ್ತಿ ನೀಡಲು ರಾಜ್ಯ ಸರ್ಕಾರ 1:3 ಅನುಪಾತದಲ್ಲಿ ಅಧಿಕಾರಿಗಳ ಪಟ್ಟಿ ಸಿದ್ಧಪಡಿಸಿ, ಕೇಂದ್ರ ಸರ್ಕಾರದ ಸಿಬ್ಬಂದಿ ಮತ್ತು ತರಬೇತಿ ಇಲಾಖೆಗೆ (ಡಿಒಪಿಟಿ) ಕಳುಹಿಸಿತ್ತು. ಜುಲೈ 15ರಂದು ಈ ಸಂಬಂಧ ಆಯ್ಕೆ ಸಮಿತಿ ಸಭೆಯೂ ನಡೆದಿದೆ.

> ಸಂಪೂರ್ಣ ಅರ್ಹತೆ ಆಧರಿಸಿ, ಶೇ 100ರಷ್ಟು ನಿಯಮ ಪಾಲಿಸಿಯೇ ಅಧಿಕಾರಿಗಳ ಹೆಸರು ಶಿಫಾರಸು ಮಾಡಿದ್ದೇವೆ. ಆಯ್ಕೆಯಾದವರ ಪಟ್ಟಿ ಯುಪಿಎಸ್‌ಸಿಯಿಂದ ಬರಲಿ ನೋಡೋಣ
>
> **ವಂದಿತಾ ಶರ್ಮ,** ಮುಖ್ಯ ಕಾರ್ಯದರ್ಶಿ

'ಸರ್ಕಾರ ಈಗ ಶಿಫಾರಸು ಮಾಡಿರುವ ಅಧಿಕಾರಿಗಳ ಪಟ್ಟಿಯಲ್ಲಿ ಉಪವಿಭಾಗಾಧಿಕಾರಿ ವೃಂದಕ್ಕೆ ಸ್ಥಾನ ಪಲ್ಲಟಗೊಂಡಿದ್ದ ಪ್ರವೀಣ್ ಬಾಗೇವಾಡಿ ಅವರ ಹೆಸರೂ ಇದೆ. ಇವರು, ರಾಜ್ಯ ಸರ್ಕಾರದ ಪ್ರಭಾವಿ ಅಧಿಕಾರಿಯೊಬ್ಬರ ಸಂಬಂಧಿಯೂ ಹೌದು. 1998ನೇ ಸಾಲಿನ ಮೊದಲ ಆಯ್ಕೆ ಪಟ್ಟಿಯಲ್ಲಿ ತಹಶೀಲ್ದಾರ್ ಹುದ್ದೆಯಲ್ಲಿದ್ದ ಅವರು ಅಂತಿಮ ಪರಿಷ್ಕೃತ ಆಯ್ಕೆ ಪಟ್ಟಿಯಲ್ಲಿ ಉಪವಿಭಾಗಾಧಿಕಾರಿ ವೃಂದಕ್ಕೆ ಆಯ್ಕೆಯಾಗಿದ್ದರು. ರಾಜ್ಯ ನಾಗರಿಕ ಸೇವೆ ವರ್ಗದಿಂದ ಐಎಎಸ್‌ಗೆ ಅರ್ಹತೆ ಪಡೆಯಲು ಕೆಎಎಸ್ ವೃಂದದಲ್ಲಿ ಕನಿಷ್ಠ ಎಂಟು ವರ್ಷ ಕರ್ತವ್ಯ ಸಲ್ಲಿಸಿರಬೇಕು. ಆದರೆ, ಈ ವೃಂದದಲ್ಲಿ ಕೇವಲ ಮೂರು ವರ್ಷ ಕರ್ತವ್ಯ ಸಲ್ಲಿಸಿದ್ದವರ ಹೆಸರನ್ನು ಈ ವರ್ಗದಿಂದ ಶಿಫಾರಸು ಮಾಡಿರುವುದು ನಿಯಮಬಾಹಿರ ಅಲ್ಲವೇ' ಎನ್ನುವುದು ಕೆಲವು ಅಧಿಕಾರಿಗಳ ಪ್ರಶ್ನೆ.

1998ನೇ ಸಾಲಿನಲ್ಲಿ ಪ್ರವೀಣ್ ಅವರಂತೆ ತಹಶೀಲ್ದಾರ್ ಹುದ್ದೆಗೆ ಆಯ್ಕೆಯಾದವರೂ ಉಪ ವಿಭಾಗಾಧಿಕಾರಿಯಾಗಿ ಬಡ್ತಿ ಪಡೆದಿದ್ದಾರೆ. ತಹಶೀಲ್ದಾರ್ ಹುದ್ದೆಯಿಂದ ಉಪವಿಭಾಗಾಧಿಕಾರಿಯಾದ ಮತ್ತು ಪರಿಷ್ಕೃತ ಪಟ್ಟಿಯಂತೆ ಉಪ ವಿಭಾಗಾಧಿಕಾರಿಯಾಗಿ ಪ್ರವೀಣ್ ಅವರು ಸಲ್ಲಿಸಿದ ಸೇವಾ ಅವಧಿಯನ್ನು ಪರಿಗಣಿಸಿ, ಇದೀಗ ರಾಜ್ಯ ನಾಗರಿಕ ಸೇವೆಯಿಂದ ಐಎಎಸ್‌ಗೆ ಶಿಫಾರಸು ಮಾಡಲಾಗಿದೆ.

'ತಹಶೀಲ್ದಾರ್ ಹುದ್ದೆ ಅವಧಿಯನ್ನು ಪರಿಗಣಿಸಿ ಐಎಎಸ್‌ಗೆ ಶಿಫಾರಸು ಮಾಡುವುದಾದರೆ ನಮ್ಮ ಹೆಸರನ್ನು ಪರಿಗಣಿಸಬೇಕಿತ್ತು. ಕೆಎಎಸ್ ವೃಂದಕ್ಕೆ ಸ್ಥಾನಪಲ್ಲಟಗೊಂಡ ಒಂದೂವರೆ ವರ್ಷದಲ್ಲೇ ಪ್ರವೀಣ್ ಅವರನ್ನು ಐಎಎಸ್‌ಗೆ ಯಾವ ಮಾನದಂಡದಲ್ಲಿ ಶಿಫಾರಸು ಮಾಡಲಾಗಿದೆ?' ಎಂದು ಪ್ರವೀಣ್ ಅವರ ಜೊತೆಗೇ ಉಪವಿಭಾಗಾಧಿಕಾರಿ ಹುದ್ದೆಗೆ ಬಡ್ತಿ ಪಡೆದಿದ್ದ ತಹಶೀಲ್ದಾರ್‌ಗಳು ಪ್ರಶ್ನಿಸಿದ್ದಾರೆ.

ಸ್ವಾತಂತ್ರ್ಯದ ಅಮೃತಮಹೋತ್ಸವದ ಪ್ರಯುಕ್ತ

ಬಿಜೆಪಿಯಿಂದ ನಾಲ್ಕು ರಥಯಾತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯದ ಅಮೃತಮಹೋತ್ಸವದ ಅಂಗವಾಗಿ ಬಿಜೆಪಿ ರಾಜ್ಯ ಘಟಕ ಆಗಸ್ಟ್ 9 ರಿಂದ 18 ರವರೆಗೆ ರಾಜ್ಯದ ನಾಲ್ಕು ಕಂದಾಯ ಜಿಲ್ಲೆ ವ್ಯಾಪ್ತಿಯಿಂದ ಬೆಂಗಳೂರಿನವರೆಗೆ ರಥಯಾತ್ರೆಗಳನ್ನು ಆಯೋಜಿಸಿದೆ.

ಸಚಿವ ವಿ.ಸುನಿಲ್ ಕುಮಾರ್, ವಿಧಾನಪರಿಷತ್ ಸದಸ್ಯ ಎನ್. ರವಿಕುಮಾರ್ ನೇತೃತ್ವದಲ್ಲಿ ಬಿಜೆಪಿ ಯುವ ಮೋರ್ಚಾ ಮತ್ತು ಮಹಿಳಾ ಮೋರ್ಚಾಗಳು ಸಿದ್ಧತೆ ನಡೆಸುತ್ತಿವೆ. ರಥಯಾತ್ರೆ ಸಮಾರೋಪಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಆಹ್ವಾನಿಸಲಾಗಿದೆ ಎಂದು ಬಿಜೆಪಿ ತಿಳಿಸಿದೆ.

ಮುಖ್ಯಾಂಶಗಳು

- 1 ಕೋಟಿ ಮನೆಗಳ ಮೇಲೆ ರಾಷ್ಟ್ರಧ್ವಜ
- ರಥಯಾತ್ರೆ ವೇಳೆ ಜನ ಜಾಗೃತಿ
- ರಾಜ್ಯಮಟ್ಟದ ವಾಗ್ಮಿಗಳಿಂದ ಭಾಷಣ

ಸ್ವಾತಂತ್ರ್ಯದ ಸಂದರ್ಭದಲ್ಲಿ ಹಾಗೂ ಸ್ವಾತಂತ್ರ್ಯದ ಬಳಿಕ ದೇಶದಲ್ಲಿ ಕಾಂಗ್ರೆಸ್ ಮಾಡಿರುವ ತಪ್ಪುಗಳ ಬಗ್ಗೆ ಈ ರಥಯಾತ್ರೆ ವೇಳೆ ಜನ ಜಾಗೃತಿ ಹಾಗೂ ಸ್ವಾತಂತ್ರ್ಯ ಹೋರಾಟಕ್ಕೆ ಕರ್ನಾಟಕದ ಕೊಡುಗೆ ಬಗ್ಗೆ ಯುವಜನರಲ್ಲಿ ಅರಿವು ಮೂಡಿಸುವ ಕಾರ್ಯ ನಡೆಯಲಿದೆ.

ಎಲ್ಲೆಲ್ಲಿಂದ ರಥಯಾತ್ರೆ:

- ಬೀದರ್‌ನ ಗೊರ್ಟಾದಿಂದ 'ರಾಜಾ ವೆಂಕಟಪ್ಪ ನಾಯಕ' ರಥಯಾತ್ರೆ ಕಲ್ಯಾಣ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ಹಾಯ್ದು ಬೆಂಗಳೂರು ತಲುಪುತ್ತದೆ.
- ಧಾರವಾಡದ ಕಿತ್ತೂರಿನಿಂದ 'ರಾಣಿ ಕಿತ್ತೂರು ಚನ್ನಮ್ಮ' ರಥಯಾತ್ರೆ ಹೊರಡಲಿದೆ. ಇದು ಕಿತ್ತೂರು ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ಚಲಿಸಿ ಬೆಂಗಳೂರು ಸೇರಲಿದೆ
- ಚಿತ್ರದುರ್ಗದಿಂದ 'ಒನಕೆ ಓಬವ್ವ' ರಥಯಾತ್ರೆ ಹೊರಡಲಿದ್ದು, ಶಿವಮೊಗ್ಗ ಸೇರಿದಂತೆ ಮಧ್ಯ ಕರ್ನಾಟಕದಲ್ಲಿ ಸಂಚರಿಸಿ ಬೆಂಗಳೂರು ತಲುಪಲಿದೆ.
- ದಕ್ಷಿಣ ಕನ್ನಡದಿಂದ 'ರಾಣಿ ಅಬ್ಬಕ್ಕ' ರಥಯಾತ್ರೆ ಕರಾವಳಿ ಮತ್ತು ಮೈಸೂರು ಮಾರ್ಗವಾಗಿ ಸಂಚರಿಸಿ ಬೆಂಗಳೂರಿಗೆ ಬರಲಿದೆ.

ಪ್ರತಿ ಜಿಲ್ಲಾ ಕೇಂದ್ರಗಳಲ್ಲಿ ತಲಾ ಹತ್ತು ಸಾವಿರ, ತಾಲ್ಲೂಕು ಕೇಂದ್ರದಲ್ಲಿ ಐದು ಸಾವಿರ ಜನರನ್ನು ಸೇರಿಸಿ ಕಾರ್ಯಕ್ರಮ ಆಯೋಜಿಸಲಾಗುತ್ತದೆ. ರಾಷ್ಟ್ರ ಮತ್ತು ರಾಜ್ಯ ಮಟ್ಟದ ವಾಗ್ಮಿಗಳಿಂದ ಭಾಷಣ ಇರಲಿದೆ.

ಇದರ ಭಾಗವಾಗಿ ಹರ್ ಘರ್ ತಿರಂಗಾ ಎಂಬ ಘೋಷ ವಾಕ್ಯದೊಂದಿಗೆ 1 ಕೋಟಿ ಮನೆಗಳಲ್ಲಿ ರಾಷ್ಟ್ರ ಧ್ವಜ ಹಾರಿಸಲು ನಿರ್ಧರಿಸಲಾಗಿದೆ ಎಂದು ಬಿಜೆಪಿ ಹೇಳಿದೆ.

ಶುಕ್ರವಾರ, ಜುಲೈ 22, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 202 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ವಿಶ್ವಸುಂದರಿಯಾಗುವತ್ತ 'ಮಿಸ್ ಇಂಡಿಯಾ' ಸಿನಿ ಶೆಟ್ಟಿ ಅವರ ನಡಿಗೆ
ಹೀಗಿದೆ

ಆಳ-ಅಗಲ: ಬಿಸಿಗಾಳಿಗೆ ನಲುಗುತ್ತಿದೆ ಯುರೋಪ್
'ಅಂಬೇಡ್ಕರ್, ಸಮಾಜ ಸುಧಾರಕರ ಬರಹಗಳ ಜಾಗೃತಿ ಮೂಡಿಸಿ' 10
ಕಾಳುಮೆಣಸು, ಕಾಫಿಗೆ 'ಕೊಳೆ' ಸುಳಿ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
55,681 ▲	16,604 ▲	₹51,800 (ಬೆಂಗಳೂರು) ▼	₹56,200 (ಬೆಂಗಳೂರು) ▼	79.85 ▲

UNIVERSAL COACHING CENTRE
VIJAYANAGAR, BANGALORE
KAS — PRELIMS NEW BATCH STARTS FROM 25th JULY
IAS PRELIMS CUM MAINS — ENROLL FOR SCHOLARSHIP TEST
CONTACT: 9686664983
6366816622/ 23396403/409

ಕೆ.ಭಕ್ತವತ್ಸಲ ಆಯೋಗದ ಶಿಫಾರಸು • ಸ್ಥಳೀಯ ಸಂಸ್ಥೆಗಳ ಮೀಸಲಾತಿ

ಒಬಿಸಿಗೆ ಶೇ 33 ಮೀಸಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಸೇರಿದಂತೆ ನಗರ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳ 'ಎ' ಮತ್ತು 'ಬಿ' ಪ್ರವರ್ಗದ ಸಮುದಾಯಗಳಿಗೆ ಈಗಿರುವ ರಾಜಕೀಯ ಮೀಸಲಾತಿಯನ್ನು ಶೇ 33ಕ್ಕೆ ಹೆಚ್ಚಿಸುವಂತೆ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕೆ.ಭಕ್ತವತ್ಸಲ ಆಯೋಗ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಆಯಾ ಸಮುದಾಯಗಳ ರಾಜಕೀಯ ಹಿಂದುಳಿದಿರುವಿಕೆಯನ್ನು ಖಾತರಿಪಡಿಸಿದ ಬಳಿಕವೇ ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿ ವರ್ಗೀಕರಿಸಿ ಚುನಾವಣೆ ನಡೆಸಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿತ್ತು. ಹಿಂದುಳಿದಿರು-ವಿಕೆಯನ್ನು ಗುರುತಿಸುವ ಸಲುವಾಗಿ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕೆ. ಭಕ್ತವತ್ಸಲ ಅಧ್ಯಕ್ಷತೆಯಲ್ಲಿ ಆಯೋಗವನ್ನು ಸರ್ಕಾರ ರಚಿಸಿತ್ತು.

ಮುಖ್ಯಮಂತ್ರಿ ಅವರನ್ನು ಗುರುವಾರ ಭೇಟಿ ಮಾಡಿದ ಭಕ್ತವತ್ಸಲ ನೇತೃತ್ವದ ಆಯೋಗದ ಸದಸ್ಯರು, ಅಂತಿಮ ವರದಿ ಸಲ್ಲಿಸಿದರು. ಒಟ್ಟು ಸ್ಥಾನಗಳ ಪೈಕಿ ಮೂರನೇ ಒಂದರಷ್ಟು ಅಂದರೆ ಶೇ 33ರಷ್ಟು ಮೀಸಲಾತಿಯನ್ನು ಹಿಂದುಳಿದ ವರ್ಗಗಳ ಎ ಮತ್ತು ಬಿ ಪ್ರವರ್ಗದ ಸಮುದಾಯಗಳಿಗೆ (ಅಲ್ಪಸಂಖ್ಯಾತರೂ ಸೇರಿ) ನೀಡುವುದು ನ್ಯಾಯೋಚಿತ.

8ನೇ ಪುಟ ನೋಡಿ

ಮೀಸಲಾತಿ ನೆಪ: ಚುನಾವಣೆ ಮುಂದೂಡಿಕೆ ಜಪ

• ಮಂಜುನಾಥ ಹೆಬ್ಬಾರ್

ನವದೆಹಲಿ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಚುನಾವಣೆಯನ್ನು ಸದ್ಯಕ್ಕೆ ನಡೆಸಬಾರದು ಎಂಬ ಬೆಂಗಳೂರಿನ ಸಚಿವರು ಹಾಗೂ ಶಾಸಕರ ಒತ್ತಡಕ್ಕೆ ಮಣಿದಿರುವ ಕರ್ನಾಟಕ ಸರ್ಕಾರ, ಪಾಲಿಕೆಯ ವಾರ್ಡ್‌ಗಳ ಮೀಸಲಾತಿ ಪ್ರಕ್ರಿಯೆ ಪೂರ್ಣಗೊಳಿಸಲು ಇನ್ನಷ್ಟು ಕಾಲಾವಕಾಶ ನೀಡುವಂತೆ ಸುಪ್ರೀಂ ಕೋರ್ಟ್ ಅನ್ನು ಕೋರಲು ತೀರ್ಮಾನಿಸಿದೆ.

ವಾರ್ಡ್‌ಗಳ ಪುನರ್ ವಿಂಗಡಣೆ ಹಾಗೂ ಇತರೆ ಹಿಂದುಳಿದ ವರ್ಗಗಳ (ಒಬಿಸಿ) ಮೀಸಲಾತಿ ಅಂತಿಮಗೊಳಿಸಿ ಕರ್ನಾಟಕ ಸರ್ಕಾರ ಅಧಿಸೂಚನೆ ಹೊರಡಿಸಿದ ಕೂಡಲೇ ಬಿಬಿಎಂಪಿಯ ಚುನಾವಣೆ ನಡೆಸುವಂತೆ ಸುಪ್ರೀಂ ಕೋರ್ಟ್ ರಾಜ್ಯ ಚುನಾವಣಾ ಆಯೋಗಕ್ಕೆ ಮೇ 21ರಂದು ಸೂಚಿಸಿತ್ತು. ಬಿಬಿಎಂಪಿಯ ವಾರ್ಡ್‌ಗಳ ಪುನರ್ ವಿಂಗಡಣೆ ಮತ್ತು ಒಬಿಸಿ ಮೀಸಲಾತಿ ನಿರ್ಣಯದ ಪ್ರಕ್ರಿಯೆ ಪೂರ್ಣಗೊಳಿಸಲು ಕರ್ನಾಟಕ ಸರ್ಕಾರಕ್ಕೆ ಎಂಟು ವಾರಗಳ ಕಾಲಾವಕಾಶವನ್ನೂ ನೀಡಿತ್ತು.

3A ಪುಟ ನೋಡಿ

ಹಾಲಿ ಮೀಸಲಾತಿ ಪ್ರಮಾಣ	
ಪರಿಶಿಷ್ಟ ಜಾತಿ	ಶೇ 17
ಪರಿಶಿಷ್ಟ ಪಂಗಡ	ಶೇ 5
ಒಬಿಸಿ	ಶೇ 27
ಒಟ್ಟು	ಶೇ 49

ಪ್ರವರ್ಗಗಳಲ್ಲಿರುವ ಕೆಲವು ಜಾತಿಗಳು

ಬಿಸಿಎಂ ಎ
ಅಗಮುಡಿ, ಬೆಸ್ತರು, ಮೊಗವೀರ, ದಾಸರು, ಕುಣಬಿ, ನಾಯಿರಿ, ಉಪ್ಪಾರ, ಕುರುಬ, ಈಡಿಗ, ಗೊಲ್ಲರು, ಮಡಿವಾಳ, ಬಿಲ್ಲವ, ಭಂಡಾರಿ, ಕುಂಬಾರ, ಗಾಣಿಗ, ಕ್ಷೌರಿಕ, ತೊಗಟವೀರ, ಪದ್ಮಶಾಲಿ, ಕ್ಷತ್ರೀಯ, ತುಳುವ, ಒಕ್ಕಲಿಗ

ಬಿಸಿಎಂ ಬಿ
ವೀರಶೈವ ಲಿಂಗಾಯತ, ಲಿಂಗಾಯತ ಉಪ ಪಂಗಡಗಳು, ಮರಾಠ, ಮುಸ್ಲಿಂ, ಕ್ರಿಶ್ಚಿಯನ್, ಬಂಟರು, ಕೊಂಕಣಿ, ಜೈನರು, ವೈಷ್ಣವ, ಸಮೇರಾಯ, ಪರಿವಾರ, ಸತ್ತಾದಾವನ್, ಆರ್ಯರು. ಸಾತಾನಿ, ಕುಳವಾಡಿ

2ಎ ಬೇಡಿಕೆ ಇಟ್ಟಿರುವವರು
ಲಿಂಗಾಯತ ಪಂಚಮಸಾಲಿ, ಮರಾಠರು.

'ಸುಪ್ರೀಂ ಕೋರ್ಟ್‌ಗೆ ವರದಿ ಸಲ್ಲಿಕೆ'

ಹಿಂದುಳಿದ ವರ್ಗಗಳ ಮೀಸಲಾತಿ ಕುರಿತು ಭಕ್ತವತ್ಸಲ ಅವರ ಸಮಿತಿ ಸಲ್ಲಿಸಿರುವ ವರದಿಯನ್ನು ಶುಕ್ರವಾರ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಲಾಗುತ್ತದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ನ್ಯಾಯಾಲಯ ನೀಡುವ ನಿರ್ದೇಶನದಂತೆ ಮುಂದಿನ ತೀರ್ಮಾನಗಳಾಗುತ್ತವೆ. ಜುಲೈ 28 ರೊಳಗೆ ಕ್ಷೇತ್ರಗಳ ಪುನರ್ ವಿಂಗಡನೆಯಾಗಬೇಕು ಹಾಗೂ ಹಿಂದುಳಿದ ವರ್ಗಗಳ ಆಯೋಗದ ವರದಿ ಪಡೆಯಲು ಸೂಚಿಸಲಾಗಿತ್ತು ಎಂದರು.

ದ್ರೌಪದಿ ಮುರ್ಮು ರಾಷ್ಟ್ರಪತಿ

ವಿಜೇತೆಗೆ ಶೇ 64ರಷ್ಟು ಮತ: ಯಶವಂತ ಸಿನ್ಹಾ ಪರಾಭವ

ನವದೆಹಲಿ (ಪಿಟಿಐ): ದೇಶದ 15ನೇ ರಾಷ್ಟ್ರಪತಿಯಾಗಿ ಎನ್‌ಡಿಎ ಅಭ್ಯರ್ಥಿ ದ್ರೌಪದಿ ಮುರ್ಮು ಅವರು ಆಯ್ಕೆಯಾ-ಗಿದ್ದಾರೆ. ಮುರ್ಮು ಅವರು ಶೇ 64ರಷ್ಟು ಮತಗಳನ್ನು ಪಡೆದಿದ್ದಾರೆ. ವಿರೋಧ ಪಕ್ಷಗಳ ಒಮ್ಮತದ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದ ಯಶವಂತ ಸಿನ್ಹಾ ನಿರಾಸೆ ಅನುಭವಿಸಿದ್ದಾರೆ.

ಗುರುವಾರ ನಡೆದ ಮತ ಎಣಿಕೆಯಲ್ಲಿ ಮುರ್ಮು ಅವರು 6,76,803 ಮತಗಳನ್ನು ಪಡೆದರೆ, ಸಿನ್ಹಾ ಅವರು 3,80,177 ಮತಗಳನ್ನು ಪಡೆದರು. 10 ಗಂಟೆಗಳಿಗೂ ಹೆಚ್ಚುಕಾಲ ನಡೆದ ಮತ ಎಣಿಕೆಯ ಬಳಿಕ ಚುನಾವಣಾಧಿಕಾರಿ

ಪಿ.ಸಿ. ಮೋದಿ ಅವರು ಮುರ್ಮು ಅವರ ಗೆಲುವನ್ನು ಪ್ರಕಟಿಸಿದರು.

ಮುರ್ಮು ಅವರ ಪರವಾಗಿ ಆಂಧ್ರಪ್ರದೇಶದ ಎಲ್ಲ ಶಾಸಕರು ಮತಚಲಾಯಿಸಿದ್ದಾರೆ. ಸಿನ್ಹಾ ಅವರ ಪರ ಕೇರಳದ ಎಲ್ಲ ಶಾಸಕರು ಮತ ಹಾಕಿದ್ದಾರೆ. ಮೂರನೇ ಸುತ್ತಿನ ಮತ ಎಣಿಕೆಯ ಬಳಿಕ ಶೇ 53ರಷ್ಟು ಮತಗಳನ್ನು ಪಡೆದಿದ್ದ ಮುರ್ಮು ಅವರ ಗೆಲುವು ಖಚಿತವಾಗಿತ್ತು. ಆಗ ಇನ್ನೂ 10 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಮತ ಎಣಿಕೆ ಬಾಕಿಯಿತ್ತು.

ಮುರ್ಮು ಅವರು ಜುಲೈ 25ರಂದು ರಾಷ್ಟ್ರಪತಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

10ನೇ ಪುಟ ನೋಡಿ
ಇನ್ನೊಂದು ಸುದ್ದಿ 2

ಸುಪ್ರೀಂ ಕೋರ್ಟ್ ಮಹತ್ವದ ಆದೇಶ

'ಗರ್ಭಪಾತ: ಅವಿವಾಹಿತೆಗೂ ಅವಕಾಶ'

ಪ್ರಜಾವಾಣಿ ವಾರ್ತೆ

ನವದೆಹಲಿ: ಮಹಿಳೆ ಅವಿವಾಹಿತೆ ಎಂಬ ಕಾರಣಕ್ಕೆ ಗರ್ಭಪಾತದ ಅವಕಾಶ ನಿರಾಕರಿಸುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಗುರುವಾರ ಮಹತ್ವದ ಆದೇಶ ನೀಡಿದೆ.

ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠವು, ವೈದ್ಯಕೀಯ ಗರ್ಭಪಾತ ಕಾಯ್ದೆಗೆ 2021ರಲ್ಲಿ ತಂದಿರುವ ತಿದ್ದುಪಡಿಯು ಅವಿವಾಹಿತೆಯೂ ಒಳಗೊಳ್ಳುವಂತೆ ಪತಿಗೆ ಬದಲಾಗಿ 'ಪಾರ್ಟ್ನರ್' ಎಂಬ ಪದ ಬಳಸಿದೆ ಎಂದು ಹೇಳಿತು.

ಸಹಮತದ ಸಂಬಂಧದಿಂದ ಗರ್ಭಿಣಿಯಾಗಿದ್ದ 25 ವರ್ಷದ ಅವಿವಾಹಿತೆ, ತನಗೆ ಬೇಡವಾದ 24 ವಾರಗಳ ಭ್ರೂಣದ ಗರ್ಭಪಾತಕ್ಕೆ ಕೋರಿ ಸಲ್ಲಿಸಿದ್ದ ಮನವಿಯನ್ನು ದೆಹಲಿ ಹೈಕೋರ್ಟ್ ಜುಲೈ 16ರಂದು ತಳ್ಳಿ ಹಾಕಿತ್ತು. ಇದನ್ನು ಪ್ರಶ್ನಿಸಿ ಅವಿವಾಹಿತೆ, ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದರು.

ಎಂಟಿಪಿ ಕಾಯ್ದೆಯ ಸೆಕ್ಷನ್ 3(2) (ಡಿ) ಅಡಿಯಲ್ಲಿ ವೈದ್ಯಕೀಯ ಮಂಡಳಿ ಸ್ಥಾಪಿಸಲು ದೆಹಲಿಯ ಏಮ್ಸ್ ಮುಖ್ಯಸ್ಥರಿಗೆ ಸೂಚಿಸಿದ ಪೀಠವು, ಆಕೆಯ ಜೀವಕ್ಕೆ ತೊಂದರೆಯಾಗದಂತೆ ಗರ್ಭಪಾತ ಮಾಡಿಸಲು ಆದೇಶಿಸಿತು. ವಾಸ್ತವವಾಗಿ, 20-24 ವಾರಗಳ ಭ್ರೂಣದ ಗರ್ಭಪಾತಕ್ಕೆ ವಿಧವೆ ಅಥವಾ ವಿಚ್ಛೇದಿತ ಮಹಿಳೆಗೂ ಅನುಮತಿಸಲಾಗಿದೆ.ಆದರೆ, ಈ ಪ್ರಕರಣದಲ್ಲಿ ಹೈಕೋರ್ಟ್ ಅನಪೇಕ್ಷಿತ ದೃಷ್ಟಿಕೋನ ಹೊಂದಿದೆ ಎಂದಿರುವ ಸುಪ್ರೀಂ ಕೋರ್ಟ್, ಈ ಕಾನೂನು ನಿಯಮಗಳ ವ್ಯಾಖ್ಯಾನ ಕುರಿತು ಕೇಂದ್ರಕ್ಕೆ ನೋಟಿಸ್ ಜಾರಿ ಮಾಡಿತು.

ಭಾರತ ನಾವೀನ್ಯತಾ ಸೂಚ್ಯಂಕ: ರಾಜ್ಯಕ್ಕೆ ಅಗ್ರಸ್ಥಾನ

ನವದೆಹಲಿ (ಪಿಟಿಐ): ನೀತಿ ಆಯೋಗ ಬಿಡುಗಡೆ ಮಾಡಿರುವ 2021ನೇ ಸಾಲಿನ 'ಭಾರತ ನಾವೀನ್ಯತಾ ಸೂಚ್ಯಂಕ'ದಲ್ಲಿ ಕರ್ನಾಟಕವು ಅಗ್ರಸ್ಥಾನ ಪಡೆದಿದ್ದು, ಸತತ ಮೂರನೇ ವರ್ಷ ಈ ಸಾಧನೆ ಮಾಡಿದೆ.

ಪ್ರಮುಖ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕ ಅಗ್ರಪಟ್ಟ ಅಲಂಕರಿಸಿದೆ. ತೆಲಂಗಾಣ ಹಾಗೂ ಹರಿಯಾಣ ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನ ಗಳಿಸಿವೆ.

ನೀತಿ ಆಯೋಗದ ಉಪಾಧ್ಯಕ್ಷ ಸುಮನ್ ಬೆರಿ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪರಮೇಶ್ವರನ್ ಐಯ್ಯರ್ ಅವರು ಗುರುವಾರ ಸೂಚ್ಯಂಕ ಬಿಡುಗಡೆ ಮಾಡಿದರು.

ವಿದೇಶ ನೇರ ಬಂಡವಾಳ ಆಕರ್ಷಣೆ ಮತ್ತು ವೆಂಚರ್ ಕ್ಯಾಪಿಟಲ್ ಕ್ಷೇತ್ರದಲ್ಲಿ ಮಾಡಿದ ಸಾಧನೆಯ ಆಧಾರದಲ್ಲಿ ಕರ್ನಾಟಕವು ಸೂಚ್ಯಂಕದಲ್ಲಿ ಅಗ್ರಸ್ಥಾನಕ್ಕೆ ಏರುವಂತಾಗಿದೆ ಎಂದು ಅವರು ಹೇಳಿದರು.

8ನೇ ಪುಟ ನೋಡಿ

ರೈಲ್ವೆ ಪ್ರಯಾಣ ದರ ಹಿರಿಯ ನಾಗರಿಕರಿಗೆ ರಿಯಾಯಿತಿ ಇಲ್ಲ

ಪ್ರಜಾವಾಣಿ ವಾರ್ತೆ

ನವದೆಹಲಿ: ರೈಲ್ವೆ ಇಲಾಖೆ ಸದ್ಯ ಆರ್ಥಿಕ ಮುಗ್ಗಟ್ಟು ಎದುರಿಸುತ್ತಿರುವ ಕಾರಣ ಹಿರಿಯ ನಾಗರಿಕರಿಗೆ ಪ್ರಯಾಣ ದರದಲ್ಲಿ ನೀಡುತ್ತಿದ್ದ ರಿಯಾಯಿತಿಯನ್ನು ಮರುಜಾರಿಗೊಳಿಸಲು ಆಗದು ಎಂದು ಇಲಾಖೆಯು ತಿಳಿಸಿದೆ.

ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಈ ಕುರಿತು ಲೋಕಸಭೆಯಲ್ಲಿ ಲಿಖಿತ ಹೇಳಿಕೆ ನೀಡಿದ್ದಾರೆ.

ವಿವಿಧ ದರ್ಜೆಗಳಲ್ಲಿನ ಪ್ರಯಾಣ ದರಗಳು ಈಗಾಗಲೇ ಕಡಿಮೆ ಇದೆ. ವಿವಿಧ ವರ್ಗಗಳಿಗೆ ನೀಡುತ್ತಿದ್ದ ರಿಯಾಯಿತಿ ಮತ್ತು ಕಡಿಮೆ ಪ್ರಯಾಣ ದರ ಕಾರಣದಿಂದ ಇಲಾಖೆಯು ಈಗಾಗಲೇ ದೊಡ್ಡ ಮಟ್ಟದ ನಷ್ಟ ಅನುಭವಿಸಿದೆ ಎಂದು ತಿಳಿಸಿದ್ದಾರೆ.

2019–20ಕ್ಕೆ ಹೋಲಿಸಿದಲ್ಲಿ ಕೋವಿಡ್ ಪರಿಸ್ಥಿತಿಯಿಂದಾಗಿ ಕಳೆದ ಎರಡು ವರ್ಷ ಟಿಕೆಟ್ ಮೂಲದ ಆದಾಯ ಕಡಿಮೆಯಾಗಿದೆ. ಇಲಾಖೆಯ ಆರ್ಥಿಕ ಸ್ಥಿತಿಯ ಮೇಲೆ ಇದರ ಪರಿಣಾಮ ದೀರ್ಘಕಾಲಿಕವಾಗಿ ರಲಿದೆ. ರಿಯಾಯಿತಿ ನೀಡುವುದರಿಂದ ಹೆಚ್ಚಿನ ಹೊರೆ ಆಗಲಿದೆ. ಹೀಗಾಗಿ, ಹಿರಿಯ ನಾಗರಿಕರಿಗೆ ಸೇರಿ ಟಿಕೆಟ್ ದರದಲ್ಲಿ ರಿಯಾಯಿತಿ ನೀಡುವ ಚಿಂತನೆ ಈಗ ಇಲ್ಲ ಎಂದು ತಿಳಿಸಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ





ಮಾನವ ಅಂತರಿಕ್ಷ ಉಡಾವಣಾ ಪ್ರದರ್ಶನಕ್ಕೆ ಚಾಲನೆ: ಇಸ್ರೊ ಸಾಧನೆ ಅನಾವರಣ

ಕೌತುಕ ಮೂಡಿಸುವ ಬಾಹ್ಯಾಕಾಶ ತಂತ್ರಜ್ಞಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಗನಯಾನಿಯಾಗುವ ವಿದ್ಯಾರ್ಥಿಗಳ ಕನಸುಗಳಿಗೆ ರೆಕ್ಕೆ ಮೂಡಿಸುವಂತಹ ಬಾಹ್ಯಾಕಾಶ ಲೋಕದ ತಂತ್ರಜ್ಞಾನ ಪರಿಚಯಿಸುವ ಪ್ರದರ್ಶನ ಗಮನಸೆಳೆಯಿತು.

ಇಲ್ಲಿನ ಜವಾಹರಲಾಲ್ ನೆಹರೂ ತಾರಾಲಯ ಆವರಣದಲ್ಲಿ ಗುರುವಾರ ಆರಂಭವಾದ 'ಮಾನವ ಅಂತರಿಕ್ಷ ಉಡಾವಣಾ ಪ್ರದರ್ಶನ'ದಲ್ಲಿ 75 ವರ್ಷಗಳಲ್ಲಿ ಬಾಹ್ಯಾಕಾಶ ಕ್ಷೇತ್ರದಲ್ಲಿನ ಇಸ್ರೊ ಸಾಧನೆ, ಯೋಜನೆಗಳು ಮತ್ತು ಉಪಗ್ರಹಗಳ ಸಮಗ್ರ ಮಾಹಿತಿ ನೀಡುವ ಪ್ರಯತ್ನ ಮಾಡಲಾಗಿದೆ.

ಸ್ವಾತಂತ್ರ್ಯದಅಮೃತಮಹೋತ್ಸವದ ಅಂಗವಾಗಿ ಆಯೋಜಿಸಿರುವ ಈ ಪ್ರದರ್ಶನವು ಜುಲೈ 24ರವರೆಗೆ ನಡೆಯಲಿದೆ.

ಗಗನಯಾನ ಯೋಜನೆಯ ಮಹತ್ವವನ್ನು ಪ್ರದರ್ಶನದಲ್ಲಿ ವಿವರಿಸಲಾಗಿದೆ. ಮಾನವಸಹಿತ ಬಾಹ್ಯಾಕಾಶ ನೌಕೆಯಲ್ಲಿ ತೆರಳುವ ಇಬ್ಬರು ಅಥವಾ ಮೂವರು ಗಗನಯಾನಿಗಳು 400 ಕಿಲೋ ಮೀಟರ್ ಕಕ್ಷೆಯಲ್ಲಿ 5 ಅಥವಾ 7 ದಿನಗಳ ವಾಸ್ತವ್ಯ ಹೂಡಿದ ಬಳಿಕ, ಅವರನ್ನು ಸುರಕ್ಷಿತವಾಗಿ ಭೂಮಿಗೆ ಕರೆತರುವ ಯೋಜನೆ ಇದಾಗಿದೆ. ಈ ಯೋಜನೆಗೆ ಬಳಸುವ ಮಾದರಿಗಳನ್ನು ಇಲ್ಲಿ ಪ್ರದರ್ಶಿಸಲಾಗಿದೆ.

ಜವಾಹರಲಾಲ್ ನೆಹರೂ ತಾರಾಲಯದ ಆವರಣದಲ್ಲಿನ ಪ್ರದರ್ಶನದಲ್ಲಿ ಗಗನಯಾನದ ಮಾದರಿಯನ್ನು ವಿದ್ಯಾರ್ಥಿಗಳು ವೀಕ್ಷಿಸಿದರು. – ಪ್ರಜಾವಾಣಿ ಚಿತ್ರ

ಉಪಗ್ರಹಗಳ ಮಾದರಿಗಳ ಪ್ರದರ್ಶನವನ್ನು ಮಾಡಲಾಗಿದೆ. 1990ರಿಂದ ಇಲ್ಲಿಯವರೆಗಿನ ದೂರಸಂವೇದಿ ಉಪಗ್ರಹಗಳು ಮತ್ತು ಅವುಗಳ ಉಪಯೋಗ, ಜಿಸ್ಯಾಟ್31, ಜಿಸ್ಯಾಟ್–7ಎ ಸೇರಿದಂತೆ ಸಕ್ರಿಯ ಉಪಗ್ರಹಗಳು, ಸಂಪರ್ಕ ಉಪಗ್ರಹಗಳು, ಚಂದ್ರಯಾನ, ಮಂಗಳಯಾನ ಕುರಿತ ವಿವರಗಳನ್ನು ಇಲ್ಲಿ ನೀಡಲಾಗಿದೆ.

ಜಾಗತಿಕ ಮಾರುಕಟ್ಟೆ ಬೇಡಿಕೆಯಂತೆ ಸಣ್ಣ ಉಪಗ್ರಹಗಳ ಉಡಾವಣಾ ವಾಹಕಗಳನ್ನು (ಎಸ್‌ಎಸ್‌ಎಲ್‌ವಿ) ಇಸ್ರೊ ಅಭಿವೃದ್ಧಿಪಡಿಸುತ್ತಿದೆ. ಈ ಉಡಾವಣಾ ವಾಹಕಗಳು ಮಿನಿ, ಮೈಕ್ರೊ ಅಥವಾ ನ್ಯಾನೊ ಉಪಗ್ರಹಗಳನ್ನು (10ರಿಂದ 500 ಕೆ.ಜಿ.) 500 ಕಿ.ಮೀ. ಕಕ್ಷೆಯೊಳಗೆ ಸೇರಿಸುವ ಸಾಮರ್ಥ್ಯ ಹೊಂದಿರುವ ವಿವರ ಪ್ರದರ್ಶಿಸಲಾಗಿದೆ. ಜತೆಗೆ, ಬಾಹ್ಯಾಕಾಶ ತಂತ್ರಜ್ಞಾನದಿಂದ ಜನಸಾಮಾನ್ಯರಿಗೆ ಅನುಕೂಲಗಳನ್ನು ವಿವರಿಸುವ ಫಲಕಗಳನ್ನು ಅಳವಡಿಸಲಾಗಿದೆ.

ಶುಕ್ರವಾರ, ಶನಿವಾರ ಮತ್ತು ಭಾನುವಾರ ಬೆಳಿಗ್ಗೆ 11ರಿಂದ 3 ಗಂಟೆಯವರೆಗೆ ಬಾಹ್ಯಾಕಾಶ ಕುರಿತು ತಜ್ಞರಿಂದ ವಿಶೇಷ ಉಪನ್ಯಾಸ ಮತ್ತು ಸಮಾಲೋಚನೆ ಹಾಗೂ ವಿದ್ಯಾರ್ಥಿಗಳಿಗೆ ಪೇಂಟಿಂಗ್ ಸ್ಪರ್ಧೆ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಸಹ ಆಯೋಜಿಸಲಾಗಿದೆ.

'ಇಸ್ರೊ ಸಾಧನೆಯನ್ನು ಈ ಪ್ರದರ್ಶನದಲ್ಲಿ ಅನಾವರಣಗೊಳಿಸಲಾಗಿದೆ. ಗಗನಯಾನಿಯಾಗಲು ಯಾವ ರೀತಿಯ ಆಸಕ್ತಿಗಳನ್ನು ಬೆಳೆಸಿಕೊಳ್ಳಬೇಕು ಮತ್ತು ಉಪಗ್ರಹಗಳಿಂದಾಗುವ ಅನುಕೂಲ ವಿವರಿಸುವ ಪ್ರಯತ್ನ ಮಾಡಲಾಗಿದೆ' ಎಂದು ಮಾನವ ಅಂತರಿಕ್ಷ ಉಡಾವಣಾ ಕೇಂದ್ರದ ನಿರ್ದೇಶಕ ಡಾ. ಆರ್. ಉಮಾಮಹೇಶ್ವರನ್ ತಿಳಿಸಿದರು.

'ಗಗನಯಾನ ಯೋಜನೆಗೆ ಅಂತಿಮ ಹಂತದ ಸಿದ್ಧತೆ'

'ಇಸ್ರೊದ ಮಹತ್ವಾಕಾಂಕ್ಷಿ ಗಗನಯಾನ ಯೋಜನೆಗೆ ಸಂಬಂಧಿಸಿದಂತೆ ಸಾಕಷ್ಟು ಪ್ರಗತಿ ಸಾಧಿಸಲಾಗಿದೆ. ಹಲವಾರು ಸವಾಲುಗಳನ್ನು ಮೀರಿ ಯೋಜನೆಯನ್ನು ಯಶಸ್ವಿಗೊಳಿಸುವ ಪ್ರಯತ್ನಗಳು ನಡೆಯುತ್ತಿವೆ' ಎಂದು ಮಾನವ ಅಂತರಿಕ್ಷ ಉಡಾವಣಾ ಕೇಂದ್ರದ (ಎಚ್‌ಎಸ್‌ಎಫ್‌ಸಿ) ನಿರ್ದೇಶಕ ಡಾ. ಆರ್. ಉಮಾಮಹೇಶ್ವರನ್ ತಿಳಿಸಿದರು.

'ಈಗಾಗಲೇ ಗಗನಯಾತ್ರಿಗಳನ್ನು ಆಯ್ಕೆ ಮಾಡಿ ತರಬೇತಿ ನೀಡಲಾಗುತ್ತಿದೆ. ಗಗನಯಾನದ ವಿನ್ಯಾಸ ಪೂರ್ಣಗೊಳಿಸಲಾಗಿದೆ. ಹಲವು ರೀತಿಯ ಪರೀಕ್ಷೆಗಳನ್ನು ಸಹ ಕೈಗೊಳ್ಳಲಾಗಿದೆ. ಮಾನವನನ್ನು ಬಾಹ್ಯಾಕಾಶಕ್ಕೆ ಕಳುಹಿಸುವ ಕಾರ್ಯ ಸುಲಭವಲ್ಲ. ಇಲ್ಲಿ ಪ್ರತಿಯೊಂದು ಅಂಶವೂ ನಿಖರವಾಗಿರಬೇಕು' ಎಂದು ವಿವರಿಸಿದರು.

ಇಸ್ರೊ ಅಧ್ಯಕ್ಷ ಮತ್ತು ಬಾಹ್ಯಾಕಾಶ ಇಲಾಖೆ ಕಾರ್ಯದರ್ಶಿ ಎಸ್. ಸೋಮನಾಥ್ ಅವರು, ಕಳೆದ 75 ವರ್ಷಗಳಲ್ಲಿ ಬಾಹ್ಯಾಕಾಶ ಕ್ಷೇತ್ರದಲ್ಲಿ ಇಸ್ರೊ ಮಾಡಿದ ಸಾಧನೆಯನ್ನು ವಿವರಿಸಿದರು.

'ಹೊಸ ಆವಿಷ್ಕಾರಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ಮಾನವನನ್ನು ಬಾಹ್ಯಾಕಾಶಕ್ಕೆ ಕಳುಹಿಸಬೇಕಾಗಿದೆ. ಇನ್ನು ಮುಂದೆ ಚಂದ್ರಯಾನದಂತಹ ಯೋಜನೆಗಳು ನಿರಂತರವಾಗಿ ನಡೆಯಬಹುದು. ಬಾಹ್ಯಾಕಾಶಕ್ಕೆ ಮಾನವನನ್ನು ಕಳುಹಿಸುವ ಯೋಜನೆಯಲ್ಲಿ ಭಾರತ ಯಶಸ್ಸು ಸಾಧಿಸುತ್ತಿದೆ' ಎಂದರು.

'ಭಾರತ ಈಗ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಿದೆ. ಈಗ ಪರಿಸ್ಥಿತಿ ಬದಲಾಗಿದೆ. ಕೆಲವು ಕೊರತೆಗಳ ನಡುವೆಯೂ ಅಪಾರ ಪ್ರಗತಿ ಸಾಧಿಸಿದ್ದೇವೆ' ಎಂದರು.

Azadi Ka Amrit Mahotsav | icmr INDIAN COUNCIL OF MEDICAL RESEARCH | NCDIR NATIONAL CENTRE FOR DISEASE INFORMATICS AND RESEARCH | NATIONAL CANCER REGISTRY PROGRAMME

Dept. of Health Research, MoH&FW, Govt. of India,
Nirmal Bhawan - ICMR Complex, Poojanahalli Road,
Kannamangala Post, Bengaluru–562 110, Telephone: 080-22176400

TENDER NOTICE

No.NCDIR/ICMR/2005/2008 21-07-2022

Sealed tenders are invited for disposal of condemned, obsolete and unserviceable items at ICMR-NCDIR, Bengaluru. For further details please visit/ download the information from website: www.ncdirindia.org/ https:// eprocure.gov.in.

Sd/-
Director

IN THE COURT OF THE II ADDA SENIOR CIVIL JUDGE & CJM AT MYSURU
O.S. 641/2020

Plaintiffs: 1. Kempajamanni .M, Aged about 60 years, W/o R.K. Doreswamy, D/o Late Sri. M. Madaiah & 6 Others
All are R/at D.No.20, 8 Cross, Model House, Ashokapuram, Mysuru.
V/S
Defendant : KJ. Saroja, Major, Husband/Father's Name Not known to the plaintiffs,
No.3487, 6 Cross Road, Shivani building, 1st Main Road, Gayathri Nagara, Bengaluru - 560 021.

ಎದುರು ಅರ್ಜಿದಾರರ ತಿಳುವಳಿಕೆಗಾಗಿ ಕೋರ್ಟು ನೋಟೀಸು

ಮೇಲಿನ ಕೇಸಿನಲ್ಲಿ ನಮೂದಿಸಿರುವ ಎದುರು ಅರ್ಜಿದಾರರಿಗೆ ತಿಳಿಯಪಡಿಸುವುದೇನೆಂದರೆ ಮೇಲೆ ಹೇಳಿರುವ 7 ಜನ ವಾದಿಗಳು ನಿಮ್ಮ ವಿರುದ್ಧ ಮನೆ ನಂ. 20, 8ನೇ ಕ್ರಾಸ್, ಮಾಡೆಲ್ ಹೌಸ್, ಅಶೋಕ ಪುರಂ, ಮೈಸೂರು ಸ್ವತ್ತಿನ ಮಾಲೀಕತ್ವದ ಘೋಷಣೆ, ಡಿಕ್ರಿ ಕೋರಿ, ಹಿರಿಯ ಶ್ರೇಣಿ ಎರಡನೇ ಸಿವಿಲ್ ನ್ಯಾಯಾಲಯ ಮೈಸೂರಿನಲ್ಲಿ ದಾವೆ ಸಲ್ಲಿಸಿರುತ್ತಾರೆ. ಘನ ನ್ಯಾಯಾಲಯದಿಂದ ನಿಮಗೆ ಕಳುಹಿಸಿದ್ದ ನ್ಯಾಯಾಲಯದ ಸಮನ್ಸ್‌ಗಳನ್ನು ನೀವು ಸ್ವೀಕರಿಸಿರುವುದಿಲ್ಲ. ಮೇಲಿನ ಕೇಸು 29–08–2022 ದಿನಾಂಕದಂದು ನಿಮ್ಮ ಹಾಜರಾತಿಗಾಗಿ 'ನಿಗಧಿಯಾಗಿರುತ್ತದೆ. ಆ ದಿನಾಂಕದಂದು ನೀವು ಮೇಲಿನ ಕೇಸಿನಲ್ಲಿ ಹಾಜರಾಗಬೇಕು. ಒಂದು ವೇಳೆ ಆ ದಿನವು ಹಾಜರಾಗದಿದ್ದರೆ ನಿಮ್ಮಗೈರು ಹಾಜರಿಯನ್ನು ದಾಖಲಿಸಿ ವಾದಿಗಳನ್ನು ವಿಚಾರಣೆಗೆ ಒಳಪಡಿಸಿ ತೀರ್ಪುಕೊಡಬೇಕಾಗುತ್ತದೆ. ತಿಳಿಯುವುದು.

ಸಹಿ/– ಶಿರಸ್ತೇದಾರರು
ಹಿರಿಯ ಪ್ರಧಾನ ಸಿವಿಲ್ ನ್ಯಾಯಾಲಯ, ಮೈಸೂರು

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೋಲಾರ
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, 1ನೇ ಮಹಡಿ,
ನ್ಯೂ ಕೋಲಾರ ಆಸ್ಪತ್ರೆ ಕಟ್ಟಡ, ಕುವೆಂಪು ನಗರ, ಕೋಲಾರ–563101
ದೂರವಾಣಿ: 08152–229225 ಇ–ಮೇಲ್: cdpoklr@gmail.com
ಸಂ: ತಾಪಂಕೋ:ಆ.ಪ.ಸಾ:ಟೆಂಡರ್:2022–23 ದಿ: 20.07.2022

ಇ–ಟೆಂಡರ್ ಪ್ರಕಟಣೆ

ಶಿಶು ಅಭಿವೃದ್ಧಿ ಯೋಜನೆ, ಕೋಲಾರ ವ್ಯಾಪ್ತಿಯ 464 ಅಂಗನವಾಡಿ ಕೇಂದ್ರಗಳಿಗೆ ಅರ್ಹ ಸಂಸ್ಥೆಗಳಿಂದ ಕೋಳಿ ಮೊಟ್ಟೆ ಸರಬರಾಜು ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದ್ದು **eproc.karnataka.gov.in** ನಲ್ಲಿ ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಮೇಲಿನ ವಿಳಾಸ/ದೂರವಾಣಿ: 08152–229225ರವರನ್ನು ಸಂಪರ್ಕಿಸುವುದು.

(1) ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿ ಸ್ವೀಕರಿಸುವ ಪ್ರಾರಂಭ ದಿನಾಂಕ: **20.07.2022.** (2) ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **19.08.2022.** (3) ಟೆಕ್ನಿಕಲ್ (ತಾಂತ್ರಿಕ) ಬಿಡ್ ತೆರೆಯುವ ದಿನಾಂಕ: **23.08.2022.** (4) ಹಣಕಾಸು ಬಿಡ್‌ಗಳನ್ನು ತೆರೆಯುವ ದಿನಾಂಕ: **01.09.2022.** (5) ಸಲ್ಲಿಸಬೇಕಾದ ಇ.ಎಂ.ಡಿ ಮೊತ್ತ: **ರೂ.265000/–. (ಎರಡು ಲಕ್ಷ ಅರವತ್ತೈದು ಸಾವಿರ ರೂಪಾಯಿ)**ಗಳು. (6) ವಾರ್ಷಿಕ ಅಂದಾಜು ಟೆಂಡರ್ ಮೊತ್ತ: **ರೂ.177.19 ಲಕ್ಷ**ಗಳು.

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ197/ಎಂ.ಸಿ.ಎ/2022–23

ಕೋವಿಡ್–19. ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಯೋಜನೆ ಕೇಂದ್ರ–6 ವಿಭಾಗ, ಅನೆಕ್ಸ್ ಕಟ್ಟಡ–2, ನೆಲಮಹಡಿ, ಎನ್.ಆರ್. ಚೌಕ, ಬೆಂಗಳೂರು–560002
ನಂ.: ಕಾಪಾಅ/ಯೋ.ಕೇ–6/ಟೆಂಡರ್/02(ಆವ್ಯ)/2022–23 ದಿನಾಂಕ: 22.07.2022

ಆಸಕ್ತಿ ವ್ಯಕ್ತಪಡಿಸುವಿಕೆ

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) ಕಾರ್ಯಪಾಲಕ ಅಭಿಯಂತರರು, ಯೋಜನೆ ಕೇಂದ್ರ–6, ನಿರ್ಮಾಣ ಮತ್ತು ಮೂಲಸೌಕರ್ಯ ಯೋಜನೆಗಳನ್ನು ಕೈಗೊಳ್ಳಲು **"ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಕೆ ಮತ್ತು / ಅಥವಾ ಯೋಜನೆ ನಿರ್ವಹಣೆ ಸಲಹೆ (ಪಿಎಂಸಿ) ಗಾಗಿ ಸಲಹೆಗಾರರನ್ನು ನೇಮಿಸಿಕೊಳ್ಳಲು"** ಅರ್ಹ ಪ್ರತಿಷ್ಠಿತ ಸಲಹೆಗಾರರು / ಸಂಸ್ಥೆಗಳಿಂದ ಆಸಕ್ತಿ ವ್ಯಕ್ತಪಡಿಸುವಿಕೆ / ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಅಂದರೆ, ರಸ್ತೆಗಳು (ಬ್ಲ್ಯಾಕ್ / ವೈಟ್ ಟಾಪಿಂಗ್), ಫ್ಲೈಓವರ್‌ಗಳು, ಸಿಗ್ನಲ್ ಫ್ರೀ ಕಾರಿಡಾರ್, ಪರಿಸರ ಯೋಜನೆಗಳು (ಘನ ತ್ಯಾಜ್ಯ ನಿರ್ವಹಣೆ, ಬೃಹತ್ ಮಳೆನೀರು ಗಾಲುವೆ, ಕೆರೆಗಳು, ವಾಯು ಮಾಲಿನ್ಯ ಇತ್ಯಾದಿ.) ಸಾಮಾಜಿಕ ಮೂಲಸೌಕರ್ಯ, ವಾಣಿಜ್ಯ ಮೂಲಸೌಕರ್ಯ ಯೋಜನೆಗಳು, ಕಚೇರಿಗಳು, ಶಾಲೆಗಳು, ಆಸ್ಪತ್ರೆಗಳು ಇತ್ಯಾದಿ.

ಕ್ರ. ಸಂ.	ಕಾಮಗಾರಿಯ ಹೆಸರು	ಇಎಂಡಿ
1	ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲು ಮತ್ತು ಯೋಜನೆ ನಿರ್ವಹಣೆ ಸಲಹೆಗಾಗಿ ಸಲಹೆಗಾರರನ್ನು ನೇಮಿಸಲು ಆಸಕ್ತಿ ವ್ಯಕ್ತಪಡಿಸುವಿಕೆ	ರೂ. 50,000/–

ವೇಳಾಪಟ್ಟಿ: (1) ಪೂರ್ವಭಾವಿ ಸಭೆಯು **27.07.2022ರ ಸಂಜೆ 4:00 ಗಂಟೆಗೆ** ಮುಖ್ಯ ಅಭಿಯಂತರರು–ಯೋಜನೆ ಕೇಂದ್ರರವರ ಕಛೇರಿ, ಅನೆಕ್ಸ್ ಕಟ್ಟಡ–3, 4ನೇ ಮಹಡಿ, ನರಸಿಂಹ ರಾಜ ಚೌಕ, ಬೆಂಗಳೂರು–560002ರಲ್ಲಿ ನಡೆಯಲಿದೆ. (2) ದಸ್ತಾವೇಜುಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **08.08.2022ರ ಸಂಜೆ 5:30 ಗಂಟೆ**ಯವರೆಗೆ. (3) ತಾಂತ್ರಿಕ ಬಿಡ್ಡನ್ನು **10.08.2022ರ ಸಂಜೆ 4:30 ಗಂಟೆಗೆ** ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಿಂದ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಯೋಜನೆಗಳು ಕೇಂದ್ರ–6 ವಿಭಾಗ, ಬಿಬಿಎಂಪಿ

ಕೋವಿಡ್–19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ–ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಲೋಕಾಯುಕ್ತದಿಂದ ವಿವರ ಕೇಳಿದ ಬಳಿಕ ಎಚ್ಚೆತ್ತುಕೊಂಡ ಅಧಿಕಾರಿಗಳು

5 ಅಕ್ರಮ ಕಟ್ಟಡ: ಕ್ರಮಕ್ಕೆ ಮುಂದಾದ ಬಿಬಿಎಂಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ಯಡಿಯೂರು ವಾರ್ಡ್ ವ್ಯಾಪ್ತಿಯಲ್ಲಿ ನಿಯಮ ಉಲ್ಲಂಘಿಸಿ ಕಟ್ಟಡಗಳು ನಿರ್ಮಾಣ ಆಗಿರುವ ಬಗ್ಗೆ ಲೋಕಾಯುಕ್ತದಿಂದ ವಿವರ ಕೇಳಿದ ಬಳಿಕ ಕಟ್ಟಡಗಳ ವಿಷಯದಲ್ಲಿ ಕ್ರಮಕ್ಕೆ ಬಿಬಿಎಂಪಿ ಮುಂದಾಗಿದೆ.

ಜಯನಗರ ಆರನೇ ಬ್ಲಾಕ್‌ನ 23ನೇ ಅಡ್ಡ ರಸ್ತೆ, 27ನೇ ಅಡ್ಡರಸ್ತೆ, ಶಾಸ್ತ್ರಿನಗರ 4ನೇ ಮುಖ್ಯರಸ್ತೆ, ಎಸ್.ಕರಿಯಪ್ಪ ರಸ್ತೆ, ಟಾಟಾ ಸಿಲ್ಕ್ ಫಾರ್ಮ್‌ನ 5ನೇ 'ಬಿ' ಮುಖ್ಯ ರಸ್ತೆಯಲ್ಲಿ ಕಟ್ಟಡಗಳನ್ನು ನಿರ್ಮಿಸಲಾಗಿದೆ. ಈ ಐದು ಕಟ್ಟಡಗಳ ಪೈಕಿ ಎರಡು ಕಟ್ಟಡಗಳಲ್ಲಿ ಮಂಜೂರಾತಿ ಪಡೆದಿರುವ ನಕ್ಷೆ ಉಲ್ಲಂಘನೆ ಆಗಿದ್ದರೆ, ಉಳಿದ ಮೂರು ಕಟ್ಟಡಗಳಿಗೆ ನಕ್ಷೆ ಮಂಜೂರಾತಿಯನ್ನೇ ಪಡೆದಿಲ್ಲ. ಈ ಬಗ್ಗೆ ವಿ.ಶಶಿಕುಮಾರ್ ಎಂಬುವರು ಪಾಲಿಕೆ ಅಧಿಕಾರಿಗಳಿಗೆ ಕಳೆದ ಎರಡು ವರ್ಷಗಳಿಂದ ದೂರು ನೀಡುತ್ತಿದ್ದರು.

'ಸಹಾಯಕ ಎಂಜಿನಿಯರ್ ಆಗಿದ್ದ ಯತೀಶ್ ಅವರು ಈಗ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಆಗಿದ್ದು, ಇವರ ವ್ಯಾಪ್ತಿಯಲ್ಲೇ ಈ ಅಕ್ರಮ ಕಟ್ಟಡಗಳು ನಿರ್ಮಾಣವಾಗಿವೆ. ಆದರೂ ಕ್ರಮ ಕೈಗೊಳ್ಳದೆ ಅವರು ಮೌನ ವಹಿಸಿದ್ದಾರೆ' ಎಂದು ಶಶಿಕುಮಾರ್ ಪಾಲಿಕೆಯ ಮುಖ್ಯ ಆಯುಕ್ತರಿಗೂ ದೂರು ಸಲ್ಲಿಸಿದ್ದರು. ಆದರೂ, ಕ್ರಮ ಕೈಗೊಳ್ಳದಿದ್ದರಿಂದ ಶಶಿಕುಮಾರ್ ಅವರು ಲೋಕಾಯುಕ್ತ ಕಚೇರಿ ಮೆಟ್ಟಿಲೇರಿದ್ದರು.

'ಅಕ್ರಮ ಕಟ್ಟಡಗಳ ವಿರುದ್ಧ ಕ್ರಮ ಕೈಗೊಳ್ಳದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ದೂರು ನೀಡಿದ್ದರೂ ಪ್ರಯೋಜನ ಆಗಿಲ್ಲ. ಎಲ್ಲಾ ಅಧಿಕಾರಿಗಳ ವಿರುದ್ಧ ಕ್ರಮ ಆಗಬೇಕು' ಎಂದು ಕೋರಿದ್ದರು.

'ಬಳಿಕ ಎಚ್ಚೆತ್ತುಕೊಂಡಿರುವ ಬಿಬಿಎಂಪಿ ಅಕ್ರಮ ಕಟ್ಟಡಗಳ ತೆರವಿಗೆ ಬಿಬಿಎಂಪಿ ಕಾಯ್ದೆ 356ರ ಅಡಿಯಲ್ಲಿ ಕ್ರಮಕ್ಕೆ ಮುಂದಾಗಿದೆ. ಈ ಕಟ್ಟಡಗಳ ತೆರವಿಗೆ ಆಗಲಿರುವ ವೆಚ್ಚ ಎಷ್ಟು ಎಂದು ಅಂದಾಜಿಸುವ ಕೆಲಸ ಈಗ ಆಗಬೇಕಿದೆ. ಕಟ್ಟಡಗಳ ತೆರವಿಗೆ ಟೆಂಡರ್ ಕರೆದು ಏಜೆನ್ಸಿ ಗುರುತಿಸಬೇಕಾಗುತ್ತದೆ' ಎಂದು ಶಶಿಕುಮಾರ್ ತಿಳಿಸಿದರು.

'ಕಟ್ಟಡಗಳು ತೆರವಾದರೆ ಸಾಲದು. ತಮ್ಮ ಕಣ್ಣೆದುರಿನಲ್ಲೇ ಅಕ್ರಮ ಕಟ್ಟಡಗಳು ನಿರ್ಮಾಣವಾಗುತ್ತಿದ್ದರೂ ಮೌನ ವಹಿಸಿದ್ದ ಎಂಜಿನಿಯರ್ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದರು.

'ಅಕ್ರಮ ಕಟ್ಟಡಗಳ ವಿರುದ್ಧ ಕ್ರಮಕ್ಕೆ ಬಿಬಿಎಂಪಿ ಕಾಯ್ದೆ 356ರ ಅಡಿಯಲ್ಲಿ ಅನುಮತಿ ದೊರೆತಿದೆ. ಮುಂದಿನ ಪ್ರಕ್ರಿಯೆಗಳು ನಡೆಯುತ್ತಿವೆ' ಎಂದು ಬಿಬಿಎಂಪಿ ದಕ್ಷಿಣ ವಲಯ ಕಾರ್ಯಪಾಲಕ ಎಂಜಿನಿಯರ್‌ಶ್ರೀನಿವಾಸ್ 'ಪ್ರಜಾವಾಣಿ'ಗೆ ಸ್ಪಷ್ಟಪಡಿಸಿದರು.

ನೈರುತ್ಯ ರೈಲ್ವೆ
ಟೆಂಡರ್ ಸೂಚನೆ ಸಂ. 09/2022
ದಿನಾಂಕ: 14.07.2022
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು: ಸ್ಟಾಂಡರ್ಡ್ ಟೂಲ್ ಕಿಟ್ ಸೆಟ್ ಜೊತೆಗೆ ಆರ್‌ಡಿಎಸ್‌ಓ ನಿರ್ದಿಷ್ಟತೆ ಸಂ. ಐಆರ್‌ಎಸ್: ಎಸ್ 24/2002 (Amd.1) ಗೆ ಅನುಗುಣವಾಗಿ ಪ್ರತಿ 8 ಪಾಯಿಂಟ್ ಯಂತ್ರಗಳಿಗೆ ಮತ್ತು ಐಆರ್‌ಎಸ್ ಪಾಯಿಂಟ್ ಯಂತ್ರಕ್ಕಾಗಿ ನೆಲದ ಸಂಪರ್ಕದೊಂದಿಗೆ ಮೋಟಾರ್ ಐಆರ್‌ಎಸ್: ಎಸ್–37/82 Assy. ಡಿಆರ್‌ಜಿ ಸಂ. ಆರ್‌ಡಿಎಸ್‌ಓ ಎಸ್/108000 ಮೋಟಾರ್ ಡಿಆರ್‌ಜಿ ಸಂಖ್ಯೆ. ಆರ್‌ಡಿಎಸ್‌ಎಸ್ /10910 ಗೆ ಲಾಕ್ ಮತ್ತು ಡಿಟೆಕ್ಟರ್ ಸ್ಲೈಡ್‌ಗಳು ಮತ್ತು ಕೇಬಲ್ ಟರ್ಮಿನಲ್ ಬಾಕ್ಸ್‌ನೊಂದಿಗೆ 110 ವೋಲ್ಟ್ ಡಿಸಿ ಮೇಲೆ ಕಾರ್ಯನಿರ್ವಹಿಸಲು ಎಲೆಕ್ಟ್ರಿಕ್ ಪಾಯಿಂಟ್ ಆಪರೇಟಿಂಗ್ ಮೆಷಿನ್ ಐಆರ್‌ಎಸ್ ಮಾದರಿಯ 143 ಮಿಮೀ ಥ್ರೋ ನಾನ್ ಟ್ರೇಲಬಲ್‌ನ ಪೂರೈಕೆ. (60 ಕೆಜಿ ಹಳಿಗಳಿಗೆ ಸೂಕ್ತವಾಗಿದೆ) (ಟೆಂಡರ್ ಸಂ. ಎಲ್8225662) (ಪ್ರಮಾಣ : 42 ಸಂ.)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 18–08–2022, 14:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ಸಾಮಗ್ರಿಗಳ ಪ್ರಬಂಧಕರು ಬೆಂಗಳೂರು
PUB/245/AAV/PRB/SWR/2022-23
S.W.Railways SWRRLY SWRRLY

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು ಒಂದು ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಉದ್ದೇಶಿಸಿದ್ದು, ಅದರ ಮಾಲೀಕರಾದ ಬಿಯಾರ್ ರಬ್ಬರ್ಸ್ ಪ್ರೈವೇಟ್ ಲಿಮಿಟೆಡ್ (ಪ್ರೈಮ್ ವಲ್ಕಾನ್ ಸಿಸ್ಟಮ್ಸ್‌ನ ಹಿಂದಿನ ಮಾಲಿಕರು) 212–ಎ, 8ನೇ ಮುಖ್ಯರಸ್ತೆ, 3ನೇ ಫೇಸ್, ಪೀಣ್ಯ ಕೈಗಾರಿಕಾ ಪ್ರದೇಶ, ಬೆಂಗಳೂರು – 560058 ಇವರ ಹಕ್ಕುಗಳನ್ನು ನಾವು ಪರಿಶೀಲಿಸುತ್ತಿದ್ದೇವೆ.

ಸದರಿ ಷೆಡ್ಯೂಲ್ ಸ್ವತ್ತಿಗೆ ಅಥವಾ ಸ್ವತ್ತಿನ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಯು ಯಾವುದೇ ರೀತಿಯ ಹಕ್ಕು, ಬಾಧ್ಯತೆ, ಹಿತಾಸಕ್ತಿ, ಡಿಮಾಂಡ್ ಅಥವಾ ಋಣಭಾರ ಕ್ಲೇಮ್ ಮಾಡುವುದಾದಲ್ಲಿ, ಇಂದಿನಿಂದ 7 (ಏಳು) ದಿನಗಳ ಒಳಗೆ ನೋಂದಾಯಿತ ಅಂಚೆ ಮೂಲಕವಾಗಲಿ/ಖುದ್ದಾಗಿಯಾಗಲಿ, ತಮ್ಮ ಕ್ಲೇಮ್‌ಗಳನ್ನು ಎಲ್ಲಾ ಪೂರಕ ದಾಖಲಾತಿ ಪುರಾವೆಗಳ ಸಮೇತ ನಮಗೆ ತಿಳಿಸತಕ್ಕದ್ದು, ಇಲ್ಲವಾದಲ್ಲಿ, ಸದರಿ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ಅನ್ಯ ಕ್ಲೇಮ್ ಗಳಿರುವುದಿಲ್ಲ ಎಂಬುದು ಪರಿಗಣಿಸಿ, ನಮ್ಮ ಕಕ್ಷಿದಾರರು ತಮ್ಮ ಉದ್ದೇಶಿತ ವ್ಯವಹಾರವನ್ನು ಸ್ವಂತ ವಿವೇಚನೆಯ ಮೇರೆಗೆ ಪೂರ್ಣಗೊಳಿಸಿಕೊಳ್ಳುತ್ತಾರೆ.

ಷೆಡ್ಯೂಲ್ ಪ್ರಾಪರ್ಟಿ
ಕೈಗಾರಿಕಾ ಷೆಡ್ ನಂ. ಎ–33ರ ಷೆಡ್ಯೂಲ್

ಉತ್ತರ ದಕ್ಷಿಣ 21.10 ಮೀಟರ್ ಮತ್ತು ಪೂರ್ವ ಪಶ್ಚಿಮ 43.45 ಮೀಟರ್ ಒಟ್ಟಾರೆ 916.79 ಚದರ ಮೀಟರ್ ವಿಸ್ತೀರ್ಣವುಳ್ಳ ನಿವೇಶನದಲ್ಲಿರುವ, ಕೈಗಾರಿಕಾ ಷೆಡ್ ನಂ. ಎ–33 ಹೊಂದಿರುವ ಸ್ವತ್ತಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನಲ್ಲಿ ಮುಂಭಾಗದ ಮತ್ತು ಪಕ್ಕದ ಖಾಲಿ ಜಾಗ ಹಾಗೂ ಸರ್ವೀಸ್ ರಸ್ತೆಯೂ ಸೇರಿದಂತೆ, 501.86 ಚದರ ಮೀಟರ್ ವಿಸ್ತೀರ್ಣವುಳ್ಳ ಒಂದು ಕೈಗಾರಿಕಾ ಕಾರ್ಖಾನೆ ಕೂಡ ಒಳಗೊಂಡಿರುತ್ತದೆ ಮತ್ತು ಕುಂಬಳ ಗೋಡು ಕೈಗಾರಿಕಾ ಪ್ರದೇಶ, ಕುಂಬಳಗೋಡು, ಬೆಂಗಳೂರು ವಿಳಾಸದಲ್ಲಿ ಸ್ಥಿತಗೊಂಡಿರುತ್ತದೆ ಹಾಗೂ ಸದರಿ ಸ್ವತ್ತಿನ ಚಕ್ಕುಬಂದಿ:
ಪೂರ್ವ : ಷೆಡ್ ನಂ. ಎ–42.
ಪಶ್ಚಿಮ : 2ನೇ ಅಡ್ಡರಸ್ತೆ
ಉತ್ತರ : ಷೆಡ್ ನಂ. ಎ–32; ಮತ್ತು
ದಕ್ಷಿಣಕ್ಕೆ : ಷೆಡ್ ನಂ. ಎ–34.

ಕೈಗಾರಿಕಾ ಷೆಡ್ ನಂ. ಎ–34ರ ಷೆಡ್ಯೂಲ್

ಉತ್ತರ ದಕ್ಷಿಣ 21.10 ಮೀಟರ್ ಮತ್ತು ಪೂರ್ವ ಪಶ್ಚಿಮ 43.50 ಮೀಟರ್ ಒಟ್ಟಾರೆ 917.85 ಚದರ ಮೀಟರ್ ವಿಸ್ತೀರ್ಣವುಳ್ಳ ನಿವೇಶನದಲ್ಲಿರುವ, ಕೈಗಾರಿಕಾ ಷೆಡ್ ನಂ. ಎ–34 ಹೊಂದಿರುವ ಸ್ವತ್ತಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನಲ್ಲಿ ಮುಂಭಾಗದ ಮತ್ತು ಪಕ್ಕದ ಖಾಲಿ ಜಾಗ ಹಾಗೂ ಸರ್ವೀಸ್ ರಸ್ತೆಯೂ ಸೇರಿದಂತೆ, 502.65 ಚದರ ಮೀಟರ್ ವಿಸ್ತೀರ್ಣವುಳ್ಳ ಒಂದು ಕೈಗಾರಿಕಾ ಕಾರ್ಖಾನೆ ಕೂಡ ಒಳಗೊಂಡಿರುತ್ತದೆ ಮತ್ತು ಕುಂಬಳಗೋಡು ಕೈಗಾರಿಕಾ ಪ್ರದೇಶ, ಕುಂಬಳಗೋಡು, ಬೆಂಗಳೂರು ವಿಳಾಸದಲ್ಲಿ ಸ್ಥಿತಗೊಂಡಿರುತ್ತದೆ ಹಾಗೂ ಸದರಿ ಸ್ವತ್ತಿನ ಚಕ್ಕುಬಂದಿ:
ಪೂರ್ವ : ಷೆಡ್ ನಂ. ಎ–41.
ಪಶ್ಚಿಮ : 2ನೇ ಅಡ್ಡರಸ್ತೆ
ಉತ್ತರ : ಷೆಡ್ ನಂ. ಎ–33; ಮತ್ತು
ದಕ್ಷಿಣಕ್ಕೆ : ಷೆಡ್ ನಂ. ಸಿ–58 ಮತ್ತು ಸಿ–59.

ಓ ಪಿ ಅಗರವಾಲ್, ವಕೀಲರು
ಖೈತಾನ್ ಅಂಡ್ ಕೋ ಎಲ್‌ಎಲ್‌ಪಿ
ವಕೀಲರು, ನೋಟರಿಗಳು, ಪೇಟೆಂಟ್ ಮತ್ತು ಟ್ರೇಡ್‌ಮಾರ್ಕ್ ಅಟಾರ್ನಿಗಳು
ಎಂಬೆಸ್ಸಿ ಕ್ವೆಸ್ಟ್, 3ನೇ ಮಹಡಿ, 45/1 ಮ್ಯಾಗ್ರಾತ್ ರೋಡ್,ಬೆಂಗಳೂರು 560 025
bengaluru@khaitanco.com
ಸ್ಥಳ: ಬೆಂಗಳೂರು
ದಿನಾಂಕ: 22.07.2022

'ಆತ್ಮಸ್ಥೈರ್ಯ ಕುಗ್ಗಿಸಲು ಷಡ್ಯಂತ್ರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾವ್ಯಾರು ದೇಶದ ಕಾನೂನಿಗಿಂತ ದೊಡ್ಡವರಲ್ಲ. ಆದರೆ, ಮೋದಿ ಅಧಿಕಾರಕ್ಕೆ ಬಂದ ಬಳಿಕ ಸ್ವಾಯತ್ತ ತನಿಖಾ ಸಂಸ್ಥೆಗಳಾದ ಸಿಬಿಐ, ಇ.ಡಿ, ಐ.ಟಿ ಇಲಾಖೆಯನ್ನು ದುರುಪಯೋಗ ಮಾಡಿಕೊಂಡು ಕಾಂಗ್ರೆಸ್ ಪಕ್ಷದ ನಾಯಕರನ್ನು ಹೆದರಿಸುವ ಕೆಲಸ ಮಾಡುತ್ತಿದ್ದಾರೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಕಿಡಿಕಾರಿದರು.

ಕಾಂಗ್ರೆಸ್ ಪ್ರತಿಭಟನಾ ಸಭೆ ಉದ್ದೇಶಿಸಿ ಮಾತನಾಡಿದ ಅವರು, 'ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರನ್ನು ವಿಚಾರಣೆಗೆ ಕರೆದರೆ ಕಾಂಗ್ರೆಸ್ ಯಾಕೆ ಹೆದರಿಕೊಳ್ಳಬೇಕು ಎಂದು ಹೇಳುತ್ತಿರುವ ಬಿಜೆಪಿಯವರು ಜನರನ್ನು ತಪ್ಪುದಾರಿಗೆ ಎಳೆಯುತ್ತಿದ್ದಾರೆ. ಕಿರುಕುಳ ನೀಡುವ ಉದ್ದೇಶದಿಂದ ನಡೆಸುತ್ತಿರುವ ವಿಚಾರಣೆಗೆ ನಾವು ಪ್ರತಿಭಟಿಸುತ್ತಿದ್ದೇವೆ' ಎಂದರು.

'ಭಾರತವನ್ನು ಕಾಂಗ್ರೆಸ್ ಮುಕ್ತ ಮಾಡುತ್ತೇವೆಂದು ಮೋದಿ, ಅಮಿತ್ ಶಾ ಹಲವು ಬಾರಿ ಹೇಳಿದ್ದಾರೆ. ರಾಹುಲ್ ಗಾಂಧಿ, ಸೋನಿಯಾ ಗಾಂಧಿಯವರನ್ನು ಇಡಿ ತನಿಖೆ ಮಾಡುವಂಥ ಯಾವುದೇ ಪ್ರಕರಣ ಇಲ್ಲ. ಅಕ್ರಮ ಹಣದ ವರ್ಗಾವಣೆ ಎಲ್ಲಿ ಆಗಿದೆ? ಎಲ್ಲಿ ಕ್ರಿಮಿನಲ್ ಚಟುವಟಿಕೆ ನಡೆದಿದೆ' ಎಂದು ಪ್ರಶ್ನಿಸಿದ ಅವರು, 'ರಾಜ್ಯಮಟ್ಟದಲ್ಲಿ ನಡೆಯುತ್ತಿರುವ ಈ ಚಳುವಳಿ ಶುಕ್ರವಾರದಿಂದ ಜಿಲ್ಲಾ ಮಟ್ಟದಲ್ಲೂ ನಡೆಯಲಿದೆ' ಎಂದು ಹೇಳಿದರು,

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ಇ.ಡಿ, ಐ.ಟಿ, ಸಿಬಿಐ ಬರಲಿ. ಬಿಜೆಪಿ ದಂಡೇ ಬರಲಿ, ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರನ್ನು ಮುಟ್ಟಲು ಸಾಧ್ಯವಿಲ್ಲ. ಇದೇ ಕಾಂಗ್ರೆಸ್ ಪಕ್ಷದ ಶಕ್ತಿ' ಎಂದು ಗುಡುಗಿದರು.

'ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿಯನ್ನು ಹೆದರಿಸಿದರೆ, ಎಲ್ಲರೂ ಬಿಜೆಪಿಗೆ ಬರುತ್ತಾರೆ ಎಂದು ಭಾವಿಸಿದರೆ, ಅದು ಆ ಪಕ್ಷದವರ ಭ್ರಮೆ. ರಾಷ್ಟ್ರದಲ್ಲಿ ಹಾಗೂ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಕಿತ್ತೊಗೆಯುವವರೆಗೂ ನಮ್ಮ ಹೋರಾಟ ಮುಂದುವರಿಯಬೇಕು' ಎಂದು ಅವರು ಈ ವೇಳೆ ಕಾರ್ಯಕರ್ತರಿಗೆ ಮನವಿ ಮಾಡಿದರು.

'ಆಸ್ತಿ ಮಾಡಿರುವ ಋಣ ತೀರಿಸಬೇಕಿದೆ'

ರಮೇಶ್ ಕುಮಾರ್

'ಗಾಂಧಿ ಕುಟುಂಬದ ಹೆಸರಿನಲ್ಲಿ ಮೂರ್ನಾಲ್ಕು ತಲೆಮಾರು ಕೂತು ತಿನ್ನುವಷ್ಟು ಆಸ್ತಿ ಮಾಡಿಕೊಂಡಿರುವ ನಾವೆಲ್ಲರೂ ಈಗ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಬೆಂಬಲಕ್ಕೆ ನಿಂತು, ಗಾಂಧಿ ಕುಟುಂಬದ ಋಣ ತೀರಿಸಬೇಕಿದೆ' ಎಂದು ಕಾಂಗ್ರೆಸ್ ಶಾಸಕ ಕೆ.ಆರ್. ರಮೇಶ್ ಕುಮಾರ್ ಹೇಳಿದರು.

'ಈ ಕಠಿಣ ಸಂದರ್ಭದಲ್ಲಿ ನಾವೆಲ್ಲರೂ ಅವರ ಬೆಂಬಲಕ್ಕೆ ನಿಂತು, ಋಣ ತೀರಿಸಬೇಕು. ಈ ಕರ್ತವ್ಯ ಮಾಡದಿದ್ದರೆ ನಾವು ತಿನ್ನುವ ಅನ್ನಕ್ಕೆ ಹುಳ ಬೀಳುತ್ತವೆ' ಎಂದೂ ಅವರು ಹೇಳಿದರು.

ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಭರವಸೆ

'ಭಾಷೆ ರಕ್ಷಣೆಗೆ ಕಾನೂನು ಬಲ ನೀಡಲು ಬದ್ಧ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೇರೆ ಭಾಷೆಗಳಿಗಿಂತ ಕನ್ನಡ ಕಡಿಮೆಯಿಲ್ಲ ಎನ್ನುವಂತಾಗಬೇಕು. ನಮ್ಮ ಭಾಷೆಯ ರಕ್ಷಣೆ ಹಾಗೂ ಪೋಷಣೆಗೆ ಕಾನೂನು ಬಲ ನೀಡಲು ಸರ್ಕಾರ ಬದ್ಧವಾಗಿದೆ' ಎಂದು ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಭರವಸೆ ನೀಡಿದರು.

ಕನ್ನಡ ಚಂದ್ರ ಪ್ರಶಸ್ತಿ ಪ್ರದಾನ ಸಮಿತಿ, ಸಪ್ನ ಬುಕ್ ಹೌಸ್ ಹಾಗೂ ಕರ್ನಾಟಕ ವಿಕಾಸ ರಂಗ ಜಂಟಿಯಾಗಿ ನಗರದಲ್ಲಿ ಗುರುವಾರ ಆಯೋಜಿಸಿದ್ದ ರಾ.ನಂ. ಚಂದ್ರಶೇಖರ–70 ಕಾರ್ಯಕ್ರಮದಲ್ಲಿ 'ಕನ್ನಡ ಡಿಂಡಿಮ' ಪರಿಷ್ಕೃತ ಆವೃತ್ತಿಯನ್ನು ಬಿಡುಗಡೆ ಮಾಡಿ, ರಾ. ಪ್ರಭುಶಂಕರ ಹಾಗೂ ಭಾರ್ಗವಿ ಹೇಮಂತ್ ಅವರಿಗೆ 'ಕನ್ನಡ ಚಂದ್ರ ಪ್ರಶಸ್ತಿ' ಪ್ರದಾನ ಮಾಡಿದರು. ಪ್ರಶಸ್ತಿಯು ₹ 5 ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ.

'ಭಾಷೆಯ ಬಗೆಗೆ ಹಲವಾರು ಹೋರಾಟಗಳು ನಡೆದರೂ ಸಮಸ್ಯೆಗಳು ಪೂರ್ಣ ಪ್ರಮಾಣದಲ್ಲಿ ನಿವಾರಣೆಯಾಗಿಲ್ಲ. ಕನ್ನಡ ಭಾಷೆ ಮಾತ್ರ ಬಲ್ಲವರಿಗೆ ಉದ್ಯೋಗ ಸಿಗುತ್ತಿಲ್ಲ. ನ್ಯಾಯಾಲಯದಲ್ಲಿ ಕನ್ನಡ ಅನುಷ್ಠಾನವಾಗದಿದ್ದರೆ ವಕೀಲರು ಏನು ವಾದ ಮಾಡಿದರು ಎನ್ನುವುದು ಕಕ್ಷಿದಾರರಿಗೇ ತಿಳಿಯುವುದಿಲ್ಲ. ಭಾಷೆಯ ರಕ್ಷಣೆಗೆ ಸಂಬಂಧಿಸಿದಂತೆ ಸರ್ಕಾರದ ಮಟ್ಟದಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು' ಎಂದು ಹೇಳಿದರು.

'ಮಕ್ಕಳಲ್ಲಿ ಮಾತೃ ಭಾಷೆ ಪ್ರೇಮ ಹೆಚ್ಚಿಸಬೇಕು. ಕೇಂದ್ರ ಸರ್ಕಾರವೂ ಮಾತೃಭಾಷೆ ಶಿಕ್ಷಣಕ್ಕೆ ಆದ್ಯತೆ ನೀಡಲು ಸೂಚಿಸಿದೆ. ಪೋಷಕರು ಮಕ್ಕಳನ್ನು ಕನ್ನಡ ಮಾಧ್ಯಮದ ಶಾಲೆಗಳಲ್ಲಿ ಓದಿಸಬೇಕು' ಎಂದರು.

ಮಸೂದೆ ಮಂಡಿಸಿ: ಕಲಾವಿದ 'ಮುಖ್ಯಮಂತ್ರಿ' ಚಂದ್ರು, 'ಕರ್ನಾಟಕ ಏಕೀಕರಣ ಬಳಿಕವೂ ಕನ್ನಡಕ್ಕೆ ಹೋರಾಡುವ ಸ್ಥಿತಿಯಲ್ಲಿ ಇದ್ದೇವೆ. ದೇಶಪ್ರೇಮದ ಜತೆಗೆ ನಾಡ ಪ್ರೇಮವೂ ಇರಬೇಕು. ಭಾಷೆಯ ಮೇಲಿನ ಅಸಡ್ಡೆಯಿಂದಾಗಿ ಸರ್ಕಾರಿ ಆದೇಶಗಳಲ್ಲಿಯೂ ತಪ್ಪುಗಳು ಕಾಣಿಸಿಕೊಳ್ಳುತ್ತಿವೆ. ಆದೇಶ, ಸುತ್ತೋಲೆಗಳಲ್ಲಿ ಕನ್ನಡವನ್ನು ತಪ್ಪಾಗಿ ಬರೆದ ಅಧಿಕಾರಿಗಳ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ಭಾಷೆ ಇನ್ನಷ್ಟು ದುಃಸ್ಥಿತಿಗೆ ತಲುಪಲಿದೆ. ಸರ್ಕಾರವು 'ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಮಸೂದೆ'ಯನ್ನು ಅಧಿವೇಶನದಲ್ಲಿ ಮಂಡಿಸಬೇಕು' ಎಂದು ಹೇಳಿದರು.

'ಶಾಲಾ ಪಠ್ಯ ಪುಸ್ತಕ ಪರಿಷ್ಕರಣೆ ಸೇರಿದಂತೆ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ವಿರೋಧಗಳು ವ್ಯಕ್ತವಾದರೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮೌನಕ್ಕೆ ಶರಣಾಗಿದ್ದಾರೆ. ಇದು ಅವರ ವ್ಯಕ್ತಿತ್ವಕ್ಕೆ ಒಪ್ಪುವುದಿಲ್ಲ' ಎಂದರು.

'ಕನ್ನಡ ಡಿಂಡಿಮ' ಕೃತಿಯ ಪರಿಷ್ಕೃತ ಆವೃತ್ತಿಯನ್ನು ಜೆ.ಸಿ. ಮಾಧುಸ್ವಾಮಿ ಬಿಡುಗಡೆ ಮಾಡಿದರು. (ಎಡದಿಂದ) ರಾ. ಪ್ರಭುಶಂಕರ, ರಾ.ನಂ. ಚಂದ್ರಶೇಖರ, ಸಾಹಿತಿ ಗೊ.ರು. ಚನ್ನಬಸಪ್ಪ, 'ಮುಖ್ಯಮಂತ್ರಿ' ಚಂದ್ರು ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಟಿ.ಎಸ್. ನಾಗಾಭರಣ ಇದ್ದಾರೆ –ಪ್ರಜಾವಾಣಿ ಚಿತ್ರ

ಸುದ್ದಿ 2 ನಿಮಿಷ

ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಕೈಜೋಡಿಸಿ: ದೊರೆಸ್ವಾಮಿ

ಬೆಂಗಳೂರು: 'ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸುವ ಕಾರ್ಯಕ್ಕೆ ಆದ್ಯತೆ ನೀಡಬೇಕು' ಎಂದು ರಾಜ್ಯ ಸರ್ಕಾರದ ಶಿಕ್ಷಣ ಸುಧಾರಣೆಯ ಸಲಹೆಗಾರ ಪ್ರೊ. ಎಂ.ಆರ್. ದೊರೆಸ್ವಾಮಿ ಸಲಹೆ ನೀಡಿದ್ದಾರೆ.

ವಿಶ್ವವಿದ್ಯಾಲಯಗಳು ಮತ್ತು ಸ್ವಾಯತ್ತ ಕಾಲೇಜುಗಳು ದತ್ತು ಪಡೆದಿರುವ ಸರ್ಕಾರಿ ಶಾಲೆಗಳ ಸ್ಥಿತಿ ಕುರಿತು ನಡೆದ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.



'ರಾಷ್ಟ್ರೀಯ ಶಿಕ್ಷಣ ನೀತಿ ಅನ್ವಯ ಸರ್ಕಾರಿ ಶಾಲೆಗಳನ್ನು ವಿಶ್ವವಿದ್ಯಾಲಯಗಳು ಅಭಿವೃದ್ಧಿಪಡಿಸುವುದು ಆಯ್ಕೆಯ ವಿಷಯವಲ್ಲ. ಅದು ವಿಶ್ವವಿದ್ಯಾಲಯಗಳ ಜವಾಬ್ದಾರಿಯಾಗಿದೆ' ಎಂದು ಪ್ರತಿಪಾದಿಸಿದರು.

'ಪ್ರಧಾನಿ ನರೇಂದ್ರ ಮೋದಿ ಅವರ ಕನಸಿನ ಯೋಜನೆಯಾದ 'ವಿದ್ಯಾಂಜಲಿ' ಸಾಕಾರಗೊಳಿಸಲು ಪ್ರಯತ್ನಿಸಬೇಕು. ಈ ಯೋಜನೆ ಅಡಿಯಲ್ಲಿ ಶಾಲೆಗಳ ಅಭಿವೃದ್ಧಿಯಲ್ಲಿ ದೇಶದ ಎಲ್ಲ ವಿಶ್ವವಿದ್ಯಾಲಯಗಳು ಭಾಗಿಯಾಗಬೇಕು' ಎಂದು ಸಲಹೆ ನೀಡಿದರು.

'ರೇವಾ ವಿಶ್ವವಿದ್ಯಾಲಯವು ದತ್ತು ಪಡೆದಿರುವ ಶಾಲೆಯಲ್ಲಿ ಕೊಠಡಿ ನಿರ್ಮಿಸಿದೆ. ಇದೇ ರೀತಿ, ರಾಜೀವ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ ಮತ್ತು ಶ್ರೀನಿವಾಸ ವಿಶ್ವವಿದ್ಯಾಲಯ ಆರೋಗ್ಯ ರಕ್ಷಣೆಯ ಸೇವೆಯಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿವೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ವೈಟ್ ಟಾಪಿಂಗ್: ಹಳೇ ಮದ್ರಾಸ್ ರಸ್ತೆಯಲ್ಲಿ ಮಾರ್ಗ ಬದಲು

ಬೆಂಗಳೂರು: ಹಳೇ ಮದ್ರಾಸ್ ರಸ್ತೆಯ ಕೆನ್ಸಿಂಗ್‌ಟನ್ ಓವಲ್ ರಸ್ತೆ ಜಂಕ್ಷನ್‌ನಿಂದ ಆಂಜನೇಯ ದೇವಸ್ಥಾನ ಜಂಕ್ಷನ್‌ವರೆಗೆ ಬಿಬಿಎಂಪಿ ವತಿಯಿಂದ ವೈಟ್ ಟಾಪಿಂಗ್ ಕಾಮಗಾರಿ ಆರಂಭವಾಗಿದ್ದು, ಈ ಮಾರ್ಗದಲ್ಲಿ ಎಲ್ಲ ಪ್ರಕಾರದ ವಾಹನಗಳ ಸಂಚಾರವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ.

'ನಿರ್ಬಂಧಿತ ಮಾರ್ಗದಲ್ಲಿ ಸಂಚರಿಸುವ ವಾಹನಗಳಿಗೆ ಪರ್ಯಾಯ ಮಾರ್ಗ ಕಲ್ಪಿಸಲಾಗಿದೆ' ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ತಿಳಿಸಿದ್ದಾರೆ.

'ಆಂಜನೇಯ ಜಂಕ್ಷನ್‌ನಿಂದ ಆದರ್ಶ್ ಜಂಕ್ಷನ್, ರಾಮಯ್ಯ ಜಂಕ್ಷನ್ ಕಡೆಯಿಂದ ಟ್ರಿನಿಟಿ ವೃತ್ತ ಕಡೆಗೆ ವಾಹನಗಳು ಹೋಗಬಹುದು. ಗುರುದ್ವಾರ ಜಂಕ್ಷನ್ ಕಡೆಯಿಂದ ಬರುವ ವಾಹನಗಳು ಕೆನ್ಸಿಂಗ್‌ಟನ್ ಓವಲ್ ಜಂಕ್ಷನ್‌ನಲ್ಲಿ ಪಶ್ಚಿಮದಿಂದ ಪೂರ್ವದ ಕಡೆಗೆ ಸಂಚರಿಸಿ ಕೆ.ಆರ್.ಪುರ ಕಡೆಗೆ ಸಾಗಬಹುದು.'

'ಕೆ.ಆರ್. ಪುರದಿಂದ ನಗರಕ್ಕೆ ಬರುವ ವಾಹನಗಳು ಎನ್‌ಜಿಇಎಫ್ ಜಂಕ್ಷನ್ ಮೂಲಕ ಸುರಂಜನ್ ದಾಸ್ ರಸ್ತೆ, ಹಳೇ ವಿಮಾನ ರಸ್ತೆ ಮೂಲಕ ಸಂಚರಿಸಬಹುದು. ಕೆ.ಆರ್. ಪುರ ಕಡೆಗೆ ಹೋಗುವ ವಾಹನಗಳು ಹಾಸ್ಮೆಟ್ ಜಂಕ್ಷನ್‌ನಿಂದ ಇಂಡಿಯಾ ಗ್ಯಾರೇಜ್, ಎಎಸ್‌ಸಿ ಸೆಂಟರ್, ಹಳೇ ವಿಮಾನ ನಿಲ್ದಾಣ ರಸ್ತೆ, ಸುರಂಜನ್ ದಾಸ್ ರಸ್ತೆ ಮೂಲಕ ಹೋಗಬಹುದು' ಎಂದೂ ಅವರು ಹೇಳಿದ್ದಾರೆ.

'ಮೇಧಾವಿ ನಾಯಕರಿಗೆ ಅಭಿನಂದನೆ'

ಬೆಂಗಳೂರು: 'ಕಾಂಗ್ರೆಸ್ ಪಕ್ಷದ 60 ವರ್ಷಗಳ 'ಲೂಟ್ ಇಂಡಿಯಾ' ಕಾರ್ಯಕ್ರಮವನ್ನು ಅತ್ಯಂತ ಸೊಗಸಾಗಿ ವರ್ಣಿಸಿದ ಮೇಧಾವಿ ನಾಯಕರಿಗೆ ಅಭಿನಂದನೆಗಳು' ಎಂದು ಆರೋಗ್ಯ ಸಚಿವ ಡಾ.ಸುಧಾಕರ್ ಅವರು ಕಾಂಗ್ರೆಸ್ ಶಾಸಕ ರಮೇಶ್‌ಕುಮಾರ್ ಅವರನ್ನು ಉದ್ದೇಶಿಸಿ ವ್ಯಂಗ್ಯವಾಗಿ ಟ್ವೀಟ್ ಮಾಡಿದ್ದಾರೆ.

'ನಿಮ್ಮ ಪಕ್ಷದ ಹಿರಿಯ ನಾಯಕರೇ ಇಷ್ಟು ಪ್ರಾಮಾಣಿಕವಾಗಿ ಬ್ರಹ್ಮಾಂಡ ಭ್ರಷ್ಟಾಚಾರವನ್ನೇ ಒಪ್ಪಿಕೊಂಡ ಮೇಲೆ ಯಾವ ಮುಖ ಇಟ್ಟುಕೊಂಡು ಜನರ ಬಳಿ ಮತ ಕೇಳುತ್ತೀರಿ' ಎಂದು ಅವರು ಕಾಂಗ್ರೆಸ್ ಪಕ್ಷವನ್ನು ಪ್ರಶ್ನಿಸಿದ್ದಾರೆ. 'ಗಾಂಧಿ ಕುಟುಂಬದ ಹೆಸರಿನಲ್ಲಿ 3–4 ತಲೆಮಾರಿಗೆ ಆಗುವಷ್ಟು ಲೂಟಿ ಹೊಡೆದಿದ್ದೇನೆ, ಋಣ ತೀರಿಸೋಣ ಎಂದಿದ್ದಾರೆ. ಇವರ ಪ್ರಕಾರ ಇ.ಡಿ ಅಧಿಕಾರಿಗಳೇ ಸೋನಿಯಾಗಾಂಧಿ ಅವರ ಮನೆಗೆ ಬರಬೇಕಿತ್ತು. ಕಾಂಗ್ರೆಸ್ ನಿಷ್ಠೆ ದೇಶಕ್ಕೋ ಒಂದು ಕುಟುಂಬಕ್ಕೋ? ಕಾಂಗ್ರೆಸ್ ಅಧ್ಯಕ್ಷೆ ಕಾನೂನು ಮತ್ತು ಸಂವಿಧಾನಕ್ಕಿಂತ ದೊಡ್ಡವರೇ' ಎಂದೂ ಕುಟುಕಿದ್ದಾರೆ.

'ಕೈ ನಾಯಕರ ತನಿಖೆ ಆಗಲಿ'

'ಗಾಂಧಿ ಕುಟುಂಬದ ಹೆಸರಿನಲ್ಲಿ ಮೂರು–ನಾಲ್ಕು ತಲೆಮಾರು ಕೂತು ತಿನ್ನುವಷ್ಟು ಆಸ್ತಿ ಮಾಡಿಕೊಂಡಿದ್ದೇವೆ. ಇದಕ್ಕೆ ನಾವು ಸೋನಿಯಾಗಾಂಧಿ ಅವರಿಗೆ ಋಣಿಯಾಗಬೇಕು' ಎಂದು ಕಾಂಗ್ರೆಸ್ ನಾಯಕ ರಮೇಶ್ ಕುಮಾರ್ ಹೇಳಿದ್ದಾರೆ. ಕಾಂಗ್ರೆಸ್‌ನ ಎಲ್ಲ ನಾಯಕರನ್ನೂ ಇ.ಡಿ ತನಿಖೆಗೆ ಒಳಪಡಿಸಬೇಕು ಎಂದು ಇಂಧನ ಸಚಿವ ವಿ.ಸುನೀಲ್‌ಕುಮಾರ್ ಒತ್ತಾಯಿಸಿದ್ದಾರೆ.

'ರಮೇಶ್‌ಕುಮಾರ್ ತಮ್ಮ ಸಹಜವಾದ ಭಾಷಣದ ವೇಳೆ ಬಹಳ ದಿನಗಳ ಬಳಿಕ ಸತ್ಯ ಹೇಳಿದ್ದಾರೆ. ಆದ್ದರಿಂದ ಸೋನಿಯಾ, ರಾಹುಲ್ ಗಾಂಧಿ ಮಾತ್ರವಲ್ಲ ಕಾಂಗ್ರೆಸ್‌ನ ಎಲ್ಲ ನಾಯಕರನ್ನೂ ಇ.ಡಿ ತನಿಖೆಗೆ ಒಳಪಡಿಸಬೇಕು. ಈ ಆರೋಪ ಮಾಡಿರುವುದು ಕಾಂಗ್ರೆಸ್ ನಾಯಕರೇ ಹೊರತು ಬಿಜೆಪಿ ನಾಯಕರಲ್ಲ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ರಾಷ್ಟ್ರಪತಿ ಚುನಾವಣೆ: ಒಟ್ಟು 53 ಮತಗಳು ಅನರ್ಹ

ನವದೆಹಲಿ (ಪಿಟಿಐ): ರಾಷ್ಟ್ರಪತಿ ಚುನಾವಣೆ ವೇಳೆ ಸಂಸತ್‌ನಲ್ಲಿ ಚಲಾವಣೆಯಾಗಿದ್ದ ಮತಗಳ ಪೈಕಿ ಶೇ 28ರಷ್ಟು ಮತಗಳು ಅನರ್ಹಗೊಂಡಿವೆ.

ದೇಶದಲ್ಲಿ ಚಲಾವಣೆಯಾಗಿದ್ದ ಒಟ್ಟು ಮತಗಳ ಪೈಕಿ 53 ಮತಗಳು ಅನರ್ಹಗೊಂಡಿವೆ. ಸಂಸತ್‌ನಲ್ಲಿ ಚಲಾವಣೆಯಾಗಿದ್ದ ಮತಗಳ ಪೈಕಿ 15, ಪಂಜಾಬ್ ಮತ್ತು ಮಧ್ಯ ಪ್ರದೇಶದಲ್ಲಿ ತಲಾ 5, ನವದೆಹಲಿ, ಪಶ್ಚಿಮ ಬಂಗಾಳ, ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ತಲಾ 4, ಉತ್ತರ ಪ್ರದೇಶದಲ್ಲಿ 3, ಅಸ್ಸಾಂನಲ್ಲಿ 2, ಉತ್ತರಾಖಂಡ, ತೆಲಂಗಾಣ, ತಮಿಳುನಾಡು, ಮೇಘಾಲಯ, ಜಾರ್ಖಂಡ್, ಹಿಮಾಚಲ ಪ್ರದೇಶ ಮತ್ತು ಪುದುಚೇರಿಯಲ್ಲಿ ತಲಾ ಒಂದು ಮತಗಳು ಅನರ್ಹವಾಗಿವೆ.

'ಸಂಸತ್ ಸದಸ್ಯರ ಪೈಕಿ ಹಲವರು ಮತ ಪತ್ರದಲ್ಲಿ ಅಭ್ಯರ್ಥಿಗಳ ಹೆಸರಿನ ಮುಂದೆ ಮುದ್ರೆ ಒತ್ತುವ ಬದಲು ಅಭ್ಯರ್ಥಿಗಳ ಹೆಸರು ಬರೆದಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಆಂಧ್ರಪ್ರದೇಶ, ಅರುಣಾಚಲಪ್ರದೇಶ, ಬಿಹಾರ, ಛತ್ತೀಸಗಡ, ಗೋವಾ, ಕೇರಳ, ಮಣಿಪುರ, ಮಿಜೋರಾಂ, ನಾಗಾಲ್ಯಾಂಡ್, ಒಡಿಶಾ, ರಾಜಸ್ಥಾನ, ಸಿಕ್ಕಿಂ ಹಾಗೂ ತ್ರಿಪುರ ರಾಜ್ಯಗಳಲ್ಲಿ ಚಲಾವಣೆಯಾದ ಮತಗಳೆಲ್ಲವೂ ಮಾನ್ಯವಾಗಿವೆ' ಎಂದು ಹೇಳಿವೆ.

ಐಎಎಸ್ ಅಧಿಕಾರಿಗಳಿಗೆ ಹೆಚ್ಚುವರಿ ಹೊಣೆ

ಬೆಂಗಳೂರು: ಬೆಂಗಳೂರು ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ಪಿ. ರಾಜೇಂದ್ರ ಚೋಳನ್ ಅವರಿಗೆ ಕರ್ನಾಟಕ ರಾಜ್ಯ ವೈದ್ಯಕೀಯ ಪೂರೈಕೆಗಳ ನಿಗಮದ (ಕೆಎಸ್ಎಂಎಸ್‌ಸಿಎಲ್) ವ್ಯವಸ್ಥಾಪಕ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಿ ರಾಜ್ಯ ಸರ್ಕಾರ ಗುರುವಾರ ಆದೇಶ ಹೊರಡಿಸಿದೆ.

ಅದೇ ರೀತಿ, ಆಹಾರ ಮತ್ತು ನಾಗರಿಕ ಪೂರೈಕೆಗಳ ಇಲಾಖೆ ಆಯುಕ್ತರಾದ ಕನಗವಲ್ಲಿ ಅವರಿಗೆ ಕರ್ನಾಟಕ ಆಹಾರ ಮತ್ತು ಪೂರೈಕೆ ನಿಗಮದ ವ್ಯವಸ್ಥಾಪಕ ನಿರ್ದೇಶಕ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

23ರಿಂದ ಶಾಸ್ತ್ರೀಯ ಸುವರ್ಣ ಸಂಭ್ರಮ

ಬೆಂಗಳೂರು: ಶ್ರೀಕಂಠಂ ನಾಗೇಂದ್ರ ಶಾಸ್ತ್ರಿ ಅವರ 50ನೇ ಜನ್ಮದಿನದ ನಿಮಿತ್ತ ಜುಲೈ 23ರಿಂದ 24ರ ವರೆಗೆ 'ಶಾಸ್ತ್ರೀಯ ಸುವರ್ಣ ಸಂಭ್ರಮ' ಕಾರ್ಯಕ್ರಮವನ್ನು ಎನ್.ಆರ್. ಕಾಲೊನಿಯ ಪತ್ತಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

'ಶಾಸ್ತ್ರೀಯ ಸುವರ್ಣ ಸೌರಭ' ಸ್ಮರಣ ಸಂಚಿಕೆಯನ್ನು ವಿಧಾನಸಭೆಯ ಸ್ಪೀಕರ್ ಅವರ ಆಪ್ತ ಕಾರ್ಯದರ್ಶಿ

ಶ್ರೀಕಂಠಂ ನಾಗೇಂದ್ರ ಶಾಸ್ತ್ರಿ

ಅಮರ್‌ನಾಥ ಬಿಡುಗಡೆ ಮಾಡಲಿದ್ದಾರೆ. ವಿವಿಧ ಸಂಗೀತ ಕಾರ್ಯಕ್ರಮಗಳು ನಡೆಯಲಿವೆ ಎಂದು ಶ್ರೀಕಂಠಂ ನಾಗೇಂದ್ರ ಶಾಸ್ತ್ರಿ ಫೌಂಡೇಷನ್‌ನ ಪ್ರಕಟಣೆ ತಿಳಿಸಿದೆ.

'ಶಿಕ್ಷಣ ಇಲಾಖೆಯಿಂದ ದಿನಕ್ಕೊಂದು ಸುತ್ತೋಲೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೊಸ ಶಾಲೆಗಳನ್ನು ಆರಂಭಿಸಲು ಅಥವಾ ಸ್ವಾಭಾವಿಕ ಬೆಳವಣಿಗೆ ಅಡಿಯಲ್ಲಿ ಹೆಚ್ಚುವರಿ ವಿಭಾಗಗಳನ್ನು ಹೊಂದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಇದೇ 25ರವರೆಗೆ ಅವಕಾಶ ನೀಡಿರುವ ಶಿಕ್ಷಣ ಇಲಾಖೆ, ಪ್ರಸಕ್ತ ಶೈಕ್ಷಣಿಕ ವರ್ಷಕ್ಕೆ ವಿದ್ಯಾರ್ಥಿಗಳು ಪ್ರವೇಶ ಪಡೆಯಲು ಜುಲೈ 31 ಕೊನೆಯ ದಿನ ಎಂದು ನಿಗದಿಪಡಿಸಿದೆ. ಇದು ಗೊಂದಲಕ್ಕೆ ಕಾರಣವಾಗಿದೆ' ಎಂದು ನೋಂದಾಯಿತ ಅನುದಾನರಹಿತ ಖಾಸಗಿ ಶಾಲೆಗಳ ಆಡಳಿತ ಸಂಘ (ರುಪ್ಸ) ಆಕ್ಷೇಪ ವ್ಯಕ್ತಪಡಿಸಿದೆ.

'ಮಾನ್ಯತೆ ನೀಡುವ ಪ್ರಕ್ರಿಯೆ ಮುಗಿಸದೆ, ಅರ್ಜಿ ಸಲ್ಲಿಸಿದ ಶಾಲೆಗಳನ್ನು ಕಾನೂನುಬಾಹಿರ ಶಾಲೆಗಳೆಂದು ಘೋಷಿಸುವುದು ಇಲಾಖೆಯ ಮೂರ್ಖತನದ ಪರಮಾವಧಿ. ಇಲಾಖೆ ದಿನಕ್ಕೊಂದು ಆದೇಶ ಹೊರಡಿಸುತ್ತಿದ್ದು, ಇದು ದ್ವಂದ್ವ ಹಾಗೂ ಬೇಜವಾಬ್ದಾರಿ ನಿಲುವು' ಎಂದು ಸಂಘದ ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ ಅಭಿಪ್ರಾಯಪಟ್ಟಿದ್ದಾರೆ.

'ಇಲಾಖೆ ಮಾನ್ಯತೆ ನೀಡುವಾಗ ಶಾಲೆಯಲ್ಲಿ ಮಕ್ಕಳು, ಪೀಠೋಪಕರಣ, ಶಿಕ್ಷಕರು ಇತ್ಯಾದಿ ವ್ಯವಸ್ಥೆಗಳು ಇರಲೇಬೇಕೆಂಬ ನಿಯಮಗಳನ್ನು ಕಡ್ಡಾಯ ಮಾಡಿದೆ. ಹೊಸ ಶಾಲೆಗಾಗಿ ಅರ್ಜಿ ಸಲ್ಲಿಸಲು ವ್ಯವಸ್ಥೆ ಮಾಡಿಕೊಂಡಿರುವ ಸಾವಿರಾರು ಶಾಲೆಗಳು ಹಾಗೂ ಆ ಶಾಲೆಗಳಲ್ಲಿ ದಾಖಲಾಗಿರುವ ವಿದ್ಯಾರ್ಥಿಗಳು ಈಗ ಆತಂಕಕ್ಕೀಡಾಗುವಂತೆ ಇಲಾಖೆ ಸುತ್ತೋಲೆ ಹೊರಡಿಸಿದೆ. ಎರಡು ವರ್ಷಗಳಿಂದ ಶಿಕ್ಷಣ ಇಲಾಖೆಯ ಅಧಿಕಾರಿಗಳು ಮತ್ತು ಸಚಿವರು ತಾವು ನಡೆದಿದ್ದೇ ದಾರಿ ಎಂಬಂತೆ ಇಂಥ ಅನೇಕ ಗೊಂದಲಗಳನ್ನು ಸೃಷ್ಟಿಸಿ, ನಗೆಪಾಟಲಿಗೀಡಾಗುತ್ತಿದ್ದಾರೆ' ಎಂದಿದ್ದಾರೆ.

23ಕ್ಕೆ ಕುಂಬಾರ ಜಾಗೃತಿ ಸಮಾವೇಶ

ಬೆಂಗಳೂರು: ಕರ್ನಾಟಕ ಕುಂಬಾರರ ಯುವ ಸೈನ್ಯದ ವತಿಯಿಂದ ಇದೇ 23ಕ್ಕೆ 'ಕುಂಬಾರ, ಕುಲಾಲ, ಪ್ರಜಾಪತಿ ಜಾಗೃತಿ ಸಮಾವೇಶ'ವನ್ನು ಸರ್ ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

'ರಾಜ್ಯದಲ್ಲಿ ಕುಂಬಾರ, ಕುಲಾಲ, ಪ್ರಜಾಪತಿ ಎಂಬ ಹೆಸರುಗಳಿಂದ ಕರೆಯಲಾಗುವ ಕುಂಬಾರ ಸಮುದಾಯ 20 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿದೆ. ಸಮುದಾಯದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಅಭಿವೃದ್ಧಿ ಕುರಿತು ಸರ್ಕಾರಕ್ಕೆ ಹಲವು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ' ಎಂದು ಸಂಸ್ಥಾಪಕ ಅಧ್ಯಕ್ಷ ಶಂಕರ್ ಶೆಟ್ಟಿ ಕುಂಬಾರ ಗುರುವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಕುಂಬಾರ ಗುರುಪೀಠದ ಕುಂಬಾರ ಗುಂಡಯ್ಯ ಸ್ವಾಮೀಜಿ, ತೇಲಸಂಗ ಶ್ರೀಗಳ ನೇತೃತ್ವದಲ್ಲಿ ಜಾಗೃತಿ ಸಮಾವೇಶ ಮತ್ತು ಶಕ್ತಿಪ್ರದರ್ಶನ ನಡೆಸಲಾಗುವುದು' ಎಂದು ತಿಳಿಸಿದರು.

ಶಾಸಕ ಬೈರತಿ ಸುರೇಶ್ ಅವರು ತಮ್ಮ ಜನ್ಮದಿನದ ಸಂದರ್ಭದಲ್ಲಿ ಅರ್ಹ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ವಿತರಿಸಿದರು

ಕಾಯಿಲೆಯಿಂದ ಬಳಲುತ್ತಿರುವ ಬಾಲಕರ ಆಸೆ ಈಡೇರಿಸಿದ ಪೊಲೀಸರು

‘ಠಾಣಾಧಿಕಾರಿ’ ಆದ ಮಕ್ಕಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಕಿ ಸಮವಸ್ತ್ರ ಧರಿಸಿ, ಸೊಂಟದಲ್ಲಿ ಪಿಸ್ತೂಲ್ ಹಾಗೂ ಕೈಯಲ್ಲಿ ವಾಕಿಟಾಕಿ ಹಿಡಿದು ಕೋರಮಂಗಲ ಠಾಣೆಗೆ ಬಂದ ಇಬ್ಬರು ಮಕ್ಕಳು, ಪೊಲೀಸ್ ಸಿಬ್ಬಂದಿ ಹಾಗೂ ಅಧಿಕಾರಿಗಳಿಂದ ಸೆಲ್ಯೂಟ್ ಮಾಡಿಸಿಕೊಂಡರು. ಇನ್‌ಸ್ಪೆಕ್ಟರ್ ಕುರ್ಚಿಯಲ್ಲಿ ಕುಳಿತು ಠಾಣಾಧಿಕಾರಿ ಆಗಿ ಒಂದು ದಿನ ಅಧಿಕಾರ ಚಲಾಯಿಸಿದರು.

ಗಂಭೀರ ಕಾಯಿಲೆಯಿಂದ ಬಳಲುತ್ತಿರುವ 14 ವರ್ಷದ ವಿ.ಎಸ್. ಮಿತಿಲೇಶ್ ಹಾಗೂ ಮಹಮ್ಮದ್ ಸಲ್ಮಾನ್, ಪೊಲೀಸ್ ಅಧಿಕಾರಿಯಾಗುವ ಆಸೆ ಇಟ್ಟುಕೊಂಡಿದ್ದರು. ಅದಕ್ಕೆ ಸ್ಪಂದಿಸಿದ ಆಗ್ನೇಯ ವಿಭಾಗದ ಡಿಸಿಪಿ ಸಿ.ಕೆ.ಬಾಬಾ, ಮಕ್ಕಳನ್ನು ಗುರುವಾರ ಬೆಳಿಗ್ಗೆ ಠಾಣೆಗೆ ಆತ್ಮೀಯವಾಗಿ ಆಹ್ವಾನಿಸಿ ಅಧಿಕಾರ ಚಲಾಯಿಸಲು ಅವಕಾಶ ಕಲ್ಪಿಸಿಕೊಟ್ಟರು.

ಸಾವು-ಬದುಕಿನ ನಡುವೆ ಹೋರಾಟ ನಡೆಸುತ್ತಿರುವ ಮಕ್ಕಳು, ಪೊಲೀಸ್ ಆದ ಕ್ಷಣವನ್ನು ಸಂಭ್ರಮಿಸಿದರು. ಅವರ ಮುಖದಲ್ಲಿದ್ದ ನಗು ಕಂಡು ಪೋಷಕರು ಭಾವುಕರಾಗಿ ಪೊಲೀಸರಿಗೆ ಅಭಿನಂದನೆ ಸಲ್ಲಿಸಿದರು.

ಆದೇಶ ನೀಡಿದ ಮಕ್ಕಳು: ಡಿಸಿಪಿ ಕಚೇರಿಗೆ ಭೇಟಿ ನೀಡಿದ್ದ ಮಕ್ಕಳು, ಡಿಸಿಪಿ ಕುರ್ಚಿಯಲ್ಲಿ ಕುಳಿತು ಖುಷಿಪಟ್ಟರು. ಕಾರ್ಯವೈಖರಿ ಬಗ್ಗೆ ತಿಳಿದುಕೊಂಡರು. ಅಲ್ಲಿಂದ ಕೋರಮಂಗಲ ಠಾಣೆಗೆ ಬಂದು ಇನ್‌ಸ್ಪೆಕ್ಟರ್ ಕುರ್ಚಿಯಲ್ಲಿ ಕುಳಿತು, ಸಿಬ್ಬಂದಿ ಹಾಜರಿ ಪಡೆದರು. ಠಾಣೆ ವ್ಯಾಪ್ತಿಯಲ್ಲಿ ಗಸ್ತಿನ ಬಗ್ಗೆ ವಿಚಾರಿಸಿದರು. ‘ಅಪರಾಧ ಕೃತ್ಯಗಳು ನಡೆಯದಂತೆ, ಜನರು ನಿರ್ಭಯವಾಗಿ ಜೀವಿಸುವಂತೆ ನೋಡಿಕೊಳ್ಳಿ’ ಎಂದು ಮಕ್ಕಳು ಆದೇಶ ನೀಡಿದರು. ಅದನ್ನು ಒಪ್ಪಿ ಪೊಲೀಸರು ಸೆಲ್ಯೂಟ್ ಮಾಡಿದರು.

ಡಿಸಿಪಿ ಸಿ.ಕೆ. ಬಾಬಾ ಹಾಗೂ ಇನ್‌ಸ್ಪೆಕ್ಟರ್ ಡಿ.ಎನ್. ನಟರಾಜ್, ಮಕ್ಕಳ ಪಕ್ಕದಲ್ಲೇ ನಿಂತು ಪೊಲೀಸ್ ವ್ಯವಸ್ಥೆ ಬಗ್ಗೆ ಮಾಹಿತಿ ನೀಡಿದರು. ಯಾವ ಸಿಬ್ಬಂದಿ ಏನು ಕೆಲಸ ಮಾಡುತ್ತಾರೆಂದು ತಿಳಿಸಿಕೊಟ್ಟರು. ಕೊನೆಯಲ್ಲಿ ಉಡುಗೊರೆ ನೀಡಿ, ಬಾಲಕರನ್ನು ಬೀಳ್ಕೊಟ್ಟರು.

‘ಹೊಸೂರಿನ ವಿ.ಎಸ್. ಮಿತಿಲೇಶ್ ಹಾಗೂ ಕೇರಳದ ಮೊಹಮ್ಮದ್ ಸಲ್ಮಾನ್, ಗಂಭೀರ ಕಾಯಿಲೆಯಿಂದ ಬಳಲುತ್ತಿದ್ದಾರೆ. ಕಿದ್ವಾಯಿ ಹಾಗೂ ನಾರಾಯಣ ಹೃದಯಾಲಯದಲ್ಲಿ ಇವರಿಬ್ಬರು ಚಿಕಿತ್ಸೆ ಪಡೆಯುತ್ತಿದ್ದು, ಬದುಕಲು ಹೋರಾಟ ನಡೆಸುತ್ತಿದ್ದಾರೆ. ‘ಪೊಲೀಸ್ ಅಧಿಕಾರಿ’ ಆಗಬೇಕೆಂಬ ಇವರ ಆಸೆಯನ್ನು 'ಮೇಕ್ ಎ ವಿಷ್' ಸಂಸ್ಥೆ ಪ್ರತಿನಿಧಿಗಳು ನಮ್ಮ ಗಮನಕ್ಕೆ ತಂದಿದ್ದರು. ಮಕ್ಕಳ ಆಸೆ ಈಡೇರಿಸಿದ್ದು ಒಂದು ಸಾರ್ಥಕ ಕ್ಷಣ’ ಎಂದು ಸಿ.ಕೆ. ಬಾಬಾ ಹೇಳಿದರು.

ಆಗ್ನೇಯ ವಿಭಾಗದ ಡಿಸಿಪಿ ಕಚೇರಿಗೆ ಗುರುವಾರ ಬೆಳಿಗ್ಗೆ ಬಂದಿದ್ದ ಮಿಥಿಲೇಶ್ ಹಾಗೂ ಮೊಹಮ್ಮದ್ ಸಲ್ಮಾನ್, ಡಿಸಿಪಿ ಕುರ್ಚಿಯಲ್ಲಿ ಕುಳಿತು ಅಧಿಕಾರ ಚಲಾಯಿಸಿ ಖುಷಿಪಟ್ಟರು. ಡಿಸಿಪಿ ಸಿ.ಕೆ. ಬಾಬಾ ಜೊತೆಗಿದ್ದರು – ಪ್ರಜಾವಾಣಿ ಚಿತ್ರ

‘ತಾಮ್ರದ ಚೊಂಬು’ ವಂಚನೆ ಪ್ರಕರಣ: ಎಂಜಿನಿಯರಿಂಗ್ ಪದವೀಧರರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈಸ್ ಪುಲ್ಲಿಂಗ್ ಹೆಸರಿನಲ್ಲಿ ತಾಮ್ರದ ಚೊಂಬು ತೋರಿಸಿ, ಮಾರಾಟದ ಸೋಗಿನಲ್ಲಿ ಲಕ್ಷಾಂತರ ರೂಪಾಯಿ ಪಡೆದು ವಂಚಿಸುತ್ತಿದ್ದ ಜಾಲವನ್ನು ಸಿಸಿಬಿ ಪೊಲೀಸರು ಭೇದಿಸಿದ್ದಾರೆ. ಜಾಲದ ರೂವಾರಿಗಳಾದ ಐವರು ಎಂಜಿನಿಯರಿಂಗ್ ಪದವೀಧರರನ್ನು ಬಂಧಿಸಿದ್ದಾರೆ.

‘ರಾಮಸಾಯಿ ನಾಯ್ಡು, ವಂಶಿ ಸಾಯಿ, ಕೃಷ್ಣ, ಅಶೋಕ್ ಹಾಗೂ ವರುಣ್ ಬಂಧಿತರು. ಎಂಜಿನಿಯರಿಂಗ್ ಹಾಗೂ ಡಿಪ್ಲೊಮಾ ಪದವೀಧರರಾದ ಇವರಿಗೆ, ವಿದ್ಯಾರ್ಹತೆಗೆ ತಕ್ಕಂತೆ ಕೆಲಸ ಸಿಕ್ಕಿರಲಿಲ್ಲ. ಅಕ್ರಮವಾಗಿ ಹಣ ಸಂಪಾದಿಸಿ ಐಷಾರಾಮಿ ಜೀವನ ನಡೆಸಲು ಮುಂದಾಗಿದ್ದ ಆರೋಪಿಗಳು, ರೈಸ್ ಪುಲ್ಲಿಂಗ್ ದಂಧೆಗೆ ಇಳಿದಿದ್ದರು. ಎರಡು ವರ್ಷಗಳಿಂದ ಆಂಧ್ರಪ್ರದೇಶ ಹಾಗೂ ಕರ್ನಾಟಕದ 20ಕ್ಕೂ ಹೆಚ್ಚು ಮಂದಿಯನ್ನು ವಂಚಿಸಿದ್ದಾರೆ’ ಎಂದು ಸಿಸಿಬಿ ಮೂಲಗಳು ಹೇಳಿವೆ.

‘ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಬಾಕ್ಸೊಂದನ್ನು ಸಿದ್ಧಪಡಿಸಿದ್ದ ಆರೋಪಿಗಳು, ಅದರಲ್ಲಿ ತಾಮ್ರದ ಚೊಂಬು ಇರಿಸಿದ್ದರು. ಬಯೋಮೆಟ್ರಿಕ್ ವ್ಯವಸ್ಥೆ ಮೂಲಕ ತಾಮ್ರದ ಚೊಂಬು ನಿರ್ವಹಣೆ ಆಗುವಂತೆ ಮಾಡಿದ್ದರು. ಇದನ್ನೇ ಜನರಿಗೆ ತೋರಿಸಿ, ‘ಇದು ಬೆಲೆ ಬಾಳುವ ಚೊಂಬು. ರಾಕೆಟ್ ಉಡಾವಣೆಗೆ ಬಳಸುತ್ತಾರೆ. ವಿದೇಶದಲ್ಲಿ ಕೋಟ್ಯಂತರ ರೂಪಾಯಿ ಬೆಲೆ ಇದೆ’ ಎಂಬುದಾಗಿ ಹೇಳುತ್ತಿದ್ದರು.’

‘ವಿದೇಶಕ್ಕೆ ಚೊಂಬು ಮಾರಾಟ ಮಾಡಬೇಕಾದರೆ ಕೆಲ ಪರೀಕ್ಷೆಗಳನ್ನು ಮಾಡಿಸಬೇಕು. ಇದಕ್ಕೆ ಲಕ್ಷಾಂತರ ರೂಪಾಯಿ ಖರ್ಚಾಗುತ್ತದೆ. ನೀವು ಹಣ ಕೊಟ್ಟರೆ, ಚೊಂಬು ಮಾರಾಟದ ನಂತರ ದುಪ್ಪಟ್ಟು ಲಾಭ ನೀಡುತ್ತೇವೆ’ ಎಂದೂ ಆರೋಪಿಗಳು ಜನರಿಗೆ ಹೇಳುತ್ತಿದ್ದರು. ಇದನ್ನು ನಂಬಿ ಹಲವರು ಹಣ ನೀಡಿದ್ದರು. ಹಣ ಕೈ ಸೇರುತ್ತಿದ್ದಂತೆ ಆರೋಪಿಗಳು, ನಾಪತ್ತೆಯಾಗುತ್ತಿದ್ದರು’ ಎಂದೂ ಸಿಸಿಬಿ ಮೂಲಗಳು ತಿಳಿಸಿವೆ.

₹ 35 ಲಕ್ಷ ಕೇಳಿದ್ದ ಆರೋಪಿಗಳು: ‘ಬೆಂಗಳೂರಿಗೆ ಇತ್ತೀಚೆಗೆ ಬಂದಿದ್ದ ಆರೋಪಿಗಳು, ಸೋಲದೇವನಹಳ್ಳಿ ಠಾಣೆ ವ್ಯಾಪ್ತಿಯ ಬಾಡಿಗೆ ಮನೆಯೊಂದರಲ್ಲಿ ನೆಲೆಸಿದ್ದರು. ಮಹಿಳೆಯೊಬ್ಬರಿಗೆ ಚೊಂಬು ತೋರಿಸಿ, ₹ 35 ಲಕ್ಷ ಪಡೆಯಲು ಮಾತುಕತೆ ನಡೆಸಿದ್ದರು. ಮುಂಗಡವಾಗಿ ₹ 5 ಲಕ್ಷ ಪಡೆದಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ತನಿಖೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ಸಿಸಿಬಿ ಮೂಲಗಳು ಹೇಳಿವೆ.

ಮೆರವಣಿಗೆಯಲ್ಲಿ ದುಷ್ಕೃತ್ಯಕ್ಕೆ ಸಂಚು

ಬೆಂಗಳೂರು: ಡಿ. ಜೆ.ಹಳ್ಳಿಯ ಸುಬ್ರಹ್ಮಣ್ಯೇಶ್ವರಸ್ವಾಮಿ ಪಲ್ಲಕ್ಕಿ ಮಹೋತ್ಸವದ ಮೆರವಣಿಗೆ ವೇಳೆ ದುಷ್ಕೃತ್ಯ ಎಸಗಲು ಕೆಲವರು ಸಂಚು ರೂಪಿಸಿರುವ ಮಾಹಿತಿ ಪೊಲೀಸರಿಗೆ ಲಭ್ಯವಾಗಿದ್ದು, ಮಹೋತ್ಸವದಂದು ಬಿಗಿ ಭದ್ರತೆಗೆ ಹೆಚ್ಚಿನ ಸಿಬ್ಬಂದಿಯನ್ನು ನಿಯೋಜಿಸಲಾಗುತ್ತಿದೆ.

‘ಜುಲೈ 22 ಹಾಗೂ 23ರಂದು ಪಲ್ಲಕ್ಕಿ ಮಹೋತ್ಸವ ಜರುಗಲಿದ್ದು, 4 ಲಕ್ಷಕ್ಕೂ ಹೆಚ್ಚು ಭಕ್ತರು ಸೇರುವ ನಿರೀಕ್ಷೆ ಇದೆ. ಈ ವೇಳೆ ಕಿಡಿಗೇಡಿಗಳು ಕಾನೂನು ಬಾಹಿರ ಕೃತ್ಯಗಳನ್ನು ಎಸಗಬಹುದು’ ಎಂದು ಗುಪ್ತದಳದ ಅಧಿಕಾರಿಗಳು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಮಹೋತ್ಸವದ ವೇಳೆ ಠಾಣೆ ವ್ಯಾಪ್ತಿಯಲ್ಲಿ ಮದ್ಯ ಮಾರಾಟ ನಿಷೇಧಿಸಲಾಗಿದೆ.

ಮೀಸಲಾತಿ ನೆಪ: ಚುನಾವಣೆ ಮುಂದೂಡಿಕೆ ಜಪ

ಒಂದನೇ ಪುಟದಿಂದ

ಈ ಅವಧಿಯಲ್ಲಿ ವಾರ್ಡ್‌ಗಳ ಪುನರ್ ವಿಂಗಡಣೆ ಪ್ರಕ್ರಿಯೆಯನ್ನು ನಗರಾಭಿವೃದ್ಧಿ ಇಲಾಖೆ ಪೂರ್ಣಗೊಳಿಸಿದೆ. ಆದರೆ, ಮೀಸಲಾತಿ ಪಟ್ಟಿಯನ್ನು ಅಂತಿಮಗೊಳಿಸಿಲ್ಲ.

ಬಿಬಿಎಂಪಿ ಚುನಾವಣೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನಲ್ಲಿ ಶುಕ್ರವಾರ (ಜುಲೈ 22ರಂದು) ವಿಚಾರಣೆ ನಡೆಯಲಿದ್ದು, ಈ ವೇಳೆ ಪ್ರಮಾಣಪತ್ರ ಸಲ್ಲಿಸಲು ಕರ್ನಾಟಕ ಸರ್ಕಾರ ಸಿದ್ಧತೆ ಮಾಡಿಕೊಂಡಿದೆ.

‘ಸ್ಥಳೀಯ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗಗಳಿಗೆ ರಾಜಕೀಯ ಪ್ರಾತಿನಿಧ್ಯ ಕಲ್ಪಿಸುವ ಸಂಬಂಧ ರಚಿಸಿರುವ ನ್ಯಾಯಮೂರ್ತಿ ಕೆ. ಭಕ್ತವತ್ಸಲ ನೇತೃತ್ವದ ಸಮಿತಿ ಗುರುವಾರವಷ್ಟೇ ವರದಿ ಸಲ್ಲಿಸಿದೆ. ಈ ವರದಿಯನ್ನು ರಾಜ್ಯ ಸರ್ಕಾರ ಪರಿಶೀಲಿಸಬೇಕಿದೆ. ಆ ಬಳಿಕ 243 ವಾರ್ಡ್‌ಗಳಿಗೆ ಮೀಸಲಾತಿ ನಿಗದಿ ಪಡಿಸಬೇಕಿದೆ. ಆರಂಭದಲ್ಲಿ ಮೀಸಲಾತಿ ಪಟ್ಟಿಯ ಕರಡು ಪ್ರಕಟಿಸಿ ಆಕ್ಷೇಪಣೆ ಸಲ್ಲಿಸಲು ಸಾರ್ವಜನಿಕರಿಗೆ ಕನಿಷ್ಠ ಏಳು ದಿನಗಳ ಕಾಲಾವಕಾಶ ನೀಡಬೇಕಿದೆ. ಜನರ ಆಕ್ಷೇಪಣೆಗಳನ್ನು ಪರಿಶೀಲಿಸಿ ಅಂತಿಮ ಪಟ್ಟಿಯನ್ನು ಪ್ರಕಟಿಸಬೇಕಿದೆ. ಮೀಸಲಾತಿ ಪಟ್ಟಿ ಅಂತಿಮಗೊಂಡ ನಂತರ ಚುನಾವಣೆಗೆ ಅಧಿಸೂಚನೆಯನ್ನು ಹೊರಡಿಸುವಂತೆ ರಾಜ್ಯ ಚುನಾವಣಾ ಆಯೋಗಕ್ಕೆ ಕೋರಲಾಗುವುದು ಎಂಬ ಅಂಶಗಳನ್ನು ಒಳಗೊಂಡ ಪ್ರಮಾಣಪತ್ರ ಸಲ್ಲಿಸಲಾಗುತ್ತದೆ’ ಎಂದು ಕರ್ನಾಟಕ ಸರ್ಕಾರದ ಮೂಲಗಳು ತಿಳಿಸಿವೆ.

‘ಬೆಂಗಳೂರಿನ 28 ಶಾಸಕರಿಗೆ ಬಿಬಿಎಂಪಿ ಚುನಾವಣೆ ಸದ್ಯಕ್ಕೆ ನಡೆಯುವುದು ಬೇಡ. ವಿಧಾನಸಭಾ ಚುನಾವಣೆಯವರೆಗೆ ಪಾಲಿಕೆಯಲ್ಲಿ ಚುನಾಯಿತ ಪ್ರತಿನಿಧಿಗಳು ಇರಬಾರದು ಎಂಬುದು ಅವರ ಆಶಯ. ಪಾಲಿಕೆ ಸದಸ್ಯರು ಇಲ್ಲದಿದ್ದರೆ ಎಲ್ಲ ರೀತಿಯಲ್ಲೂ ಅವರಿಗೆ ಅನುಕೂಲ. ವಿಧಾನಸಭಾ ಚುನಾವಣೆಯ ವೇಳೆಗೆ ಆಕಾಂಕ್ಷಿಗಳನ್ನು ದುಡಿಸಿಕೊಳ್ಳಬಹುದು ಎಂಬುದು ಅವರ ಆಲೋಚನೆ. ಹೀಗಾಗಿ, ಚುನಾವಣೆ ಮುಂದೂಡಲು ಎಲ್ಲ ಪಕ್ಷಗಳ ಶಾಸಕರು ಒತ್ತಡ ಹೇರಿದ್ದಾರೆ. ಇದಕ್ಕೆ ಸರ್ಕಾರ ಮಣಿದಿದೆ’ ಎಂದು ಉನ್ನತ ಮೂಲಗಳು ಹೇಳಿವೆ.

ಬಿಬಿಎಂಪಿ ಸದಸ್ಯರ ಅಧಿಕಾರದ ಅವಧಿಯು 2019ರ ಸೆಪ್ಟೆಂಬರ್ 10ರಂದು ಪೂರ್ಣಗೊಂಡಿದ್ದು, ಬಿಬಿಎಂಪಿ ವಾರ್ಡ್‌ಗಳ ಸಂಖ್ಯೆ ಹೆಚ್ಚಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರವು 2020ರಲ್ಲೇ ಅಂಗೀಕರಿಸಿದ್ದ ನೂತನ ಕಾನೂನು 2021ರ ಜನವರಿಯಿಂದಲೇ ಜಾರಿಗೆ ಬಂದಿದೆ. ಆರು ವಾರಗಳಲ್ಲಿ ಬಿಬಿಎಂಪಿ ಚುನಾವಣೆ ನಡೆಸುವಂತೆ ರಾಜ್ಯ ಚುನಾವಣಾ ಆಯೋಗಕ್ಕೆ ಸೂಚಿಸಿ, 2020ರ ಡಿಸೆಂಬರ್ 4ರಂದು ರಾಜ್ಯ ಹೈಕೋರ್ಟ್ ಹೊರಡಿಸಿದ್ದ ಆದೇಶವನ್ನು 2020 ಡಿಸೆಂಬರ್ 18ರಂದು ಸುಪ್ರೀಂ ಕೋರ್ಟ್ ಅಮಾನತಿನಲ್ಲಿ ಇರಿಸಿತ್ತು.

ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ (ತಿದ್ದುಪಡಿ) ಕಾಯ್ದೆ- 2020ರ ಅನ್ವಯ ರಚಿಸಲಾಗುವ 243 ವಾರ್ಡ್‌ಗಳ ಬದಲಿಗೆ, ಮೊದಲಿದ್ದ 198 ವಾರ್ಡ್‌ಗಳಿಗೆ ಚುನಾವಣೆ ನಡೆಸುವಂತೆ ಹೈಕೋರ್ಟ್ ನೀಡಿದ್ದ ಆದೇಶದ ಸಿಂಧುತ್ವ ಪ್ರಶ್ನಿಸಿ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು.

ಸುದ್ದಿ 2 ನಿಮಿಷ

ಲಂಚ ಪ್ರಕರಣ: ಉಪ ತಹಶೀಲ್ದಾರ್ ಜಾಮೀನು ಅರ್ಜಿ ವಾಪಸು

ಬೆಂಗಳೂರು: ಕಂದಾಯ ವ್ಯಾಜ್ಯವೊಂದರಲ್ಲಿ ಪಕ್ಷಪಾತಿ ಆದೇಶ ನೀಡಲು ₹5 ಲಕ್ಷ ಲಂಚ ಪಡೆದ ಆರೋಪಕ್ಕೆ ಸಂಬಂಧಿಸಿದಂತೆ ನ್ಯಾಯಾಂಗ ಬಂಧನದಲ್ಲಿರುವ ಉಪ ತಹಶೀಲ್ದಾರ್ ಪಿ.ಎಸ್. ಮಹೇಶ್ ಅವರಿಗೆ ‘ಡಿಫಾಲ್ಟ್’ ಜಾಮೀನು ದೊರೆತಿರುವ ಮಾಹಿತಿಯನ್ನು ಹೈಕೋರ್ಟ್‌ಗೆ ಒದಗಿಸಲಾಗಿದೆ.

ಜಾಮೀನು ಕೋರಿ ಮಹೇಶ್ ಸಲ್ಲಿಸಿದ್ದ ಅರ್ಜಿ ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠದ ಮುಂದೆ ಗುರುವಾರ ವಿಚಾರಣೆಗೆ ನಿಗದಿಯಾಗಿತ್ತು.

ವಿಚಾರಣೆ ವೇಳೆ ಮಹೇಶ್ ಪರ ವಕೀಲರು, ‘ವಿಶೇಷ ನ್ಯಾಯಾಲಯ ಅರ್ಜಿದಾರರಿಗೆ ಡಿಫಾಲ್ಟ್ (ನಿಯಮಾನುಸಾರ ಆರೋಪಿಯನ್ನು ಬಂಧಿಸಿದ 60 ದಿನಗಳ ಒಳಗೆ ಆರೋಪ ಪಟ್ಟಿ ಸಲ್ಲಿಸಬೇಕು. ಸಲ್ಲಿಸದೇ ಇದ್ದ ಸಮಯದಲ್ಲಿ ಆರೋಪಿಗೆ ಕಾನೂನಾತ್ಮಕವಾಗಿ ಲಭ್ಯವಾಗುವ ಜಾಮೀನು) ಜಾಮೀನು ಮಂಜೂರು ಮಾಡಿದೆ. ಆದ್ದರಿಂದ, ಈ ಜಾಮೀನು ಅರ್ಜಿ ಹಿಂಪಡೆಯಲು ಅವಕಾಶ ನೀಡಬೇಕು’ ಎಂದು ಕೋರಿದರು.

ಈ ಕುರಿತ ಮೆಮೊ (ಜ್ಞಾಪನಾ ಪತ್ರ) ಅಂಗೀಕರಿಸಿದ ನ್ಯಾಯಪೀಠ ಅರ್ಜಿ ವಜಾಗೊಳಿಸಿತು. ಅಂತೆಯೇ, ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಎಡಿಜಿಪಿಯ ಸೇವಾ ದಾಖಲೆಗಳನ್ನು ಹಿಂದಿರುಗಿಸುವಂತೆ ರಿಜಿಸ್ಟ್ರಾರ್‌ಗೆ ಸೂಚಿಸಿತು.

ದೋಷಾರೋಪ ಪಟ್ಟಿ ಸಲ್ಲಿಸದ ಕಾರಣ ನ್ಯಾಯಪೀಠ ಬೆಳಗಿನ ವಿಚಾರಣೆ ವೇಳೆ ಎಸಿಬಿಯನ್ನು ತರಾಟೆಗೆ ತೆಗೆದುಕೊಂಡಿತ್ತು. ‘ಇದು ಆರೋಪಿಗೆ ನ್ಯಾಯಾಲಯದ ವ್ಯಾಪ್ತಿಯಿಂದ ಪಾರಾಗಲು ಸಹಕಾರ ನೀಡಿದಂತಲ್ಲದೆ ಮತ್ತೇನು’ ಎಂದು ಪ್ರಶ್ನಿಸಿತ್ತು. ‘ಆರೋಪಿಗಳಿಗೆ ಎಸಿಬಿಯೇ ಪರೋಕ್ಷವಾಗಿ ರಕ್ಷಣೆ ನೀಡುತ್ತಿರುವಂತೆ ತೋರುತ್ತಿದೆ’ ಎಂದೂ ಅಸಮಾಧಾನ ವ್ಯಕ್ತಪಡಿಸಿತ್ತು.

ಆರೋಪಿ ರಾಕೆಟ್ ಬಂಧನ

ಬೆಂಗಳೂರು: ಸಾರ್ವಜನಿಕ ಸ್ಥಳ ಹಾಗೂ ಮನೆ ಮುಂದೆ ನಿಲ್ಲಿಸುತ್ತಿದ್ದ ದ್ವಿಚಕ್ರ ವಾಹನಗಳನ್ನು ಕಳವು ಮಾಡುತ್ತಿದ್ದ ಆರೋಪದಡಿ ಶೇಖ್ ಅರ್ಬಾಜ್ ಖಾನ್ ಅಲಿಯಾಸ್ ರಾಕೆಟ್‌ನನ್ನು (25) ಬಾಣಸವಾಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಥಣಿಸಂದ್ರ ಬಳಿಯ ಅಶ್ವತ್ಥ್ ನಗರದ ಶೇಖ್ ಅರ್ಬಾಜ್ ಹಲವು ತಿಂಗಳಿನಿಂದ ಕೃತ್ಯ ಎಸಗುತ್ತಿದ್ದ. ಈತನಿಂದ ₹ 4 ಲಕ್ಷ ಮೌಲ್ಯದ 5 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

ಇಂದು ವಿಪತ್ತು ನಿರ್ವಹಣಾ ಕಾರ್ಯಾಗಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ, ಗೃಹ ಮಂತ್ರಾಲಯ, ಕಂದಾಯ ಇಲಾಖೆ ಸಹಯೋಗದಲ್ಲಿ ಲಲಿತ್ ಅಶೋಕ್ ಹೋಟೆಲ್‌ನಲ್ಲಿ ಜುಲೈ 22ರಂದು ಬೆಳಿಗ್ಗೆ 9.30ಕ್ಕೆ ರಾಷ್ಟ್ರ ಮಟ್ಟದ ಕಾರ್ಯಾಗಾರ ಹಮ್ಮಿಕೊಂಡಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಾರ್ಯಾಗಾರ ಉದ್ಘಾಟಿಸುವರು. ಕಂದಾಯ ಸಚಿವ ಆರ್.ಅಶೋಕ ತರಬೇತಿ ಮೊಬೈಲ್ ಆ್ಯಪ್ ಬಿಡುಗಡೆ ಮಾಡುವರು.

ಎಲ್‌ಎಲ್‌ಬಿ ವಿದ್ಯಾರ್ಥಿ ಸಾವು

ಬೆಂಗಳೂರು: ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯಲ್ಲಿ ಗುರುವಾರ ಅಪಘಾತ ಸಂಭವಿಸಿದ್ದು, ಲೋಹಿತ್ ಪ್ರಸಾದ್ (24) ಎಂಬುವರು ಮೃತಪಟ್ಟಿದ್ದಾರೆ.

‘ಮಾಗಡಿ ತಾಲ್ಲೂಕಿನ ನಿವಾಸಿ ಲೋಹಿತ್, ವಿ.ವಿ.ಪುರದ ಕಾನೂನು ಕಾಲೇಜಿನಲ್ಲಿ ಎಲ್‌ಎಲ್‌ಬಿ ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದರು. ಅವರ ತಂದೆ ಕ್ಯಾಬ್ ಚಾಲಕರಾಗಿದ್ದಾರೆ’ ಎಂದು ಯಲಹಂಕ ಸಂಚಾರ ಠಾಣೆ ಪೊಲೀಸರು ಹೇಳಿದರು.

EDUCATION CORNER ಕ್ಲಾಸಿಫೈಡ್ಸ್

The Regency Public School
Vidyaranyapura, Bengaluru - 97
Congratulations to Grade X – For Excellent Results
100% First Classes
AMEET V. SAVANUR 97.4
KEERTHANA. K. 97.4
SUHRUTH G. BHAT 97
PRITHVI R. KONERI 96.6
R. ARCHANA SHASTRY 96.2
ADITI S. KOTTUR 96
ADITYA P. KOTUR 95.4
ADITHYA S. NAYAK 95
M. SUCHITH REDDY 95
BEST WISHES FROM MANAGEMENT, PRINCIPAL & TEACHERS
For Admissions Contact: 9606913385/86/87

GOODWILL CHRISTIAN COLLEGE FOR WOMEN
No.10, Promenade Road, Frazer Town (Opp. Coles Park) Bangalore - 560 005
CSI Karnataka Central Diocese
Affiliated to Bengaluru North University,
NAAC ACCREDITED
Phone: 080 - 41516793, 41100422, 7022905576
Website: www.goodwillchristiancollege.com
E-mail: goodwillchristiancollege@gmail.com
Instagram: goodwillchristiancollege
ADMISSIONS OPEN 2022 - 2023
COURSES OFFERED
B.Com BBA BCA B.Sc B.A.
ROUNAQH

CALIFORNIA PUBLIC SCHOOL
Affiliated to ICSE NEW DLIHI (KA-185) Kamakshipalya, Bangalore -560079
Phone : 080 23488623 / 28284817 / 9481305504
ICSE EXAMINATION 2021-22
Congratulation to all Achievers
ARUNDHATHI K (96.5%) Soc-100, Mat-98, Kan-98 Sci-95, Com-95, Eng-93
RAKSHITHA R (94.33%) Mat-97, Kan-97, Soc-95 Eng-94, Com-94, Sci-89
VIJAY N VARSHITH (91.17%) Kan-94, Eng-93, Soc-91 Mat-90, Sci-89, Com-90
SURYAKANTH S (90.83%) Kan-94, Soc-93, Eng-90 Mat-89, Sci-89,Com-90
First Class
MANOJ KUMAR BEHERA (89.67%) Kan-89, Soc-89, Eng-88 Mat-97, Sci-86,Com-89
SACHIN SINGH D 78% Kan-85, Eng-82, Soc-81
KIRAN GOWDA N 77.67% Eng-83, Kan-85, Soc-82
USHAKIRANA S 76.17% Kan-84, Soc-83, Eng-80
MOHAN KUMAR M 74.93% Com-82, Soc-80, Kan-80
SRUJAN M 74.93% Kan-84, Eng-84, Soc-80
KAVITHA KUMAWATH 72.5% Eng-83, Kan-80, Soc-83
BHUVAN GOWDA N 71.83% Kan-93, Eng-83, Soc-80
SHUBHASHREE S 69.83%
PREETHAM M R 68.67%
RITESH G 65.83%
MANYA G 61.33%

R.E.S. POLYTECHNIC
Recognised by Govt. of Karnataka & Approved by AICTE, New Delhi
PUC / ITI Pass Join 2 yrs Diploma Engg
10th Pass Join 3 yrs Diploma Engg
1. Automobile Engineering 2. Computer Science
3. Electrical & Electronics 4. Electronics & Commn.
5. Civil Engineering 6. Mechanical Engineering
7. Commerce - Com. Practice 8. Arts - Fashion Technology
RES-22312
5, Sunkadakatte, Magadi Main Road, Hegganahalli Cross, Bengaluru-91 Phone: 080-23484814, 99166 46466

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Flat

Jayanagar

FLATS FOR Sale at Shanthi Apartments at Jayanagar 9th Block, Bangalore. Contact: +91 9900260618

Residential/ Commercial

Vijayanagar

BEHINDVIJAYANAGAR MARUTIMANDIR BDA property for sale 30X40 brockers excuse contact 9008605261

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

Sites

Airport Road

BDA BIAAPA Approved Corner Sites For Sale 14 Kms Before Airport Near Stone Hill School Direct Owner 8904050690

Mysore

AT CLOSE PROXIMITY TO MYSORE AT A LOCATION OF TWIN CITY RESIDENCE ADVANTAGE VILLAMENTS IS OFFERED AS PROMOTER CUM OWNER BASIS INTERESTED PERSONS CONTACT LAND OWNER 7676770503 / 9741019028

Industrial & Factory

General

SALE, KIADB, Chikkaballapur, 18 Kms from Devanahalli Airport, 93000 sqft vaccant land. Contact: 8880888777, 9379282930

RENTAL PROPERTIES

Accommodation Available

Industrial And Factory

PEENYA INDUSTRIAL Area, 3rd Phase, Bangalore: Industrial RCC building with vetrified tiles available for rent 22500 sqft total 3 floors, 7500 sqft each floor. Close to Outer Ring Road/Tumkur Road. Suitable for R&D, Electronics, Pharma Research. Contact Chethan 9980261002

REAL ESTATE BUYING

Sites

Vishweshwariah Layout

WANTED SITES 20x30,30x40,40x60,50x80 Vishveshwaraiah layout, Kempegowda Layout, RHCS-Layout, NGEF-Layout, ITI-Layout, Arkavathi Layout-8861063532

Anjanapura

ANJANAPURA WANTED JP Nagar, 8 and 9th Phase, Banashankari 5th & 6th Stage Viveshwaraya Layout Kempegowda Layout any measurement. 9845132011/ 9663554448

JOB OPPORTUNITIES

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

General

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

Marketing & Sales

WANTED COUNTER Sales Executives (M/F) for a 2 Wheeler Showroom in Koramangala & JP Ngr, Salary+Incentives.Call: 9945083900, 9731028676.

BUSINESS

Business to Business

Finance

WE ARRANGE Mortgage, Purchase, Construction & Completion of Construction, Takeover, Loans from Banks. Contact: 9353705002

Business Offers

Finance

FINANCE AGAINST Land & Building Properties Industries Schools Hospitals Projects & NRI Funds.7358729820

WE FINANCE to NPA/ Default Properties to Release from Banks and Sell at Best Market Price.Call Verna Developers, MG-Road. 9916310226/ 9353128035

FINANCE AGAINST Land & Building Properties Industries Schools Hospitals Projects & NRI Funds.7358729820

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call: 7411265189

PERSONAL

Change of Name

JYOTI W/O 14827623L-Hav/MT- DEVEE SINGH DEVADE R/a Bharkawadi, Betul, MP, changed name from JYOTI to JYOTI DEVADE notary K.V.Mani, Bangalore.

CHANGE OF NAME
I, Rahamathunisa, Residing at: No. 11, 4th Cross, Keerthi Layout, Kachakharanahalli, HRBR Layout, Kalyan Nagar, Bengaluru - 560 043, have changed my name to Rahamathunisa Mohamed Hussain vide affidavit dated: 21.07.2022 before Notary N. Thulasi, Bengaluru. Henceforth, I shall be called Rahamathunisa Mohamed Hussain only.

I, MANJUSHA Manohar Vijil Residing at No. C 1008, ND Passion Apartment, Haralur Road, Kudlu, Bengaluru, Karnataka 560068.Have Changed my name to MANJUSHA MANOHAR vide affidavit dated 20.07.2022 before notary B. M. Chandrashekar, Bangalore

14827623L- HAV/ MT-DEVEE SINGH DEVADE at 2ASC Centre (South) Bangalore changed my minor Daughter's name from DEVANGI to DEVANGI DEVADE notary K.V.Mani, Bangalore.

I, SOSA KURUTHUKULANGARA PAUL D/o. PAUL, have changed my name to SUSIE.P vide affidavit dated 21/07/2022 sworn before Notary Rajanna S.M. Bengaluru.

DH DECCAN HERALD ಪ್ರಜಾವಾಣಿ

Classifieds EDUCATION SPECIAL
For More Details Contact:
Jerry Louis : 9731810277
Vishal GM : 9845114560
080- 45557161 | 163 |164
Email : dhclassifieds@deccanherald.co.in
SPECIAL RATES FOR
Admission Notice,
Education Success
Congratulation Ads

ನಗರೋತ್ಥಾನದಲ್ಲಿ ವೈದ್ಯಕೀಯ ಸೌಲಭ್ಯಕ್ಕೆ ಕಡೇ ಸ್ಥಾನ; ₹123 ಕೋಟಿಗೆ ಸಮ್ಮತಿ

ಆರೋಗ್ಯಕ್ಕೆ 'ಅಮೃತ'ದ ಕೊನೆ ಹನಿ

• ಆರ್. ಮಂಜುನಾಥ್

ಬೆಂಗಳೂರು: 'ಆರೋಗ್ಯವೇ ಭಾಗ್ಯ, ಯಾರೂ ವೈದ್ಯಕೀಯ ಚಿಕಿತ್ಸೆಗೆ ಚಿಂತೆ ಮಾಡಬೇಕಿಲ್ಲ, ಪ್ರತಿಯೊಬ್ಬರಿಗೂ ಸಿಗಲಿದೆ ಹೈಟೆಕ್ ಚಿಕಿತ್ಸೆ...' ಇಂತಹ ಭರವಸೆಯ ಮಾತುಗಳನ್ನು ಜನರು ಕೇಳುತ್ತಲೇ ಇದ್ದಾರೆ. ಆದರೆ ಸೌಲಭ್ಯ ನೀಡುವ ವ್ಯವಸ್ಥೆ ಇನ್ನೂ ಹಸನಾಗಿಲ್ಲ. ಇದಕ್ಕೆ ಕಾರಣ-ಆರ್ಥಿಕ ಮುಗ್ಗಟ್ಟು. ಅಮೃತ ನಗರೋತ್ಥಾನದಲ್ಲಿ ಆರೋಗ್ಯ ವಿಭಾಗಕ್ಕೆ ಸಿಕ್ಕಿರುವ ಮೊತ್ತವೇ ಅದಕ್ಕೆ ಸಾಕ್ಷಿ.

ರಸ್ತೆ, ಡಾಂಬರು, ಚರಂಡಿ ಮತ್ತು ಶಾಸಕರ ವಿವೇಚನೆಯ ಕಾಮಗಾರಿಗಳಿಗೆ ಕೋಟ್ಯಂತರ ರೂಪಾಯಿ ಅನುದಾನ ನೀಡಿದ ಮೇಲೆ ₹6 ಸಾವಿರ ಕೋಟಿಯ 'ಅಮೃತ ನಗರೋತ್ಥಾನ'ದ ಉಳಿದ ಹಣವನ್ನು ಶಿಕ್ಷಣ ಮತ್ತು ಆರೋಗ್ಯಕ್ಕೆ ಮುಖ್ಯಮಂತ್ರಿ ಹಂಚಿದ್ದಾರೆ. ಅನುದಾನ ನೀಡಿರುವ ಪ್ರಮಾಣದಲ್ಲಿ ಆರೋಗ್ಯ ಕ್ಷೇತ್ರ ಕೊನೆಯದಾಗಿದೆ. ₹123.3 ಕೋಟಿ ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿದೆ.

'ಜನರು ಸರ್ಕಾರಿ ಆಸ್ಪತ್ರೆಗಳಿಗೆ ಬರಲು ಹಿಂದೇಟು ಹಾಕುತ್ತಾರೆ. ಬಿಬಿಎಂಪಿ ಪ್ರಾಥಮಿಕ ಆರೋಗ್ಯ ಕೇಂದ್ರ, ರೆಫರಲ್ ಹಾಗೂ ಹೆರಿಗೆ ಆಸ್ಪತ್ರೆಗಳಲ್ಲಿ ಮೂಲಸೌಕರ್ಯಗಳೇ ಇಲ್ಲ. ಆಸ್ಪತ್ರೆಗಳ ಪ್ರವೇಶದಲ್ಲೇ ಶುಚಿತ್ವ ಇಲ್ಲದಿರುವುದು ಕಣ್ಣಿಗೆ ರಾಚುತ್ತದೆ. ಇನ್ನು ಒಳಭಾಗದಂತೂ ದೇವರೇ ಪ್ರೀತಿ. ಕುರ್ಚಿಗಳು, ಟೇಬಲ್‌ಗಳು, ಉಪಕರಣಗಳು ಹಾಳಾಗಿರುತ್ತವೆ. ಅವುಗಳ ಮೇಲೆ ಕೂರಲೂ ಸಾಧ್ಯವಾಗದಂತಹ ಸ್ಥಿತಿ. ಇಂತಹ ಆಸ್ಪತ್ರೆಗೆ ಯಾರುತಾನೆ ಹೋಗಲು ಇಷ್ಟಪಡುತ್ತಾರೆ ಹೇಳಿ' ಎಂದು ನಾಯಂಡಹಳ್ಳಿ ನಿವಾಸಿ ರಾಜು ಪ್ರಶ್ನಿಸುತ್ತಾರೆ.

'ಆಸ್ಪತ್ರೆಗಳಲ್ಲಿ ವೈದ್ಯರು, ಸಿಬ್ಬಂದಿ ಇರುವುದೇ ಅಪರೂಪ. ಅವರಿಗಾಗಿ ಕಾಯಬೇಕಾಗಿದೆ. ಒತ್ತಾಯಪಡಿಸಿ ಕೇಳಿದರೆ, ಕಟ್ಟಡ ವೀಕ್ಷಣೆಗೆ ಹೋಗಿದ್ದಾರೆ ಎನ್ನುತ್ತಾರೆ. ಟ್ರೇಡ್ ಲೈಸೆನ್ಸ್ ಅನ್ನು ವೈದ್ಯ ವಿಭಾಗ ನೀಡುವುದರಿಂದ ಬಹುತೇಕ ಸಿಬ್ಬಂದಿ ಅದರತ್ತಲೇ ಹೆಚ್ಚು ಕಾಳಜಿ ವಹಿಸುತ್ತಾರೆ' ಎಂದು ವಿಜಯನಗರದ ರಾಜಶೇಖರ್ ದೂರಿದರು.

ಅಮೃತ ನಗರೋತ್ಥಾನದಲ್ಲಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಉನ್ನತೀಕರಣ, ಕಟ್ಟಡ ದುರಸ್ತಿ, ಉಪಕರಣಗಳನ್ನು ಒದಗಿಸಲಾಗುತ್ತಿದೆ. ಉನ್ನತ ಚಿಕಿತ್ಸೆ ನೀಡಲು ಈಗ ನೀಡಿರುವ ಹಣ ಏನೂ ಸಾಲದು ಎಂಬುದು ತಜ್ಞರ ಅಭಿಪ್ರಾಯ.

ಕಾಮಗಾರಿಗಳು: ಪೂರ್ವ ವಲಯದಲ್ಲಿ ಒಂದು ರೆಫರಲ್ ಹಾಗೂ 5 ಹೆರಿಗೆ ಆಸ್ಪತ್ರೆ ದುರಸ್ತಿ, ಹೊಸ ಕಟ್ಟಡಕ್ಕಾಗಿ ₹10 ಕೋಟಿ; ಕ್ಲಿನಿಕಲ್ ವಿಭಾಗದ 2 ರೆಫರಲ್ ಮತ್ತು 10 ಹೆರಿಗೆ ಆಸ್ಪತ್ರೆ, 1 ಡಯಾಲಿಸಿಸ್ ಕೇಂದ್ರ, ಲ್ಯಾಬ್, ವಸತಿ ಗೃಹಗಳ ದುರಸ್ತಿಗೆ ₹6 ಕೋಟಿ; ಪಶ್ಚಿಮ ವಲಯದ 10 ಕ್ಲಿನಿಕಲ್ ಆಸ್ಪತ್ರೆ ದುರಸ್ತಿಗೆ ₹12.8 ಕೋಟಿ; ಉಪಕರಣಗಳು ಮತ್ತು ಸಲಕರಣೆಗಳಿಗೆ ₹8 ಕೋಟಿ ವೆಚ್ಚ ಮಾಡಲು ಅನುಮೋದನೆ ನೀಡಲಾಗಿದೆ.

ಬೆಂಗಳೂರಿನ ಆಸ್ಟಿನ್ ಟೌನ್‌ನಲ್ಲಿರುವ ಬಿಬಿಎಂಪಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಪ್ರಜಾವಾಣಿ ಚಿತ್ರ/ರಂಜು ಪಿ.

ಬಿಬಿಎಂಪಿ ಎಲ್ಲಿಗೆ ಎಷ್ಟು 'ಅಮೃತ'?

ಹೆಚ್ಚಿನ ಸೌಲಭ್ಯ

ಬಿಬಿಎಂಪಿ ವ್ಯಾಪ್ತಿಯಲ್ಲಿ 140 ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ. ಇವುಗಳಿಗೆ ಮೂಲಸೌಕರ್ಯ ಒದಗಿಸುವ ಜೊತೆ, ಉನ್ನತೀಕರಿಸುವ ಕೆಲಸವಾಗಲಿದೆ. ಅಲ್ಲದೆ 50 ಹೊಸ ಪ್ರಾಥಮಿಕ ಕೇಂದ್ರಗಳನ್ನೂ ಆರಂಭಿಸಲಾಗುತ್ತಿದೆ. ಆರೋಗ್ಯ ಕ್ಷೇತ್ರದಲ್ಲಿ ಹೆಚ್ಚಿನ ಸೌಲಭ್ಯ ನೀಡುವುದು ಗುರಿಯಾಗಿದೆ ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಡಾ. ತ್ರಿಲೋಕ ಚಂದ್ರ ತಿಳಿಸಿದರು.

ನಗರ ಪ್ರಾಥಮಿಕ ಆರೋಗ್ಯ ಕೇಂದ್ರ (ಯುಪಿಎಚ್‌ಸಿ) ಹೊಸ ಕಟ್ಟಡ

ವಲಯ	ಸಂಖ್ಯೆ	ವೆಚ್ಚ (₹ಕೋಟಿಗಳಲ್ಲಿ)
ಬೊಮ್ಮನಹಳ್ಳಿ	1	1.5
ದಾಸರಹಳ್ಳಿ	2	3
ಪೂರ್ವ	5	7.5
ಪಶ್ಚಿಮ	5	7.5
ದಕ್ಷಿಣ	3	4.5
ಒಟ್ಟು	16	24

ಯುಪಿಎಚ್‌ಸಿ ದುರಸ್ತಿ ಕಾಮಗಾರಿ

ವಲಯ	ಸಂಖ್ಯೆ
ಬೊಮ್ಮನಹಳ್ಳಿ	5
ಪೂರ್ವ	24
ಮಹದೇವಪುರ	7
ರಾಜರಾಜೇಶ್ವರಿನಗರ	12
ದಕ್ಷಿಣ	15
ಪಶ್ಚಿಮ	7
ಯಲಹಂಕ	10
ಒಟ್ಟು	80
ವೆಚ್ಚ	₹16 ಕೋಟಿ

ಯುಪಿಎಚ್‌ಸಿ ಉನ್ನತೀಕರಣ

ವಲಯ	ಸಂಖ್ಯೆ
ಬೊಮ್ಮನಹಳ್ಳಿ	5
ದಾಸರಹಳ್ಳಿ	2
ಪೂರ್ವ	13
ಮಹದೇವಪುರ	6
ರಾಜರಾಜೇಶ್ವರಿನಗರ	10
ದಕ್ಷಿಣ	10
ಯಲಹಂಕ	5
ಒಟ್ಟು	67
ವೆಚ್ಚ	₹40.2 ಕೋಟಿ

ಯುಪಿಎಚ್‌ಸಿಗಳಿಗೆ ಉಪಕರಣ

ವಲಯ	ಸಂಖ್ಯೆ
ಬೊಮ್ಮನಹಳ್ಳಿ	9
ಪೂರ್ವ	25
ಮಹದೇವಪುರ	9
ರಾಜರಾಜೇಶ್ವರಿನಗರ	12
ದಕ್ಷಿಣ	26
ಪಶ್ಚಿಮ	10
ಯಲಹಂಕ	10
ಒಟ್ಟು	105
ವೆಚ್ಚ	₹6.3 ಕೋಟಿ

'ನಮ್ಮ ಕ್ಲಿನಿಕ್'ಗಳಿಗೆ ತಲಾ ₹36 ಲಕ್ಷ

ಬಿಬಿಎಂಪಿ ಎಲ್ಲ 243 ವಾರ್ಡ್‌ಗಳಲ್ಲಿ 'ನಮ್ಮ ಕ್ಲಿನಿಕ್'ಗಳನ್ನು ತೆರೆಯುತ್ತಿರುವುದು ಆರೋಗ್ಯ ಕ್ಷೇತ್ರಕ್ಕೆ ನೀಡಿರುವ ಸಮಾಧಾನಕರ ಕೊಡುಗೆ. ಆದರೆ ಇದಕ್ಕೆ 'ಅಮೃತ ನಗರೋತ್ಥಾನ' ಯೋಜನೆಯಲ್ಲಿ ಹಣ ಸಿಕ್ಕಿಲ್ಲ. 15ನೇ ಹಣಕಾಸು ಆಯೋಗದ ನಿಧಿಯಲ್ಲಿ ವೆಚ್ಚ ಮಾಡಲಾಗುತ್ತದೆ. ಪ್ರತಿ ಕ್ಲಿನಿಕ್‌ಗೂ ಪ್ರತಿ ವರ್ಷ ₹36 ಲಕ್ಷ ವೆಚ್ಚ ಮಾಡಲಾಗುತ್ತದೆ. ಪಾಲಿಕೆಯ ವಾರ್ಡ್‌ಗಳಲ್ಲಿರುವ ತನ್ನ ಸ್ವಂತ ಜಾಗದಲ್ಲಿ ಈ ಕ್ಲಿನಿಕ್‌ಗಳು ಆರಂಭವಾಗಲಿವೆ. ಸ್ವಂತ ಕಟ್ಟಡ ಇಲ್ಲದಿದ್ದರೆ ಬಾಡಿಗೆ ಕಟ್ಟಡದಲ್ಲಿ ಆರಂಭಿಸಲಾಗುತ್ತದೆ. ಈ ಕ್ಲಿನಿಕ್‌ಗಳಲ್ಲಿ ತಪಾಸಣೆ ಹಾಗೂ ಪ್ರಾಥಮಿಕ ಚಿಕಿತ್ಸೆಗಳು ಲಭ್ಯ ಇರುತ್ತವೆ.

ನರ ಸಂಬಂಧಿ ಅನಾರೋಗ್ಯ ಸಮಸ್ಯೆಗಳ ನಿವಾರಣೆಗೆ ನಿಮ್ಹಾನ್ಸ್ ಕ್ರಮ

ಮಿದುಳು ಸಮಸ್ಯೆ ಪತ್ತೆಗೆ ವೈದ್ಯರಿಗೆ ತರಬೇತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಿದುಳಿನಲ್ಲಿ ಕಾಣಿಸಿಕೊಳ್ಳುವ ಸಮಸ್ಯೆಗಳನ್ನು ಆರಂಭಿಕ ಹಂತದಲ್ಲಿಯೇ ಗುರುತಿಸಿ, ಚಿಕಿತ್ಸೆಗೆ ಒಳಪಡಿಸಲು ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯರಿಗೆ ತರಬೇತಿ ನೀಡಲಾಗುತ್ತಿದೆ' ಎಂದು ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ತಿಳಿಸಿದೆ.

ಸಂಸ್ಥೆಯು ಕರ್ನಾಟಕ ಮಿದುಳು ಆರೋಗ್ಯ ಕಾರ್ಯಕ್ರಮ ಹಮ್ಮಿಕೊಂಡಿದೆ. ಇದರ ಭಾಗವಾಗಿ ವಿಶ್ವ ಮಿದುಳು ಆರೋಗ್ಯ ದಿನವನ್ನು ಶುಕ್ರವಾರ ಆಚರಿಸಲಾಗುತ್ತಿದೆ. ಕ್ರಿಕೆಟಿಗ ರಾಬಿನ್ ಉತ್ತಪ್ಪ ಅವರು ಮಿದುಳಿನ ಆರೋಗ್ಯ ಹಾಗೂ ಮಾನಸಿಕ ಆರೋಗ್ಯ ಕಾರ್ಯಕ್ರಮದ ರಾಯಭಾರಿಯಾಗಿದ್ದಾರೆ.

'ಪಾರ್ಶ್ವವಾಯು, ಅಪಸ್ಮಾರ, ಬುದ್ಧಿಮಾಂದ್ಯತೆ, ಮಿದುಳಿನ ಸೋಂಕು ಸೇರಿ ವಿವಿಧ ನರ ಸಂಬಂಧಿ ಕಾಯಿಲೆಗಳು ಅಂಗವಿಕಲತೆಗೆ ಕಾರಣವಾಗುತ್ತಿವೆ. ಸಾಮಾನ್ಯ ನರ ರೋಗಗಳಿಗೆ ಸಂಬಂಧಿಸಿದಂತೆ 2022ರ ಮಾರ್ಚ್‌ನಿಂದ ಜೂನ್ ತಿಂಗಳವರೆಗೆ ಪ್ರಾಯೋಗಿಕವಾಗಿ ಕೋಲಾರ, ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು ದಕ್ಷಿಣದ ಪ್ರಾಥಮಿಕ ಆರೋಗ್ಯ ಕೇಂದ್ರಗಳ ನೂರು ವೈದ್ಯರಿಗೆ ತರಬೇತಿ ನೀಡಲಾಗಿದೆ. ಈ ತರಬೇತಿಯನ್ನು ಮುಂದುವರೆಸಲಾಗುವುದು' ಎಂದು ಸಂಸ್ಥೆಯ ನಿರ್ದೇಶಕಿ ಡಾ. ಪ್ರತಿಮಾ ಮೂರ್ತಿ ತಿಳಿಸಿದ್ದಾರೆ.

'ಆಶಾ ಕಾರ್ಯಕರ್ತೆಯರಿಗೆ ನರ ಸಂಬಂಧಿ ರೋಗಗಳ ತಪಾಸಣೆ ಬಗ್ಗೆ ತರಬೇತಿ ನೀಡಲಾಗುತ್ತಿದೆ. ಇವರು ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳು ಹಾಗೂ ಮನೆಯ ಮಟ್ಟದಲ್ಲಿ ತಪಾಸಣೆ ನಡೆಸಲಿದ್ದಾರೆ' ಎಂದು ಹೇಳಿದ್ದಾರೆ.

'ಮಿದುಳಿನ ಅನಾರೋಗ್ಯ ಸಮಸ್ಯೆಗಳು ತ್ವರಿತವಾಗಿ ಹೆಚ್ಚುತ್ತಿವೆ. ಇದು ಸಮಾಜದ ಮೇಲೆಯೂ ಗಮನಾರ್ಹವಾದ ಪರಿಣಾಮ ಬೀರುತ್ತಿದೆ. ಆರಂಭಿಕ ಹಂತದಲ್ಲಿಯೇ ಈ ಸಮಸ್ಯೆಯನ್ನು ಪತ್ತೆಹಚ್ಚಿ, ಚಿಕಿತ್ಸೆ ಒದಗಿಸಿದಲ್ಲಿ ಅಂಗವೈಕಲ್ಯ ಮತ್ತು ಮರಣ ತಡೆಯಲು ಸಾಧ್ಯ. ಸಮಯಕ್ಕೆ ಸರಿಯಾಗಿ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡರೆ ಮಿದುಳಿನ ಅಸ್ವಸ್ಥತೆ ಎದುರಿಸುವ ಪ್ರಮಾಣವನ್ನು ಶೇ 40ರಷ್ಟು ತಡೆಯಬಹುದು' ಎಂದು ಪ್ರತಿಮಾ ಮೂರ್ತಿ ಅವರು ತಿಳಿಸಿದ್ದಾರೆ.

'ರೋಗದ ಆರಂಭಿಕ ಲಕ್ಷಣ ಗುರುತಿಸುವುದು ಹಾಗೂ ಸಕಾಲಕ್ಕೆ ಚಿಕಿತ್ಸೆ ನೀಡುವುದು ಮುಖ್ಯ. ಈ ಸಮಸ್ಯೆಗಳ ಬಗ್ಗೆ ಜನರಿಗೆ ಅರಿವು ಕಡಿಮೆ. ರಾಜ್ಯದಲ್ಲಿ ಸಾಮಾನ್ಯ ನರರೋಗ ಮತ್ತು ಮಾನಸಿಕ ಅಸ್ವಸ್ಥತೆ ಬಗ್ಗೆ ಜಾಗೃತಿ ಹೆಚ್ಚಿಸಬೇಕು' ಎಂದು ಹೇಳಿದ್ದಾರೆ.

ಮಿದುಳು ಆರೋಗ್ಯ ಕ್ಲಿನಿಕ್

'ನರ ಸಂಬಂಧಿ ಸಂಕೀರ್ಣ ರೋಗಗಳಿಗೆ ಚಿಕಿತ್ಸೆ ನೀಡಲು ಜಯನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಮಿದುಳು ಆರೋಗ್ಯ ಕ್ಲಿನಿಕ್ ನಿರ್ಮಿಸಲಾಗಿದೆ. ಈ ಕ್ಲಿನಿಕ್‌ಗೆ ಶುಕ್ರವಾರ ಚಾಲನೆ ದೊರೆಯಲಿದೆ. ಸಾಮಾನ್ಯ ನರರೋಗಗಳ ಚಿಕಿತ್ಸೆಗಳಿಗೆ ಇದು ನೋಡಲ್ ಕೇಂದ್ರವಾಗಿ ಕಾರ್ಯನಿರ್ವಹಿಸಲಿದೆ. ವಿವಿಧ ಆಸ್ಪತ್ರೆಗಳಲ್ಲಿನ ವೈದ್ಯರೊಂದಿಗೆ ಈ ಕ್ಲಿನಿಕ್ ಮೂಲಕ ಸಮನ್ವಯ ಸಾಧಿಸಲಾಗುವುದು' ಎಂದು ಡಾ ಪ್ರತಿಮಾ ಮೂರ್ತಿ ತಿಳಿಸಿದ್ದಾರೆ.

'ಬಹುವಿಧದ ಆರೈಕೆ, ಚಿಕಿತ್ಸಾ ವಿಧಾನ, ರೋಗಿಗಳ ಜತೆಗೆ ಸಮಾಲೋಚನೆ ನಡೆಸುವ ಬಗ್ಗೆಯೂ ಈ ಕ್ಲಿನಿಕ್ ಮೂಲಕ ವೈದ್ಯರಿಗೆ ತಿಳಿಸಿಕೊಡಲಾಗುವುದು' ಎಂದು ವಿವರಿಸಿದ್ದಾರೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸರ್ಕಾರ ಸಚಿವಾಲಯ ಕ್ಲಬ್ ತನ್ನ ಸದಸ್ಯರ ಮಕ್ಕಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಿದೆ. 2021–22ನೇ ಸಾಲಿನ ಎಸ್ಸೆಸ್ಸೆಲ್ಸಿ, ಪಿಯುಸಿ, ಸಿಬಿಎಸ್‌ಸಿ ಹಾಗೂ ಐಸಿಎಸ್‌ಇ ಪರೀಕ್ಷೆಗಳಲ್ಲಿ ಶೇ 85ಕ್ಕಿಂತ ಹೆಚ್ಚು ಅಂಕ ಪಡೆದವರು ಅರ್ಜಿ ಸಲ್ಲಿಸ ಬಹುದಾಗಿದೆ.

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ 60 ಹಾಗೂ ಅದಕ್ಕಿಂತ ಅಧಿಕ ಅಂಕ ಪಡೆದ ಕನ್ನಡ ಮಾಧ್ಯಮದ ಅಭ್ಯರ್ಥಿಗಳೂ ಅರ್ಜಿ ಸಲ್ಲಿಸಲು ಅರ್ಹರು. ಅರ್ಜಿ ಸಲ್ಲಿಸಲು ಇದೇ 31 ಕಡೆಯ ದಿನಾಂಕ. ಕಬ್ಬನ್ ಉದ್ಯಾನದಲ್ಲಿರುವ ಕಚೇರಿಗೆ ಅಥವಾ ಇ–ಮೇಲ್ ವಿಳಾಸ kgsclub1905@gmail.com ಮೂಲಕ ಅರ್ಜಿ ಸಲ್ಲಿಸಬಹುದು.

'ಪ್ರಭಾವಿ' ಹುದ್ದೆಗೆ ಕಿರಿ ವಯಸ್ಸಿನ ಪ್ರಚಾರಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿಯ ರಾಜ್ಯ ಸಂಘಟನಾ ಪ್ರಧಾನ ಕಾರ್ಯದರ್ಶಿಯನ್ನಾಗಿ ಅತಿ ಕಿರಿಯ ವಯಸ್ಸಿನ ರಾಜೇಶ್ ಜಿ.ವಿ ಅವರನ್ನು ನೇಮಕ ಮಾಡಲಾಗಿದೆ.

ಪ್ರಚಾರಕರಾಗಿ ತುಮಕೂರು ಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ರಾಜೇಶ್ ಅವರನ್ನು ರಾಜಕೀಯ ಕ್ಷೇತ್ರಕ್ಕೆ ನಿಯುಕ್ತಿ ಮಾಡುವ ನಿರ್ಣಯವನ್ನು ಆರ್‌ಎಸ್‌ಎಸ್‌ನ ಉತ್ತರ ಮತ್ತು ದಕ್ಷಿಣ ಪ್ರಾಂತಗಳ ಸಮನ್ವಯ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗಿತ್ತು. ಇದೀಗ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಸಂಘಟನಾ ಕಾರ್ಯದರ್ಶಿ ಹುದ್ದೆಗೆ ನೇಮಿಸಿದ್ದಾರೆ.

ಬಿಜೆಪಿ ರಾಜ್ಯ ಘಟಕದ ಸಂಘಟನಾ ಕಾರ್ಯದರ್ಶಿ ಹುದ್ದೆಗೆ ಬಿ.ಎಲ್. ಸಂತೋಷ್ ಅವರು ನಿಯುಕ್ತಿಗೊಂಡ ಬಳಿಕ ಹುದ್ದೆಯ ಮಹತ್ವವೂ ಹೆಚ್ಚಾಯಿತು. ಯಡಿಯೂರಪ್ಪ ಪಕ್ಷ ಬಿಟ್ಟು ಕೆಜೆಪಿ ಕಟ್ಟಿದ ಸಂದರ್ಭದಲ್ಲಿ ಸಂತೋಷ್ ಪಕ್ಷವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳುವುದರ ಜತೆಗೆ ಸಂಘಟನೆಯನ್ನು ಬಲಪಡಿಸಿದರು. ಅಲ್ಲದೇ, ಪಕ್ಷದಲ್ಲಿ ಘಟಾನುಘಟಿ ನಾಯಕರ ಪ್ರಾಬಲ್ಯವನ್ನೂ ತಗ್ಗಿಸಿದರು. ಮೋದಿ ಪ್ರಧಾನಿ ಆದ ಬಳಿಕ ರಾಷ್ಟ್ರೀಯ ಸಂಘಟನಾ ಪ್ರಧಾನಕಾರ್ಯದರ್ಶಿ ಹುದ್ದೆಗೆ ಸಂತೋಷ್ ಅವರನ್ನು ನಿಯುಕ್ತಿಗೊಳಿಸಲಾಯಿತು.

ಬಿಜೆಪಿ ರಾಜ್ಯ ಘಟಕಕ್ಕೆ ಸಂತೋಷ್ ಬಳಿಕಅರುಣ್‌ಕುಮಾರ್ ಅವರನ್ನು ನೇಮಿಸಲಾಯಿತು. ಈಗ ಅತಿ ಕಿರಿಯ ವಯಸ್ಸಿನ ಪ್ರಚಾರಕ ರಾಜೇಶ್ (37) ಅವರನ್ನು ನಿಯುಕ್ತಿಗೊಳಿಸಲಾಗಿದೆ. ಪಕ್ಷದಲ್ಲಿ ಅತ್ಯಂತ ಹಿರಿಯ ಮತ್ತು ಅನುಭವಿ ನಾಯಕರ ಜತೆ ಕಾರ್ಯನಿರ್ವಹಿಸುವ ಸವಾಲು ರಾಜೇಶ್ ಅವರಿಗಿದೆ. ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರಿನವರಾದ ರಾಜೇಶ್ ಮೈಸೂರು ಮತ್ತು ತುಮಕೂರು ಭಾಗದಲ್ಲಿ ಪ್ರಚಾರಕ್ ಆಗಿ ಕಾರ್ಯ ನಿರ್ವಹಿಸಿದ್ದರು.

ಸಂಘಟನಾ ಕಾರ್ಯದರ್ಶಿ ಕೆಲಸವೇನು?

ಬಿಜೆಪಿ ಮತ್ತು ಆರ್‌ಎಸ್‌ಎಸ್ ಮಧ್ಯೆ ಸಮನ್ವಯದ ಕೆಲಸ ಇವರದು. ಆರಂಭದಲ್ಲಿ ಪಕ್ಷದಲ್ಲಿ ಇಂತಹದ್ದೊಂದು ಹುದ್ದೆ ಇರಲಿಲ್ಲ. ಪಕ್ಷ ಮತ್ತು ಸಂಘದ ಮಧ್ಯೆ ಕೆಲವು ವಿಚಾರಗಳಲ್ಲಿ ಸೈದ್ಧಾಂತಿಕವಾಗಿ ಭಿನ್ನಾಭಿಪ್ರಾಯ ಮೂಡಲಾರಂಭಿಸಿತು. ಬಿಜೆಪಿ ಆರ್‌ಎಸ್‌ಎಸ್ ಸಿದ್ಧಾಂತದಿಂದ ದೂರ ಸರಿಯುತ್ತಿದೆ. ಇತರ ಪಕ್ಷಗಳ ದಾರಿಯಲ್ಲೇ ಸಾಗುತ್ತಿದೆ ಎಂಬ ಆಕ್ಷೇಪಗಳು ಕೇಳಿಬಂದವು. ವಿವಿಧ ವಿಷಯಗಳಿಗೆ ಸ್ಪಷ್ಟನೆ ಪಡೆಯಲು ಪದೇ ಪದೇ ಆರ್‌ಎಸ್‌ಎಸ್ ಬಳಿ ಹೋಗುವುದಕ್ಕಿಂತ ಸಂಘದಿಂದಲೇ ಒಬ್ಬರನ್ನು ನಿಯೋಜಿಸುವುದು ಸೂಕ್ತ ಎಂಬ ಸಲಹೆ ಬಿಜೆಪಿಯಿಂದಲೇ ಬಂದಿತು. ಈ ಹಿನ್ನೆಲೆಯಲ್ಲಿ ರಾಷ್ಟ್ರ ಮತ್ತು ರಾಜ್ಯ ಘಟಕಗಳಲ್ಲಿ ಆರ್‌ಎಸ್‌ಎಸ್ ಪ್ರಚಾರಕರನ್ನು ನಿಯುಕ್ತಿಗೊಳಿಸುವ ಪರಿಪಾಟ ಆರಂಭವಾಯಿತು. ಈ ರೀತಿ ನಿಯುಕ್ತಿಗೊಂಡವರನ್ನು ಯಾವಾಗ ಬೇಕಾದರೂ ಮಾತೃ ಸಂಸ್ಥೆಗೆ ಹಿಂದಕ್ಕೆ ಕರೆಸಿಕೊಳ್ಳಬಹುದು. ಇವರು ಸಕ್ರಿಯ ರಾಜಕೀಯದಲ್ಲಿ ತೊಡಗಿಸಿಕೊಳ್ಳುವ ಅವಕಾಶ ಇರುವುದಿಲ್ಲ.

ಸೋಮನಾಥಪುರ–ತಲಕಾಡು–ಗಗನಚುಕ್ಕಿ ಪ್ಯಾಕೇಜ್ ಪ್ರವಾಸ

ಬೆಂಗಳೂರು: ಸೋಮನಾಥಪುರ–ತಲಕಾಡು–ಮಧ್ಯರಂಗ– ಭರಚುಕ್ಕಿ–ಗಗನಚುಕ್ಕಿಗೆ ಕೆಎಸ್‌ಆರ್‌ಟಿಸಿ ವಾರಾಂತ್ಯದ ಪ್ಯಾಕೇಜ್ ಪ್ರವಾಸ ಆರಂಭಿಸಿದೆ.

ಜುಲೈ 23ರಿಂದ ಈ ಪ್ಯಾಕೇಜ್ ಪ್ರವಾಸ ಆರಂಭವಾಗಲಿದೆ. ಶನಿವಾರ ಮತ್ತು ಭಾನುವಾರ ಬೆಂಗಳೂರಿನಿಂದ ಬೆಳಿಗ್ಗೆ 6.30ಕ್ಕೆ ಹೊರಡುವ 'ಕರ್ನಾಟಕ ಸಾರಿಗೆ' ಬಸ್, ಮದ್ದೂರು (ಉಪಾಹಾರ) ಮಾರ್ಗದಲ್ಲಿ ಸಾಗಿ, 9 ಗಂಟೆಗೆ ಸೋಮನಾಥಪುರ ತಲುಪಲಿದೆ. ಅಲ್ಲಿಂದ ತಲಕಾಡು ಪಂಚಲಿಂಗ ದರ್ಶನ(ಮಧ್ಯಾಹ್ನದ ಊಟ), ಮಧ್ಯರಂಗ, ರಂಗನಾಥಸ್ವಾಮಿ ದರ್ಶನ, ಭರಚುಕ್ಕಿ, ಗಗನಚುಕ್ಕಿ ವೀಕ್ಷಣೆ ಮುಗಿಸಿ ಸಂಜೆ 6.15ಕ್ಕೆ ಗಗನಚುಕ್ಕಿಯಿಂದ ಹೊರಡಲಿದೆ. ರಾತ್ರಿ 9 ಗಂಟೆ ಸುಮಾರಿಗೆ ಬೆಂಗಳೂರು ತಲುಪಲಿದೆ.

ಪ್ರವೇಶ ಶುಲ್ಕ, ಊಟ, ಉಪಾಹಾರ ಹೊರತುಪಡಿಸಿ ಪ್ರಯಾಣ ದರ ವಯಸ್ಕರಿಗೆ ₹400 ಮತ್ತು ಮಕ್ಕಳಿಗೆ(6ರಿಂದ 12 ವರ್ಷ) ₹250 ನಿಗದಿ ಮಾಡಿದೆ. ನಿಗಮದ ಟಿಕೆಟ್ ಕೌಂಟರ್‌ಗಳಲ್ಲಿ ಮತ್ತು ಆನ್‌ಲೈನ್‌ನಲ್ಲಿ (http:ksrtc.karnataka.gov.in) ಮುಂಗಡ ಟಿಕೆಟ್ ಪಡೆದು ಆಸನ ಕಾಯ್ದಿರಿಸಬಹುದು ಎಂದು ಕೆಎಸ್‌ಆರ್‌ಟಿಸಿ ತಿಳಿಸಿದೆ.

ಐಎಸ್ ನಂಟು ಪ್ರಕರಣ: ಎನ್‌ಐಎಗೆ 'ಸುಪ್ರೀಂ' ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಯುವಕರನ್ನು ಇಸ್ಲಾಮಿಕ್ ಸ್ಟೇಟ್ (ಐಎಸ್) ಉಗ್ರ ಸಂಘಟನೆಗೆ ಸೇರಿಸಲು ಸಂಚು ರೂಪಿಸಿದ್ದ ಆರೋಪ ಪ್ರಕರಣದಲ್ಲಿ ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) 90 ದಿನಗಳಲ್ಲಿ ಆರೋಪಪಟ್ಟಿ ಸಲ್ಲಿಸದ ಕಾರಣಕ್ಕೆ ಡಿಫಾಲ್ಟ್ ಜಾಮೀನು ನೀಡುವಂತೆ ಕೋರಿ ಬೆಂಗಳೂರಿನ ಯುವಕ ಸಲ್ಲಿಸಿದ್ದ ಅರ್ಜಿಗೆ ಸಂಬಂಧಪಟ್ಟಂತೆ ಎನ್‌ಐಎಗೆ ಸುಪ್ರೀಂ ಕೋರ್ಟ್ ಗುರುವಾರ ನೋಟಿಸ್ ನೀಡಿದೆ.

ಬೆಂಗಳೂರಿನ ಜಯನಗರದ ನಿವಾಸಿ ಜುಹೇಬ್ ಹಮೀದ್ ಶಕೀಲ್ ಮನ್ನಾ ಪರವಾಗಿ ವಕೀಲ ಬಾಲಾಜಿ ಶ್ರೀನಿವಾಸನ್ ವಾದವನ್ನು ಆಲಿಸಿದ ನ್ಯಾಯಮೂರ್ತಿ ಯು.ಯು.ಲಲಿತ್ ನೇತೃತ್ವದ ನ್ಯಾಯಪೀಠವು ತನಿಖಾ ಸಂಸ್ಥೆಯಿಂದ ಪ್ರತಿಕ್ರಿಯೆ ಕೇಳಿದೆ.

ಡಿಫಾಲ್ಟ್ ಜಾಮೀನು ನೀಡಬೇಕು ಎಂದು ಕೋರಿ ಜುಹೇಬ್ ಹಮೀದ್ ಶಕೀಲ್ ಮನ್ನಾ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಜಾಮೀನು ನೀಡಲು ಹೈಕೋರ್ಟ್ ಏಪ್ರಿಲ್ 1ರಂದು ನಿರಾಕರಿಸಿತ್ತು. ಇದನ್ನು ಪ್ರಶ್ನಿಸಿ ಜುಹೇಬ್ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

'ನನ್ನ ಅರ್ಜಿದಾರರನ್ನು 2021ರ ನವೆಂಬರ್ 15ರಂದು ಬಂಧಿಸಲಾಗಿದೆ. ಆದರೆ, ನವೆಂಬರ್ 17ರಂದು ಬಂಧಿಸಲಾಗಿದೆ ಎಂಬುದಾಗಿ ತನಿಖಾ ಸಂಸ್ಥೆಯ ಅಧಿಕಾರಿಗಳು ತೋರಿಸಿದ್ದಾರೆ. ಬಂಧಿಸಿದ 90 ದಿನಗಳ ಒಳಗೆ ಆರೋಪ ಪಟ್ಟಿ (2022ರ ಫೆಬ್ರುವರಿ 12) ಸಲ್ಲಿಸಬೇಕಿತ್ತು. ಆರೋಪಪಟ್ಟಿ ಸಲ್ಲಿಸಲು 180 ದಿನಗಳ ಕಾಲಾವಕಾಶ ನೀಡಿ ಫೆಬ್ರುವರಿ 14ರಂದು ಆದೇಶ ಹೊರಡಿಸಲಾಯಿತು' ಎಂದು ಬಾಲಾಜಿ ಶ್ರೀನಿವಾಸನ್ ವಾದಿಸಿದರು.

ಅರ್ಜಿದಾರರನ್ನು ಯಾವಾಗ, ಹೇಗೆ ಹಾಗೂ ಎಲ್ಲಿ ಬಂಧಿಸಲಾಯಿತು ಎಂಬುದರ ಬಗ್ಗೆ ತನಿಖಾ ಸಂಸ್ಥೆಯು ಮಾಹಿತಿ ನೀಡಬೇಕು ಎಂದು ನ್ಯಾಯಪೀಠವು ಹೇಳಿತು.

ಕಾನೂನುಬಾಹಿರ ಚಟುವಟಿಕೆಗಳು (ನಿವಾರಣೆ) ಕಾಯ್ದೆಯ ಸೆಕ್ಷನ್ 42ಡಿ (2) (ಬಿ) ಅನ್ವಯ 90 ದಿನಗಳಲ್ಲಿ ಅರ್ಜಿದಾರರ ವಿರುದ್ಧದ ಆರೋಪಗಳ ಕುರಿತು ತನಿಖೆ ನಡೆಸಲು ಸಾಧ್ಯವಾಗದಿರುವುದಕ್ಕೆ ಸೂಕ್ತ ಕಾರಣಗಳಿವೆಯೇ ಎಂಬುದನ್ನು ಕೆಳ ನ್ಯಾಯಾಲಯ ಪರಿಶೀಲಿಸಿಲ್ಲ. ಇದನ್ನು ಪರಿಶೀಲಿಸದೆಯೇ ಆರೋಪ ಪಟ್ಟಿ ಸಲ್ಲಿಸುವ ಅವಧಿಯನ್ನು 180 ದಿನಗಳಿಗೆ ವಿಸ್ತರಿಸಿದ ಕೆಳ ನ್ಯಾಯಾಲಯದ ಆದೇಶ ದೋಷಪೂರಿತವಾಗಿದೆ ಎಂದು ಅರ್ಜಿದಾರರು ಆರೋಪಿಸಿದ್ದಾರೆ.

ಆರೋಪ ಪಟ್ಟಿ ಸಲ್ಲಿಕೆಯ ಅವಧಿ ವಿಸ್ತರಣೆ ಅರ್ಜಿದಾರರ ಮೂಲಭೂತ ಹಕ್ಕಿನ ಉಲ್ಲಂಘನೆಯಾಗಿದೆ. ಇದರ ನಂತರವೂ, ಆರೋಪಿಯನ್ನು ಬಂಧನದಲ್ಲಿ ಮುಂದುವರಿಸಿದರೆ, ಅದು ಸಂವಿಧಾನದ 21ನೇ ಪರಿಚ್ಛೇದದ ಉಲ್ಲಂಘನೆಯಾಗಲಿದೆ ಎಂದೂ ಅರ್ಜಿಯಲ್ಲಿ ಹೇಳಲಾಗಿದೆ.

ಸಿಆರ್‌ಪಿಸಿಯ ಸೆಕ್ಷನ್ 167ರ ಉಪ ನಿಯಮ 2 ರ ಅನ್ವಯ ನಿಗದಿತ ಅವಧಿಯಲ್ಲಿ ಆರೋಪ ಪಟ್ಟಿ ಸಲ್ಲಿಸಲು ಸಾಧ್ಯವಾಗದಿದ್ದರೆ, ಆರೋಪಿಗೆ ಡಿಫಾಲ್ಟ್ ಜಾಮೀನು ಪಡೆಯುವ ಹಕ್ಕು ಇದೆ ಎಂದೂ ಅರ್ಜಿಯಲ್ಲಿ ಕೋರಲಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ)ರವರ ಕಛೇರಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಎನ್.ಆರ್. ಚೌಕ, ಬೆಂಗಳೂರು–560002

ಸಂಖ್ಯೆ: ಮು.ಆ.ಅ(ಸಾ.ಆ)/ಪಿಆರ್/ಪಿ–90/2022–23 ದಿನಾಂಕ: 21.07.2022

ಪ್ರಕಟಣೆ

ಕೇಂದ್ರ ಸರ್ಕಾರದ 15ನೇ ಹಣಕಾಸು ಆಯೋಗದ ಯೋಜನೆಯಡಿಯಲ್ಲಿ ಕರ್ನಾಟಕ ಸರ್ಕಾರದ ಸೂಚನೆಯಂತೆ, ಮೊದಲನೇ ಹಂತದಲ್ಲಿ ಸ್ಥಾಪಿಸಲಾಗುವ **"ನಮ್ಮ ಕ್ಲಿನಿಕ್"**ಗಳಲ್ಲಿ ಕರ್ತವ್ಯ ನಿರ್ವಹಿಸಲು ಈ ಕೆಳಕಂಡ ಹುದ್ದೆಗಳಿಗೆ ಮೆರಿಟ್ ಕಮ್ ರೋಸ್ಟರ್ ಆಧಾರದ ಮೇಲೆ 01 ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ **ವಾಕ್–ಇನ್ ಆಯ್ಕೆ ಪ್ರಕ್ರಿಯೆ** ಮೂಲಕ ನೇಮಕಾತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ	ವಿದ್ಯಾರ್ಹತೆ	ಸಂಚಿತ ವೇತನ ಪ್ರತಿ ಮಾಹೆಯಾನ	ವಾಕ್ ಇನ್ ಆಯ್ಕೆ ಪ್ರಕ್ರಿಯೆ ನಡೆಯುವ ಸ್ಥಳ, ದಿನಾಂಕ ಮತ್ತು ಸಮಯ
1	ವೈದ್ಯಾಧಿಕಾರಿಗಳು	8	ಎಂ.ಬಿ.ಬಿ.ಎಸ್. ಪದವಿ ಮತ್ತು ಕೆ.ಎಂ.ಸಿ. ಕೌನ್ಸಿಲ್ ನೋಂದಾವಣಿ ಹೊಂದಿರಬೇಕು.	47,250/–	ನೌಕರರ ಭವನ ಸಭಾಂಗಣ, ಬಿಬಿಎಂಪಿ, ಕೇಂದ್ರ ಕಛೇರಿ, ಎನ್.ಆರ್. ಚೌಕ ದಿ: 25.07.2022, ಬೆಳಿಗ್ಗೆ 10:30 ರಿಂದ ಸಂಜೆ 4:30ರ ವರೆಗೆ
2	ಶುಶ್ರೂಷಕಿ / ಶುಶ್ರೂಷಕರು	8	ಬಿ.ಎಸ್.ಸಿ. / ಡಿಪ್ಲೋಮಾ ಇನ್ ನರ್ಸಿಂಗ್ ಮತ್ತು ಕೆ.ಎಂ.ಸಿ. ಕೌನ್ಸಿಲ್ ನೋಂದಾವಣಿ ಹೊಂದಿರಬೇಕು.	15,750/–	
3	ಪ್ರಯೋಗಶಾಲಾ ತಂತ್ರಜ್ಞರು	8	ಡಿಪ್ಲೋಮಾ ಇನ್ ಪ್ರಯೋಗಶಾಲಾ ತಂತ್ರಜ್ಞಾನ (ಬಿ.ಎಂ.ಎಲ್.ಟಿ) ಮತ್ತು 1) ಕರ್ನಾಟಕ ಸರ್ಕಾರ ಪ್ಯಾರಾಮೆಡಿಕಲ್ ಮಂಡಳಿಯ ನೋಂದಣಿ ಹೊಂದಿರಬೇಕು. 2) ಗಣಕಯಂತ್ರ ಜ್ಞಾನ ಹೊಂದಿರಬೇಕು.	14,609/–	
4	ನಾಲ್ಕನೇ ದರ್ಜೆ ನೌಕರರು	8	ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ	10,500/–	

ಅರ್ಹತಾ ಮಾನದಂಡಗಳು:

1. **ವಯೋಮಿತಿ:** ಅರ್ಜಿ ಸಲ್ಲಿಸುವ ಕೊನೆಯ ದಿನಾಂಕಕ್ಕೆ ಕನಿಷ್ಠ 18 ವರ್ಷಗಳು ತುಂಬಿರಬೇಕು ಹಾಗೂ ಈ ಕೆಳಗೆ ನಮೂದಿಸಿರುವ ವಯೋಮಿತಿಯನ್ನು ಮೀರಿರಬಾರದು.
   ಎ. ಸಾಮಾನ್ಯ ವರ್ಗ – 35 ವರ್ಷ
   ಬಿ. 2ಎ, 2ಬಿ, 3ಎ, 3ಬಿ – 38 ವರ್ಷ
   ಸಿ. ಪ.ಜಾತಿ, ಪ.ಪಂಗಡ, ವರ್ಗ–1 – 40 ವರ್ಷ
2. ಅಭ್ಯರ್ಥಿಗಳಿಗೆ ಕನ್ನಡ ಭಾಷಾ ಜ್ಞಾನದ ಅವಶ್ಯಕತೆ ಕಡ್ಡಾಯವಾಗಿರುತ್ತದೆ.

ಆಸಕ್ತರು ಬಿ.ಬಿ.ಎಂ.ಪಿ. ವೆಬ್‌ಸೈಟ್‌ನಲ್ಲಿ ಇರುವ ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿದ ಅರ್ಜಿಯೊಂದಿಗೆ ಸಂಬಂಧಿಸಿದ ವಿದ್ಯಾರ್ಹತೆಯ ಮೂಲ ದಾಖಲೆಗಳು, ಒಂದು ಸ್ವಯಂ ದೃಢೀಕೃತ ಜೆರಾಕ್ಸ್ ಪ್ರತಿ ಮತ್ತು 2 ಜೊತೆ ಭಾವಚಿತ್ರದೊಂದಿಗೆ ಮೇಲೆ ಸೂಚಿಸಿರುವ ಸ್ಥಳ ಮತ್ತು ದಿನಾಂಕದಂದು ವಾಕ್ ಇನ್ ಆಯ್ಕೆ ಪ್ರಕ್ರಿಯೆಗೆ ಹಾಜರಾಗಲು ಸೂಚಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ದೂರವಾಣಿ ಸಂಖ್ಯೆ: **080–22975516,** ಇ–ಮೇಲ್: **choph515@gmail.com** ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೆಬ್‌ಸೈಟ್ **www.bbmp.gov.in**ನ್ನು ಸಂಪರ್ಕಿಸಲು ಸೂಚಿಸಲಾಗಿದೆ.

ಸಹಿ/– ಮುಖ್ಯ ಆರೋಗ್ಯಾಧಿಕಾರಿ (ಸಾ.ಆ.)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನಗರದಲ್ಲಿ ಇಂದು

ವಿಶ್ವ ಮಿದುಳು ದಿನ: ಅತಿಥಿಗಳು: ಡಾ.ಕೆ. ಸುಧಾಕರ್, ರಾಬಿನ್ ಉತ್ತಪ್ಪ, ಆಯೋಜನೆ: ನಿಮ್ಹಾನ್ಸ್, ಜಿಮ್‌ಖಾನ್ ನಿಮ್ಹಾನ್ಸ್ ಭವನ, ಬೆಳಿಗ್ಗೆ 8

'ಕಲಾನಂದ' ಅಂತರ ಕಾಲೇಜು ಸಾಂಸ್ಕೃತಿಕ ಉತ್ಸವ: ಅತಿಥಿಗಳು: ಪ್ರಮೋದ್ ಸಿಂಹ, ಹರಿಣಿ ಶ್ರೀಕಾಂತ, ಎಸ್.ಶ್ರೀಕಾಂತ, ವಿನಾಯಕ್ ಜೋಶಿ, ಎಂ.ಎಸ್. ನಟರಾಜ, ಅಧ್ಯಕ್ಷತೆ: ಡಬ್ಲ್ಯು. ಡಿ. ಅಶೋಕ್, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 9

ಮಿದುಳು ಆರೋಗ್ಯ ಕ್ಲಿನಿಕ್ ಉದ್ಘಾಟನಾ ಸಮಾರಂಭ: ಉಪಸ್ಥಿತಿ: ಡಾ.ಕೆ. ಸುಧಾಕರ್, ಅಧ್ಯಕ್ಷತೆ: ಸೌಮ್ಯರೆಡ್ಡಿ, ಅತಿಥಿಗಳು: ಆರ್.ಅಶೋಕ್, ವಿ.ಸೋಮಣ್ಣ, ಕೆ. ಗೋಪಾಲಯ್ಯ, ಡಾ.ಸಿ. ಎನ್.ಅಶ್ವತ್ಥನಾರಾಯಣ, ಆಯೋಜನೆ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸ್ಥಳ: ಸಾರ್ವಜನಿಕ ಆಸ್ಪತ್ರೆ, ಜಯನಗರ, ಬೆಳಿಗ್ಗೆ 9.30

ಕಿರಣ್ ಉಪಾಧ್ಯಾಯ ಅವರ 'ವಿಶ್ವತೋಮುಖ', ವಿಶ್ವೇಶ್ವರ ಭಟ್ ಅವರ 'ಸುದ್ದಿಮನೆ', 'ಇದೇ ಅಂತರಂಗ ಸುದ್ದಿ', 'ನೂರೆಂಟು ವಿಶ್ವ' ಪುಸ್ತಕಗಳ ಬಿಡುಗಡೆ ಸಮಾರಂಭ: ಪುಸ್ತಕ ಬಿಡುಗಡೆ: ಎಸ್. ಎಲ್. ಭೈರಪ್ಪ, ಅತಿಥಿಗಳು: ನಾಗೇಶ ಹೆಗಡೆ, ಪ್ರತಾಪ ಸಿಂಹ, ಆಯೋಜನೆ: ವಿಕಿ ಬುಕ್ಸ್–ಸ್ಮಾರ್ಟ್‌ಕೀ, ವಿಶ್ವವಾಣಿ ಪುಸ್ತಕ, ಸ್ಥಳ: ಯುವಪಥ, ವಿವೇಕ ಸಭಾಂಗಣ, ಜಯನಗರ, ಬೆಳಿಗ್ಗೆ 10.30

ಫ್ರೀಡಂ (FREEDOM) ಆ್ಯಪ್: ಅತಿಥಿಗಳು: ಡಿ.ರೂಪಾ, ಪದ್ಮಜಾ ರಾವ್, ಸಿ.ಎಸ್. ಸುಧೀರ್, ಶ್ರೀವಿದ್ಯಾ ಕಾಮತ್, ಆಯೋಜನೆ ಮತ್ತು ಸ್ಥಳ: ಫ್ರೀಡಂ ಆ್ಯಪ್, ಬ್ರಿಗೇಡ್ ಸಾಫ್ಟ್‌ವೇರ್ ಪಾರ್ಕ್, ಬನಶಂಕರಿ, ಮಧ್ಯಾಹ್ನ 2

'ಉದಯಭಾನು ಸುವರ್ಣ ಮಹೋತ್ಸವ ಸ್ಮಾರಕ ಭವನ ಉದ್ಘಾಟನೆ', 'ಕರ್ನಾಟಕ ವಿಜ್ಞಾನ ತಂತ್ರಜ್ಞಾನ ದರ್ಶನ' ಪುಸ್ತಕ ಲೋಕಾರ್ಪಣೆ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಅತಿಥಿಗಳು: ಡಾ.ಸಿ. ಎನ್. ಅಶ್ವತ್ಥನಾರಾಯಣ, ವಿ.ಸುನಿಲ್ ಕುಮಾರ್, ಅಧ್ಯಕ್ಷತೆ: ಎ.ಎಸ್. ಕಿರಣ್ ಕುಮಾರ್, ಆಯೋಜನೆ: ಉದಯಭಾನು ಕಲಾಸಂಘ, ಸ್ಥಳ: ಉದಯಭಾನು ಸಾಂಸ್ಕೃತಿಕ ಭವನ, ಕೆಂಪೇಗೌಡನಗರ, ಸಂಜೆ 5

ಧ್ವನಿ ಮತ್ತು ಸ್ನಿಗ್ಧ

ಹರಿನಾಮ ಸಂಕೀರ್ತನೆ: ಪ್ರಸ್ತುತಿ: ಧ್ವನಿ ಮತ್ತು ಸ್ನಿಗ್ಧ (... ಸಹೋದರಿಯರು), ಕೀ-ಬೋರ್ಡ್: ಜಿ.ಆರ್. ದುಶ್ಯಂತ್, ತಬಲಾ: ಪ್ರಮೋದ್ ಗಬ್ಬೂರ್, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಮತ್ತು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ಶ್ರೀರಾಮಚಂದ್ರ ಸ್ವಾಮಿ ದೇವಸ್ಥಾನ, 3ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಶ್ರೀರಾಮಪುರ, ಸಂಜೆ 6.30

ಪ್ರಶಸ್ತಿ ಪ್ರದಾನ

ನಗರದ ಸೇಂಟ್ ಪಾಲ್ಸ್ ಕಾಲೇಜು ನೀಡುವ ಪ್ರತಿಷ್ಠಿತ 'ಸೇಂಟ್ ಪಾಲ್ಸ್ ರಾಷ್ಟ್ರೀಯ ಮಾಧ್ಯಮ ಪ್ರಶಸ್ತಿ'ಗೆ (ಎಸ್‌ಪಿಎನ್‌ಎಂಎ) ಕೆಎಸ್‌ಆರ್‌ಟಿಸಿ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಟಿ.ಎಸ್.ಲತಾ ಅವರು ಭಾಜನರಾಗಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಡಾ.ಜಯಕರ ಅವರು ಪ್ರಶಸ್ತಿ ಪ್ರದಾನ ಮಾಡಿದರು. ಕಾಲೇಜಿನ ಪ್ರಾಂಶುಪಾಲ ಫಾದರ್ ರೆವರೆಂಡ್ ಡಾ.ಥಾಮಸ್ ಇದ್ದರು

KARNATAKA REDDYJANA SANGHA
No.1, Mahayogi Vemana Road, 3rd Block, Koramangala, Bangalore-34. 080-25534194

TENDER NOTICE
Tenders invited from reputed Civil Contractors for following works

SL. No	Name of the Work	Estimated Cost Rs.	EMD in Lakhs
1	Vemana Hospital Marasuru Balance Civil Works	200 Lakhs	3.00
2	Vemana Hospital Marasuru Nurse Hostel Building	200 Lakhs	3.00
3	KRJS-Medical College & Super Specialty Hospital, Kasavanahalli - Balance Civil works at Ground Floor First Floor, Second Floor.	600 Lakhs	9.00

• Tender Form may be obtained from **KRJS -Head Office** From 25-07-2022 to 27-7-2022 b/w 10.00am to 5.00pm
• Cost of Tender form for each work is Rs. 5,000/-
• **EMD** in the form of Bank Guarantee or **DD** in the Name of **KRJS.**
• Last Date for Submitting Sealed Tender: 08-08-2022 up to 3.00pm.
for further details, visit our website : **www.reddyjanasangha.org or Contact Civil Engineers : 8618096726, 9845163619, 9900237382.**
President General Secretary

IN CINEMAS TODAY



WATCH THE HINDI VERSION WITH ENGLISH SUBTITLES
a yash raj films worldwide release

IN IMAX AT
PVR CINEMAS {Forum Mall, Kormangala, 9:45, 1:05, 4:25, 10:30 p.m. | VR Mall, 9:45, 1:05, 4:25, 10:30 p.m. | Vegacity Mall, 12:35, 6:40, 9:15, 10:00 p.m.} | INOX {Mantri Square Mall, Malleshwaram, 9:20, 12:35, 3:50, 7:10, 10:30 p.m. | RMZ Yelahanka, 9:10, 12:30, 3:50, 7:10, 10:30 p.m.} | CINEPOLIS {Shantiniketan, 9:20, 12:40, 6:50, 10:00 p.m.}.

PVR CINEMAS {Phoenix Market City, 9:10, 12:05, 12:30, 3:50, 6:10, 7:10, 9:30, 10:30 p.m. | Forum Mall, Kormangala, 9:45, 12:00, 2:40, 3:20, 6:40, 7:10, 9:35, 10:00 p.m. | Orion Mall, 9:10, 9:45, 12:30, 1:05, 3:00, 3:35, 3:50, 6:10, 7:10, 9:45, 10:30 p.m. | Orion Uptown Mall, 9:10, 12:30, 3:50, 7:10, 10:30 p.m. | MSR Regalia Mall, 9:10, 12:30, 3:50, 6:10, 7:10, 9:30, 10:30 p.m. | Spirit Mall, 9:10, 12:30, 3:50, 7:10, 10:00, 10:30 p.m. | VR Mall, 9:30, 11:45, 3:05, 6:25, 6:55, 9:45 p.m. | Vaishnavi Saphire Mall, 9:00, 11:30, 12:20, 3:40, 6:10, 7:00, 10:20 p.m. | Vegacity Mall, 9:10, 12:30, 3:15, 3:35, 3:50, 7:10, 9:30, 10:30 p.m. | The Cinema @ GT Mall, Magadi Road, 9:10, 12:30, 3:50, 7:10, 10:30 p.m. | The Aura, Whitefield, 10:05, 12:30, 3:50, 7:10, 10:30 p.m.} | INOX {Garuda Mall, 9:20, 10:10, 12:30, 7:10, 10:00, 10:30 p.m., IN DOLBY ATMOS:- 11:45, 3:00, 6:15, 9:30 p.m. | Swagath Mall, 9:20, 12:30, 3:50, 7:10, 9:30, 10:30 p.m. | Mantri Mall, 11:45, 5:15, 6:15, 8:30, 9:30 p.m. | Central Mall, 9:00, 9:50, 12:10, 3:30, 6:45, 9:00, 10:00 p.m. | Lido, 9:10, 10:00, 12:30, 3:50, 7:10, 9:40, 10:30 p.m. | Brookefield Mall, 9:00, 10:00, 12:35, 3:50, 7:10, 10:30 p.m. | Forum Value Mall, 10:05, 11:45, 2:15, 6:20, 9:40 p.m., IN DOLBY ATMOS:- 9:10, 12:30, 3:50, 7:10, 10:30 p.m. | SBR Horizon, Seegehalli, 11:30, 2:50, 9:30 p.m., IN DOLBY ATMOS:- 9:10, 12:30, 3:50, 7:10, 10:30 p.m. | Garuda Yelahanka, 9:10, 10:00, 12:30, 3:50, 6:15, 7:10, 9:30, 10:30 p.m. | RMZ Yelahanka, 10:15 a.m., 1:30 p.m., IN DOLBY ATMOS:- 9:30 p.m.} | CINEPOLIS {Royal Meenakshi Mall, 9:45, 11:00, 1:05, 2:20, 5:40, 6:35, 9:00, 9:55 p.m. | ETA Mall, Binny Mill, 9:00, 11:00, 12:20, 2:20, 3:40, 5:40, 7:00, 9:00, 10:20 p.m. | East Orion Mall, 9:00, 10:30, 12:20, 3:40, 7:00, 10:20 p.m. | Shantiniketan, 11:00, 2:20, 5:40, 9:00 p.m., IN DOLBY ATMOS:- 9:00, 12:20, 3:40, 7:00, 10:20 p.m. | SJR Spectrum Mall, 9:00, 10:20, 12:20, 3:40, 7:00, 9:25, 10:20 p.m. | Sigma Mall, 9:00, 12:20, 3:40, 7:00, 10:20 p.m.} | ROCKLINE MALL {Jalahalli Cross, 10:30, 1:20, 3:45, 6:35, 9:15 p.m.} | GOPALAN {Innovation Mall, 10:00, 2:45, 7:00 p.m. | Arch Mall, 11:00, 4:45, 10:00 p.m. | Signature Mall, 12:15, 4:30, 9:30 p.m. | Grand Mall, 10:15, 1:45, 6:15, 9:30 p.m. | Legacy Mall, 10:00, 1:00, 4:00, 7:00, 9:45 p.m.} | KINO CINEMAS {Seegehalli Road, 9:15, 12:30, 3:40, 6:50, 9:55 p.m.} | INNOVATIVE MULTIPLEX {Marathahalli, 10:00, 11:30, 1:00, 4:15, 5:30, 6:30, 9:45 p.m.} | MUKTA A2 CINEMAS {Uttarahalli, 10:30, 1:35, 4:45, 10:30 p.m.} | SWAGATH SHANKARNAG {MG Road, 10:45, 1:45, 7:20, 10:20 p.m.} | BALAJI {Chikhalsandra} | SIDDESHWARA {J. P. Nagar, 4:20, 7:05, 9:50 p.m.} | SRI RAMA CHITRA MANDIRA {Ramnagara, 4:30, 7:30 p.m.} | MOHAN {Sunkadkate, 10:15, 1:15, 10:00 p.m.} | VIJAYALAKSHMI {Garudacharpalya, 11:00, 2:30, 6:00, 10:00 p.m.} | MAHADESHWARA {Kadrenahalli, 1:30, 6:45 p.m.} | ANAND {D. J. Halli, 11:00, 2:30, 6:00, 10:00 p.m.} | RADHAKRISHNA {Mattadahalli, 6:15, 9:30 p.m.} | GURUSHREE {Mandya, 11:00, 2:30, 6:00, 10:00 p.m.} | VAIBHAV {Sanjay Nagar, 10:30, 4:00, 7:00, 10:00 p.m.} | ABHINAY {K. G. Road, 10:30, 1:30, 4:15, 7:15, 10:00 p.m.} | CAUVERY {Sankey Road, 11:00, 2:30, 6:00, 9:30 p.m.} | LAKSHMI {Tavarekere, 10:00, 1:00, 4:00, 7:00, 10:00 p.m.} | VICTORY CINEMA {Kamakshipalya, 10:00, 1:00, 4:10, 7:20, 10:30 p.m.} | MANASA {Konnankunte} | VEERESHA {Magadi Road, 10:00 p.m.} | BRUNDHA {Hongasandra, 10:00, 4:00, 10:00 p.m.} | LAKSHMI {Ram Murthy Nagar, 11:00, 2:30, 5:30, 10:00 p.m.} | VEERABADRESHWARA {Kamalanagar, 10:00 p.m.} | NAVRANG {10:00 p.m.} | PRASANNA THEATRE {Magadi Road, 10:30, 1:30,

ಕರ್ನಾಟಕ ಸರ್ಕಾರ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಸಾಮಾಜಿಕ ಅರಣ್ಯ ವಿಭಾಗ, ವಿಜಯಪುರ

ಸಂ:ವಿಜಿಪು/ಸಾಅವಿ/ವಾಹನ/ಸಾ.ಅ.ವಾ/ಟೆಂಡರ್/2022–23 ದಿನಾಂಕ:18.07.2022

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ವಿಜಯಪುರ ಸಾಮಾಜಿಕ ಅರಣ್ಯ ವಿಭಾಗದಲ್ಲಿ 2022–23 ನೇ ಸಾಲಿನಲ್ಲಿ ಐದು ವಲಯ ಅರಣ್ಯ ಅಧಿಕಾರಿಗಳಿಗೆ ಬಾಡಿಗೆ ಆಧಾರದ ಮೇಲೆ ಐದು ಜೀಪ್ ಮಾದರಿಯ ವಾಹನಗಳನ್ನು ಪಡೆಯಲು ಸರ್ಕಾರದ ಅಧಿಕೃತ ಕೆಲಸ ಕಾರ್ಯಗಳಿಗೆ ಮಾತ್ರ ಉಪಯೋಗಿಸುವ ಟೆಂಡರನ್ನು ದಿನಾಂಕ: 18.07.2022 ರಿಂದ 25.07.2022 ರಂದು ಸಂಜೆ 4.00 ಗಂಟೆಯವರೆಗೆ (ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 27.07.2022 ರಂದು 11.00 ಗಂಟೆಗೆ ಮತ್ತು ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 28.07.2022 ರಂದು 10.00 ಗಂಟೆಯವರೆಗೆ) ತಾಂತ್ರಿಕ ಬಿಡ್‌ನಲ್ಲಿನ ಷರತ್ತುಗಳು ಯಶಸ್ವಿಯಾಗಿದ್ದರೆ ಮಾತ್ರ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು ಹಾಗೂ ಷರತ್ತುಗಳು ಪೂರೈಕೆ ಇಲ್ಲದ ಬಿಡ್‌ಗಳನ್ನು ತಿರಸ್ಕರಿಸಲಾಗುವುದು.) ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ಮೂಲಕ Tender indent No: FD/DCF/SF/VJP/O.S.V/2022-23/CALL-3 ಟೆಂಡರನ್ನು ಕರೆಯಲಾಗಿದೆ. ಹಾಗೂ ಭಾಗವಹಿಸಲಿಚ್ಚಿಸುವವರು ತಮಗೆ ಬೇಕಾದ ಟೆಂಡರ್ ವಿವರಗಳನ್ನು **www.eproc.karnataka.gov.in** ಮೂಲಕ ಟೆಂಡರ್ ನಿಬಂಧನೆ ಇತ್ಯಾದಿ ಮಾಹಿತಿಯನ್ನು ಪಡೆದುಕೊಳ್ಳಬಹುದು.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ,
ಸಾಮಾಜಿಕ ಅರಣ್ಯ ವಿಭಾಗ, ವಿಜಯಪುರ

ವಾಸಾಸಂಇ/ವಿಜಯಪುರ/289/ಎಂಸಿಎ/2022–23

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಅಭಿಯಂತರ ಕಚೇರಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟ

ನಂ:ಗ್ರಾಕುನೀಮತ್ತುನೈವಿ/ಬಾಗಲಕೋಟ/ಪಿಬಿ–2,3,4/ಟೆಂಡರ್/2022–23/762 ದಿನಾಂಕ: 20–07–2022

ಅಲ್ಪಾವಧಿ ಇ–ಪ್ರೋಕ್ಯೂರಮೆಂಟ್–ಟೆಂಡರ ಪ್ರಕಟಣೆ (ದ್ವಿ ಲಕೋಟೆ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಾಗಲಕೋಟ ರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದ್ದು, ವಿವರ ಈ ಕೆಳಗಿನಂತಿದೆ.

Jamkhandi Taluka JJM-2215:
1) Indent No-43627 (**Nyamagoud Vasti**) APT-57.23 Lakhs
2) Indent No-43626 (**Hiremath Vasti**) APT-40.13 Lakhs
3) Indent No-43625 (**Jain Vasti**) APT-49.42 Lakhs
4) Indent No-43624 (**Kannappagol Vasti**) APT-41.45 Lakhs
5) Indent No-43623 (**Teli Vasti**) APT-46.67 Lakhs

Bagalkot Dist lab goods tender: RWSSD/2022- 23/Instrument/ IND573 APT-17.07 Lakhs

Hungund Taluk: Bevinal Indent No-42454 APT- 62.23 lakhs Call-2

1) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಮ್.ಡಿ ಮೊತ್ತ ಇ–ಪ್ರೋಕ್ಯೂರಮೆಂಟ್ ಪ್ರಕಾರ
2) ಟೆಂಡರ್ ಫಾರಂ ಸಲ್ಲಿಸುವ ಅಂತಿಮ ದಿನಾಂಕ: **28–07–2022 ಸಾಯಂಕಾಲ 5.30** ಗಂಟೆಯ ವರೆಗೆ
3) ಹೆಚ್ಚಿನ ವಿವರಗಳಿಗಾಗಿ ಅಂತರ್ಜಾಲದಲ್ಲಿ ನೋಡಬಹುದಾಗಿದೆ. ವಿಳಾಸ www.eproc.karnataka.gov.in.
4) ಪ್ರೀ–ಬಿಡ್ ಮೀಟಿಂಗ್ **ದಿನಾಂಕ: 26–07–2022** (only for goods tender)

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಗ್ರಾಕುನೀಮತ್ತುನೈ ವಿಭಾಗ, ಬಾಗಲಕೋಟ

ವಾ.ಸಾ.ಇ/ಬಾಗಲಕೋಟೆ/289/2022–23/ದೇಶಪಾಂಡೆಪಬ್ಲಿಸಿಟಿ

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಚಿಕ್ಕೋಡಿ.

ನಂ.ಲೋ.ಇ./ಚಿ.ವಿ./ಸ.ಇಂ.–3/ಟೆಂಡರ/2022–23/2269 ದಿನಾಂಕ:20/07/2022

ಅಲ್ಪಾವಧಿ ಇ–ಟೆಂಡರ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ ಲೆಕ್ಕ ಶೀರ್ಷಿಕೆ 8443–ಠೇವಣಿ ವಂತಿಕೆ ಅಡಿ 2 ಕಾಮಗಾರಿಗಳು, 5054–ರಾಜ್ಯ ಹೆದ್ದಾರಿ ಸುಧಾರಣೆ ಅಡಿ 1 ಕಾಮಗಾರಿ ಹಾಗೂ 5054–ಟಿ.ಎಸ್.ಪಿ. ಅಡಿ 1 ಕಾಮಗಾರಿ, ಹೀಗೆ ಒಟ್ಟು 4 ಕಾಮಗಾರಿಗಳು ಇದ್ದು, ಗುತ್ತಿಗೆ ಇಟ್ಟ ಕನಿಷ್ಟ ಮೊತ್ತ ರೂ. 14.47 ಲಕ್ಷ ಹಾಗೂ ಗರಿಷ್ಟ ಮೊತ್ತ ರೂ. 168.08 ಲಕ್ಷ ಇರುವ ಕಾಮಗಾರಿಗಳಿಗೆ ಗುತ್ತಿಗೆ ಆಹ್ವಾನಿಸಲಾಗಿದೆ.

ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು.

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:25–07–2022 ರಂದು (11.00 ಗಂಟೆಗೆ), 2)ಆಕ್ಷೇಪಣೆ –ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:26–07–2022 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:28–07–2022 (ಸಾಯಂಕಾಲ 5.00 ಗಂಟೆಯವರೆಗೆ), 4)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Single Cover System):30–07–2022 (ಸಾಯಂಕಾಲ 4.30 ಗಂಟೆಗೆ), 5)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):30–07–2022 (ಸಾಯಂಕಾಲ 4.30 ಗಂಟೆಗೆ), 6)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ"

ಕಾಮಗಾರಿಯ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ www.eproc.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO-NO-591/MCA/2022-23

ಕರ್ನಾಟಕ ಸರ್ಕಾರ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ ಬಸವನ ಬಾಗೇವಾಡಿ

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2022–23 ನೇ ಸಾಲಿಗೆ ಬಸವನ ಬಾಗೇವಾಡಿ ಶಿಶು ಅಭಿವೃದ್ಧಿ ಯೋಜನೆಯಡಿ ಬರುವ 420 ಅಂಗನವಾಡಿ ಕೇಂದ್ರಗಳಲ್ಲಿಯ 06 ತಿಂಗಳಿಂದ 06 ವರ್ಷದವಗರೆಗಿನ ಮಕ್ಕಳಿಗೆ ಹಾಗು ಮಾತೃಪೂರ್ಣ ಯೋಜನೆಯಡಿ ಗರ್ಭಿಣಿ ಮತ್ತು ಬಾಣಂತಿಯರಿಗೆ ಮೊಟ್ಟೆಗಳನ್ನು ಖರೀದಿಸಿ ವಿತರಿಸಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದೆ. ಟೆಂಡರ್ ವೆಬ್‌ಸೈಟ್ ನಂಬರ http://www.eproc. karnataka.gov.in ಆಗಿರುತ್ತದೆ. **ಟೆಂಡರ್ ಅಂದಾಜು ಮೌಲ್ಯ ರೂ. 3,05,64,144/– ಹಾಗೂ ಇಎಂಡಿ ಮೊತ್ತ ರೂ. 4,58,462/– ಗಳು ಇರುತ್ತದೆ.**

:ಟೆಂಡರ್ ವೇಳಾಪಟ್ಟಿ:

1) **ಟೆಂಡರ್ ಉಲ್ಲೇಖ ಸಂಖ್ಯೆ:** WCD/ICDS/EGG/1/2021/E-597342 **ದಿನಾಂಕ: 24.06.2022**

2) 'ಇ–ಪ್ರೊಕ್ಯೂರ್‌ಮೆಂಟ್' ವೆಬ್‌ಸೈಟ್ http://www.eproc.karnataka.gov.in ನಿಂದ ಟೆಂಡರ್ ದಸ್ತಾವೇಜಿನ ಡೌನ್‌ಲೋಡ್ ಪ್ರಾರಂಭದ **ದಿನಾಂಕ: 19.07.2022**

3) ಪೂರ್ವ ಬಿಡ್ ಸಭೆಯ **ದಿನಾಂಕ: 02.08.2022** ಸಮಯ ಬೆಳಿಗ್ಗೆ 11.00 ಗಂಟೆಗೆ.

4) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಆನ್‌ಲೈನ್ ಪ್ರಶ್ನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ: 11.08.2022** ಸಮಯ ಸಾಯಂಕಾಲ 5.00 ಗಂಟೆಯವರೆಗೆ.

5) ಇ–ಟೆಂಡರ್1 ಅನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ: 18.08.2022** ಸಮಯ ಸಾಯಂಕಾಲ 5.00 ಗಂಟೆಯವರೆಗೆ.

6) ತಾಂತ್ರಿಕ ಬಿಡ್‌ಗಳನ್ನು ಆನ್‌ಲೈನ್‌ನಲ್ಲಿ ತೆರೆಯುವ **ದಿನಾಂಕ: 22.08.2022** ಸಮಯ ಸಾಯಂಕಾಲ 5.00 ಗಂಟೆಯ ನಂತರ.

7) ಹಣಕಾಸು ಬಿಡ್‌ಗಳನ್ನು ತೆರೆಯುವ **ದಿನಾಂಕ: 25.08.2022** ಬೆಳಿಗ್ಗೆ 12.00 ಗಂಟೆಗೆ.

8) **ಟೆಂಡರ್‌ಗಳನ್ನು ತೆರೆಯುವ ಸ್ಥಳ:** ಬಸವನ ಬಾಗೇವಾಡಿ ಶಿಶು ಅಭಿವೃದ್ಧಿ ಯೋಜನೆಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ

9) **ಸಂವಹನಕ್ಕಾಗಿ ವಿಳಾಸ:** ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸ್ತ್ರೀ ಶಕ್ತಿ ಭವನ, ಇಂಗಳೇಶ್ವರ ರಸ್ತೆ, ತಾಲೂಕು:ಬಸವನ ಬಾಗೇವಾಡಿ, ಜಿಲ್ಲೆ:ವಿಜಯಪುರ, ಕರ್ನಾಟಕ–586203. ದೂರವಾಣಿ ಸಂಖ್ಯೆ: +91–9902533883, +918147063403, ಇ–ಮೇಲ್: cdpobgd@gmail.com

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು,
ಶಿಶು ಅಭಿವೃದ್ಧಿ ಯೋಜನೆ, ಬಸವನ ಬಾಗೇವಾಡಿ

ವಾಸಾಸಂಇ/ವಿಜಯಪುರ/295/ಎಂಸಿಎ/2022–23

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ

ಆರೋಗ್ಯ ಸೌಧ, 4ನೇ ಮಹಡಿ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು–560 023
ದೂರವಾಣಿ: 080-2955 7021, ಇ–ಮೇಲ್: pdksaps@gmail.com

ಸಂಖ್ಯೆ : ಕೆಎಸ್‌ಎಪಿಎಸ್/ಟಿಐ/01/2019–20 ದಿನಾಂಕ :21.07.2022

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಟಿವಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ವಿವಿಧ ಎನ್‌ಜಿಒ / ಸಿಬಿಒಗಳಿಂದ ಎಕ್ಸ್‌ಪ್ರೆಸ್ ಆಫ್ ಇಂಟ್‌ರೆಸ್ಟ್ ಕರೆಯಲಾಗಿದ್ದು, ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: **https://eproc.karnataka.gov.in** ಸಂಪರ್ಕಿಸಲು ಕೋರಿದೆ. ಇಒಐಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 12.08.2022.**

ಸಹಿ/– ಯೋಜನಾ ನಿರ್ದೇಶಕರು
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ

ವಾಸಾಸಂಇ/ವಾಪ್ರ/ಜಿಎ/1465/2022–23

ಕೋವಿಡ್–19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ–ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಶಿಶು ಅಭಿವೃದ್ಧಿ ಯೋಜನೆ ನಿಪ್ಪಾಣಿ

ದೂರವಾಣಿ:08338–222523 e-mail :cdponippani@gmail.com

ಕ್ರಸಂ/ಶಿಅಯೋನಿ/ಮಮಅಇ/ಐಸಿಡಿಎಸ್/ಕೋಳಿ–ಮೊಟ್ಟೆ/ಟೆಂಡರ್/2022–23 ದಿನಾಂಕ:20–07–2022

: ಇ–ಟೆಂಡರ್ ಪ್ರಕಟಣೆ :

2022–23 ನೇ ಸಾಲಿನಲ್ಲಿ ನಿಪ್ಪಾಣಿ ತಾಲೂಕಿನ ನಿಪ್ಪಾಣಿ ಶಿಶು ಅಭಿವೃದ್ಧಿ ಯೋಜನೆಯಲ್ಲಿರುವ 468 ಅಂಗನವಾಡಿ ಕೇಂದ್ರಗಳಿಗೆ ಕೋಳಿ ಮೊಟ್ಟೆ ಖರೀದಿಗಾಗಿ ಅರ್ಹ ಟೆಂಡರ್‌ದಾರರಿಂದ ಸಂಖ್ಯೆ:DWCD:2022-23:IND:1820 ದಿನಾಂಕ 19–07–2022 ರಂತೆ ಕೆ.ಟಿ.ಟಿ.ಪಿ ಕಾಯ್ದೆಯನ್ವಯ ಇ–ಟೆಂಡರ್ ಮುಖಾಂತರ ವಿಳಾಸ WWW.eproc.karnataka.gov.in ನಲ್ಲಿ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನಯ ದಿನಾಂಕ:18–08–2022 ರ ಸಂಜೆ:5.00 ಗಂಟೆ, ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ನಿಪ್ಪಾಣಿ ಕಚೇರಿ ನಿಪ್ಪಾಣಿ ಇವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ದೂರವಾಣಿಸಂಖ್ಯೆ:08338–222523 ಮೊಬೈಲ್ ಸಂಖ್ಯೆ 9986816998.

ಸಹಿ/–ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು
ನಿಪ್ಪಾಣಿ

DIPR/BGM/RO-NO-588/MCA/2022-23

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಶಿಶು ಅಭಿವೃದ್ಧಿ ಯೋಜನಾಧಿಕಾರಿರವರ ಕಛೇರಿ, ನಂಜನಗೂಡು,
ಮಿನಿ ವಿಧಾನಸೌಧ, ರೂ.ಸಂ.48, ಗುಂಡ್ಲುಪೇಟೆ ರಸ್ತೆ, ನಂಜನಗೂಡು–571301
ದೂರವಾಣಿ ಸಂಖ್ಯೆ:08221–226168, ಇಮೇಲ್:cdpongud@gmail.com

ಸಂಖ್ಯೆ:ಶಿಅಯೋ.ನಂಗೂಡು.ಕೋ.ಮೊ.ಟೆಂ.ಪ್ರ:2022–23/165 ದಿನಾಂಕ:19.07.2022

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ನಂಜನಗೂಡು ಮೈಸೂರು ಜಿಲ್ಲೆರವರ ವತಿಯಿಂದ 2022–23ನೇ ಸಾಲಿಗೆ 285 ಅಂಗನವಾಡಿಯಲ್ಲಿ ದಾಖಲಾಗಿರುವ ಫಲಾನುಭವಿಗಳಿಗೆ ಮೊಟ್ಟೆ ಪೂರೈಕೆ ಹಾಗೂ ಸಾಗಾಣಿಕೆ ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಆಸಕ್ತ ಸಂಸ್ಥೆಗಳವರು ಸೇವೆಯನ್ನು ಒದಗಿಸಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ **http://eproc.karnataka.gov.in** ರಲ್ಲಿ ತಮ್ಮ ಬಿಡ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದಾಗಿದೆ.

ಸೇವಾ ವಿವರ: ನಂಜನಗೂಡು ಶಿಶು ಅಭಿವೃದ್ಧಿ ಯೋಜನೆ ವ್ಯಾಪ್ತಿಯಲ್ಲಿರುವ ಅಂಗನವಾಡಿ ಕೇಂದ್ರಗಳಲ್ಲಿ ದಾಖಲಾಗಿರುವ ಫಲಾನುಭವಿಗಳಿಗೆ ಮೊಟ್ಟೆ ಪೂರೈಕೆ ಹಾಗೂ ಸಾಗಾಣಿಕೆ ಮಾಡಲು. **ಅಂದಾಜು ಮೊತ್ತ: 1,04,68,224/–,** ಇ.ಎಂ.ಡಿ: **1,57,025/–.**

ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **ದಿನಾಂಕ: 18.07.2022** ರಂದು ಅಪ್‌ಲೋಡ್ ಮಾಡಲಾಗಿದ್ದು, ಇ–ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸಲು ಕೊನೆಯ **ದಿನಾಂಕ: 17.08.2022ರ ಸಂಜೆ 5.00 ಗಂಟೆ.**

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು,
ನಂಜನಗೂಡು

DIPR/MYS/KAVITA/265/2022-23

ಹುಬ್ಬಳ್ಳಿ – ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ನವನಗರ, ಹುಬ್ಬಳ್ಳಿ – 580025

0836–2224098, 2224195, 2224301, 2222616, 2224274, 2222505

ಲೆ.ವಿ/**E-PFD/2022-23/1905** ದಿನಾಂಕ : **18/07/2022**

E-Auction Notification

AUCTION FOR INVESTMENT OF SURPLUS FUNDS THROUGH E-PORTAL OF GOVERNMENT OF KARNATAKA

The details of the e-Auction can be had from there portal of the government of Karnataka at the address below https:// eproc.karnataka.gov.in

The eligible banks as per the criteria listed at Annexure-A who have not registered in the e-procurement portal may do so in order to participate in the bid.

The brief bid notification, the pre qualifying criteria listed at Annexure-A who have not registered in the e-procurement portal may do so in order to participate in the bid.

The brief bid notification the pre qualifying criteria for the bidders, Schedule of bidevents and other details can be accessed from the e-procurement portal of the Government of Karnataka.

Sl. No	Name of Auction	EMD Amount
1.	E-Auction for Investment of surplus funds of HDUDA, Auction Indent No.UDD/2022-23/AUCTION2554	50,000.00 E-Procurement fees Rs.500

Sl. No	Particulars	Date and Time
1	Date and Time upto which auction Notice document can be downloaded	04 -08 -2022 up to 04.00 PM
2	Date and Time to Confirm participation of interest in Auction	05 -08 -2022 up to 04.00 PM
3	Auction Date and Time	06-08-2022 up to 04.00 PM

ಸಹಿ/–ಆಯುಕ್ತರು
ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ ಹುಬ್ಬಳ್ಳಿ

ವಾ.ಸಾ.ಇ/ಧಾ/384/2022–23/ದೇಶಪಾಂಡೆಪಬ್ಲಿಸಿಟಿ

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ,
ಆಣೆಕಟ್ಟು ವಿಭಾಗ, ಆಲಮಟ್ಟಿ. ತಾ:ಬ.ಬಾಗೇವಾಡಿ, ಜಿ:ವಿಜಯಪುರ.
ದೂರವಾಣಿ:08426–281027.ಇಮೇಲ್:dam_division@rediffmail.com

ಸಂ:ಕೃ.ಭಾ.ಜ.ನಿ.ನಿ/ಡಿಬಿ/ಟೆಂಡರ್/2022–23/1386 ದಿನಾಂಕ:19.07.2022

ಅಲ್ಪಾವಧಿ ಸಂಕ್ಷಿಪ್ತ ಟೆಂಡರ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ. ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಆಣೆಕಟ್ಟು ವಿಭಾಗ ಆಲಮಟ್ಟಿ. ತಾ: ಬ.ಬಾಗೇವಾಡಿ ಇವರು ಅರ್ಹ ಗುತ್ತಿಗೆದಾರರಿಗೆ **(1) Outsourcing of collection of Entry fees from the Visitors/tourist for Musical Dancing Fountain, Multimedia Laser Show, 3D Projection Mapping and other 77 acre Landscape gardens i.e., Moghal Garden, Italian early and later, French Garden, etc at Almatti Dam Site for One Year (2022-23) for Rs. 162.75 Lakhs** ಶೇಕಡಾವಾರು ದ್ವಿಲಕೋಟೆಗಳಲ್ಲಿ ಕೆ.ಟಿ.ಪಿ.ಟಿ. ನಿಯಮಗಳನ್ವಯ, ಅರ್ಹ ಬಿಡ್ಡುದಾರರುಗಳಿಂದ ಟೆಂಡರ್ ಅಹ್ವಾನಿಸಿದ್ದು, ಗುತ್ತಿಗೆದಾರರುಗಳು ಭದ್ರತಾ ಠೇವಣಿಯನ್ನು ಇ–Cash ನಲ್ಲಿ ತುಂಬಿ ತಮ್ಮ ಬಿಡ್ಡುಗಳನ್ನು ದ್ವಿಲಕೋಟೆ ಪದ್ಧತಿಯಲ್ಲಿ ಸಲ್ಲಿಸಬಹುದಾಗಿದೆ. ಮೊದಲ ಲಕೋಟೆಯು ತಾಂತ್ರಿಕ ಬಿಡ್ಡದಾಗಿದ್ದು ಅಗತ್ಯವಿರುವ ದಾಖಲೆಗಳನ್ನು ಒಳಗೊಂಡಿದ್ದು ಪ್ಯಾರಾ 1.1 ರಂತೆ, ಎರಡನೇ ಲಕೋಟೆಯು ಆರ್ಥಿಕ ಬಿಡ್ಡಾಗಿದ್ದು ತಾಂತ್ರಿಕ ಬಿಡ್ಡನಲ್ಲಿ ಅರ್ಹರಾದವರ ಆರ್ಥಿಕ ಬಿಡ್ಡುಗಳನ್ನು ಮಾತ್ರ ತೆರೆಯಲಾಗುವುದು.

1) ಟೆಂಡರ ಡಾಕುಮೆಂಟ್ಸಗಳನ್ನು ವೆಬ್‌ಸೈಟನಲ್ಲಿ ನೋಡಿಕೊಳ್ಳುವ / ಡೌನಲೋಡ ಮಾಡಿಕೊಳ್ಳುವ ದಿನಾಂಕ ಹಾಗೂ ಸ್ವಿಕರಿಸುವ ಕೊನೆಯ ದಿನಾಂಕ: **20.07.2022 ರಿಂದ 03.08.2022 ಸಾಯಂಕಾಲ 5.00 ಘಂಟೆಯವರೆಗೆ** 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **05.08.2022 ಮುಂಜಾನೆ 11.00 ಘಂಟೆಗೆ.** 3) ಆರ್ಥಿಕ ಬಿಡ್ ತೆರೆಯುವ ದಿನಾಂಕ: **10.08.2022 ಮುಂಜಾನೆ 11.00 ಘಂಟೆಗೆ.**

ಟೆಂಡರಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ ಉಳಿದಂತೆ ಟೆಂಡರನಲ್ಲಿ ಯಾವುದೇ ಬದಲಾವಣೆಗಳನ್ನು ಈ ವೆಬ್‌ಸೈಟನ್ನು ಸಂಪರ್ಕಿಸಿ ಪಡೆಯಬಹುದು. http://www.eproc.karnataka.gov.in ಸಂಪರ್ಕಿಸಬೇಕಾದ ಕಛೇರಿ ದೂರವಾಣಿ ಸಂಖ್ಯೆ: 08426–281027.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ.

ವಾಸಾಸಂಇ/ವಿಜಯಪುರ/299/ಎಂಸಿಎ/2022–23

ಕರ್ನಾಟಕ ಸರ್ಕಾರ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಹೊಸಪೇಟೆ

ಸಂಖ್ಯೆ: ಶಿಅಯೊಹೊ/ಪ.ಪ್ರ/2022–23 ದಿನಾಂಕ: 21.07.2022

ಪ್ರಕಟಣೆ

ಶಿಶು ಅಭಿವೃದ್ಧಿಯೋಜನೆ ಹೊಸಪೇಟೆ ವಿವಿಧ ಗ್ರಾಮಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 340 ಅಂಗನವಾಡಿ ಕೇಂದ್ರಗಳಲ್ಲಿ ದಾಖಲಾಗಿರುವ 06 ತಿಂಗಳಿಂದ 03 ವರ್ಷದ ಒಳಗಿನ ಸಾಧಾರಣ ಅಪೌಷ್ಠಿಕ ಮಕ್ಕಳಿಗೆ, 3 ವರ್ಷದಿಂದ 6 ವರ್ಷದ ಮಕ್ಕಳಿಗೆ ಹಾಗೂ ಮಾತೃಪೂರ್ಣ ಯೋಜನೆಯಡಿ ಗರ್ಭಿಣಿ ಮತ್ತು ಬಾಣಂತಿ ಫಲಾನುಭವಿಗಳಿಗೆ ಕೋಳಿ ಮೊಟ್ಟೆಗಳನ್ನು ವಿತರಿಸಲುತಾಲೂಕು ಮಟ್ಟದಲ್ಲಿಗುತ್ತಿಗೆದಾರರನ್ನು ನೇಮಕ ಮಾಡುವ ಸಲುವಾಗಿ ನೋಂದಾಯಿಸಿದ ಅರ್ಹಟೆಂಡರ್‌ದಾರರಿಂದ ಇ–ಪ್ರೋಕ್ಯುರ್‌ಮೆಂಟ್‌ಟೆಂಡರ್ ಮುಖಾಂತರ ಹೊರಡಿಸಲಾಗಿರುತ್ತದೆ. ಟೆಂಡರ್ ಹಾಕಲು ಇಚ್ಛೆಯುಳ್ಳವರು ಅರ್ಜಿ ಫಾರಂಗಳನ್ನು ದಿನಾಂಕ 21.07.2022 ರಿಂದ 08.08.2022 ರಂದು ಸಂಜೆ 5:30 ರವರೆಗೆ https://eproc.karnataka.gov.in ಮುಖಾಂತರ ಅರ್ಜಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು, ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, 16ನೇ ವಾರ್ಡ ಬಸವೇಶ್ವರ ಬಡಾವಣೆ ಸಪ್ತಗಿರಿ ಶಾಲೆ ಹತ್ತಿರ, ಹೊಸಪೇಟೆಕಛೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– ಶಿಶು ಅಭಿವೃದ್ಧಿಯೋಜನಾಧಿಕಾರಿಗಳು, ಹೊಸಪೇಟೆ.

ಡಿಐಪಿಆರ್/ಹೊಸಪೇಟೆ/57/ಎಂಸಿಎ/2022–23

ಕರ್ನಾಟಕ ಸರಕಾರ

ಮಹಿಳಾ ಮತು ಮಕ್ಕಳ ಅಭಿವೃದ್ಧಿ ಇಲಾಖೆ ಶಿಶು ಅಭಿವೃದ್ಧಿ ಯೋಜನೆ ಸವದತ್ತಿ

ದೂರವಾಣಿ ಸಂಖ್ಯೆ:08330–295150 E-mail:cdposaundatti@yahoo.com

ಕ್ರ.ಸಂ:ಶಿಅಯೋಸ:ಮಮಅಇ:ಐಸಿಡಿಎಸ್:ಮೊಟ್ಟೆ:ಟೆಂಡರ್:2022–23 ದಿ:20/07/2022

: ಇ–ಟೆಂಡರ್ ಪ್ರಕಟಣೆ :

2022–23 ನೇ ಸಾಲಿನಲ್ಲಿ ,ಸವದತ್ತಿ ಶಿಶು ಅಭಿವೃದ್ಧಿ ಯೋಜನೆಯಲ್ಲಿರುವ 343 ಅಂಗನವಾಡಿ ಕೇಂದ್ರಗಳಿಗೆ ಕೋಳಿ ಮೊಟ್ಟೆ ಖರೀದಿಗಾಗಿ ಅರ್ಹ ಟೆಂಡರ್‌ದಾರರಿಂದ ಸಂಖ್ಯೆ:DWCD:2022-23:IND:1798 ದಿ:19/07/2022 ರಂತೆ ಕೆ.ಟಿ.ಟಿ.ಪಿ ಕಾಯ್ದೆಯನ್ವಯ ಇ–ಟೆಂಡರ್ ಮುಖಾಂತರ ವಿಳಾಸ WWW.eproc.karnataka.gov.inನಲ್ಲಿ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:18/08/2022 ರ ಸಂಜೆ:5.00 ಗಂಟೆ. ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಸವದತ್ತಿ ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ದೂರವಾಣಿ ಸಂಖ್ಯೆ:08334–295150 ಮೊಬೈಲ್ ನಂ–9591123941.

ಸಹಿ/–ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು
ಸವದತ್ತಿ

DIPR/BGM/RO-NO-584/MCA/2022-23

ಕರ್ನಾಟಕ ಸರಕಾರ

ಮಹಿಳಾ ಮತು ಮಕ್ಕಳ ಅಭಿವೃದ್ಧಿ ಇಲಾಖೆ ಶಿಶು ಅಭಿವೃದ್ಧಿ ಯೋಜನೆ ಬೈಲಹೊಂಗಲ.

E-mail: cdpo.bailhongal@yahoo.in

ಕ್ರ.ಸಂ:ಶಿಅಯೋಬೈ:ಮಮಅಇ:ಐಸಿಡಿಎಸ್:ಮೊಟ್ಟೆ:ಟೆಂಡರ್:2022–23 ದಿ:19/07/2022

: ಇ–ಟೆಂಡರ್ ಪ್ರಕಟಣೆ :

2022–23 ನೇ ಸಾಲಿನಲ್ಲಿ ಬೈಲಹೊಂಗಲ ಶಿಶು ಅಭಿವೃದ್ಧಿ ಯೋಜನೆಯಲ್ಲಿರುವ 435 ಅಂಗನವಾಡಿ ಕೇಂದ್ರಗಳಿಗೆ ಕೋಳಿ ಮೊಟ್ಟೆ ಖರೀದಿಗಾಗಿ ಅರ್ಹ ಟೆಂಡರ್‌ದಾರರಿಂದ ಸಂಖ್ಯೆ:DWCD:2022-23:IND:1832 ದಿ:19/07/2022 ರಂತೆ ಕೆ.ಟಿ.ಟಿ.ಪಿ ಕಾಯ್ದೆಯನ್ವಯ ಇ–ಟೆಂಡರ್ ಮುಖಾಂತರ ವಿಳಾಸ WWW.eproc.karnataka.gov.in ನಲ್ಲಿ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 18/08/2022 ರ ಸಂಜೆ:5.00 ಗಂಟೆ. ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಬೈಲಹೊಂಗಲ ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಮೊಬೈಲ್ ನಂ–9481722800/ 8150013223

ಸಹಿ/–ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು
ಬೈಲಹೊಂಗಲ

DIPR/BGM/RO-NO-586/MCA/2022-23

ಕರ್ನಾಟಕ ಸರ್ಕಾರ

ತಾಲ್ಲೂಕು ಪಂಚಾಯತ್ ಕುಷ್ಟಗಿ (ತಾ) ಶಿಶು ಅಭಿವೃದ್ಧಿ ಯೋಜನಾ ಕಛೇರಿ, ಕುಷ್ಟಗಿ

No:ICDS Kushtagi/Food/Tran/Tend/2022-23 Date: 18.06.2022

ಮರು ಟೆಂಡರ್ ಪ್ರಕಟಣೆ

ವಿಷಯ: ಶಿಶು ಅಭಿವೃದ್ಧಿ ಯೋಜನೆಯ ಕುಷ್ಟಗಿ ಇಲ್ಲಿನ ಪೂರಕ ಪೌಷ್ಠಿಕ ಆಹಾರ ಕಾರ್ಯಕ್ರಮದಡಿಯಲ್ಲಿ 2022–23ನೇ ಸಾಲಿಗೆ ಕುಷ್ಟಗಿ ತಾಲ್ಲೂಕಿನ 392 ಅಂಗನವಾಡಿ ಕೇಂದ್ರಗಳಿಗೆ ಆಹಾರ ಸಾಗಣಿಕೆ ಮಾಡಲು ಮತ್ತು ಎಫ್.ಸಿ.ಐ, ಕೊಪ್ಪಳ ಇವರಿಂದ ಪಡಿತರ ಅಕ್ಕಿ/ಗೋಧಿ ಎತ್ತುವಳಿ ಮಾಡಲು ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಆಹಾರ ಸಾಗಾಣಿಕೆ ಗುತ್ತಿಗೆದಾರರನ್ನು ನೇಮಕ ಮಾಡುವ ಬಗ್ಗೆ.

ಉಲ್ಲೇಖ:–1) ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಕುಷ್ಟಗಿ ಇವರ ಅನುಮೋದನೆ ದಿನಾಂಕ: 18.07.2022

ಮೇಲ್ಕಂಡ ಉಲ್ಲೇಖ (1) ರನ್ವಯ 2022–23ನೇ ಸಾಲಿನಲ್ಲಿ ಒಂದು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಶಿಶು ಅಭಿವೃದ್ಧಿ ಯೋಜನೆ ಕುಷ್ಟಗಿ ಇಲ್ಲಿನ ಪೂರಕ ಪೌಷ್ಠಿಕ ಆಹಾರ ಕಾರ್ಯಕ್ರಮದಡಿ ಎಂ.ಎಸ್.ಪಿ.ಸಿ ಘಟಕದ ಉಗ್ರಾಣದಿಂದ ಕುಷ್ಟಗಿ ತಾಲ್ಲೂಕಿನ 392 ಅಂಗನವಾಡಿ ಕೇಂದ್ರಗಳಿಗೆ ಆಹಾರ ಪದಾರ್ಥಗಳನ್ನು ಸಾಗಾಣಿಕೆ ಮಾಡಲು ಮತ್ತು ಭಾರತೀಯ ಆಹಾರ ನಿಗಮ ಕೊಪ್ಪಳ ಗೋದಾಮಿನಿಂದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಕುಷ್ಟಗಿ ಗೋದಾಮಿಗೆ ಪಡಿತರ ಆಹಾರ ಸಾಮಾಗ್ರಿಗಳ ಸಾಗಾಣಿಕೆ ಮಾಡಲು ಸಾಗಾಣಿಕೆ ಗುತ್ತಿಗೆದಾರರನ್ನು ನೇಮಕ ಮಾಡುವ ಸಲುವಾಗಿ ಕೊಪ್ಪಳ ಜಿಲ್ಲೆಯ ವ್ಯಾಪ್ತಿಗೊಳಪಟ್ಟ ನೊಂದಾಯಿಸಿದ ಮಹಿಳಾ ಮಂಡಳಿ ಮತ್ತು ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳು, ಗ್ರಾಮ ಸಮುದಾಯಗಳಿಂದ ಇ–ಪ್ರೋಕ್ಯೂರ್‌ಮೆಂಟ್ ಮೂಲಕ ದ್ವಿ ಲಕೋಟೆಯಲ್ಲಿ ಮರುಟೆಂಡರ್ ಕರೆಯಲಾಗಿದೆ.

ಸಾಗಾಣಿಕೆ ವಿವರ (ಪ್ರತ್ಯೇಕವಾಗಿ ಧರಗಳನ್ನು ನಮೂದಿಸುವುದು)

01. ***ಕುಷ್ಟಗಿ:*** **ಇಂದ:** ಎಂ.ಎಸ್.ಪಿ.ಸಿ/ಕಛೇರಿ ಉಗ್ರಾಣ ಕುಷ್ಟಗಿ. **ಇವರಿಗೆ:** *ಕುಷ್ಟಗಿ ತಾಲ್ಲೂಕಿನಲ್ಲಿರುವ ಗ್ರಾಮಗಳಲ್ಲಿನ 392 ಅಂಗನವಾಡಿ ಕೇಂದ್ರಗಳಿಗೆ.* **02** ***ಕುಷ್ಟಗಿ:*** **ಇಂದ:** ಭಾರತೀಯ ಆಹಾರ ನಿಗಮ, ಕೊಪ್ಪಳ ಗೋದಾಮಿನಿಂದ ಪಡಿತರ ಧಾನ್ಯ ಸಾಗಾಣಿಕೆ. **ಇವರಿಗೆ:** *ಪಡಿತರ ಸಾಮಾಗ್ರಿಗಳನ್ನು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ/ ಎಂ.ಎಸ್.ಪಿ.ಸಿಉಗ್ರಾಣ.* **03** ***ಕುಷ್ಟಗಿ:*** **ಇಂದ:** ಸಿ.ಡಿ.ಪಿ.ಓ ಗೋದಾಮಿನಿಂದ. **ಇವರಿಗೆ:** *ಎಂ.ಎಸ್.ಪಿ.ಟಿ.ಸಿ ಘಟಕದ ಗೋದಾಮಿಗೆ ಸಾಗಾಣಿಕೆ*

ಸಲ್ಲಿಸುವ ವಿಧಾನ: ಟೆಂಡರ್ ಸಲ್ಲಿಸಲು ಇಚ್ಚೆಯುಳ್ಳವರು ಅರ್ಜಿ ಫಾರಂಗಳನ್ನು ದಿನಾಂಕ:**19.07.2022** ರಿಂದ ***ದಿನಾಂಕ: 27.07.2022*** ರವರೆಗೆ e–ಪ್ರಕ್ಯೂರ್ ಮೆಂಟ್ ಪೋರ್ಟಲ್ www.eproc. Karnataka. gov.in ಮುಖಾಂತರ CDPO/ AWC/FS/KST/2022–23 ಟೆಂಡರ್ ಸಂಖ್ಯೆಯ ಅರ್ಜಿಯನ್ನು ಡೌನ್ ಲೋಡ್ ಮಾಡಿಕೊಳ್ಳತಕ್ಕದ್ದು.

ಭರ್ತಿ ಮಾಡಿದ ಅರ್ಜಿ ಫಾರಂಗಳನ್ನು e–ಪ್ರಕ್ಯೂರ್‌ಮೆಂಟ್ ಮೂಲಕವೇ *ದಿನಾಂಕ:27.07.2022* ಮಧ್ಯಾಹ್ನ 05.00 ಗಂಟೆಯೊಳಗಾಗಿ ಸಲ್ಲಿಸತಕ್ಕದ್ದು.

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಕುಷ್ಟಗಿ, ಜಿಲ್ಲಾ ಕೊಪ್ಪಳ

ಡಿಐಪಿಆರ್/ಕೊಪ್ಪಳ/244/ಎಂಸಿಎ/2022–23

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ಘಟಕ

ಮುಖ್ಯ ಇಂಜಿನಿಯರ್‌ರವರ ಕಛೇರಿ, ಆರೋಗ್ಯ ಸೌಧ, 3ನೇ ಮಹಡಿ,
ಕುಷ್ಠರೋಗ ಆಸ್ಪತ್ರೆ ಆವರಣ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ,
ಬೆಂಗಳೂರು – 560 023. ದೂರವಾಣಿ : 080–2955 7023
ಇಮೇಲ್ : **cekhsdrp@gmail.com, cekhsdrp-hfws@karnataka.gov.in**

ಸಂ.: ಆಕುಕ/ಇಂ.ಘ/ಮು.ಇಂ/ತಾ.ಸ–3/ಸ.ಇಂ–6/ಟಿಎನ್‌ಡಿ/22–23/988 ದಿನಾಂಕ: 20–07–2022

ಟೆಂಡರ್ ಪ್ರಕಟಣೆ

ಮುಖ್ಯ ಇಂಜಿನಿಯರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಘಟಕ, ಬೆಂಗಳೂರುರವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಒಂದನೇ ದರ್ಜೆ ಗುತ್ತಿಗೆದಾರರಿಂದ, ಈ ಕೆಳಕಂಡ ಕಾಮಗಾರಿಗೆ ಟೆಂಡರ್‌ನ್ನು ದ್ವಿ ಟೆಂಡರ್ ದಾಸ್ತಾವೇಜು ಪದ್ಧತಿಯಲ್ಲಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ **(ಇ–ಪ್ರೊಕ್ಯೂರ್‌ಮೆಂಟ್)** ಮೂಲಕ ಆಹ್ವಾನಿಸಲಾಗಿದೆ.

ಕಾಮಗಾರಿಯ ವಿವರ : 1) ಬೆಂಗಳೂರಿನ ಮಾಗಡಿ ರಸ್ತೆಯಲ್ಲಿರುವ ರಾಜ್ಯ ಆರೋಗ್ಯ ಸಂಸ್ಥೆಯ ಆವರಣದಲ್ಲಿನ (1) ಆಡಳಿತಾತ್ಮಕ ಬ್ಲಾಕ್ ಕಟ್ಟಡದ ದುರಸ್ಥಿ ಮತ್ತು ನವೀಕರಣ ಹಾಗೂ (2) ಸ್ಕಿಲ್ ಲ್ಯಾಬ್ ನವೀಕರಣ ಕಾಮಗಾರಿ. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 168.00. ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ) : 2.52. ಕಾಲಾವಧಿ (ಮಳೆಗಾಲ ಸೇರಿದಂತೆ) : 06 ತಿಂಗಳು.

ಟೆಂಡರ್ ಪ್ರಕ್ರಿಯೆಗಳ ದಿನಾಂಕಗಳು :

1) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ : **06–08–2022 ರಂದು 16.00 ಗಂಟೆಯವರೆಗೆ.**

2) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್) : **08–08–2022 ರಂದು 16.00 ಗಂಟೆಗೆ.**

ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through e-Procurement Platform) www.eproc.karnataka.gov.in ದಿಂದ ಡೌನಲೋಡ್ ಮಾಡಿಕೊಳ್ಳಬಹುದು. ಇ.ಎಂ.ಡಿ. ಮೊತ್ತವನ್ನು ಮತ್ತು ಟೆಂಡರ್ ಪ್ರಕ್ರಿಯೆ ಶುಲ್ಕವನ್ನು www.eproc.karnataka.gov.in ನಲ್ಲಿ ವಿದ್ಯುನ್ಮಾನ (electronic) ವಿಧಾನದಲ್ಲಿ ಪಾವತಿಸ ಬಹುದಾಗಿರುತ್ತದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ (e-Procurement Platform) ನೊಂದಾಯಿಸುವ ಅಗತ್ಯ ಇದೆ.

ಟಿಪ್ಪಣಿ : 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡುವಿಕೆ / ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ / ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ.

2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/–
ಮುಖ್ಯ ಇಂಜಿನಿಯರ್,
ಆ&ಕು.ಕ.ಇ., ಇಂಜಿನಿಯರಿಂಗ್ ಘಟಕ, ಬೆಂಗಳೂರು.

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ತಡೆಗೋಡೆ ಕುಸಿದು ನಾಲ್ವರು ಕಟ್ಟಡ ಕಾರ್ಮಿಕರ ಸಾವು

ಹೊಸಕೋಟೆ (ಬೆಂಗಳೂರು ಗ್ರಾಮಾಂತರ ಜಿಲ್ಲೆ): ತಾಲ್ಲೂಕಿನ ಜಡಿಗೇನಹಳ್ಳಿ ಹೋಬಳಿಯ ಕಾಟರಸನಹಳ್ಳಿಯಲ್ಲಿ ಗುರುವಾರ ತಾತ್ಕಾಲಿಕ ಶೆಡ್ ಮೇಲೆ ಹುಡಾನ್ ಕಂಪನಿಗೆ ಸೇರಿದ ಗೋದಾಮಿನ ತಡೆಗೋಡೆ ಕುಸಿದು ಬಿಹಾರ ಮೂಲದ ನಾಲ್ವರು ಕಟ್ಟಡ ಕಾರ್ಮಿಕರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮನೋಜ್ ಕುಮಾರ್ ಸದಾಯ್ (35), ರಾಮ್ ಕುಮಾರ್ ಸದಾಯ್ (25), ನಿತೀಶ್ ಕುಮಾರ್ ಸದಾಯ್ (22) ಮತ್ತು ಮಣಿಕಾನ್ ದಾಸ್ (28) ಮೃತಪಟ್ಟವರು.

ಸುನಿಲ್ ಮಂಡಲ್ (25), ಶಂಭು ಮಂಡಲ್ (28), ದಿಲೀಪ್ (24) ಹಾಗೂ ದುರ್ಗೇಶ್(29) ಗಂಭೀರವಾಗಿ ಗಾಯಗೊಂಡಿದ್ದಾರೆ. ಇವರಿಗೆ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಈ ಕಾರ್ಮಿಕರು ಹುಡಾನ್ ಗೋದಾಮಿನ ಪಕ್ಕದಲ್ಲಿನ ನಿರ್ಮಾಣ ಹಂತದ ಸೌರ್ವೆರ್ಯ ವಸತಿ ಸಮುಚ್ಚಯದಲ್ಲಿ ಕೆಲಸ ಮಾಡುತ್ತಿದ್ದರು. ಊಟ ಮುಗಿಸಿ ರಾತ್ರಿ ಶೆಡ್‌ನಲ್ಲಿ ಮಲಗಿದ್ದರು. ಬೆಳಗಿನ ಜಾವ ಸುಮಾರು 3 ಗಂಟೆಗೆ ತಡೆಗೋಡೆ ಕುಸಿದು ಬಿದ್ದಿದೆ.

ಈ ಕಾರ್ಮಿಕರು ನಾಲ್ಕು ದಿನಗಳ ಹಿಂದಷ್ಟೇ ಬಿಹಾರದಿಂದ ಕೆಲಸಕ್ಕೆ ಬಂದಿದ್ದರು. ಇದುವರೆಗೂ ಕಾರ್ಮಿಕ ಇಲಾಖೆಯಲ್ಲಿ ನೋಂದಣಿ ಮಾಡಿಸಿರಲಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಸತಿ ಸಮುಚ್ಚಯದ ಗುತ್ತಿಗೆದಾರ ಮತ್ತು ಹುಡಾನ್ ಕಂಪನಿ ವಿರುದ್ಧ ತಿರುಮಲಶೆಟ್ಟಿಹಳ್ಳಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕೋವಿಡ್: ಪ್ರಕರಣ ಮತ್ತಷ್ಟು ಹೆಚ್ಚಳ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಮತ್ತಷ್ಟು ಏರಿದೆ. ಗುರುವಾರ 1,552 ಮಂದಿಗೆ ಸೋಂಕು ತಗುಲಿದೆ. ಒಂದು ದಿನದಲ್ಲಿ 33,671 ಪರೀಕ್ಷೆಗಳನ್ನು ನಡೆಸಲಾಗಿದೆ. ಸೋಂಕು ದೃಢ ಪ್ರಮಾಣ ಶೇ 4.60 ರಷ್ಟಿದೆ.

ಯಾದಗಿರಿ ಹೊರತುಪಡಿಸಿ ಉಳಿದ ಜಿಲ್ಲೆಗಳಲ್ಲಿ ಹೊಸದಾಗಿ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ 1,285 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ರಾಯಚೂರಿನಲ್ಲಿ 80 ವರ್ಷದ ವೃದ್ಧರೊಬ್ಬರು ಮೃತಪಟ್ಟಿದ್ದಾರೆ.

ಬೆಳಗಾವಿ ಜಿಲ್ಲೆಯಲ್ಲಿ 37, ಧಾರವಾಡ 35, ಮೈಸೂರು 31, ಕಲಬುರಗಿ 20, ಕೋಲಾರ 16, ಕೊಡಗು 15, ಬಳ್ಳಾರಿ ಹಾಗೂ ಉಡುಪಿ ತಲಾ 14, ಬೆಂಗಳೂರು ಗ್ರಾಮಾಂತರ ದಲ್ಲಿ 11 ಪ್ರಕರಣಗಳು ದೃಢಪಟ್ಟಿವೆ. ಉಳಿದ ಜಿಲ್ಲೆಗಳಲ್ಲಿ ಹತ್ತಕ್ಕಿಂತ ಕಡಿಮೆ ಇವೆ.

ಕೋವಿಡ್ ಪೀಡಿತರಲ್ಲಿ 1,384 ಮಂದಿ ಗುಣಮುಖರಾಗಿದ್ದಾರೆ. ಸಕ್ರಿಯ ಪ್ರಕರಣಗಳ ಸಂಖ್ಯೆ 8,033ಕ್ಕೆ ಏರಿದೆ. ಬೆಂಗಳೂರಿನಲ್ಲಿಯೇ 7,107 ಮಂದಿ ಸೋಂಕಿತರಿದ್ದಾರೆ.

ರಾಜ್ಯದಲ್ಲಿ ಪ್ರಕರಣಗಳ ಒಟ್ಟು ಸಂಖ್ಯೆ 39.91 ಲಕ್ಷಕ್ಕೆ ಏರಿಕೆಯಾಗಿದೆ. ಸೋಂಕಿತರಲ್ಲಿ 39.43 ಲಕ್ಷ ಮಂದಿ ಚೇತರಿಸಿಕೊಂಡಿದ್ದಾರೆ. ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆ 40,090ಕ್ಕೆ ತಲುಪಿದೆ.

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಹಾಸನ ವಿಭಾಗ, ಹಾಸನ

ಸಂ:ಕಾ.ಇಂ:ಲೋ.ಇಃಹಾವಿ:ಹಾಸನ:ಸಇಂ–1/2022–23 ದಿನಾಂಕ.20.07.2022

ಅಲ್ಪಾವಧಿ ಟೆಂಡರ್ ಮುಂದೂಡಿಕೆ ಪ್ರಕಟಣೆ

ಈ ಕಛೇರಿಯ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 05/2022–23 ದಿನಾಂಕ 24.06.2022 ರಲ್ಲಿ ಕರೆಯಲಾಗಿದ್ದ ಕ್ರಮ ಸಂಖ್ಯೆ 4 & 5 ರ ಕಾಮಗಾರಿಗಳಿಗೆ ಬಿಡ್ಡನ್ನು ಸಲ್ಲಿಸಲು ನಿಗಧಿಪಡಿಸಿರುವ ಕಡೆಯ ದಿನಾಂಕ. 01.08.2022–16.00 ಗಂಟೆ. ಟೆಂಡರ್‌ನ ನಿಗಧಿತ ನಮೂನೆಗಳನ್ನು http://www.eproc.karnataka.gov.in ನಲ್ಲಿ ಡೌನಲೋಡ್ ಮಾಡಿ ಅವಶ್ಯ ದಾಖಲಾತಿಗಳೊಂದಿಗೆ ಹಾಗೂ ನಿಗಧಿತ ಇಎಂಡಿಯೊಂದಿಗೆ ಅಪ್‌ಲೋಡ್ ಮಾಡಬಹುದಾಗಿದೆ ಉಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ. ಹೆಚ್ಚಿನ ವಿವರಗಳನ್ನು ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಹಾಸನ ವಿಭಾಗ, ಹಾಸನ ಇವರಿಂದ ಕಛೇರಿ ವೇಳೆಯಲ್ಲಿ ಪಡೆಯುವುದು.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಲೋಇ
ಹಾಸನ ವಿಭಾಗ, ಹಾಸನ.

ವಾಸಾಸಂಇ/ಹಿಸನಿ/ಹಾಸನ/ಎಂಸಿಎ/325/2022–23

ಜಿಲ್ಲಾಧಿಕಾರಿಗಳ ಕಾರ್ಯಾಲಯ

ಜಿಲ್ಲಾ ನಗರಾಭಿವೃದ್ಧಿ ಕೋಶ

ರಾಮನಗರ ಜಿಲ್ಲೆ, ರಾಮನಗರ – 562 159.
ದೂ. : 080–2727 4108. ಇ–ಮೇಲ್ : dudc_ramangara@yahoo.co.in

ಸಂ. : ರಾಜಿನಕೋ/ಎಂಯುಎನ್(1)/ಅಮೃತ ನ–4/ರಾಮನಗರ/ಸಿಆರ್/45/2022–23
ದಿನಾಂಕ : 20–07–2022

ಟೆಂಡರ್ ಅಧಿಸೂಚನೆ

ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) 4ನೇ ಹಂತದ ಯೋಜನೆಯ ಈ ಕೆಳಕಂಡ ಕಾಮಗಾರಿಗಳಿಗಾಗಿ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ರಾಮನಗರ ಜಿಲ್ಲೆ, ರಾಮನಗರ ರವರು 1ನೇ ದರ್ಜೆ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

1) ಕಾಮಗಾರಿಯ ವಿವರ : ಅಮೃತ ನಗರೋತ್ಥಾನ (ಮುನಿಸಿಪಾಲಿಟಿ) 4ನೇ ಹಂತದ ಯೋಜನೆಯಡಿ ರಾಮನಗರ ಜಿಲ್ಲೆಯ ರಾಮನಗರ ನಗರ ಸಭೆ ವ್ಯಾಪ್ತಿಯಲ್ಲಿ ಮಳೆ ನೀರು ಚರಂಡಿ ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಗಳು (ಇಂಡೆಂಟ್ ನಂ. DMA/2022-23/OW/WORK INDENT_133729), ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) : 1112.81 (ಜಿಎಸ್‌ಟಿ ಹೊರತುಪಡಿಸಿ), ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ) : 15.00, ಗುತ್ತಿಗೆ ಅವಧಿ : 18 ತಿಂಗಳು.

ಆಸಕ್ತಿಯುಳ್ಳ 1ನೇ ದರ್ಜೆ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರಂನಲ್ಲಿ ನೊಂದಾಯಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸುವುದು. ಗುತ್ತಿಗೆದಾರರು ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ **www.eproc.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಂಡು ವಿದ್ಯುನ್ಮಾನ ಮೂಲಕವೇ **www.eproc.karnataka.gov.in** ನಲ್ಲಿ ಸಲ್ಲಿಸುವುದು. ಇ.ಎಂ.ಡಿ. ಮತ್ತು ಟೆಂಡರ್ ಸಂಸ್ಕರಣಾ ಶುಲ್ಕವನ್ನು ಇ–ಪ್ರೊಕ್ಯೂರ್‌ಮೆಂಟ್ ಆನ್‌ಲೈನ್ ಮೂಲಕವೇ ಪಾವತಿಸುವುದು.

1) ಪೂರ್ವಭಾವಿ ಸಭೆ (ಪ್ರೀ ಬಿಡ್) : 12–08–2022 ರ ಬೆಳಿಗ್ಗೆ 11.00 ಗಂಟೆಗೆ.
2) ಪೂರ್ಣಗೊಳಿಸಿದ ಟೆಂಡರ್ ದಸ್ತಾವೇಜುಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : 23–08–2022 ರ ಸಂಜೆ 5.30 ಗಂಟೆಗೆ. 3) ಟೆಂಡರ್‌ಗಳನ್ನು (ತಾಂತ್ರಿಕ ಬಿಡ್) ತೆರೆಯುವ ದಿನಾಂಕ : 25–08–2022 ರ ಬೆಳಿಗ್ಗೆ 11.00 ಗಂಟೆಗೆ.

ಟೆಂಡರ್ ಷರತ್ತುಗಳು ಮತ್ತು ಹೆಚ್ಚಿನ ಮಾಹಿತಿಗಳನ್ನು ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ಟೆಂಡರ್‌ನ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮಾತ್ರ ಅಧಿಸೂಚಿಸಲಾಗುವುದು. ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಜಿಲ್ಲಾ ನಗರಾಭಿವೃದ್ಧಿ ಕೋಶ,
ರಾಮನಗರ ಜಿಲ್ಲೆ, ರಾಮನಗರ.

ಡಿಐಪಿಆರ್/ರಾಮನಗರ/137/ಮಣಿಪಾಲ್/2022–23

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ತುಮಕೂರು ಪ್ರಾದೇಶಿಕ ವಿಭಾಗ, ತುಮಕೂರು

ಇ–ಮೇಲ್: dcftmk_dcftmk@yahoo.co.in
ಸಂಖ್ಯೆ–ಎ/ಬಿಯುಡಿ/ಕಾಂಪಾ/ಎನ್‌ಪಿವಿ/ಟೆಂಡರ್/ಸಿಆರ್–33/2022–23
ದಿನಾಂಕ: 18.07.2022

ತಿದ್ದುಪಡಿ

ವಿಷಯ: 2022–23ನೇ ಸಾಲಿನಲ್ಲಿ ವಿವಿಧ ಯೋಜನೆಯಡಿ ವಿಭಾಗದ ಎಲ್ಲಾ ವಲಯಗಳಲ್ಲಿ ಮುಂಗಡ ಕಾಮಗಾರಿ, ವಾಚ್‌ಟವರ್ ನಿರ್ಮಾಣ, ಸಿ.ಪಿ.ಟಿ, ಚೈನ್‌ಲಿಂಕ್ ಮೆಷ್ ನಿರ್ಮಾಣ ಹಾಗೂ ಇನ್ನಿತರೆ ಕಾಮಗಾರಿಗಳಿಗೆ ಕರೆದ ಟೆಂಡರ್ ತಿದ್ದುಪಡಿ ಪ್ರಕಟಣೆಯ ಬಗ್ಗೆ.

ಉಲ್ಲೇಖ: ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ: ಎ/ಬಿಯುಡಿ/ಕಾಂಪಾ/ಎನ್‌ಪಿವಿ/ಟೆಂಡರ್/ಸಿಆರ್–33/2022–23 ದಿನಾಂಕ: 28–6–2022.

ಈ ಕಛೇರಿ ಟೆಂಡರ್ ನೋಟಿಫಿಕೇಶನ್ ಸಂಖ್ಯೆ: ಎ/ಬಿಯುಡಿ/ಕಾಂಪಾ/ಎನ್‌ಪಿವಿ/ಟೆಂಡರ್/ಸಿಆರ್–33/2022–23 ದಿನಾಂಕ: 28–6–2022 ಕ್ಕೆ ಸಂಬಂಧಿಸಿದ ಕಾಮಗಾರಿಗಳಿಗೆ ಕರೆದಿರುವ ಟೆಂಡರಿನಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಹಂಚಿಕೆಯಾಗಿರುವ ಕಾಮಗಾರಿಗಳಿಗೆ ನಮೂದಿಸಿರುವ ಇ.ಎಂ.ಡಿ ಗಳನ್ನು ಸರ್ಕಾರಿ ಆದೇಶ ಸಂಖ್ಯೆ ಎಫ್.ಡಿ. 876 ಇ.ಎಕ್ಸ್.ಪಿ–12/2017 ದಿನಾಂಕ. 10.10.2017ರ ಪ್ರಕಾರ ಮಾರ್ಪಾಡಾಗಿರುವ ಪ್ರಕಾರ 20 ಲಕ್ಷ ಕಾಮಗಾರಿಗಳವರೆವಿಗೂ ಶೇ.1.25 ಹಾಗೂ 20 ಲಕ್ಷ ದಿಂದ 50 ಲಕ್ಷ ಕಾಮಗಾರಿಗಳಿಗೆ ಶೇ. 1.00 ರಷ್ಟು ಇ.ಎಂ.ಡಿ ಎಂದು ಮಾರ್ಪಡಿಸಿ ಈ ಕೆಳಗಿನಂತೆ ತಿದ್ದುಪಡಿ ಮಾಡಲಾಗಿದೆ ಮತ್ತು ಆ ಪ್ರಕಾರ ಇ.ಎಂ.ಡಿ ಯನ್ನು ಮಾರ್ಪಡಿಸಲಾಗಿದೆ ಎಂದು ತಿಳಿಯಪಡಿಸಿದೆ.

ಕ್ರ. ಸಂ.	ಇಂಡೆಂಟ್ ಸಂಖ್ಯೆ	ಹಳೆಯ ಇ.ಎಂ.ಡಿ (ರೂ ಗಳಲ್ಲಿ)	ಮಾರ್ಪಡಿಸಲಾದ ಇ.ಎಂ.ಡಿ(ರೂ ಗಳಲ್ಲಿ)
1	51942	29950	14975
2	51948	32735	16368
3	51950	99994	49997
4	51954	15000	7500
5	51960	44880	22440
6	51961	75148	37587
7	51976	92000	46000
8	51989	15000	7500
9	51991	15000	7500

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ,
ತುಮಕೂರು ವಿಭಾಗ, ತುಮಕೂರು

DIPR/TUM/329/MCA/2022-23

ಮಳೆಯಿಂದ ಬೆಳೆ ಹಾನಿ ● ರೋಗದ ಕುರಿತು ಸಮೀಕ್ಷೆ ನಡೆಸಲು ಕೊಡಗು ಜಿಲ್ಲಾಧಿಕಾರಿ ಸೂಚನೆ

ಕಾಳುಮೆಣಸು, ಕಾಫಿಗೆ 'ಕೊಳೆ' ಸುಳಿ

● ಬಿ.ಜೆ.ಧನ್ಯಪ್ರಸಾದ್/ಕೆ.ಎಸ್.ಗಿರೀಶ್/ಚಿದಂಬರಪ್ರಸಾದ್

ಚಿಕ್ಕಮಗಳೂರು/ಕೊಡಗು/ಹಾಸನ: ಕೆಲವು ದಿನಗಳಿಂದ ನಿರಂತರವಾಗಿ ಸುರಿದ ಮಳೆ ಬೆಳೆಗಾರರಿಗೆ ಸಂಕಷ್ಟ ತಂದೊಡ್ಡಿದೆ. ಗಾಳಿ, ಮಳೆ ಹಾಗೂ ತೇವಾಂಶ ಹೆಚ್ಚಿದ್ದರಿಂದ ಕಾಫಿ, ಕಾಳುಮೆಣಸು, ಏಲಕ್ಕಿಗೆ ಕೊಳೆರೋಗ ತಗುಲಿದೆ.

ಗಿಡಗಳಲ್ಲಿ ಕಾಫಿ ಕಾಯಿಗಳು ಕಪ್ಪಾಗಿದ್ದು, ಉದುರುತ್ತಿವೆ. ಎಲೆಗಳು ಕಪ್ಪಾಗಿವೆ. ಕಾಳುಮೆಣಸಿನ ಬಳ್ಳಿಗಳ ತುಟ್ಟುಗಳು (ಕಾಯಿಕಟ್ಟುವ ಜಾಗ) ಕಪ್ಪಾಗಿ ಉದುರಿವೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಚಿಕ್ಕಮಗಳೂರು, ಮೂಡಿಗೆರೆ, ಕಳಸ, ಕೊಪ್ಪ, ಎನ್.ಆರ್.ಪುರ, ಶೃಂಗೇರಿ, ತರೀಕೆರೆ (ಭಾಗಶಃ) ತಾಲ್ಲೂಕುಗಳು, ಕೊಡಗು ಜಿಲ್ಲೆಯ ಮಡಿಕೇರಿ, ವಿರಾಜಪೇಟೆ, ಸೋಮವಾರ ಪೇಟೆ ತಾಲ್ಲೂಕುಗಳು ಹಾಗೂ ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಕಸಬಾ, ಬಿಕ್ಕೋಡು, ಅರೇಹಳ್ಳಿ ಹೋಬಳಿ ಭಾಗದಲ್ಲಿ ಈ ಬೆಳೆಗಳನ್ನು ಬೆಳೆಯಲಾಗಿದೆ.

ಅರೇಬಿಕಾ ಮತ್ತು ರೋಬಸ್ಟಾ ತಳಿಗಳನ್ನು ಬೆಳೆಯಲಾಗಿದೆ. ಕಾಫಿಯ ಎರಡು ತಳಿಗೂ ರೋಗ ಬಾಧಿಸುತ್ತಿದೆ. ಚಿಕ್ಕಮಗಳೂರು ಜಿಲ್ಲೆ ಕಳಸ ಭಾಗದಲ್ಲಿ ಅಧಿಕ ಶೀತದ ಪರಿಣಾಮ ಬೇರಿಗೆ ಆಮ್ಲಜನಕದ ಕೊರತೆಯಾಗಿ ಕಾಫಿ ಹಸಿರಾಗಿಯೇ ಉದುರುವ 'ವೆಟ್ ಫೀಟ್' ಕೂಡಾ ಬಾಧಿಸುತ್ತಿದೆ.

ಕೊಡಗು ಜಿಲ್ಲೆಯ ತೋಟಗಳಲ್ಲಿ ಕಾಫಿ ಕಾಯಿಗಳು ಅಪಾರ ಪ್ರಮಾಣದಲ್ಲಿ ಉದುರಿವೆ. ನಾಪೋಕ್ಲು ಹೋಬಳಿಯ ಕಕ್ಕಬ್ಬೆ, ಕುಂಜಿಲ, ನಾಲಡಿ, ಮರಂದೋಡ, ಮಡೆನಾಡು, ಚೋಡಿಪಾರ ಮತ್ತಿತರ ಭಾಗಗಳಲ್ಲಿ ಕೊಳೆರೋಗ ಉಲ್ಬಣಿಸಿದೆ. ಶ್ರೀಮಂಗಲ, ಶನಿವಾರಸಂತೆ ಭಾಗಗಳಿಗೂ ವ್ಯಾಪಿಸಿದೆ.

ಗಿಡಗಳಿಂದ ಗೊಂಚಲು ಗೊಂಚಲಾಗಿ ಕಾಫಿಕಾಯಿಗಳು ಉದುರುತ್ತಿವೆ. ಗಿಡಗಳ ರೆಂಬೆಗಳಲ್ಲಿ ಕಾಫಿ ಕಾಯಿಗಳು ಕಪ್ಪಾಗಿ ಕೊಳೆಯುತ್ತಿವೆ. ಮಳೆ ಮುಂದುವರಿದರೆ ಮುಂದಿನ ವರ್ಷ ಇಳುವರಿಯೇ ಕೈತಪ್ಪುವ ಸಾಧ್ಯತೆ ಇದೆ ಎಂದು ಬೆಳೆಗಾರರು ಕಳವಳಗೊಂಡಿದ್ದಾರೆ.

ಚಿಕ್ಕಮಗಳೂರು ಜಿಲ್ಲೆ ಶೃಂಗೇರಿ ತಾಲ್ಲೂಕಿನ ಕುಂಚೆಬೈಲು ಗ್ರಾಮದ ತೋಟದಲ್ಲಿ ಕೊಳೆ ರೋಗ ತಗುಲಿ ಕಾಫಿ ಕಾಯಿಗಳು, ಎಲೆಗಳು ಕಪ್ಪಾಗಿರುವುದು

ಮಳೆ ಕಥೆ–ವ್ಯಥೆ

ಪ್ರಾಥಮಿಕ ಸಮೀಕ್ಷೆ: ನಿರಂತರವಾಗಿ ಬೀಳುತ್ತಿರುವ ಮಳೆಯಿಂದ ಕಾಫಿಗೆ ಬಂದಿರುವ ಕೊಳೆರೋಗದ ಕುರಿತು ಸಮೀಕ್ಷೆ ನಡೆಸುವಂತೆ ಕೊಡಗು ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ್ ಸೂಚನೆ ನೀಡಿದ್ದಾರೆ. ಚೆಟ್ಟಳ್ಳಿಯ ಕಾಫಿ ಸಂಶೋಧನಾ ಉಪಕೇಂದ್ರದ ವಿಜ್ಞಾನಿಗಳಾದ ಡಾ.ರಾಜೇಶ್ ಪಾತ, ಮುಖಾರಿಬ್, ಗೋಣಿಕೊಪ್ಪಲಿನ ಕಾಫಿ ಮಂಡಳಿಯ ಉಪನಿರ್ದೇಶಕಿ ಡಾ.ಶ್ರೀದೇವಿ ಅವರು ಹುದಿಕೇರಿ, ಬೇಲೂರು, ಹೈಸೊಡ್ಲೂರು, ಪೆರಾಡು, ಪಕರಟಗೇರಿ, ವಿರಾಜಪೇಟೆ, ಬಾಡಗಕೇರಿ, ಕುರ್ಚಿ, ಬೀರುಗ, ಟಿ.ಶೆಟ್ಟಿಗೇರಿ, ತಾವಲಗೇರಿ, ಹರಿಹರ ಇತರ ಗ್ರಾಮಗಳ ತೋಟಗಳಲ್ಲಿ ಸಮೀಕ್ಷೆ ನಡೆಸಿದ್ದಾರೆ. ಕಾಫಿಗೆ ಕೊಳೆರೋಗ ಹರಡುತ್ತಿದೆ ಎಂಬುದನ್ನು ದೃಢಪಡಿಸಿದ್ದಾರೆ.

'ಸದ್ಯ, ಪ್ರಾಥಮಿಕ ಸಮೀಕ್ಷೆ ನಡೆಸಲಾಗಿದೆ. ಮುಂಬರುವ ದಿನಗಳಲ್ಲಿ ಕೃಷಿ, ತೋಟಗಾರಿಕೆ, ಕಂದಾಯ, ಕಾಫಿ ಮಂಡಳಿಯಿಂದ ಜಂಟಿ ಸಮೀಕ್ಷೆ ನಡೆಸಲಾಗುವುದು. ಆಗಷ್ಟೇ ನಷ್ಟದ ಅಂದಾಜು ಸಿಗಲು ಸಾಧ್ಯ' ಎಂದು ಗೋಣಿಕೊಪ್ಪಲಿನ ಕಾಫಿ ಮಂಡಳಿಯ ಉಪನಿರ್ದೇಶಕಿ ಡಾ.ಶ್ರೀದೇವಿ 'ಪ್ರಜಾವಾಣಿ'ಗೆ ತಿಳಿಸಿದರು.

ಕಾಳುಮೆಣಸು ಅಪಾಯದಲ್ಲಿ: ಕಾಳುಮೆಣಸು ಅಪಾಯಕ್ಕೆ ಸಿಲುಕಿದೆ. ಕೆಲವೆಡೆ ಬಳ್ಳಿಯಲ್ಲಿ ಹೂ ಬಂದಿದೆ. ಮಳೆ ನಿಲ್ಲದೇ ಹೂವಿನಿಂದ ಕಾಳಾಗುವ ಸಾಧ್ಯತೆ ಕಡಿಮೆ. ಮಳೆ– ಗಾಳಿಗೆ ನೂರಾರು ಮರಗಳು ಬುಡಮೇಲಾಗಿವೆ. ಮರದಲ್ಲಿ ಹಬ್ಬಿಸಿದ ಕಾಳುಮೆಣಸಿನ ಬಳ್ಳಿಗಳೂ ನೆಲಕಚ್ಚಿವೆ.

'ನಷ್ಟದ ಅಂದಾಜು ಮಾಡಿಲ್ಲ. ಸದ್ಯ, ಜಿಲ್ಲೆಯ ಕಾಫಿ, ಅಡಿಕೆ ಬೆಳೆಗಳಲ್ಲಿ ಶೇ 10ರಷ್ಟು ಕೊಳೆರೋಗ ವ್ಯಾಪಿಸಿದೆ. ಶೇ 5ರಿಂದ 10ರಷ್ಟು ಕಾಳುಮೆಣಸಿನ ಬಳ್ಳಿಗಳೂ ಬಾಧಿತವಾಗಿವೆ. ಮಳೆ ಹೀಗೆ ಮುಂದುವರಿದರೆ ಏಲಕ್ಕಿಗೂ ಬುಡಕೊಳೆರೋಗ ಬರುವ ಸಾಧ್ಯತೆ ಇದೆ' ಎಂದು ಕೊಡಗಿನ ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಪ್ರಮೋದ್ ಅವರು ತಿಳಿಸಿದರು.

ನಾಪೋಕ್ಲುವಿನ ಕಾಫಿ ಬೆಳೆಗಾರ ಎಸ್. ಉದಯಶಂಕರ, 'ನಿರಂತರ ಮಳೆ, ಚಳಿ ಎರಡೂ ಸೇರಿ ಕಾಫಿಗಿಡಗಳಿಗೆ ಮಾರಕವಾಗಿದೆ. ಎಲೆ, ಕಾಫಿ ಕಾಯಿ ಉದುರುವುದು ಆರಂಭವಾಗಿದೆ. ಐದಾರು ವರ್ಷಗಳಿಂದ ಈ ಸಮಸ್ಯೆ ಕಾಡುತ್ತಿದೆ' ಎಂದರು.

ಕೊಳೆ ರೋಗದಿಂದ ಕಾಫಿ ಬೆಳೆ, ಕಾಳು ಮೆಣಸು ಶೇ 25 ರಷ್ಟು ನಾಶವಾಗಿದೆ. ಈ ವರ್ಷ ಕಾಫಿ ಬೆಳೆ ಸ್ವಲ್ಪ ಏರುಗತಿಯಲ್ಲಿದೆ. ಫಸಲು ನಷ್ಟದಿಂದ ನಿರೀಕ್ಷೆಗಳು ಕಮರಿವೆ
ಬಿ.ಎಸ್.ಜೈರಾಂ
ಬೆಳೆಗಾರ ಬಿದರಹಳ್ಳಿ, ಮೂಡಿಗೆರೆ ತಾಲ್ಲೂಕು

ಅತಿಯಾದ ಮಳೆಯಿಂದ ಕಾಫಿ, ಕಾಳು ಮೆಣಸು, ಏಲಕ್ಕಿ ಇತರ ವಾಣಿಜ್ಯ ಬೆಳೆಗಳು ಕರಗಿ ಉದುರುತ್ತಿದೆ. ಕೇಂದ್ರ, ರಾಜ್ಯ ಸರ್ಕಾರ ಬೆಳೆಗಾರರ ಸಂಕಷ್ಟಕ್ಕೆ ಸ್ಪಂದಿಸಬೇಕು
ನಾಗಭೂಷಣ ಎಚ್.ಇ.
ನಿರ್ದೇಶಕ, ಕರ್ನಾಟಕ ಬೆಳೆಗಾರರ ಒಕ್ಕೂಟ, ಹಾಸನ

ಮಳೆಯಿಂದ ಕಾಫಿ ಬೆಳೆಯನ್ನು ರಕ್ಷಿಸುವುದು ಸವಾಲಿನ ಕೆಲಸವಾಗಿದೆ. ಆದ್ದರಿಂದ ಕಾಫಿ ಬೆಳೆಯನ್ನು ಹವಾಮಾನ ಆಧಾರಿತ ಬೆಳೆ ವಿಮಾ ವ್ಯಾಪ್ತಿಗೆ ಸೇರಿಸಬೇಕು
ಸಚ್ಚಿನ್ ಎಂ.ಜಿ
ಬೆಳೆಗಾರರ ಸಂಘದ ಅಧ್ಯಕ್ಷ, ಹೆತ್ತೂರು

ಹಾಸನ ಜಿಲ್ಲೆಯ ಸಕಲೇಶಪುರ, ಆಲೂರು, ಬೇಲೂರು ತಾಲ್ಲೂಕುಗಳಲ್ಲಿ ಮಳೆಯಿಂದ ₹462 ಕೋಟಿ ಮೌಲ್ಯದ ಕಾಫಿ ಬೆಳೆಗೆ ಹಾನಿಯಾಗಿದೆ
ಕ್ಯಾನಹಳ್ಳಿ ಸುಬ್ಬಣ್ಣ
ಹಾಸನ ಜಿಲ್ಲಾ ಪ್ಲಾಂಟರ್ಸ್ ಸಂಘದ ಅಧ್ಯಕ್ಷ

ಅರ್ಧದಷ್ಟು ಫಸಲು ಕೈತಪ್ಪುವ ಭೀತಿ

ಹಾಸನ ಜಿಲ್ಲೆಯಲ್ಲಿ ಕಾಫಿ ಮತ್ತು ಮೆಣಸಿನಲ್ಲಿ ಶೇ 20ರಿಂದ ಶೇ 50 ರಷ್ಟು ಫಸಲು ಕಡಿಮೆಯಾಗುವ ಸಾಧ್ಯತೆ ಇದೆ ಎಂದು ಬೆಳೆಗಾರರು ಆತಂಕಕ್ಕೆ ಒಳಗಾಗಿದ್ದಾರೆ.

ಬೆಳೆಯುವ ಪ್ರದೇಶ

ಜಿಲ್ಲೆ	ಪ್ರದೇಶ
ಕಾಫಿ	
ಚಿಕ್ಕಮಗಳೂರು	90 ಸಾವಿರ ಹೆಕ್ಟೇರ್
ಕೊಡಗು	1.07 ಲಕ್ಷ ಹೆಕ್ಟೇರ್
ಹಾಸನ	41 ಸಾವಿರ ಹೆಕ್ಟೇರ್
ಕಾಳುಮೆಣಸು	
ಚಿಕ್ಕಮಗಳೂರು	55 ಸಾವಿರ ಹೆಕ್ಟೇರ್
ಕೊಡಗು	16 ಸಾವಿರ ಹೆಕ್ಟೇರ್
ಹಾಸನ	8 ಸಾವಿರ ಹೆಕ್ಟೇರ್
ಏಲಕ್ಕಿ	
ಚಿಕ್ಕಮಗಳೂರು	500 ಹೆಕ್ಟೇರ್
ಕೊಡಗು	8 ಸಾವಿರ ಹೆಕ್ಟೇರ್
ಹಾಸನ	5 ಸಾವಿರ ಹೆಕ್ಟೇರ್

'ಗ್ರಾಮಾಭಿವೃದ್ಧಿ ಯೋಜನೆ ವಿಸ್ತರಣೆ'

ಕನ್ನಡದಲ್ಲಿ ಪ್ರಮಾಣವಚನ ಸ್ವೀಕರಿಸಿದ ವೀರೇಂದ್ರ ಹೆಗ್ಗಡೆ

ಪ್ರಜಾವಾಣಿ ವಾರ್ತೆ

ಪ್ರಧಾನಿ ನರೇಂದ್ರ ಮೋದಿ ಅವರನ್ನು ಡಾ.ಡಿ.ವೀರೇಂದ್ರ ಹೆಗ್ಗಡೆ ಭೇಟಿ ಮಾಡಿ ಧನ್ಯವಾದ ಹೇಳಿದರು. ಸಂಸದ ನಳಿನ್ ಕುಮಾರ್ ಕಟೀಲ್ ಇದ್ದಾರೆ

ನವದೆಹಲಿ: 'ಬೇರೆ ರಾಜ್ಯಗಳಿಗೂ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯನ್ನು ವಿಸ್ತರಣೆ ಮಾಡುವ ಬಗ್ಗೆ ಚಿಂತನೆ ನಡೆಸಲಾಗುತ್ತಿದೆ' ಎಂದು ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗ್ಗಡೆ ತಿಳಿಸಿದರು.

ರಾಜ್ಯಸಭೆಗೆ ನಾಮನಿರ್ದೇಶನಗೊಂಡಿರುವ ಅವರು ರಾಜ್ಯಸಭಾ ಸದಸ್ಯರಾಗಿ ಗುರುವಾರ ಕನ್ನಡದಲ್ಲಿ ದೇವರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದರು. ವೀರೇಂದ್ರ ಹೆಗ್ಗಡೆ, ಸಂಗೀತ ನಿರ್ದೇಶಕ ಇಳಯರಾಜ, ಅಥ್ಲೀಟ್ ಪಿ.ಟಿ.ಉಷಾ ಹಾಗೂ ಚಲನಚಿತ್ರ ಕಥೆ– ಸಂಭಾಷಣೆಕಾರ ವಿಜಯೇಂದ್ರ ಪ್ರಸಾದ್ ಅವರನ್ನು ಜೂನ್ 7ರಂದು ನಾಮನಿರ್ದೇಶನ ಮಾಡಲಾಗಿತ್ತು. ಪ್ರಮಾಣವಚನ ಸ್ವೀಕರಿಸಿದ ಬಳಿಕ ಹೆಗ್ಗಡೆ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ ಧನ್ಯವಾದ ಹೇಳಿದರು.

ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಯೋಜನೆಯನ್ನು ವಿಸ್ತರಿಸಬೇಕು ಎಂದು ಈ ಹಿಂದೆ ಹಲವು ಮಂದಿ ಮನವಿ ಮಾಡಿದ್ದರು. ಆಗ ಸಾಧ್ಯ ಆಗಿರಲಿಲ್ಲ. ಆದರೆ, ಈಗ ಸರ್ಕಾರ ನಮ್ಮ ಜತೆಗೆ ಇದೆ. ಹೀಗಾಗಿ, ಯೋಜನೆಯನ್ನು ವಿಸ್ತರಣೆ ಮಾಡಲು ವಿಚಾರ ಮಾಡುತ್ತಿದ್ದೇವೆ' ಎಂದರು.

'ಗ್ರಾಮೀಣಾಭಿವೃದ್ಧಿ ಯೋಜನೆ ಮೊದಲು ಪ್ರಯೋಗ ಆಗಿತ್ತು. 40 ವರ್ಷಗಳಲ್ಲಿ ಸ್ಥಿರ ಆಗಿದೆ. ರುಡ್‌ಸೆಟ್ ಯೋಜನೆ ದೇಶದ ವಿವಿಧ ಕಡೆಗಳಿಗೆ ವಿಸ್ತರಣೆ ಆಗಿದೆ. ಇದಕ್ಕೆ ಕೇಂದ್ರ ಸರ್ಕಾರ ನೀಡಿದ ಬೆಂಬಲ ಕಾರಣ' ಎಂದು ಅವರು ಹೇಳಿದರು.

'ಈ ಹಿಂದೆ ಪದ್ಮ ಪ್ರಶಸ್ತಿಗಳನ್ನು ಪಡೆಯಲು, ರಾಜ್ಯಸಭೆಗೆ ನಾಮನಿರ್ದೇಶನಗೊಳ್ಳಲು ಅರ್ಜಿ ಹಾಕಬೇಕಿತ್ತು. ನಾಯಕರಿಗೆ ದುಂಬಾಲು ಬೀಳಬೇಕಿತ್ತು. ಕಳೆದ ಐದು ವರ್ಷಗಳಲ್ಲಿ ಈ ವ್ಯವಸ್ಥೆಯಲ್ಲಿ ಬಹಳ ಸುಧಾರಣೆ ಆಗಿದೆ. ಸಾಧಕರನ್ನು ಗುರುತಿಸಿ ಆಯ್ಕೆ ಮಾಡುತ್ತಿದ್ದಾರೆ. ನಾಮನಿರ್ದೇಶನಗೊಳ್ಳುವ ಬಗ್ಗೆ ಆಸೆ ಪಟ್ಟಿರಲಿಲ್ಲ. ಆಕಸ್ಮಿಕವಾಗಿ ಸಿಕ್ಕಿದೆ. ಸಂತೋಷವಾಗಿದೆ. ರಾಜ್ಯಸಭಾ ಸದಸ್ಯರಾಗಿರುವುದರಿಂದ ಇನ್ನಷ್ಟು ಸೇವೆ ಮಾಡಲು ಅವಕಾಶ ಸಿಕ್ಕಿದೆ' ಎಂದು ಅವರು ಹೇಳಿದರು.

'ನಾನು ಯಾವುದೇ ಪಕ್ಷದ ಜತೆಗೆ ಗುರುತಿಸಿಕೊಳ್ಳುವುದಿಲ್ಲ. ಈ ಗೌರವ ಸದಸ್ಯತ್ವಕ್ಕೆ ಸ್ವಾತಂತ್ರ್ಯ ಇದೆ. ಈ ಸ್ವಾತಂತ್ರ್ಯವನ್ನು ಬಳಸಿಕೊಂಡು ಯಾವುದೇ ರಾಜಕೀಯ ವ್ಯವಸ್ಥೆಯಡಿ ಇರದೆ ಕೆಲಸ ಮಾಡಬಹುದು ಎಂದು ನಂಬಿದ್ದೇನೆ. ಐವತ್ತು ವರ್ಷಗಳಿಂದ ಯಾವುದೇ ರಾಜಕೀಯ ಫಲಾಪೇಕ್ಷೆ ಇಲ್ಲದೆ ಕೆಲಸ ಮಾಡಿದ್ದೇನೆ' ಎಂದರು.

ಗುಡುಗು ಸಹಿತ ಮಳೆ ಇಂದು

ಬೆಂಗಳೂರು: ಕರಾವಳಿ, ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಶುಕ್ರವಾರ ಗುಡುಗು ಸಹಿತ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಕರಾವಳಿಯ ಎಲ್ಲ ಜಿಲ್ಲೆಗಳು, ದಕ್ಷಿಣ ಒಳನಾಡಿನ ಚಿಕ್ಕಮಗಳೂರು, ಕೊಡಗು, ಶಿವಮೊಗ್ಗ ಮತ್ತು ಹಾಸನ ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ. 48 ಗಂಟೆಗಳಲ್ಲಿ ಬೆಂಗಳೂರು ಗ್ರಾಮಾಂತರ, ಚಿಕ್ಕಮಗಳೂರು ಹಾಗೂ ಮೈಸೂರು ಜಿಲ್ಲೆಯ ಕೆಲವೆಡೆ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.62	21,875	19,683
ಹಾರಂಗಿ	2,859	2,855.79	2,820	2,800
ಕಬಿನಿ	2284	2,284	16,000	16,000
ಹೇಮಾವತಿ	2,922	2,920.50	9,374	4,850
ಲಿಂಗನಮಕ್ಕಿ	1,819	1,797.30	15,364	4,398
ಸೂಪಾ (ಮೀ)	564	541.40	20,332	2,184
ಮಾಣಿ	594	583.46	1,998	-
ತುಂಗಭದ್ರಾ	1,633	1631.73	1,30,326	1,20,989
ಮಲಪ್ರಭಾ	2079.5	2,068	6,181	394
ಘಟಪ್ರಭಾ	2175	2,151.11	7,757	155
ಭದ್ರಾ	186	183.3	12,541	3,977
ಆಲಮಟ್ಟಿ (ಮೀ)	519.6	517.82	1,07,522	60,451
ನಾರಾಯಣಪುರ (ಮೀ)	492.25	491.50	40,000	27,450

* ನೆಲಮಟ್ಟದಿಂದ

ಐವರಿಗೆ ಕುವೆಂಪು ಭಾಷಾಭಾರತಿ ಪ್ರಶಸ್ತಿ

ಆರ್.ವಿ.ಎಸ್. ಸುಂದರಂ

ಸಿ.ಆರ್. ಯರವಿನ ತೆಲಿಮಠ



ಕೆ. ನಲ್ಲತಂಬಿ

ವಿಜಯಾ ಗುತ್ತಲ

ವಿ. ಕೃಷ್ಣ

ಬೆಂಗಳೂರು: ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ನೀಡುವ 2022ನೇ ಗೌರವ ಪ್ರಶಸ್ತಿಗೆ ಬಹುಭಾಷಾ ವಿದ್ವಾಂಸ ಆರ್. ವಿ.ಎಸ್. ಸುಂದರಂ ಸೇರಿ ಐವರು ಆಯ್ಕೆಯಾಗಿದ್ದಾರೆ.

ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಸಿ.ಆರ್. ಯರವಿನತೆಲಿಮಠ, ಲೇಖಕಿ ವಿಜಯಾ ಗುತ್ತಲ, ಭಾಷಾಂತರಕಾರ ಕೆ. ನಲ್ಲತಂಬಿ ಹಾಗೂ ಅನುವಾದಕ ವಿ. ಕೃಷ್ಣ ಅವರು ಪ್ರಾಧಿಕಾರದ ಗೌರವ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಕನ್ನಡ ಹಾಗೂ ಇತರ ಭಾಷೆಗಳ ಮಧ್ಯೆ ಭಾಷಾಂತರದಲ್ಲಿ ವಿಶೇಷ ಸಾಧನೆ ಮಾಡಿದ ವಿದ್ವಾಂಸರಿಗೆ ನೀಡಲಾಗುವ ಈ ಪ್ರಶಸ್ತಿಯು ತಲಾ ₹50 ಸಾವಿರ ನಗದು ಒಳಗೊಂಡಿದೆ.

ಪ್ರಾಧಿಕಾರದ ಅಧ್ಯಕ್ಷ ಅಜಕ್ಕಳ ಗಿರೀಶ ಭಟ್ ಅವರು ಪ್ರಶಸ್ತಿ ಪಟ್ಟಿಯನ್ನು ಗುರುವಾರ ಬಿಡುಗಡೆ ಮಾಡಿದರು.

2021ರಲ್ಲಿ ಪ್ರಕಟವಾದ ಅನುವಾದಿತ ಕೃತಿಗಳಿಗೆ ವಿವಿಧ ವಿಭಾಗಗಳಲ್ಲಿ ನೀಡಲಾಗುವ ಪುಸ್ತಕ ಬಹುಮಾನಗಳನ್ನು ಪ್ರಾಧಿಕಾರ ಪ್ರಕಟಿಸಿದೆ. 'ದ ಎಸೆನ್ಶಿಯಲ್ ಮಹಾಭಾರತ' ಕೃತಿಗೆ ಅರ್ಜುನ ಭಾರದ್ವಾಜ ಮತ್ತು ಹರಿ ರವಿಕುಮಾರ್ (ಕನ್ನಡದಿಂದ ಇಂಗ್ಲಿಷಿಗೆ), 'ಪರ್ದಾ & ಪಾಲಿಗಮಿ' ಕೃತಿಗೆ ದಾದಾಪೀರ್ ಜೈಮನ್ (ಇಂಗ್ಲಿಷಿನಿಂದ ಕನ್ನಡಕ್ಕೆ), 'ಕಳ್ಳಿಗಾಡಿನ ಇತಿಹಾಸ' ಮಲರ್ವಿಳಿ ಕೆ. (ಇಂಗ್ಲಿಷ್ ಹೊರತಾಗಿ ಬೇರೆ ಭಾರತೀಯ ಭಾಷೆಗಳಿಂದ ಕನ್ನಡಕ್ಕೆ), 'ಪ್ರೇಮಪತ್ರ' ಕೃತಿಗೆ ಮೋಹನ ಕುಂಟಾರ್, ಹಾಗೂ 'ಉತ್ತರಕಾಂಡಂ' ಕೃತಿಗೆ ಎಚ್. ಆರ್. ವಿಶ್ವಾಸ (ಕನ್ನಡದಿಂದ ಬೇರೆ ಭಾರತೀಯ ಭಾಷೆಗಳಿಗೆ) ಆಯ್ಕೆಯಾಗಿದ್ದಾರೆ.

ಪುಸ್ತಕ ಬಹುಮಾನವು ತಲಾ ₹25 ಸಾವಿರ ನಗದು ಬಹುಮಾನ ಒಳಗೊಂಡಿದೆ.

ಜವಾಹರಲಾಲ್ ನೆಹರು ಉನ್ನತ ವೈಜ್ಞಾನಿಕ ಸಂಶೋಧನಾ ಕೇಂದ್ರ

ಜಕ್ಕೂರು, ಬೆಂಗಳೂರು - 560064 ಕರ್ನಾಟಕ, ಭಾರತ
ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಅಡಿಯಲ್ಲಿನ ಒಂದು ಸ್ವಾಯುತ್ತ ಸಂಸ್ಥೆ.
ಡೀಮ್ಡ್-ಟು-ಬಿ-ಯೂನಿವರ್ಸಿಟಿ ಸಂಸ್ಥೆ

JNCASR — Azadi Ka Amrit Mahotsav

ಜಾಹೀರಾತು ಸಂಖ್ಯೆ: JNC/AO/No.07/2022 ದಿನಾಂಕ:

ಅಧಿಸೂಚನೆ

ಜವಾಹರಲಾಲ್ ನೆಹರು ಉನ್ನತ ವೈಜ್ಞಾನಿಕ ಸಂಶೋಧನಾ ಕೇಂದ್ರ (ಜೆಎನ್‌ಸಿಎಎಸ್‌ಆರ್) ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಧೀನದ ಪ್ರಮುಖ ಸಂಶೋಧನಾ ಸಂಸ್ಥೆಯಾಗಿದೆ. ಇದು ವಿಶ್ವವಿದ್ಯಾಲಯ ಮಾನ್ಯತೆಯುಳ್ಳ ಸಂಸ್ಥೆ ಎಂಬುದಾಗಿಯೂ ಪರಿಗಣಿಸಲ್ಪಡುತ್ತಿದ್ದು, ಇಂಟರ್‌ಡಿಸಿಪ್ಲಿನರಿ ಸಂಶೋಧನೆಗೆ ಹೆಸರುವಾಸಿಯಾಗಿದೆ ಮತ್ತು ಸಂಶೋಧನಾ ಚಟುವಟಿಕೆಗಳಿಗೆ ಸಕಲ ರೀತಿಯಲ್ಲೂ ಸುಸಜ್ಜಿತವಾಗಿದೆ ಇದರಲ್ಲಿನ ಕಲಿಕಾ ಸೌಲಭ್ಯಗಳು ತನ್ನ ಬೋಧಕ ಸಿಬ್ಬಂದಿಗೆ ಶೈಕ್ಷಣಿಕ ಚಟುವಟಿಕೆ ಮತ್ತು ಸಂಶೋಧನಾ ಕಾರ್ಯಗಳಲ್ಲಿನ ಮಹತ್ವಾಕಾಂಕ್ಷಿ ಗುರಿಗಳ ಸಾಧನೆಗೆ ಪೂರಕವಾಗಿವೆ. ಇದೀಗ, ಜೆಎನ್‌ಸಿಎಎಸ್‌ಆರ್ ಸಂಸ್ಥೆಯು ವಿಜ್ಞಾನ ಮತ್ತು ಇಂಜಿನಿಯರಿಂಗ್‌ನ ಮಹತ್ವದ ಕ್ಷೇತ್ರಗಳಲ್ಲಿ **ಫಾಕಲ್ಟಿ ಫೆಲೊ (ಸಹಾಯಕ ಪ್ರಾಧ್ಯಾಪಕ)** ಹುದ್ದೆಗಾಗಿ, ಒಸಿಐ ಕಾರ್ಡ್ ಹೊಂದಿರುವವರೂ ಸೇರಿದಂತೆ, ಭಾರತೀಯ ನಾಗರಿಕರಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಹೆಚ್ಚಿನ ವಿವರಗಳಿಗಾಗಿ ಕೇಂದ್ರದ ವೆಬ್‌ಸೈಟ್ ಪರಿಶೀಲಿಸಿರಿ:
https://www.jncasr.ac.in/openings/faculty-position

ಸಹಿ/– ಆಡಳಿತಾಧಿಕಾರಿ
ಜೆಎನ್‌ಸಿಎಎಸ್‌ಆರ್

ತುಳು ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗಳು ಪ್ರಕಟ

ಸಂಜೀವ, ಉಲ್ಲಾಸ, ಕೃಷ್ಣಪ್ಪಗೆ ಗೌರವ

ಪ್ರಜಾವಾಣಿ ವಾರ್ತೆ

ಸಂಜೀವ ಬಂಗೇರ

ಉಲ್ಲಾಸ ಕೃಷ್ಣ

ಕೃಷ್ಣಪ್ಪ ಉಪ್ಪೂರು

ಯೋಗೀಶ್ ಕಾಂಚನ್

ಅಕ್ಷತಾ ರಾಜ್

ಅಶೋಕ ಆಳ್ವ

ಮಂಗಳೂರು: ತಲಪಾಡಿಯ ಸಂಜೀವ ಬಂಗೇರ, ಪುತ್ತೂರಿನ ಉಲ್ಲಾಸ ಕೃಷ್ಣ ಪೈ ಮತ್ತು ಕೃಷ್ಣಪ್ಪ ಉಪ್ಪೂರು ಅವರು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ 2021ನೇ ಸಾಲಿನ ಗೌರವ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಪುಸ್ತಕ ಬಹುಮಾನಕ್ಕೆ ಬೈಕಂಪಾಡಿಯ ಯೋಗೀಶ್ ಕಾಂಚನ್ ಅವರ 'ತಜಿನ ಬೊಳ್ಳಿ' ಕವನ ಸಂಕಲನ, ಕಾಸರಗೋಡಿನ ಅಕ್ಷತಾ ರಾಜ್ ಪೆರ್ಲ ಅವರ 'ಬೇಲಿ, ಸಾಪೊದ ಕಣ್ಣ್' ನಾಟಕ ಮತ್ತು ಡಾ.ಅಶೋಕ ಆಳ್ವ ಸುರತ್ಕಲ್ ಅವರ 'ತುಳುನಾಡಿನ ಪ್ರಾಣಿ ಜಾನಪದ' ಅಧ್ಯಯನ ಕೃತಿ ಆಯ್ಕೆ ಆಗಿದೆ ಎಂದು ಅಕಾಡೆಮಿ ಅಧ್ಯಕ್ಷ ದಯಾನಂದ ಜಿ.ಕತ್ತಲ್‌ಸಾರ್ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಗೌರವ ಪ್ರಶಸ್ತಿ ₹50 ಸಾವಿರ ನಗದು, ಪ್ರಶಸ್ತಿ ಪತ್ರ ಮತ್ತು ಸ್ಮರಣಿಕೆ ಒಳಗೊಂಡಿದ್ದು ಪುಸ್ತಕ ಬಹುಮಾನ ₹ 25 ಸಾವಿರ ನಗದು, ಪ್ರಶಸ್ತಿ ಪತ್ರ ಮತ್ತು ಸ್ಮರಣಿಕೆ ಹೊಂದಿದೆ' ಎಂದು ಅವರು ವಿವರಿಸಿದರು.

'ಬಾಲ ಪ್ರತಿಭಾ ಪುರಸ್ಕಾರಕ್ಕೆ ಕೋಡಿಕೆರೆಯ ನಿರೀಕ್ಷಾ ಕೋಟ್ಯಾನ್, ಮುಂಬೈಯ ಜೀವಿಕಾ ಶೆಟ್ಟಿ, ಅಮೆರಿಕದ ಸಾನ್ವಿ, ಯುವ ಸಾಧಕ ಪುರಸ್ಕಾರಕ್ಕೆ ನಂದಳಿಕೆಯ ಹರಿಪ್ರಸಾದ್, ಮುಂಬೈಯ ಚಿನ್ಮಯಿ ಮೋಹನ್ ಸಾಲಿಯಾನ್, ಒಮಾನ್‌ನ ರಮಾನಂದ ಶೆಟ್ಟಿ, ಮಾಧ್ಯಮ ಪುರಸ್ಕಾರಕ್ಕೆ ಟೈಮ್ಸ್ ಆಫ್ ಕುಡ್ಲ ಪತ್ರಿಕೆಯ ಶಶಿ ಬಂಡಿಮಾರ್, ಮುಂಬೈಯ ರೋನ್ಸ್ ಬಂಟ್ವಾಳ್, ಸಂಘಟನಾ ಪುರಸ್ಕಾರಕ್ಕೆ ಜೈ ತುಳುನಾಡು, ಮುಂಬೈಯ ತುಳುಕೂಟ ಫೌಂಡೇಷನ್, ತುಳು ಕೂಟ ಕತಾರ್ ಆಯ್ಕೆಯಾಗಿವೆ. ಈ ಪುರಸ್ಕಾರ ₹10 ಸಾವಿರ ನಗದು, ಪ್ರಶಸ್ತಿ ಪತ್ರ ಮತ್ತು ಸ್ಮರಣಿಕೆ ಒಳಗೊಂಡಿದೆ' ಎಂದು ಅಧ್ಯಕ್ಷರು ತಿಳಿಸಿದರು.

ಆಗಸ್ಟ್ 21ರಂದು ಪುರಭವನದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ತುಳು ಸಂಶೋಧನೆಗೆ ಫೆಲೊಷಿಪ್ ನೀಡಲು ಅನುದಾನದ ಕೊರತೆ ಇದೆ. ಅದನ್ನು ನೀಗಿಸುವ ಬೇಡಿಕೆ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಸಿನಿಮಾ ಮಂದಿರ ಒಳಗೊಂಡ ತುಳುಭವನ ಮತ್ತು ಬಯಲು ರಂಗಮಂದಿರ ನಿರ್ಮಾಣದ ಕಾರ್ಯ ಪ್ರಗತಿಯಲ್ಲಿದೆ ಎಂದರು.

ಅಕಾಡೆಮಿ ರಿಜಿಸ್ಟ್ರಾರ್ ಕವಿತಾ, ಸದಸ್ಯರಾದ ಲೀಲಾಕ್ಷ ಕರ್ಕೇರ, ಕಾಂತಿ ಶೆಟ್ಟಿ ಮತ್ತು ನಾಗೇಶ್ ಕುಲಾಲ್ ಪತ್ರಿಕಾಗೋಷ್ಠಿಯಲ್ಲಿ ಇದ್ದರು.

ಅಕ್ರಮ ದಾಸ್ತಾನು: 2,700 ಚೀಲ ರಾಗಿ ವಶ

ಕುಣಿಗಲ್ (ತುಮಕೂರು): ತಾಲ್ಲೂಕಿನ ಎಡೆಯೂರು ಹೋಬಳಿಯ ಗಡಿಭಾಗದ ಗೋದಾಮಿನಲ್ಲಿ ಅಕ್ರಮವಾಗಿ ದಾಸ್ತಾನು ಮಾಡಲಾಗಿದ್ದ 2,700 ಚೀಲ ರಾಗಿಯನ್ನು ಅಧಿಕಾರಿಗಳು ಗುರುವಾರ ವಶಕ್ಕೆ ಪಡೆದಿದ್ದಾರೆ.

ಬುಧವಾರ ರಾತ್ರಿ ಬೆಂಗಳೂರು ಕಡೆಯಿಂದ ಬಂದ ಲಾರಿಯಲ್ಲಿ ರಾಗಿ ಚೀಲಗಳನ್ನು ತಂದು ದಾಸ್ತಾನು ಮಾಡಲಾಗಿತ್ತು ಎಂಬ ಖಚಿತ ಮಾಹಿತಿ ಮೇರೆಗೆ ತಹಶೀಲ್ದಾರ್ ಮಹಾಬಲೇಶ್ವರ್ ನೇತೃತ್ವದ ಅಧಿಕಾರಿಗಳ ತಂಡ ದಾಳಿ ನಡೆಸಿದೆ.

ಗೋದಾಮು ನಾಗಮಂಗಲ ತಾಲ್ಲೂಕಿನ ದೇವರಾಜು ಅವರಿಗೆ ಸೇರಿದ್ದು, ರಾಗಿ ದಾಸ್ತಾನಿನ ಬಗ್ಗೆ ದಾಖಲೆ ನೀಡುವಲ್ಲಿ ವಿಫಲರಾಗಿದ್ದಾರೆ. ಸಂಪೂರ್ಣ ರಾಗಿ ಚೀಲಗಳನ್ನು ಪಟ್ಟಣದ ಸರ್ಕಾರಿ ಗೋದಾಮಿಗೆ ವರ್ಗಾಯಿಸಲಾಗಿದೆ. ನಂತರ ಈ ಬಗ್ಗೆ ಪೊಲೀಸರಿಗೆ ದೂರು ನೀಡುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ
Email: ee_pwdbellary@yahoo.com ದೂರವಾಣಿ ಸಂ: 08392 266123

ಐಎಫ್‌ಟಿ ಸಂಖ್ಯೆ ಲೋಇ/ಕಾನಿಇ/ಬವಿ/ಟಿಎಸ್–4/1918/2022–23 ದಿನಾಂಕ: 21–07–2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತೇದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ಟೆಂಡರುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಕ್ರಮ ಸಂಖ್ಯೆ(1) ಹಾಗೂ (2)ರಲ್ಲಿನ ಕಾಮಗಾರಿಗಳಿಗೆ ದ್ವಿ ಲಕೋಟೆ ಟೆಂಡರಿಂಗ್ ಪದ್ಧತಿಯನ್ನು ಹಾಗೂ ಕ್ರಮ ಸಂಖ್ಯೆ(3)ರಲ್ಲಿನ ಕಾಮಗಾರಿಗೆ ಏಕ ಲಕೋಟೆ ಟೆಂಡರಿಂಗ್ ಪದ್ಧತಿಯನ್ನು ಅನುಸರಿಸಲಾಗುವುದು. ಗುತ್ತೇದಾರರು ಈ ಕೆಳಕಾಣಿಸಿದ ಕಾಮಗಾರಿಗಳಲ್ಲಿ ಯಾವುದಾದರೂ ಎಲ್ಲಾ ಕಾಮಗಾರಿಗಳಿಗೆ ಟೆಂಡರುಗಳನ್ನು ಸಲ್ಲಿಸಬಹುದಾಗಿರುತ್ತದೆ. ಇದಕ್ಕಾಗಿ ಗುತ್ತೇದಾರರು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ http://eproc. karnataka.gov.inವನ್ನು ಸಂದರ್ಶಿಸಬಹುದಾಗಿರುತ್ತದೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತೇದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸೂಚನೆ : ಕಾರಣಾಂತರಗಳಿಂದಾಗಿ ಈ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಯಾವುದೇ ಬದಲಾವಣೆಗಳಾದಲ್ಲಿ ಗುತ್ತೇದಾರರು –ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ.

ಕ್ರ ಸಂ	ಕಾಮಗಾರಿಗಳ ವಿವರ	ಟೆಂಡರ್‌ಗೆ ಸೂಚಿಸಿದ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
	8443–ಠೇವಣಿ ಕಾಮಗಾರಿಗಳು	
1)	KPWD/2022-23/RD/WORK_INDENT153746	98.16
2)	KPWD/2022-23/RD/WORK_INDENT153747	78.75
2)	KPWD/2022-23/BD/WORK_INDENT154592	13.36

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.
ಅ) ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: **30–07–2022 ರಂದು 12.00 ಗಂಟೆಯ ವರೆಗೆ.**
ಆ) ಇ–ಪೋರ್ಟಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **05–08–2022 ರಂದು 16.00 ಗಂಟೆಯ ವರೆಗೆ.** ಇ) ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **06–08–2022ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜನೀಯರ್, ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು**

ಸಹಿ/–ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/272/ಎಂಸಿಎ/2022–23

ಅನಧಿಕೃತ ಶಾಲೆಗಳ ಪಟ್ಟಿ ಪ್ರಕಟ ಕಡ್ಡಾಯ

ಬೆಂಗಳೂರು: ರಾಜ್ಯದ ಎಲ್ಲ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಗಳು ತಮ್ಮ ವ್ಯಾಪ್ತಿಯ ಅಧಿಕೃತ, ಅನಧಿಕೃತ ಶಾಲೆಗಳ ವಿವರವನ್ನು ಒಳಗೊಂಡ ಪಟ್ಟಿ ಪ್ರಕಟಿಸುವಂತೆ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ.

2022–23ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಪ್ರವೇಶ ಪಡೆಯಲು ಜುಲೈ 31 ಕೊನೆಯ ದಿನ.

ಹಲವು ಶಾಲೆಗಳು ನೋಂದಣಿ ಮಾಡಿಸದೆ, ಇಲಾಖೆಯ ಅನುಮತಿ ಪಡೆಯದೆ ಮಕ್ಕಳನ್ನು ದಾಖಲು ಮಾಡಿಕೊಳ್ಳುತ್ತಿವೆ. ಇದರಿಂದ ಭವಿಷ್ಯದಲ್ಲಿ ಮಕ್ಕಳ ಶೈಕ್ಷಣಿಕ ದಾಖಲೆಗಳಿಗೆ ತೊಂದರೆಯಾಗಲಿದೆ. ಅದಕ್ಕಾಗಿ ಅನಧಿಕೃತ ಶಾಲೆಗಳ ಮಾಹಿತಿ ಪೋಷಕರಿಗೆ ನೀಡಬೇಕು. ಅಂತಹ ಶಾಲೆಗಳನ್ನು 15 ದಿನಗಳ ಒಳಗೆ ಮುಚ್ಚಿಸಲು ಕ್ರಮ ಕೈಗೊಳ್ಳಬೇಕು ಎಂದು ಆದೇಶದಲ್ಲಿ ಸೂಚಿಸಲಾಗಿದೆ.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9
ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ನಾಳೆ
ಪಂ. ನರಸಿಂಹಲು ವಡವಾಟಿ
ಖ್ಯಾತ ಕ್ಲಾರಿಯೋನೆಟ್ ವಾದಕರು, ರಾಯಚೂರು
ಸೆಲೆಬ್ರಿಟಿ LIVE
ಕ್ಲಾರಿಯೋನೆಟ್ ಏಕಲವ್ಯ
ಬೆಳಿಗ್ಗೆ 11 ರಿಂದ 12

ಕಿರುಕುಳ: ಸಹ ಪ್ರಾಧ್ಯಾಪಕ ಅಮಾನತು

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ವೈದ್ಯಕೀಯ ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ಇಲ್ಲಿನ ಶಿವಮೊಗ್ಗ ವೈದ್ಯಕೀಯ ವಿಜ್ಞಾನ ಸಂಸ್ಥೆಯ (ಸಿಮ್ಸ್) ಸಾಮಾನ್ಯ ಶಸ್ತ್ರಚಿಕಿತ್ಸಾ ವಿಭಾಗದ ಸಹ ಪ್ರಾಧ್ಯಾಪಕ ಡಾ.ಅಶ್ವಿನ್ ಹೆಬ್ಬಾರ್ ಅವರನ್ನು ಸೇವೆಯಿಂದ ಅಮಾನತು ಮಾಡಿ ವೈದ್ಯಕೀಯ ಶಿಕ್ಷಣ ಇಲಾಖೆ ಗುರುವಾರ ಆದೇಶಿಸಿದೆ.

ವಿದ್ಯಾರ್ಥಿನಿಗೆ ಬೆದರಿಕೆ ಹಾಕಿ ಪ್ರಕರಣವನ್ನು ಸಿಮ್ಸ್ ಆಡಳಿತ ಮುಚ್ಚಿ ಹಾಕುತ್ತಿದೆ ಎಂದು ಪೀಪಲ್ಸ್ ಲಾಯರ್ಸ್ ಗಿಲ್ಡ್ ಸದಸ್ಯರು ಜಿಲ್ಲಾಡಳಿತಕ್ಕೆ ದೂರು ನೀಡಿದ್ದರು. ಹೀಗಾಗಿ, ಕೆಲಸದ ಸ್ಥಳದಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ ವಿರುದ್ಧದ ಜಿಲ್ಲಾ ಮಟ್ಟದ ಸ್ಥಳೀಯ ದೂರು ನಿವಾರಣಾ ಸಮಿತಿ ಅಧ್ಯಕ್ಷರೂ ಆಗಿರುವ ಜಿಲ್ಲಾಧಿಕಾರಿ ಡಾ.ಆರ್. ಸೆಲ್ವಮಣಿ ಅವರು ಸಿಮ್ಸ್ ಕ್ಯಾಂಪಸ್‌ಗೆ ತೆರಳಿ ಸಂತ್ರಸ್ತೆಯನ್ನು ಭೇಟಿ ಮಾಡಿ ಮಾಹಿತಿ ಪಡೆದಿದ್ದರು. ಪ್ರಕರಣದ ಬಗ್ಗೆ ಬುಧವಾರ ವೈದ್ಯಕೀಯ ಶಿಕ್ಷಣ ಇಲಾಖೆ ಕಾರ್ಯದರ್ಶಿ ನವೀನ್‌ರಾಜ್ ಸಿಂಗ್ ಅವರಿಗೆ ವರದಿ ಸಲ್ಲಿಸಿದ್ದರು.

ಪ್ರಕರಣ ಮುಚ್ಚಿ ಹಾಕಲು ಪ್ರಯತ್ನ?

'ಲೈಂಗಿಕ ಕಿರುಕುಳ ನಡೆದಿಲ್ಲ. ತಪ್ಪು ಗ್ರಹಿಕೆಯಿಂದ ವಿವಾದ ಉಂಟಾಗಿತ್ತು. ಹೀಗಾಗಿ, ವಿದ್ಯಾರ್ಥಿನಿ ಬೇಷರತ್ತಾಗಿ ದೂರು ವಾಪಸ್ ಪಡೆದಿದ್ದಾರೆ' ಎಂದು ಸಿಮ್ಸ್ ನಿರ್ದೇಶಕ ಡಾ.ಸಿದ್ದಪ್ಪ ಅವರು ಸೋಮವಾರ ಪತ್ರಿಕಾ ಪ್ರಕಟಣೆ ನೀಡಿದ್ದರು.

'ಕಿರುಕುಳ ನೀಡಿದ ಪ್ರಾಧ್ಯಾಪಕರ ವಿರುದ್ಧ ಕ್ರಮ ಕೈಗೊಂಡಿರುವ ವೈದ್ಯಕೀಯ ಶಿಕ್ಷಣ ಇಲಾಖೆಯು, ಪ್ರಕರಣವನ್ನು ಮುಚ್ಚಿಹಾಕಲು ಪ್ರಯತ್ನಿಸಿದ ಸಿಮ್ಸ್ ನಿರ್ದೇಶಕರ ವಿರುದ್ಧವೂ ಕ್ರಮ ಕೈಗೊಳ್ಳಬೇಕು' ಎಂದು ಪೀಪಲ್ಸ್ ಲಾಯರ್ಸ್ ಗಿಲ್ಡ್‌ನ ಕೆ.ಪಿ.ಶ್ರೀಪಾಲ್ ಒತ್ತಾಯಿಸಿದ್ದಾರೆ. ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಸಿಮ್ಸ್ ನಿರ್ದೇಶಕ ಡಾ.ಸಿದ್ದಪ್ಪ ಅವರಿಗೆ ಹಲವು ಬಾರಿ ಕರೆ ಮಾಡಿದರೂ ಅವರು ಕರೆ ಸ್ವೀಕರಿಸಲಿಲ್ಲ.

ಪ್ರಕರಣಕ್ಕೆ ಸಂಬಂಧಿಸಿದಂತೆ ಸಹ ಪ್ರಾಧ್ಯಾಪಕರನ್ನು ಅಮಾನತುಗೊಳಿಸಲಾಗಿದೆ. ಅವರ ವಿರುದ್ಧ ಇಲಾಖೆ ವಿಚಾರಣೆಗೆ ಆದೇಶಿಸಲಾಗಿದೆ
ಡಾ.ಆರ್. ಸೆಲ್ವಮಣಿ
ಜಿಲ್ಲಾಧಿಕಾರಿ

'ಆರೋಪಕ್ಕೆ ಸಂಬಂಧಿಸಿದಂತೆ ಸಹ ಪ್ರಾಧ್ಯಾಪಕ ಡಾ.ಅಶ್ವಿನ್ ಹೆಬ್ಬಾರ್ ಅವರನ್ನು ಅಮಾನತು ಮಾಡಿ ಇಲಾಖೆ ವಿಚಾರಣೆಗೆ ಸೂಚಿಸಿ ಇಲಾಖೆಯಿಂದ ಆದೇಶಿಸಲಾಗಿದೆ' ಎಂದು ಸಿಮ್ಸ್ ಕಾರ್ಯದರ್ಶಿ ಕೆ.ಎಚ್. ಶಿವಕುಮಾರ್ 'ಪ್ರಜಾವಾಣಿ'ಗೆ ಖಚಿತಪಡಿಸಿದರು.

ವೈದ್ಯಕೀಯ ವ್ಯಾಸಂಗ ಪೂರ್ಣಗೊಂಡಿರುವುದರಿಂದ ಜುಲೈ 15ರಂದು ನಿರಾಕ್ಷೇಪಣಾ ಪತ್ರ (ಎನ್‌ಒಸಿ) ಪಡೆಯಲು ಸಹ ಪ್ರಾಧ್ಯಾಪಕರ ಬಳಿ ತೆರಳಿದ್ದಾಗ, ಅವರು ಅಸಭ್ಯವಾಗಿ ವರ್ತಿಸಿ ಮಾನಸಿಕ, ದೈಹಿಕ ಕಿರುಕುಳ ನೀಡಿದ್ದರು ಎಂದು ವಿದ್ಯಾರ್ಥಿನಿಯು ದೂರು ಸಲ್ಲಿಸಿದ್ದರು. ಈ ಬಗ್ಗೆ ಜುಲೈ 16ರಂದು 'ಪ್ರಜಾವಾಣಿ' ವರದಿ ಪ್ರಕಟಿಸಿತ್ತು.

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಉದ್ಯಮ)
ಕಾರ್ಯಪಾಲಕ ಅಭಿಯಂತರರ ಕಛೇರಿ, ಕೃಭಾಜನಿನಿ, ಸನ್ನತಿ ಏತ ನೀರಾವರಿ ವಿಭಾಗ,
ಖಾನಾಪೂರ ಕ್ಯಾಂಪ್–585319, ತಾ: ಶಹಾಪೂರ, ಜಿ: ಯಾದಗಿರಿ.

ಸಂಖ್ಯೆ: ಕೃಭಾಜನಿನಿ/ಸ.ಏ.ನೀ.ವಿ/ಹೊಸಕಾಮಗಾರಿ/2022–23/329 ದಿನಾಂಕ: 15.07.2022

ಮರುಟೆಂಡರ್ ಪ್ರಕಟಣೆ (ಇ–ಪೋರ್ಟಲ್ ಮೂಲಕ)

ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ ರವರ ಪರವಾಗಿ ಕಾರ್ಯಪಾಲಕ ಅಭಿಯಂತರರರ, ಕೃಭಾಜನಿನಿ, ಸನ್ನತಿ ಏತ ನೀರಾವರಿ ವಿಭಾಗ, ಖಾನಾಪೂರ, ರವರು ಅಲ್ಪಾವಧಿ ಶೇಕಡವಾರು ಟೆಂಡರ್‌ನ್ನು ಎರಡು ಲಕೋಟೆ ಟೆಂಡರ್ ಪದ್ಧತಿಯಡಿಯಲ್ಲಿ ಪಿ.ಡಬ್ಲ್ಯು.ಡಿ / ಕೆ.ಬಿ.ಜೆ.ಎನ್.ಎಲ್ ನಲ್ಲಿ ನೋಂದಾಯಿತ ಪ್ರಥಮ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರಿಗೆ ಟೆಂಡರನ್ನು ಕರೆಯಲಾಗಿದೆ. ಗುತ್ತಿಗೆದಾರರು ತಮ್ಮ ದಾಖಾಲಾತಿಗಳನ್ನು ಇ–ಪೋರ್ಟಲ್‌ನಲ್ಲಿ ಸಲ್ಲಿಸಲು ಸೂಚಿಸಲಾಗಿದೆ. (1) ಕಾಮಗಾರಿಯ ಹೆಸರು: **CONSTRUCTION OF CC ROAD & TWO SIDES DRAIN FROM BHEEMU WALIKAR HOUSE TO MAIN ROAD IN SC AREA IN MUGULNAGAON VILLAGE OF CHITTAPUR TALUKA, KALABURGI DIST UNDER SCP MP GRANTS FOR THE YEAR 2018-19 (INDENT NO18529/Call-3).** (2) ಟೆಂಡರ್ ಮೊತ್ತ: **ರೂ. 66.88 ಲಕ್ಷಗಳು.** (3) ಗುತ್ತಿಗೆದಾರರು ಕ್ಲಾಸ್: ಪಿ.ಡಬ್ಲ್ಯು.ಡಿ / ಕೆ.ಬಿ.ಜೆ.ಎನ್.ಎಲ್ ನಲ್ಲಿ ನೋಂದಾಯಿತ ಪ್ರಥಮ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರು. (4) ಟೆಂಡರ್ ಪ್ರಕ್ರಿಯೆ ದರ: ಇ–ಪೋರ್ಟಲ್‌ನಲ್ಲಿ ನಿಗದಿ ಪಡಿಸಿದಂತೆ. (5) ಇ.ಎಂ.ಡಿ ಮೊತ್ತ: **ರೂ. 1.34 ಲಕ್ಷಗಳು.** (6) ಪೂರ್ಣ ತುಂಬಿದ ಇ–ಟೆಂಡರ್‌ಗಳನ್ನು ಸಲ್ಲಿಸುವ ದಿನಾಂಕ: **20.07.2022 ರಿಂದ 26.07.2022 ರ ಸಂಜೆ 5.00 ಗಂಟೆ ವರೆಗೆ.** (7) ಪೂರ್ಣ ತುಂಬಿದ ಇ–ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **26.07.2022 ರ ಸಂಜೆ 5.00 ಗಂಟೆ ವರೆಗೆ.** (8) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: **28.07.2022 ರ ಪೂರ್ವಾಹ್ನ 11.30 ಗಂಟೆಗೆ.** (9) ಇ–ಟೆಂಡರ್‌ಗಳನ್ನು ತೆರೆಯುವ ಸ್ಥಳ: ಕಾರ್ಯಪಾಲಕ ಅಭಿಯಂತರರ ಕಛೇರಿ, ಕೃಭಾಜನಿನಿ, ಸನ್ನತಿ ಏತ ನೀರಾವರಿ ವಿಭಾಗ, ಖಾನಾಪೂರ ಕ್ಯಾಂಪ್. ಮೇಲೆ ನೀಡಲಾದ ಟೆಂಡರ್‌ನ ಹೆಚ್ಚಿನ ಮಾಹಿತಿಯನ್ನು ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಕಛೇರಿ ಸಮಯದಲ್ಲಿ ಮತ್ತು ಇ–ಟೆಂಡರ್ ವೆಬ್‌ಸೈಟ್ **www.eproc.karnataka.gov.in** ನಲ್ಲಿ ಸಹ ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಕೃಭಾಜನಿನಿ, ಸನ್ನತಿ ಏತ ನೀರಾವರಿ ವಿಭಾಗ, ಖಾನಾಪೂರ ಕ್ಯಾಂಪ್

ವಾ.ಸಾ.ಸಂ.ಇ/ಯಾದಗಿರಿ/163/ಎಂಸಿಎ/2022–23

❦ ಸುಭಾಷಿತ ❦

ಕಾಲ ಹಿಂದಕ್ಕೆ ಚಲಿಸುವುದಿಲ್ಲ. ಅದರ ಜೊತೆಗೆ ಹೆಜ್ಜೆ ಹಾಕದಿದ್ದರೆ ನಾವು ನಿಂತಲ್ಲೇ ನಿಂತಿರಬೇಕಾಗುತ್ತದೆ.
– ಕೆ. ಶಿವರಾಮ ಕಾರಂತ

ಮದರಸಾಗಳ ಪಠ್ಯಕ್ರಮ ಸರ್ಕಾರದ ಹಸ್ತಕ್ಷೇಪ ಸಲ್ಲದು

ಮದರಸಾಗಳಲ್ಲಿನ ಪಠ್ಯಕ್ರಮವನ್ನು ಪರಿಶೀಲಿಸಬೇಕೆಂದು ಮುಸ್ಲಿಂ ಸಮುದಾಯದ ಕೆಲವರು ಮನವಿ ಮಾಡಿಕೊಂಡಿದ್ದು, ಆ ಬೇಡಿಕೆಯನ್ನು ಸರ್ಕಾರ ಪರಿಗಣಿಸಲಿದೆ ಎಂದು ರಾಜ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರು ಹೇಳಿರುವುದು ತಪ್ಪುಗ್ರಹಿಕೆ ಹಾಗೂ ಅನಗತ್ಯ ಗೊಂದಲಗಳಿಗೆ ಅವಕಾಶ ಕಲ್ಪಿಸುವಂತಿದ್ದು, ಪಠ್ಯಕ್ರಮದ ಪರಿಷ್ಕರಣೆಯ ಪ್ರಯತ್ನದ ಮೂಲಕ ಮದರಸಾಗಳಲ್ಲಿನ ಶೈಕ್ಷಣಿಕ ಚಟುವಟಿಕೆಗಳಲ್ಲಿ ಹಸ್ತಕ್ಷೇಪ ನಡೆಸಲು ಸರ್ಕಾರ ಉದ್ದೇಶಿಸಿದಂತಿದೆ. ಮದರಸಾಗಳಲ್ಲಿನ ಶಿಕ್ಷಣ ಕ್ರಮವನ್ನು ನಿಯಂತ್ರಿಸಲು ಹಾಗೂ ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ (ಟಿಇಟಿ) ಉತ್ತೀರ್ಣರಾದ ಶಿಕ್ಷಕರಿಗಷ್ಟೇ ಅಲ್ಲಿ ಬೋಧಿಸಲು ಅವಕಾಶ ಕಲ್ಪಿಸಲು ಉತ್ತರಪ್ರದೇಶ ಸರ್ಕಾರ ನಿರ್ಧರಿಸಿದೆ. ಆ ಮಾದರಿಯನ್ನು ಕರ್ನಾಟಕದಲ್ಲೂ ಅಳವಡಿಸುವ ಪ್ರಸ್ತಾವ ಸರ್ಕಾರದ ಮುಂದಿಲ್ಲ ಎಂದು ಸಚಿವರು ಹೇಳಿದ್ದಾರೆ. ಆದರೆ, ಮುಂದಿನ ದಿನಗಳಲ್ಲಿ ಮದರಸಾಗಳಲ್ಲಿನ ಪಠ್ಯಕ್ರಮವನ್ನು ಪರಿಷ್ಕರಿಸುವ ಸಾಧ್ಯತೆಯನ್ನು ಅವರು ಅಲ್ಲಗಳೆದಿಲ್ಲ. ಮುಸ್ಲಿಂ ಸಮುದಾಯದ ಕೆಲವು ಪೋಷಕರು ತಮ್ಮನ್ನು ಭೇಟಿ ಮಾಡಿ, ಉಳಿದ ಸಮುದಾಯಗಳಿಗೆ ದೊರೆಯುತ್ತಿರುವ ಶಿಕ್ಷಣವನ್ನು ತಮ್ಮ ಮಕ್ಕಳಿಗೂ ನೀಡುವಂತೆ ಮನವಿ ಸಲ್ಲಿಸಿದ್ದು, ಅಂಥ ಬೇಡಿಕೆಗಳ ಮೇರೆಗೆ ಮದರಸಾಗಳಲ್ಲಿನ ಪಠ್ಯಕ್ರಮವನ್ನು ಪರಿಷ್ಕರಿಸುವ ಸಾಧ್ಯತೆಯನ್ನು ಸರ್ಕಾರ ಪರಿಗಣಿಸಲಿದೆ ಎಂದು ಹೇಳಿದ್ದಾರೆ. ಪಠ್ಯ ಪರಿಷ್ಕರಣೆ ಕುರಿತಂತೆ ಅಲ್ಪಸಂಖ್ಯಾತ ಕಲ್ಯಾಣ ಇಲಾಖೆ ಹಾಗೂ ಮದರಸಾಗಳಿಂದ ತಮಗೆ ಯಾವ ಬೇಡಿಕೆಯೂ ಬಂದಿಲ್ಲ ಎಂದು ಸಚಿವರು ಹೇಳಿರುವುದನ್ನು ನೋಡಿದರೆ, ಅವರ ಮಾತುಗಳಲ್ಲಿ ವಿರೋಧಾಭಾಸ ಇರುವುದು ಸ್ಪಷ್ಟವಾಗಿದೆ. ತಮ್ಮನ್ನು ಭೇಟಿಯಾಗಿ ಪಠ್ಯ ಪರಿಷ್ಕರಣೆಗೆ ಮನವಿ ಸಲ್ಲಿಸಿರುವುದು ಯಾರು ಎನ್ನುವುದನ್ನು ಸಚಿವರು ಬಹಿರಂಗಪಡಿಸದ ಹೊರತು, ಸರ್ಕಾರದ ಮಾತು ಮತ್ತು ಚಿಂತನೆ ಅನುಮಾನಾಸ್ಪದ ಎನ್ನುವಂತಾಗುತ್ತದೆ. ಶಾಲಾ ಪಠ್ಯಪುಸ್ತಕಗಳ ಪರಿಷ್ಕರಣೆಯಲ್ಲಿ ಮಾಡಲಾಗಿರುವ ಎಡವಟ್ಟುಗಳು ಹಾಗೂ ಉಂಟಾಗಿರುವ ಅಧ್ವಾನಗಳ ಬಗ್ಗೆ ಚರ್ಚೆ ನಡೆಯುತ್ತಿರುವ ಸಂದರ್ಭದಲ್ಲೇ, ಮದರಸಾಗಳ ಪಠ್ಯ ಪರಿಷ್ಕರಣೆಯ ಬಗ್ಗೆ ಯೋಚಿಸುತ್ತಿರುವುದು, ಶಿಕ್ಷಣ ಕ್ಷೇತ್ರವನ್ನು ರಾಜ್ಯ ಸರ್ಕಾರ ಲಘುವಾಗಿ ಪರಿಗಣಿಸಿದೆ ಎನ್ನುವುದರ ಉದಾಹರಣೆಯಂತಿದೆ.

ತಮ್ಮನ್ನು ಭೇಟಿಯಾಗಿ ಪಠ್ಯ ಪರಿಷ್ಕರಣೆಗೆ ಮನವಿ ಸಲ್ಲಿಸಿದವರ ವಿವರಗಳನ್ನು ಸಚಿವರು ಬಹಿರಂಗಪಡಿಸಬೇಕು

ಮದರಸಾಗಳಲ್ಲಿನ ಶೈಕ್ಷಣಿಕ ಚಟುವಟಿಕೆಗಳ ಕುರಿತ ಶಿಕ್ಷಣ ಸಚಿವರ ಮಾತನ್ನು ವೈಯಕ್ತಿಕ ಅಭಿಪ್ರಾಯ ಎಂದಷ್ಟೇ ನೋಡಲು ಸಾಧ್ಯವಿಲ್ಲ. ಮದರಸಾಗಳ ವಿರುದ್ಧ ಸಾರ್ವಜನಿಕವಾಗಿ ತಪ್ಪು ಗ್ರಹಿಕೆಗಳನ್ನು ಮೂಡಿಸುವ ಕೆಲಸವನ್ನು ಆಡಳಿತಾರೂಢ ಬಿಜೆಪಿಯ ನಾಯಕರು ನಿರಂತರವಾಗಿ ಮಾಡಿಕೊಂಡೇ ಬರುತ್ತಿದ್ದು, ಆ ಅಜೆಂಡಾದ ಭಾಗವಾಗಿಯೇ ಶಿಕ್ಷಣ ಸಚಿವರ ಮಾತನ್ನು ಗಮನಿಸಬೇಕು. 'ದೇಶದ ಪ್ರತಿಯೊಂದು ಭಾಗದಲ್ಲೂ ಮದರಸಾಗಳು ನಾಯಿಕೊಡೆಗಳಂತೆ ಹುಟ್ಟಿಕೊಂಡಿದ್ದು, ಅವು ತಪ್ಪು ಕಲ್ಪನೆಯ ಧಾರ್ಮಿಕ ಶಿಕ್ಷಣ ನೀಡುತ್ತಿವೆ; ಮದರಸಾಗಳಿಂದ ತಾಲಿಬಾನಿಗಳು ಸೃಷ್ಟಿಯಾಗುತ್ತಾರೆ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಹೇಳಿದ್ದರು. ಮದರಸಾಗಳಲ್ಲಿ ದೇಶವಿರೋಧಿ ಚಟುವಟಿಕೆಗಳಿಗೆ ಪೂರಕವಾದ ಪಠ್ಯಗಳನ್ನು ಬೋಧಿಸಲಾಗುತ್ತಿದೆ ಎಂದು ದೂರಿದ್ದ ಬಿಜೆಪಿ ಮುಖಂಡ ಕೆ.ಎಸ್. ಈಶ್ವರಪ್ಪ, ಮದರಸಾಗಳನ್ನು ನಿಷೇಧಿಸಬೇಕು ಎಂದು ಒತ್ತಾಯಿಸಿದ್ದರು. ದೇಶವಿರೋಧಿ ಕೃತ್ಯಗಳನ್ನು ಕಲಿಸುವ ಮದರಸಾಗಳನ್ನು ನಿಷೇಧಿಸಬೇಕು ಎಂದು ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಕೂಡ ಒತ್ತಾಯಿಸಿದ್ದರು. ಹಿಜಾಬ್ ಮತ್ತು ಹಲಾಲ್ ವಿಚಾರವಾಗಿ ರಾಜ್ಯದ ಎಲ್ಲೆಡೆ ವಿವಾದ ಎಬ್ಬಿಸಲಾಗಿತ್ತು. ಈ ಎಲ್ಲವುಗಳ ಮುಂದುವರಿದ ಭಾಗವಾಗಿ ಶಿಕ್ಷಣ ಸಚಿವರ ಮಾತನ್ನು ಗಮನಿಸಬೇಕು.

ಮದರಸಾ ಶಿಕ್ಷಣದಿಂದ ತಮ್ಮ ಮಕ್ಕಳು ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಹಿಂದುಳಿಯುತ್ತಿದ್ದು, ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯುವುದು ಕಷ್ಟವಾಗುತ್ತಿದೆ. ಹಾಗಾಗಿ, ಬೇರೆ ಮಕ್ಕಳಿಗೆ ದೊರೆಯುವ ಶಿಕ್ಷಣವನ್ನು ತಮ್ಮ ಮಕ್ಕಳಿಗೂ ನೀಡಿ ಎಂದು ಕೆಲವು ಪೋಷಕರು ತಮ್ಮಲ್ಲಿ ಮನವಿ ಸಲ್ಲಿಸಿರುವುದಾಗಿ ಶಿಕ್ಷಣ ಸಚಿವರು ಹೇಳಿದ್ದಾರೆ. ಜೀವನಕ್ಕೆ ಅಗತ್ಯವಾದ ಶಿಕ್ಷಣವು ಮದರಸಾಗಳಿಂದ ದೊರೆಯುತ್ತಿಲ್ಲ ಎಂದು ಕೆಲವು ಪೋಷಕರು ಭಾವಿಸಿದರೆ, ಮದರಸಾ ಅಥವಾ ಸರ್ಕಾರಿ- ಖಾಸಗಿ ಶಾಲೆಯ ಕಲಿಕೆಯಲ್ಲಿ ಯಾವುದು ಬೇಕೆನ್ನುವುದನ್ನು ನಿರ್ಧರಿಸುವ ಆಯ್ಕೆ ಮಕ್ಕಳು ಮತ್ತು ಪೋಷಕರದ್ದೇ ಆಗಿರುವುದನ್ನು ಸಚಿವರು ಮರೆತಿದ್ದಾರೆ ಅಥವಾ ಪ್ರಜ್ಞಾಪೂರ್ವಕವಾಗಿ ನಿರ್ಲಕ್ಷಿಸಿದ್ದಾರೆ. ಮದರಸಾಗಳ ಶಿಕ್ಷಣ ಬಗ್ಗೆ ಅತೃಪ್ತಿ ಇರುವವರು ಸರ್ಕಾರಿ ಶಾಲೆಗಳಿಗೆ ಸೇರಿಸುವುದಕ್ಕಾಗಲೀ ಯಾಗಲು ರಾಜ್ಯದಲ್ಲಿ ಯಾವುದೇ ನಿರ್ಬಂಧವಿಲ್ಲ. ಮುಸ್ಲಿಂ ಸಮುದಾಯದ ಮಕ್ಕಳು ಮದರಸಾ ಕಲಿಕೆಯಷ್ಟೇ ಸೀಮಿತಗೊಂಡಿಲ್ಲ. ಮದರಸಾಗಳಿಗೆ ಹೋಗುವ ಬಹುತೇಕ ಮಕ್ಕಳು ಸರ್ಕಾರಿ ಅಥವಾ ಖಾಸಗಿ ಶಾಲೆಗಳಲ್ಲೂ ಕಲಿಯುತ್ತಿದ್ದಾರೆ. ಮದರಸಾಗಳಲ್ಲಿ ಧರ್ಮಾಧಾರಿತ ಕಲಿಕೆ ಮತ್ತು ಸಾರ್ವಜನಿಕ ಶಿಕ್ಷಣದ ನಡುವಿನ ವ್ಯತ್ಯಾಸವನ್ನು ಮಕ್ಕಳು ಮತ್ತು ಪೋಷಕರು ಸರಿಯಾಗಿ ಅರ್ಥ ಮಾಡಿಕೊಂಡಿದ್ದಾರೆ. ಈ ವ್ಯತ್ಯಾಸವನ್ನು ಮರೆತ ಸಚಿವರು ಮದರಸಾಗಳ ಶಿಕ್ಷಣಕ್ರಮದ ಬಗ್ಗೆ ಅನಗತ್ಯ ಉತ್ಸಾಹ ವ್ಯಕ್ತಪಡಿಸುತ್ತಿದ್ದಾರೆ. ಶಾಲೆಗಳಲ್ಲಿ ಕಲಿಯುತ್ತಿದ್ದು, ಮದರಸಾಗಳಿಗೂ ಹಾಜರಾಗುವ ವಿದ್ಯಾರ್ಥಿಗಳ ಹಾಜರಾತಿಯನ್ನು ಸರ್ಕಾರ ಗಮನಿಸಲಿದೆ ಎನ್ನುವ ಅವರ ಹೇಳಿಕೆ ಕೂಡ ಮುಸ್ಲಿಂ ವಿದ್ಯಾರ್ಥಿಗಳನ್ನು ಪ್ರತ್ಯೇಕವಾಗಿ ನೋಡುವ ಮನಸ್ಥಿತಿಯ ಭಾಗವಾದುದು ಹಾಗೂ ಅಲ್ಪಸಂಖ್ಯಾತ ವಿದ್ಯಾರ್ಥಿಗಳನ್ನು ಅವಮಾನಿಸುವಂಥದ್ದಾಗಿದೆ. ಮದರಸಾಗಳ ಶಿಕ್ಷಣಕ್ರಮದ ಬಗ್ಗೆ ಸರ್ಕಾರಕ್ಕೆ ನಿಜವಾಗಿಯೂ ಕಾಳಜಿಯಿದ್ದಲ್ಲಿ, ಶಿಕ್ಷಣ ಸಚಿವರು ರಾಜ್ಯದಾದ್ಯಂತ ಇರುವ ಮದರಸಾಗಳಿಗೆ ಒಮ್ಮೆ ಸೌಹಾರ್ದ ಭೇಟಿ ಕೊಟ್ಟು ಅಲ್ಲಿನ ಚಟುವಟಿಕೆಗಳನ್ನು ಗಮನಿಸಬೇಕು ಹಾಗೂ ಮದರಸಾಗಳನ್ನು ನಡೆಸುವವರ ತವಕತಲ್ಲಣಗಳನ್ನು ಆಲಿಸಬೇಕು. ಅದನ್ನು ಮಾಡದೆ, ಮದರಸಾಗಳನ್ನು ಗುಮ್ಮನಂತೆ ಬಿಂಬಿಸುವುದು ಸರ್ಕಾರದ ವರ್ಚಸ್ಸನ್ನು ಕುಗ್ಗಿಸುವ ಹಾಗೂ ಸಂವಿಧಾನದ ಆಶಯಗಳಿಗೆ ವಿರುದ್ಧವಾದ ನಡವಳಿಕೆಯಾಗುತ್ತದೆ.

ದಿನದ ಟ್ವೀಟ್

ಆಂತರಿಕ ಪ್ರಜಾಪ್ರಭುತ್ವ

ಮುಂದೆ ಕೂಡ ತಾನೇ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಹೇಳಲಾಗದೇ, ಹೈಕಮಾಂಡ್ ಮುಷ್ಟಿಯಲ್ಲಿರುವ ಹಾಲಿ ಮುಖ್ಯಮಂತ್ರಿ. ನಾನು, ನಾನು ಕೂಡಾ ಆಕಾಂಕ್ಷಿ ಎಂದು ಅಬ್ಬರಿಸುತ್ತ ಅರಾಜಕತೆ ತೋರುವ ವಿರೋಧ ಪಕ್ಷ. ಮುಂದೆಯೂ ಶಾಶ್ವತ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಪ್ರಾದೇಶಿಕ ಪಕ್ಷ. ಇದು ಆಂತರಿಕ ಪ್ರಜಾಪ್ರಭುತ್ವದ ಮೂರು ಮುಖಗಳು!

ಕೆ.ಬಿ.ಕೆ. ಸ್ವಾಮಿ, ವಕೀಲ

ಕಿಡಿನುಡಿ

ಏಕದಿನ ಕ್ರಿಕೆಟ್ ಮಾದರಿಯಲ್ಲಿ ವಿಶೇಷವಾದುದೇನೂ ಉಳಿದಿಲ್ಲ. ಆದ್ದರಿಂದ ಈ ಮಾದರಿಯನ್ನು ಶಾಶ್ವತವಾಗಿ ಸ್ಥಗಿತಗೊಳಿಸಬೇಕು. ಇಂಗ್ಲೆಂಡ್‌ನಲ್ಲಿ ಪಂದ್ಯಗಳು ನಡೆದಾಗ ಪ್ರೇಕ್ಷಕರ ಗ್ಯಾಲರಿಗಳು ಭರ್ತಿಯಾಗುತ್ತವೆ. ಭಾರತ, ಪಾಕಿಸ್ತಾನ, ಶ್ರೀಲಂಕಾ, ಬಾಂಗ್ಲಾದೇಶ, ದಕ್ಷಿಣ ಆಫ್ರಿಕಾದಲ್ಲಿ ಏಕದಿನ ಪಂದ್ಯಗಳು ನಡೆದಾಗ ಗ್ಯಾಲರಿಗಳು ತುಂಬುವುದಿಲ್ಲ. ಜನರು ಇದರ ಬಗ್ಗೆ ಆಸಕ್ತಿ ಕಳೆದುಕೊಳ್ಳುತ್ತಿದ್ದಾರೆ.

ವಾಸೀಂ ಅಕ್ರಂ, ಪಾಕಿಸ್ತಾನ ತಂಡದ ಮಾಜಿ ನಾಯಕ

25 ವರ್ಷಗಳ ಹಿಂದೆ

ಮಂಗಳವಾರ, 22-7-1997

● ವೀರಪ್ಪನ್ ಸಂಕೇತ ಹಿಂಬಾಲಿಸಿದ ಸಂಪಾದಕ

ಬರಗೂರು ಅರಣ್ಯ ಪ್ರದೇಶ (ತಮಿಳುನಾಡು), ಜುಲೈ 21– ಕಾಡುಗಳ್ಳ ವೀರಪ್ಪನ್ ಜತೆ ಸಂಧಾನವನ್ನು ನಡೆಸಲು ಹೋಗಿರುವ 'ನಕ್ಕೀರನ್' ಪತ್ರಿಕೆಯ ಸಂಪಾದಕ ಕೆ.ಆರ್.ಗೋಪಾಲನ್ ಅವರು ಇಂದು ಬರಗೂರು ಅರಣ್ಯ ಪ್ರದೇಶದ ತಾಮ್ರಕೆರೆಯ (ತಾವರೆಕೆರೆ) ಸಮೀಪ ಅರಣ್ಯ ಪ್ರವೇಶಿಸಿರುವುದು ಖಚಿತವಾಗಿದೆ.

ನಾಲ್‌ರೋಡ್– ಅಂತಿಯೂರು ನಡುವಿನ 60 ಕಿ.ಮೀ. ದೂರದ ಈ ಅರಣ್ಯಪ್ರದೇಶದಲ್ಲಿ ಗೋಪಾಲನ್ ಅವರ ಪ್ರವೇಶಕ್ಕೆ ನೆರವಾಗುವಂತೆ ತಮಿಳುನಾಡು ಈ ಭಾಗದ ಅರಣ್ಯ ಸಿಬ್ಬಂದಿಯನ್ನು ನಿನ್ನೆಯೇ ಕಾಡಿನಿಂದ ನಾಡಿಗೆ ವಾಪಸ್ ಕರೆಸಿಕೊಂಡಿದೆ.

50 ವರ್ಷಗಳ ಹಿಂದೆ

ಶನಿವಾರ, 22-7-1972

● ಕಾವೇರಿ ಯೋಜನೆ ಮುಂದುವರಿಕೆ ಅಂತರರಾಜ್ಯ ಒಪ್ಪಂದಕ್ಕೆ ಭಂಗ ತರದು

ಬೆಂಗಳೂರು, ಜುಲೈ 21– ಕಾವೇರಿ ಯೋಜನೆಗಳ ಮುಂದುವರಿಕೆ ಯಾವ ರೀತಿಯಲ್ಲೂ ಈಚಿನ ಅಂತರರಾಜ್ಯದ ಒಪ್ಪಂದಕ್ಕೆ ಭಂಗ ತರುವುದಿಲ್ಲ ಎಂದು ವಿಧಾನಸಭೆಯಲ್ಲಿ ಇಂದು ಸ್ಪಷ್ಟಪಡಿಸಿದ ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಅವರು, ಈ ಸಂಬಂಧದಲ್ಲಿ ಕಾವೇರಿ ಅಂಕೆ ಸಂಖ್ಯೆ ಸಂಗ್ರಹ ಸಮಿತಿಯ ಸದಸ್ಯ ಶ್ರೀ ಅಹುಜಾ ಅವರು ತಿರುವನಂತಪುರದಲ್ಲಿ ಮಾಡಿದ ಹೇಳಿಕೆಗೆ ಆಕ್ಷೇಪ ಎತ್ತಿದ್ದಾರೆ.

6 ತಿಂಗಳುಗಳ ಕಾಲ ನೀರನ್ನು ಹೆಚ್ಚಾಗಿ ಸಂಗ್ರಹಿಸಬಾರದು, ಇಲ್ಲವೇ ಉಪಯೋಗಿಸಬಾರದು ಎಂಬುದು ಮಾತ್ರ ಒಪ್ಪಂದದ ಅಂಶ; ಇದನ್ನು ನಾವು ಅಕ್ಷರಶಃ ಪಾಲಿಸುತ್ತಿದ್ದೇವೆ ಎಂದು ಮುಖ್ಯಮಂತ್ರಿ ಹೇಳಿದರು.

● ರಾಜ್ಯದ ಹೆಸರು 'ಕರ್ನಾಟಕ' ಕಾಂಗ್ರೆಸ್ ಪಕ್ಷದಲ್ಲಿ ಬಹುಮತ

ಬೆಂಗಳೂರು, ಜುಲೈ 21– ರಾಜ್ಯದ ಹೆಸರನ್ನು 'ಕರ್ನಾಟಕ' ಎಂದು ಬದಲಾಯಿಸಲು ಕಾಂಗ್ರೆಸ್ ಶಾಸಕಾಂಗ ಪಕ್ಷ ತೀರ್ಮಾನಿಸಿದೆ.

ಮತಿಗೆಟ್ಟ ವ್ಯವಸ್ಥೆಯಲ್ಲಿ ಎಲ್ಲರಿಗೂ 'ಸಂಶಯದ ಲಾಭ', ಅನಾಚಾರದಲ್ಲೂ ಸಮಾನತೆ

'ಬಿ' ರಿಪೋರ್ಟ್ ಮತ್ತು ತನಿಖಾ ಸಂಸ್ಥೆಗಳ ಕಣ್ಕಟ್ಟು!

ವಿಶ್ಲೇಷಣೆ

ಚಂದ್ರಕಾಂತ ವಡ್ಡು

ಮೂರು ತಿಂಗಳ ಹಿಂದೆ ರಾಜ್ಯ ಸರ್ಕಾರವನ್ನು ಮುಜುಗರಕ್ಕೆ ಈಡುಮಾಡಿದ್ದ ಬೆಳಗಾವಿ ಜಿಲ್ಲೆಯ ಗುತ್ತಿಗೆದಾರ ಸಂತೋಷ್ ಪಾಟೀಲರ ಅನುಮಾನಾಸ್ಪದ ಸಾವಿನ ಪ್ರಕರಣದಲ್ಲಿ ತನಿಖೆಯ ನೇತೃತ್ವ ವಹಿಸಿದ್ದ ಪೊಲೀಸ್ ಅಧಿಕಾರಿಯು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ 'ಬಿ' ರಿಪೋರ್ಟ್ ಸಲ್ಲಿಸಿದ್ದಾರೆ. ಅಂದರೆ ಈ ಪ್ರಕರಣದಲ್ಲಿ ಪ್ರಮುಖ ಆರೋಪಿಯಾಗಿದ್ದ ಆಡಳಿತಾರೂಢ ಬಿಜೆಪಿ ಮುಖಂಡ, ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಅವರಿಗೆ ಕ್ಲೀನ್ ಚಿಟ್ ದೊರೆತಿದೆ. ಇಂತಹ ಪ್ರಕರಣಗಳಲ್ಲಿ ವ್ಯಾಪಕವಾಗಿ ಬಳಕೆಯಾಗುವ 'ಕ್ಲೀನ್ ಚಿಟ್' ಎಂಬುದು ಎನ್‌ಕೌಂಟರ್ ಪದದಂತೆ ಧ್ವನ್ಯಾರ್ಥ, ವಾಚ್ಯಾರ್ಥ, ವಿಪರೀತಾರ್ಥ ಹೊಂದಿರುವುದನ್ನು ಗಮನಿಸಬೇಕು.

ಸಹಜವಾಗಿ ಹರ್ಷಗೊಂಡಿರುವ ಈಶ್ವರಪ್ಪ, ತಮ್ಮನ್ನು ಆರೋಪದಿಂದ ಮುಕ್ತಗೊಳಿಸಿದ, ಪಕ್ಷದ ಮುಖಂಡರನ್ನು ಮುಜುಗರದಿಂದ ಕಾಪಾಡಿದ ತಮ್ಮ ಮನೆದೇವರು ಚೌಡೇಶ್ವರಿಯನ್ನು ನೆನೆದಿದ್ದಾರೆ. ಹಾಗೆಯೇ ಮೃತರ ಹೆಂಡತಿ ರೇಣುಕಾ, 'ಈಶ್ವರಪ್ಪ ಅವರು ಪೊಲೀಸ್ ಇಲಾಖೆ ಮೇಲೆ ಪ್ರಭಾವ ಬೀರಿ 'ಬಿ' ರಿಪೋರ್ಟ್ ಹಾಕಿಸಿಕೊಂಡಿದ್ದಾರೆ. ತನಿಖೆಯಲ್ಲಿ ನ್ಯಾಯ ಸಿಗುವ ನಿರೀಕ್ಷೆ ಹುಸಿಯಾಗಿದೆ' ಎಂದು ರೋದಿಸಿದ್ದಾರೆ. ಇವರು ಕಳೆದ ವಾರವಷ್ಟೇ ಈ ಬಗ್ಗೆ ಅನುಮಾನ ವ್ಯಕ್ತಪಡಿಸಿ ರಾಜ್ಯಪಾಲರಿಗೆ ದೂರು ನೀಡಿದ್ದರು ಕೂಡ.

ಈ ಪ್ರಕರಣದಲ್ಲಿ ಈಶ್ವರಪ್ಪ ನಿಜಕ್ಕೂ ನಿರಪರಾಧಿ ಆಗಿದ್ದು ಮೃತರ ಕುಟುಂಬದವರ ಅನುಮಾನ ಸುಳ್ಳಾಗಿರಬಾರದೆಂದೇನೂ ಇಲ್ಲ ಅಥವಾ ತನಿಖಾಧಿಕಾರಿಯು ವರದಿಯಲ್ಲಿ ಉಲ್ಲೇಖಿಸಿದಂತೆ ಸಾಕ್ಷ್ಯಾಧಾರಗಳ ಕೊರತೆ ಕಾರಣಕ್ಕಾಗಿ ಈಶ್ವರಪ್ಪ ವಿರುದ್ಧದ ಆರೋಪಗಳನ್ನು ಕೈಬಿಟ್ಟಿರುವುದು ಸಮಂಜಸವೂ ಇರಬಹುದು. ಆದರೆ ಇಂತಹ ಹೈ ಪ್ರೊಫೈಲ್ ಪ್ರಕರಣಗಳಲ್ಲಿ ತನಿಖಾ ಸಂಸ್ಥೆಗಳ ಸ್ವಾತಂತ್ರ್ಯ, ದಕ್ಷತೆ, ಪ್ರಾಮಾಣಿಕತೆಗಳಿಗೆ ಮುಸುಕು ತೊಡಿಸುವ ವಸ್ತುಸ್ಥಿತಿಯು ಹಲವು ಪ್ರಶ್ನೆಗಳಿಗೆ ಆಸ್ಪದ ಮಾಡುತ್ತದೆ. ಇಂತಹ ಸಂದರ್ಭಗಳಲ್ಲಿನ ಅಧಿಕಾರಸ್ಥರ ವರ್ತನೆ, ನಿಲುವು, ಸಾಂದರ್ಭಿಕ ಹೇಳಿಕೆಗಳು ತನಿಖೆಯ ದಿಕ್ಕು ಮತ್ತು ಗುರಿಯನ್ನು ಮೊದಲೇ ನಿರ್ಧರಿಸಿದಂತಿರುವುದು, ಸಾಮಾನ್ಯರೂ ಊಹಿಸಬಲ್ಲಷ್ಟು ಖಚಿತವಾಗಿರುವುದು ಏನನ್ನು ಬಿಂಬಿಸುತ್ತದೆ?

ಏಪ್ರಿಲ್ 12ರಂದು ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಶಿವಮೊಗ್ಗದಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡುತ್ತಾ, 'ಈ ಘಟನೆಯಿಂದ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೋ ಅಥವಾ ಒಳ್ಳೆಯ ಹೆಸರು ಬರುತ್ತದೋ ಎಂಬುದು ತನಿಖೆಯಿಂದ ಗೊತ್ತಾಗುತ್ತದೆ. ಯಾರೋ ಆರೋಪ ಮಾಡಿದ ಕೂಡಲೆ ಸಾಬೀತು ಆಗುವುದಿಲ್ಲ. ಕಮಿಷನ್ ಯಾರು ಕೊಟ್ಟಿದ್ದು, ಯಾರು ತೆಗೆದುಕೊಂಡಿದ್ದು ಎಂಬುದು ಮೊದಲು ಸಾಬೀತು ಆಗಬೇಕು. ಇದೆಲ್ಲಾ ಸಾಬೀತು ಆದರೆ ಅವರ ಮೇಲೆ ಕ್ರಮ ಕೈಗೊಳ್ಳಬಹುದು' ಎಂದು ಹೇಳಿದ್ದರು.

'ಇದೀಗ ಮುಖ್ಯಮಂತ್ರಿ ಜೊತೆ ಮಾತನಾಡಿದ್ದೇನೆ, 'ನೀವೇನೂ ತಲೆ ಕೆಡಿಸಿಕೊಳ್ಳಬೇಡಿ, ನಾನೆಲ್ಲಾ ತನಿಖೆ ಮಾಡಿಸುತ್ತೇನೆ' ಎಂದು ಹೇಳಿದ್ದಾರೆ' ಎಂದು ಮಾಧ್ಯಮಗಳ ಮುಂದೆ ಮುಚ್ಚುಮರೆ ಇಲ್ಲದೇ ಸತ್ಯ ಬಿಚ್ಚಿಟ್ಟಿದ್ದರು ಈಶ್ವರಪ್ಪ. ಇದೀಗ ಸಾಮಾಜಿಕ ಮಾಧ್ಯಮದಲ್ಲಿ ಈಶ್ವರಪ್ಪನವರ ಭಾವಚಿತ್ರದ ಜೊತೆಗೆ 'ಸತ್ಯಕ್ಕೆ ಸಂದ ಜಯ' ಎಂಬ ಸಾಲು ಹರಿದಾಡುತ್ತಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಏಪ್ರಿಲ್ 16ರಂದು ಗದಗ ನಗರದಲ್ಲಿ ಜರುಗಿದ ಪಕ್ಷದ ಸಮಾರಂಭವೊಂದರಲ್ಲಿ, 'ಬಿಜೆಪಿಗೆ ಮುಜುಗರವಾಗಬಾರದೆಂದು ಈಶ್ವರಪ್ಪ ಸ್ವಯಂಪ್ರೇರಣೆಯಿಂದ ರಾಜೀನಾಮೆ ನೀಡಿದ್ದಾರೆ. ಶೀಘ್ರದಲ್ಲೇ ಆರೋಪಮುಕ್ತರಾಗುವ ವಿಶ್ವಾಸವಿದೆ... ಕಾಂಗ್ರೆಸ್‌ನವರು ತಾವೇ ಶುದ್ಧಹಸ್ತರು ಎನ್ನುವಂತೆ ವರ್ತಿಸುತ್ತಿದ್ದಾರೆ, ಸ್ವಲ್ಪ ದಿನದಲ್ಲಿ ಅವರಿಗೆ ಸತ್ಯವನ್ನು ಎದುರಿಸುವ ಕಾಲ ಸನ್ನಿಹಿತವಾಗಲಿದೆ...' ಎಂದು ಹೇಳಿದ್ದರು.

ಯಾವುದೇ ವ್ಯಕ್ತಿಯ ಮೇಲೆ ಆರೋಪ ಕೇಳಿ ಬಂದಾಗ ಅವರ ಹಿತೈಷಿಗಳು, ಸಂಬಂಧಿಕರು, ಗೆಳೆಯರು, 'ಅವರು ಆರೋಪಮುಕ್ತರಾಗುತ್ತಾರೆ' ಎಂಬ ಆಶಾಭಾವ ತಾಳುವುದರಲ್ಲಿ, ಹಾಗೆಂದು ಹೇಳುವುದರಲ್ಲಿ ಪ್ರಮಾದವೇನೂ ಇರಲಾರದು. ಆದರೆ ಸರ್ಕಾರದ ಮುಖ್ಯಸ್ಥರು ಇಂತಹ ಹೇಳಿಕೆ ನೀಡಿದಾಗ ತನಿಖೆಯ ಫಲಿತಾಂಶ ಯಾರ ಊಹೆಗಾದರೂ ನಿಲುಕಿಬಿಡುತ್ತದೆ.

'ಬಿ' ರಿಪೋರ್ಟ್ ಮತ್ತು 'ಕ್ಲೀನ್ ಚಿಟ್'ಗಳಿಗೆ ಇರುವ ಪಾವಿತ್ರ್ಯ ಎಲ್ಲ ಪಕ್ಷಗಳ ಆಡಳಿತಾವಧಿಯಲ್ಲೂ ಸಂಶಯಕ್ಕೆ ಈಡಾಗಿರುವುದನ್ನು ಕಾಣಬಹುದು. ಬಹುಕಾಲ ಅಧಿಕಾರ ನಡೆಸಿದ ಕಾಂಗ್ರೆಸ್ ಪಕ್ಷವು ತನಿಖಾ ಸಂಸ್ಥೆಗಳ ದುರುಪಯೋಗಕ್ಕೆ ಹೆಸರುವಾಸಿಯಾಗಿತ್ತು. ಎಷ್ಟರಮಟ್ಟಿಗೆ ಎಂದರೆ ಆಗ ಸಿಬಿಐ ಸಂಸ್ಥೆಯನ್ನು ಕಾಂಗ್ರೆಸ್ ಬ್ಯುರೊ ಆಫ್ ಇನ್ವೆಸ್ಟಿಗೇಷನ್ ಎಂದು ಕರೆಯಲಾಗುತ್ತಿತ್ತು. ಡಿವೈಎಸ್‌ಪಿ ಗಣಪತಿ ಆತ್ಮಹತ್ಯೆ ಪ್ರಕರಣದಲ್ಲಿ, ಗೃಹ ಸಚಿವರಾಗಿದ್ದ ಕೆ.ಜೆ.ಜಾರ್ಜ್ ವಿರುದ್ಧದ ಆರೋಪ ಸೇರಿದಂತೆ ಅನೇಕ ಪ್ರಕರಣಗಳಲ್ಲಿ ತನಿಖಾ ಸಂಸ್ಥೆಗಳು 'ಬಿ' ರಿಪೋರ್ಟ್ ಸಲ್ಲಿಸಿದ್ದವು. ಹಾಗಾಗಿಯೇ ಈಗಿನ ಅಧಿಕಾರಸ್ಥರು ವಿರೋಧ ಪಕ್ಷದ ಇಂತಹ ಚಾರಿತ್ರಿಕ ದೌರ್ಬಲ್ಯಗಳ ಕೊಡೆಯ ಕೆಳಗೆ ಆಶ್ರಯ ಪಡೆಯುವುದನ್ನು ಕಾಣಬಹುದು.

ಸಿದ್ದರಾಮಯ್ಯ ಅಧಿಕಾರಾವಧಿಯಲ್ಲಿ ಲೋಕಾಯುಕ್ತವನ್ನು ಮೂಲೆಗೊತ್ತಲು ರಚಿಸಿದ ಭ್ರಷ್ಟಾಚಾರ ನಿಗ್ರಹ ದಳದ ಬಗ್ಗೆಯೇ ವ್ಯಾಪಕ ಟೀಕೆಗಳಿವೆ. ಪಿ.ಎಸ್.ಐ. ನೇಮಕಾತಿ ಹಗರಣದಲ್ಲಿ ಪೊಲೀಸ್ ಇಲಾಖೆಯ ನೇಮಕಾತಿ ವಿಭಾಗದ ಮುಖ್ಯಸ್ಥರಾಗಿದ್ದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ (ಎಡಿಜಿಪಿ) ಅಮ್ರಿತ್ ಪೌಲ್ ಅವರು ಆರೋಪಿತರಾಗಿ ಜೈಲು ಸೇರಿದ್ದಾರೆ. ಇಂತಹ ಅಧಿಕಾರಿಗಳು ಮತ್ತು ತನಿಖಾ ಸಂಸ್ಥೆಗಳಿಂದ ಆಗುತ್ತಿರುವ ಅನಾಹುತಗಳ ಬಗ್ಗೆ ವ್ಯಕ್ತವಾಗುತ್ತಿರುವ ಕಳವಳವು ಅಧಿಕಾರಸ್ಥರ ಎದೆಗೆ ತಾಗದಿರುವುದು ದುರಂತ!

ಇನ್ನೊಂದೆಡೆ 'ನ್ಯಾಷನಲ್ ಹೆರಾಲ್ಡ್' ಪ್ರಕರಣಕ್ಕೆ ಸಂಬಂಧಿಸಿದಂತೆ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರ ವಿರುದ್ಧ ಜಾರಿ ನಿರ್ದೇಶನಾಲಯ ಕೈಗೊಂಡಿರುವ ವಿಚಾರಣೆಯನ್ನು 'ದ್ವೇಷ ರಾಜಕಾರಣ', 'ಅಧಿಕಾರ ದುರುಪಯೋಗ' ಎಂದು ದೂಷಿಸುವ ಕಾಂಗ್ರೆಸ್ ಪಕ್ಷವು ದೇಶದಾದ್ಯಂತ ಬೀದಿಗಿಳಿದು ಪ್ರತಿಭಟಿಸುತ್ತಿದೆ. 'ವಿಚಾರಣೆ ಎದುರಿಸಲು ಹಿಂಜರಿಕೆ ಬೇಕೆ? ತನಿಖೆಗೆ ವಿರೋಧ ಏಕೆ? ತಪ್ಪು ಮಾಡದಿದ್ದರೆ ಹೆದರಿಕೆ ಏಕೆ? ತನಿಖೆ ನಂತರ ಸತ್ಯ ಹೊರಬರಲಿ...' ಇಂತಹ ಮಾತುಗಳು, ತರ್ಕಗಳು ಹೊರನೋಟಕ್ಕೆ ಸರಿಯೆಂದು ತೋರುತ್ತವೆ. ಆದರೆ ವಾಸ್ತವದಲ್ಲಿ ದುರುದ್ದೇಶಪೂರಿತ ತನಿಖೆಯ ವೈಖರಿ, ಗುರಿ ನಾವೆಣಿಸಿದಷ್ಟು ಸರಳವೂ ಸುಸಂಬದ್ಧವೂ ಆಗಿರಲಾರದು.

ಅಂದರೆ ವಿವಿಧ ತನಿಖಾ ಸಂಸ್ಥೆಗಳು ಬೇಕಾದವರನ್ನು ಕಾಪಾಡಲು, ಬೇಡದವರನ್ನು ಕಾಡಲು ಅಧಿಕಾರಸ್ಥರ ಬತ್ತಳಿಕೆಯಲ್ಲಿ ಲಭ್ಯವಿರುವ ಅಸ್ತ್ರಗಳಾಗಿವೆ. ತನಿಖಾ ಸಂಸ್ಥೆಗಳ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ ಹರಣಕ್ಕೆ ಕಾರಣವಾಗುವ ಅಧಿಕಾರಸ್ಥರ ಹಸ್ತಕ್ಷೇಪದ ದೀರ್ಘಕಾಲೀನ ಪರಿಣಾಮದ ಬಗ್ಗೆ ಯಾರೂ ಯೋಚಿಸುತ್ತಿಲ್ಲ. ಎಲ್ಲರಿಗೂ ತಮ್ಮ ಅಧಿಕಾರಾವಧಿಯ ಸಾಂದರ್ಭಿಕ ಲಾಭ–ನಷ್ಟಗಳಷ್ಟೇ ಮುಖ್ಯವಾಗಿವೆ.

ತನಿಖಾ ಸಂಸ್ಥೆಗಳ ಬಗ್ಗೆ ಒಮ್ಮೆ ಅಪನಂಬಿಕೆ ಹುಟ್ಟಿದ ಮೇಲೆ ಯಾವ ಪ್ರಕರಣದಲ್ಲಿ ನ್ಯಾಯ ಕೆಲಸ ಮಾಡಿತು, ಇನ್ಯಾವ ಪ್ರಕರಣದಲ್ಲಿ ಅನ್ಯಾಯ ಮೂಗು ತೂರಿಸಿತು ಎಂದು ವಿಂಗಡಿಸುವುದಾದರೂ ಹೇಗೆ? ತನಿಖೆಯ ಫಲಿತಾಂಶವನ್ನು ಸತ್ಯಾಸತ್ಯ ಬದಿಗಿಟ್ಟು ತಮ್ಮಿಷ್ಟಕ್ಕೆ ತಕ್ಕಂತೆ ಅರ್ಥೈಸುವ ಅವಕಾಶವೋ, ಅನಾಹುತವೋ ಎದುರಿಗೆ ಬಂದು ನಿಂತಾಗ ಗೋಣು ಎತ್ತ ತಿರುಗಿಸುವುದು? ದಿಕ್ಕೆಟ್ಟ ವ್ಯವಸ್ಥೆಯ 'ಸಂಶಯದ ಲಾಭ' ಎಲ್ಲರಿಗೂ ದಕ್ಕುವಂತಾದರೆ ಅನಾಚಾರದಲ್ಲೂ ಸಮಾನತೆ ಎಂದು ಸಂತೃಪ್ತಿ ಪಡೋಣವೇ?

ಚುರುಮುರಿ

ಗ್ರೇಟ್ ಚೇಂಜ್!

• ಬಿ.ಎನ್. ಮಲ್ಲೇಶ್

'ರೀ... ನಾವೂ ಇಂಗ್ಲೆಂಡ್‌ಗೆ ಹೋಗಿ ಸೆಟ್ಲ್ ಆಗೋಣರೀ...'

ಮಡದಿ ಮಾತು ಕೇಳಿ ಚಕಿತಗೊಂಡ ತೆಪರೇಸಿ, 'ಯಾಕೇ... ನಿನ್ನೆ ಇನ್ನೂ ಚೆನ್ನಾಗಿದ್ದೆ, ಇವತ್ತೇನಾಯ್ತು?' ಎಂದ.

'ನಿಮ್ ತಲೆ, ಪೇಪರ್ ನೋಡಿಲ್ವ? ಇನ್ಮೇಲೆ ಇಂಗ್ಲೆಂಡ್‌ನ ನಾವೇ ಆಳೋದು'.

'ಅಂದ್ರೆ?'

'ನಮ್ ಸುಧಕ್ಕನ ಅಳಿಯ ರಿಷಿ ಅಂತ. ಅವರೇ ಮುಂದಿನ ಬ್ರಿಟನ್ ಪ್ರಧಾನಿ ಆಗೋದು...'

'ಸುಧಕ್ಕ ಅಂದ್ರೆ... ಅದೇ ನಿಮ್ ದೊಡ್ಡಪ್ಪನ ಚಿಕ್ಕತ್ತೆಯ ಮೂರನೇ ಮಗನ ಹೆಂಡ್ತಿ ಇದ್ರಲ್ಲ ಅವರಾ?'

'ನಂಗೆ ಸಿಟ್ ಬಂದ್ರೆ ಅಷ್ಟೆ... ಸುಧಕ್ಕ ಅಂದ್ರೆ ನಮ್ ಇನ್ಫೋಸಿಸ್ ಸುಧಕ್ಕ ಕಣ್ರೀ...'

'ಓ... ಅವರಾ? ಸರಿ. ಅವರ ಅಳಿಯ ಫೈನಲ್ ಸುತ್ತಿಗೆ ಬಂದಿದಾರಂತೆ... ಇನ್ನೂ ಪ್ರಧಾನಿ ಆಗಿಲ್ವಲ್ಲ?'

'ಆಗ್ತಾರೆ ಕಣ್ರೀ, ಇನ್ಮೇಲೆ ಅಮೆರಿಕ, ಇಂಗ್ಲೆಂಡ್ ಎಲ್ಲ ನಮ್ದೇ. ಅಮೆರಿಕದಲ್ಲಿ ಉಪಾಧ್ಯಕ್ಷೆ ಕಮಲಕ್ಕ ನಮ್ಮೋರು, ಇಂಗ್ಲೆಂಡ್‌ನಲ್ಲಿ ಪ್ರಧಾನಿನೇ ನಮ್ಮೋರು. ಇನ್ಮೇಲೆ ಇಂಡಿಯಾನೂ ಸೂರ್ಯ ಮುಳುಗದ ದೇಶ ಆಗುತ್ತೆ ನೋಡ್ತಿರಿ. ಸೋ... ನಾವೂ ಇಂಗ್ಲೆಂಡ್‌ಗೆ ಹೋಗ್ತಾ ಇದೀವಿ...'

'ಅಲ್ಲಿ ಬಿಸಿಲು 40 ಡಿಗ್ರಿ ಅಂತ ಪೇಪರ್‌ನಲ್ಲಿ ಬಂದಿದೆ ಕಣೇ...'

'ಬಿಸಿಲಾ? 50 ಡಿಗ್ರಿ ಆಗ್ಲಿ, ಹೋಗೋಣ. ಬ್ರಿಟಿಷ್‌ನೋರು ನೂರಾರು ವರ್ಷ ಭಾರತ ಆಳಿದ್ರು. ಈಗ ನಾವು ಇಂಗ್ಲೆಂಡ್ ಆಳೋ ಕಾಲ ಬಂದಿದೆ. ಎಂಥ ಚೇಂಜ್ ಅಲ್ವ?'

'ಹೌದೌದು, ಗ್ರೇಟ್ ಚೇಂಜ್...!'

'ಈಗ ಆ ಚೇಂಜ್ ನಮ್ಮನೇಲೂ ಆಗ್ಬೇಕು. ಇಷ್ಟು ದಿನ ನೀವು ಮನೆ ಅಧಿಕಾರ ನಡೆಸಿದ್ದು ಸಾಕು, ಇನ್ಮೇಲೆ ನಂಗೆ ಅಧಿಕಾರ ಬಿಟ್ಕೊಡಿ...'

'ಆ... ಏನಂದೆ? ಯಾಕೋ ನಿನ್ನೆಯಿಂದ ಎರಡೂ ಕಿವಿ ಮುಚ್ಕಂಡಿದಾವೆ ಕಣೆ, ಡಾಕ್ಟರತ್ರ ಹೋಗ್ಬೇಕು...' ಮೆಲ್ಲಗೆ ಮೇಲಕ್ಕೆದ್ದ ತೆಪರೇಸಿ!

ಸಂಗತ

ಮಕ್ಕಳಲ್ಲಿ ಮೂಡಲಿ ತನ್ಮಯ ಭಾವ

ಮಂಕಾಗಿರುವ ಮಕ್ಕಳಲ್ಲಿ ಈ ಹಿಂದಿನಂತೆ ಪುನಃ ಚೈತನ್ಯ ಉಕ್ಕಿಸುವ, ಕಲಿಕೆಯಲ್ಲಿ ತನ್ಮಯತೆ ಮೂಡಿಸುವ ಬಗೆ ಹೇಗೆ?

• ನರೇಂದ್ರ ರೈ ದೇರ್ಲ

ನಾನೊಬ್ಬ ಪದವಿ ಕಾಲೇಜಿನ ಕನ್ನಡ ಪ್ರಾಧ್ಯಾಪಕ. ಮಕ್ಕಳಲ್ಲಿರುವ ಸೂಕ್ಷ್ಮ ಸಂವೇದನೆಗಳು ಎಚ್ಚರ ಇದ್ದಾಗ ಮಾತ್ರ ನನ್ನ ತರಗತಿ ಜೀವಂತವಾಗಿರಬಲ್ಲದು ಎಂಬುದನ್ನು ನಂಬುವವ. ಇತ್ತೀಚೆಗೆ ನನಗೆ ವಯಸ್ಸಾಯಿತೋ ವಿದ್ಯಾರ್ಥಿಗಳ ಮನಸು ಹಾಳಾಯಿತೋ ಗೊತ್ತಿಲ್ಲ. ಪ್ರತಿ ತರಗತಿಯಲ್ಲೂ ಈ ಮಕ್ಕಳಿಗೆ ಏನಾಗಿದೆ? ಯಾಕೆ ಈ ನಿಷ್ಕ್ರಿಯತೆ, ಯಂತ್ರಸ್ಥಿತಿ ಎಂಬ ಆತಂಕ ಕಾಡುತ್ತಿದೆ. ಪಂಪ, ಬಸವ, ಬೇಂದ್ರೆ, ತೇಜಸ್ವಿ ಅವರ ಮೂಲಕ ಪಠ್ಯದ ದಾರಿಯಲ್ಲಿ ಈ ಮಕ್ಕಳನ್ನು ಯಂತ್ರಸ್ಥಿತಿಯಿಂದ ಎಬ್ಬಿಸಲು ನಾನು ಪಡುವ ಪ್ರಯತ್ನ ಬರೀ ನನ್ನೊಬ್ಬನದ್ದಲ್ಲ, ಬೇರೆ ಶಾಲಾ– ಕಾಲೇಜುಗಳಲ್ಲಿ ಇದೇ ಸ್ಥಿತಿ ಎದುರಿಸುತ್ತಿರುವ ಮೇಷ್ಟ್ರುಗಳದ್ದು ಕೂಡಾ.

ಕೊರೊನಾ ತೀವ್ರವಾಗಿ ಬಾಧಿಸಿದ ಅವಧಿಯಲ್ಲಿ ಈ ಸೋಂಕಿನ ಕುರಿತು ಮಾಧ್ಯಮಗಳಲ್ಲಿ ಬಹಳಷ್ಟು ಚರ್ಚೆಯಾಗಿದೆ. ಪತ್ರಿಕೆಗಳಲ್ಲಿ ಸಾವಿರಾರು ಲೇಖನಗಳು ಪ್ರಕಟವಾಗಿವೆ. ಆರೋಗ್ಯ– ವಿಜ್ಞಾನ ಕ್ಷೇತ್ರದಲ್ಲಿ ಸಂಶೋಧನೆಗಳಾಗಿವೆ. ಲಸಿಕೆ, ಔಷಧಗಳು ಬಂದವು. ಆದರೆ, ಕೊರೊನಾ ಕಾಣಿಸಿಕೊಂಡ ನಂತರದಲ್ಲಿ ಮಕ್ಕಳ ಮನಸ್ಸಿನಲ್ಲಿ ಆಗಿರುವ ಪಲ್ಲಟಗಳ ಕುರಿತು ಪ್ರಕಟವಾದ ವೈಜ್ಞಾನಿಕ ಬರಹಗಳು ಕಡಿಮೆ.

ಪ್ರೌಢಶಾಲೆ, ಪಿಯುಸಿ, ಪದವಿ ತರಗತಿ ಯಾವುದೇ ಇರಲಿ, ಅಲ್ಲಿರುವ ಮಕ್ಕಳ ತಾಳ್ಮೆ, ಗ್ರಹಣಶಕ್ತಿ, ಒಳಗೊಳ್ಳುವ, ಕೇಳುವ, ಬರೆಯುವ, ಭಾವಿಸುವ, ಉತ್ತರಿಸುವ- ಹೀಗೆ ಎಲ್ಲದರಲ್ಲೂ ಕುಸಿತ, ಅಸ್ಥಿರತೆ ಕಣ್ಣಿಗೆ ರಾಚುವಂತಿದೆ. ಶಾಲಾ- ಕಾಲೇಜಿಗೆಂದು ಬೆಳಿಗ್ಗೆ ಹೊರಡುವ ವಿಚಾರದಲ್ಲಿ ವಿದ್ಯಾರ್ಥಿಗಳಲ್ಲಿ ಅದೇ ಉಲ್ಲಾಸ, ಖುಷಿ ಇದೆ. ಆದರೆ, ತರಗತಿಯ ಒಳಗಡೆ ನೆಟ್ಟಗೆ ಕೂತು ಪಾಠ ಕೇಳುವುದು, ಆಲಿಸುವುದು ತೀರಾ ಸಹಿಸಲು ಅಸಾಧ್ಯದಂತೆ ಗೋಚರಿಸುತ್ತಿದೆ. ಇವರೆಲ್ಲರೂ ಈಗ ಆನ್‌ಲೈನ್‌ಗಿಂತ ಆಫ್‌ಲೈನ್ ಇಷ್ಟಪಡುವವರೇ!

ಕೊರೊನಾ ಕಾಲಿಡುವುದಕ್ಕೆ ಮೊದಲು ತರಗತಿಯಲ್ಲಿ ಭೌತಿಕವಾಗಿ ಹಾಜರಿರುವ ಮಕ್ಕಳು ಮತ್ತು ನಿಜವಾಗಿ ಮನಸ್ಸಿಟ್ಟು ಪಾಠ ಕೇಳುವ ಮಕ್ಕಳ ಸಂಖ್ಯೆಯಲ್ಲಿ ವ್ಯತ್ಯಾಸ ಇರಲಿಲ್ಲ. ಈಗ ಸ್ಥಿತಿ ಪೂರ್ತಿ ಬದಲಾಗಿದೆ. ಮಕ್ಕಳೆಲ್ಲಾ ಪಾಠ ಕೇಳುತ್ತಾರೆಂಬುದು ಶಿಕ್ಷಕರಲ್ಲಿನ ಪೂರ್ವಕಲ್ಪಿತ ಭ್ರಮೆಯೇ ವಿನಾ ನಿಜವಲ್ಲ.

ಈ ಹಿಂದೆ, ಬರೆಯುವ ಪರೀಕ್ಷೆಯಲ್ಲಿ ಸಿಗುವ ಅಂಕಗಳೇ ಭವಿಷ್ಯಕ್ಕೆ ನಿರ್ಧಾರಕವಾಗಿದ್ದವು. ಅಷ್ಟೇ ಅಲ್ಲ, ಬದುಕುವ ಪರೀಕ್ಷೆಗೆ ಪೂರಕವಾಗಿ ಮಕ್ಕಳಿಗೆ ತರಗತಿಯ ಓದು, ಪಾಠ– ಪ್ರವಚನವು ಗುಣಾತ್ಮಕ ನಿರ್ಬಂಧವಾಗಿ ಕಾಡುತ್ತಿತ್ತು. ಕೊರೊನಾ ಯಾವಾಗ ಪರೀಕ್ಷೆಯನ್ನೇ ಕೊಂದು ಹಾಕಿ ಸುಲಭ ಬಡ್ತಿ ಸಾಧ್ಯವಾಯಿತೋ ಆಗಲೇ ಅಧ್ಯಯನದ ಶಿಸ್ತು ಆಯ ತಪ್ಪಿತು. ಪಠ್ಯದಾಚೆಗೆ, ಬದುಕುವ ಪರೀಕ್ಷೆಗೆ ಪೂರಕವಾಗುವ ಜೀವನಾನುಭವ, ಕಥೆ, ದೃಷ್ಟಾಂತ, ಉಪಮೆಗಳನ್ನು ಹೇಳುವಾಗ ಆಲಿಸುವ, ಸಂಭ್ರಮಿಸುವ ಒಂದಷ್ಟು ಮನಸ್ಸುಗಳು ಆಗ ನಮ್ಮಂಥ ಶಿಕ್ಷಕರಿಗೆ ಸಿಗುತ್ತಿದ್ದವು. ಆಫ್‌ಲೈನ್ ಅಥವಾ ಸಮ್ಮುಖ ಶಿಕ್ಷಣದ ಬಹುದೊಡ್ಡ ಸಾಧ್ಯತೆ ಅಥವಾ ಸುಖವೇ ಅದು.

ಕೊರೊನಾ ಅವಧಿಯಲ್ಲಿ ಮಕ್ಕಳು ಖಾಲಿ ಬೀಳದಂತೆ ಆನ್‌ಲೈನ್‌ನಲ್ಲಿ ಪಾಠಗಳಾದವೇ ಹೊರತು ಮನೋವಿಕಸನದ ಯಾವುದೇ ಪಠ್ಯೇತರ ಕಾರ್ಯಕ್ರಮಗಳು ನಡೆಯಲಿಲ್ಲ. ಅದೇ ದೊಡ್ಡ ಕೊರತೆ. ಶಿಕ್ಷಣ- ವಿಕಸನವೆಂದರೆ ಪಾಠ-ಪಠ್ಯಗಳು ಮಾತ್ರವಲ್ಲ, ಶಿಕ್ಷಣಾಲಯಗಳಲ್ಲಿ ನಡೆಯುವ ಕಲೆ, ಸಂಗೀತ, ಕ್ರೀಡೆ, ಗೋಷ್ಠಿ, ನಾಟಕ, ಭಾಷಣ, ಪ್ರದರ್ಶನಗಳು ಕೂಡಾ ಮನೋವಿಕಸನದ ಚೋದಕಗಳೇ. ಈ ಎರಡೂವರೆ ವರ್ಷಗಳ ಅವಧಿಯಲ್ಲಿ ಗುಂಪು ಸೇರಬಾರದು, ಕಾರ್ಯಕ್ರಮ ಮಾಡಬಾರದು, ಬರೀ ಪಾಠ- ಪರೀಕ್ಷೆಗಳಿಗಷ್ಟೇ ಚಟುವಟಿಕೆ ಸೀಮಿತವಾಗಿರಲಿ ಎಂಬ ಕೋವಿಡ್ ನಿಯಮಗಳು ಮಕ್ಕಳ ಮನಸ್ಸನ್ನು ಮಂಕಾಗಿಸಿದವು.



ಇಲಾಖೆ, ಶಿಕ್ಷಕರು, ಪೋಷಕರು ಒಪ್ಪಿ ಆನ್‌ಲೈನ್‌ಗಾಗಿಯೇ ಮಕ್ಕಳ ಕೈಗಿತ್ತ ಮೊಬೈಲ್‌ಗಳು, ಟ್ಯಾಬ್‌ಗಳು ಪಾಠದಾಚೆ ಅವರಿಗೆ ಏನೇನೋ ಮನಸ್ಸಿನೊಳಗೆ ತೂರಿಸಿದವು. ಶೈಕ್ಷಣಿಕ ಕೂಡುಕೂಟ ರಂಜನೆಯಾಚೆಯ ಅಂತರ್ಜಾಲ ವಿಕೃತಿಗಳು, ಆಟಗಳು ಮಕ್ಕಳ ಮನಸ್ಸು ಕೆಡಿಸಿದವು. ಖಾಸಗಿ ಕಾಲೇಜೊಂದರಲ್ಲಿ ಪಾಠ ಮಾಡುವ ಉಪನ್ಯಾಸ ಗೆಳೆಯರೊಬ್ಬರು ನೋವಿನಿಂದ ನನಗೆ ಹೇಳಿದ ಮಾತಿದು... 'ನಾನೀಗ ನಿವೃತ್ತಿಯ ಅಂಚಿನಲ್ಲಿದ್ದೇವೆ. ದಿನಾ ಕಾಲೇಜು ಕ್ಯಾಂಪಸ್ಸಿನೊಳಗೆ ಬಂದಾಗ ಮಕ್ಕಳಿಂದ ಒಂದಷ್ಟು ಪ್ರೀತಿ, ಗೌರವದ ನಮಸ್ಕಾರಗಳಾದರೂ ಸಿಗುತ್ತಿತ್ತು. ಅದು ಕೃತಕದ್ದೇ ಇರಲಿ, ನಕಲಿ ಮುಖವಾಡವೇ ಇರಲಿ ಅದು ಪ್ರೀತಿಯದ್ದೇ ಎಂದು ನಾನಂತೂ ನಂಬುತ್ತಿದ್ದೆ. ಈಗ ಗುರುಗಳಿಗೆ ನಮಸ್ಕರಿಸದ ಮಕ್ಕಳೇ ನಮ್ಮ ಕ್ಯಾಂಪಸ್ಸು ತುಂಬಾ ಇದ್ದಾರೆ. ನಮ್ಮ ಮಕ್ಕಳಿಗೆ ಈಗ ಏನಾಗಿದೆ' ಎಂಬ ಪ್ರಶ್ನೆ ಅವರದ್ದು.

ಕಲಿಕೆಯ ಬಗೆಗೆ ನಿರಾಸಕ್ತಿ ಇರುವ ಮಕ್ಕಳನ್ನು ದಂಡಿಸಿ ಸರಿಮಾಡುವ ಕಾಲವೂ ಇದಲ್ಲ. ಭೌತಿಕವಾಗಿ ಶಿಕ್ಷಣ ಕೇಂದ್ರಗಳಲ್ಲಿ, ಇಲಾಖೆಯ ಹಂತದಲ್ಲಿ ಬಹಳಷ್ಟು ಸುಧಾರಣೆಯಾಗಿರಬಹುದು. ಇವೆಲ್ಲವೂ ಕಲಿಕೆಯ ಗುಣಮಟ್ಟವನ್ನು ಉನ್ನತೀಕರಿಸುತ್ತವೆಯೇ? ಅಂತಹ ನಂಬಿಕೆಯಲ್ಲಿನ ನಿಜಾಂಶ ಎಷ್ಟು? ಮಂಕಾಗಿರುವ ಮಕ್ಕಳಲ್ಲಿ ಈ ಹಿಂದಿನಂತೆ ಪುನಃ ಚೈತನ್ಯ ಉಕ್ಕಿಸುವ, ಕಲಿಕೆಯಲ್ಲಿ ತನ್ಮಯತೆ ಮೂಡಿಸುವ ಬಗೆ ಹೇಗೆ?

ವಾಚಕರ ವಾಣಿ

ದೈಹಿಕ ಶಿಕ್ಷಣ ಶಿಕ್ಷಕರನ್ನು ನೇಮಿಸಿ

ಪದವಿ ಪೂರ್ವ ಶಿಕ್ಷಣವು ವಿದ್ಯಾರ್ಥಿಗಳ ಬದುಕಿನಲ್ಲಿ ಪ್ರಮುಖ ಘಟ್ಟ. ಈ ಹಂತದಲ್ಲಿ ಶೈಕ್ಷಣಿಕ ಅಭಿವೃದ್ಧಿಯ ಜೊತೆಗೆ ಪಠ್ಯೇತರ ಚಟುವಟಿಕೆಗಳೂ ಮುಖ್ಯವಾಗುತ್ತವೆ. ಯುವಜನರು ಓದಿನ ಜೊತೆಗೆ ಕ್ರೀಡೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರೆ ಅವರ ಗ್ರಹಿಕೆಯ ಮಟ್ಟದಲ್ಲಿಯೂ ಪರಿಣಾಮಕಾರಿ ಬದಲಾವಣೆಗಳು ಆಗುತ್ತವೆ. ಇದಕ್ಕಾಗಿ ಪದವಿ ಪೂರ್ವ ಹಂತದಲ್ಲಿ ದೈಹಿಕ ಶಿಕ್ಷಣ ಶಿಕ್ಷಕರ ಅಗತ್ಯವಿದೆ.

ಸರ್ಕಾರವು ಪದವಿ ಪೂರ್ವ ಶಿಕ್ಷಣ ಇಲಾಖೆಗೆ ದೈಹಿಕ ಶಿಕ್ಷಣ ಶಿಕ್ಷಕರನ್ನು ನೇಮಿಸಿಕೊಳ್ಳುವುದಿಲ್ಲ. ಖಾಸಗಿ ಕಾಲೇಜುಗಳಲ್ಲಿ ದೈಹಿಕ ಶಿಕ್ಷಣ ಶಿಕ್ಷಕರನ್ನು ನೇಮಿಸಿಕೊಂಡು ವಿದ್ಯಾರ್ಥಿಗಳಿಗೆ ಓದಿನ ಜೊತೆಗೆ ಕ್ರೀಡೆಯಲ್ಲೂ ತೊಡಗಿಸಿಕೊಳ್ಳಲು ಅನುವು ಮಾಡಿಕೊಡಲಾಗುತ್ತದೆ. ಆದರೆ, ಸರ್ಕಾರಿ ಕಾಲೇಜುಗಳ ವಿದ್ಯಾರ್ಥಿಗಳು ಇದರಿಂದ ವಂಚಿತರಾಗುತ್ತಿದ್ದಾರೆ. ಸರ್ಕಾರವು ದೈಹಿಕ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿ ಪೂರೈಸಿರುವ ಶಿಕ್ಷಕರನ್ನು ಪದವಿ ಪೂರ್ವ ಕಾಲೇಜುಗಳಿಗೂ ನೇಮಿಸಿಕೊಂಡರೆ, ಉದ್ಯೋಗ ಸೃಷ್ಟಿಯ ಜೊತೆಗೆ ಪದವಿ ಪೂರ್ವ ಕಾಲೇಜುಗಳ ಮಕ್ಕಳಲ್ಲಿ ಕ್ರೀಡಾಸಕ್ತಿ ಬೆಳೆಸಿದಂತಾಗುತ್ತದೆ.

ಹುಲಿಕುಂಟೆ ಮೂರ್ತಿ, ಬೆಂಗಳೂರು

ನಿರುದ್ಯೋಗ ಭತ್ಯೆ ಇಲ್ಲಿ ಸಾಧ್ಯವೇ?

'ಸರ್ಕಾರದ ನೆರವು ಮತ್ತು ಜನರ ಹಕ್ಕು' ಲೇಖನದಲ್ಲಿ ಮಲ್ಲಿಕಾರ್ಜುನ ಹೆಗ್ಗಳಗಿಯವರು (ಸಂಗತ, ಜುಲೈ 21) ಆಸ್ಟ್ರೇಲಿಯಾದಲ್ಲಿ ನಿರುದ್ಯೋಗಿಗಳಿಗೆ ಭತ್ಯೆ ನೀಡುವ ವಿಷಯ ಪ್ರಸ್ತಾಪಿಸಿದ್ದಾರೆ. ನಮ್ಮ ದೇಶದಲ್ಲಿ ಏನಾದರೂ ಇದನ್ನು ಜಾರಿಗೆ ತಂದರೆ ಏನಾಗಬಹುದು ಎಂಬುದನ್ನು ಒಮ್ಮೆ ಊಹಿಸಿಕೊಳ್ಳಿ.

ಕೋಟಿಗಟ್ಟಲೆ ವ್ಯವಹಾರ ಮಾಡಿದರೂ ಯಾವುದೇ ತೆರಿಗೆ ಕಟ್ಟದಿರುವ ಒಂದು ದೊಡ್ಡ ವರ್ಗವೇ ನಮ್ಮಲ್ಲಿದೆ. ರಿಯಲ್ ಎಸ್ಟೇಟ್ ದಲ್ಲಾಳಿಗಳು, ಪುಡಿ ರೌಡಿಗಳು, ರೋಲ್‌ಕಾಲ್ ದಂಧೆ ಮಾಡಿಕೊಂಡೇ ಹೇರಳವಾಗಿ ಹಣ ಗಳಿಸುವವರು, ಅನೇಕ ರೀತಿಯ ಮಧ್ಯವರ್ತಿಗಳು, ರಾಜಕೀಯ ನೇತಾರರ ಹಿಂಬಾಲಕರಂತೆ ಓಡಾಡಿಕೊಂಡು ಕೋಟ್ಯಂತರ ರೂಪಾಯಿ ಬಾಚುವವರು... ಇವರ‍್ಯಾರೂ ತೆರಿಗೆ ಪಾವತಿದಾರರಲ್ಲ. ಇವರೆಲ್ಲ ನಿರುದ್ಯೋಗ ಭತ್ಯೆಗೆ ಅರ್ಜಿ ಹಾಕಲು ಎಲ್ಲ ರೀತಿಯಲ್ಲಿ ಅರ್ಹರಾಗಿಬಿಡುತ್ತಾರೆ! ಅಷ್ಟೇ ಅಲ್ಲ, ಅದನ್ನು ಪಡೆಯಲು ವಶೀಲಿಯನ್ನೂ ಮಾಡುತ್ತಾರೆ. ನಮ್ಮ ದೇಶದಲ್ಲಿ ನಿರುದ್ಯೋಗ ಭತ್ಯೆ ಯೋಜನೆಯನ್ನು ಜಾರಿಗೆ ತಂದರೆ ಹಾಸ್ಯಾಸ್ಪದ ಆಗಿಬಿಡುತ್ತದೆ. ಇದಕ್ಕೆಲ್ಲ ನಮ್ಮಲ್ಲಿರುವ ಪ್ರಾಮಾಣಿಕತೆಯ ಕೊರತೆಯೇ ಮುಖ್ಯ ಕಾರಣ.

ಡಾ.ಕೆ.ಎಸ್. ಗಂಗಾಧರ, ಶಿವಮೊಗ್ಗ

ಜನರಲ್ಲಿ ಒಗ್ಗಟ್ಟಿನ ಕೊರತೆ: ಸರ್ಕಾರಕ್ಕೆ ವರದಾನ

ಚಿಲ್ಲರೆ ಹಣದುಬ್ಬರವು ಶೇಕಡ 7ಕ್ಕಿಂತ ಹೆಚ್ಚಿಗೆ ಇದ್ದಾಗಲೂ ನಿಯಂತ್ರಣಕ್ಕೆ ಒತ್ತು ನೀಡದೆ ದಿನಬಳಕೆ ಆಹಾರ ಪದಾರ್ಥಗಳ ಮೇಲೆ ತೆರಿಗೆ ವಿಧಿಸಿ, ಬೆಲೆ ಏರಿಕೆಯ ಬಿಸಿ ಮತ್ತಷ್ಟು ಹೆಚ್ಚುವಂತೆ ಮಾಡುವುದು ಯಾವುದೇ ಜನಪರ ಸರ್ಕಾರದ ಲಕ್ಷಣವಲ್ಲ. ಕಡುಬಡವರ ಮೇಲೆ ಇದರ ಪರಿಣಾಮ ಘೋರ.

ತೆರಿಗೆ ಹಾಗೂ ಬೆಲೆ ಏರಿಕೆಯ ವಿರುದ್ಧ ಜನರು ದನಿ ಎತ್ತಬೇಕು. ಆದರೆ, ಈ ವಿಚಾರದಲ್ಲಿ ಜನರಲ್ಲಿ ಒಗ್ಗಟ್ಟು ಇಲ್ಲದಿರುವುದು ಸರ್ಕಾರಕ್ಕೆ ವರವಾಗಿ ಪರಿಣಮಿಸಿದೆ. ಜನರು ಇನ್ನಾದರೂ ಎಚ್ಚೆತ್ತುಕೊಳ್ಳಬೇಕು.

ಬಿ.ಎಸ್. ಪಾಟೀಲ್ ಹುನಗುಂದ, ಬೆಂಗಳೂರು

ಜಿಎಸ್‌ಟಿ ಬಲೆ ಮತ್ತು ಸೂಕ್ಷ್ಮದರ್ಶಕ

ಬಹುತೇಕ ಎಲ್ಲ ವಸ್ತುಗಳೂ ಸೇವೆಗಳೂ ಈಗ ಜಿಎಸ್‌ಟಿ ವ್ಯಾಪ್ತಿಗೆ ಬಂದಂತಿವೆ. ಯಾವುದಾದರೂ ಬಾಕಿ ಇದೆಯೇ ಎಂದು ಸೂಕ್ಷ್ಮದರ್ಶಕದಲ್ಲಿ ಹುಡುಕಬೇಕಾಗಿದೆ. ಅಂದಹಾಗೆ, ಸರ್ಕಾರಿ ಕಚೇರಿಗಳಲ್ಲಿ ಹೆಚ್ಚುತ್ತಲೇ ಇರುವ ಲಂಚದ ಪ್ರಮಾಣ ಹಾಗೂ ಈಗ ಜಗಜ್ಜಾಹೀರಾಗಿರುವ ಶೇಕಡ 40ರ ಕಮಿಷನ್‌ನಲ್ಲಿ ಜಿಎಸ್‌ಟಿ ಸೇರಿದೆಯೋ ಅಥವಾ ಅದನ್ನು ಪ್ರತ್ಯೇಕವಾಗಿ ನೀಡಬೇಕೋ ಎಂಬ ಬಗ್ಗೆ ಸ್ಪಷ್ಟೀಕರಣ ಎಲ್ಲಿ ದೊರಕೀತು?

ಬಿ.ಎನ್. ಭರತ್, ಬೆಂಗಳೂರು

ಪ್ರಧಾನಿ ಆಯ್ಕೆ: ಬ್ರಿಟನ್ ಮಾದರಿ

ಬ್ರಿಟನ್‌ನಲ್ಲಿ ಹೊಸ ಪ್ರಧಾನಿಯನ್ನು ಆಯ್ಕೆ ಮಾಡುವ ಪ್ರಕ್ರಿಯೆಯನ್ನು ನೋಡಿದಾಗ, ಅಲ್ಲಿ ಪ್ರಜಾಪ್ರಭುತ್ವ ಕಾರ್ಯನಿರ್ವಹಿಸುವ ವೈಖರಿಯ ಬಗ್ಗೆ ಹೆಮ್ಮೆ ಅನಿಸುತ್ತದೆ. ಪ್ರತಿಯೊಂದು ಕ್ರಿಯೆಯೂ ಲೆಕ್ಕಾಚಾರದಂತೆ, ಪ್ರಜಾಪ್ರಭುತ್ವದ ತತ್ವ ಮತ್ತು ನಿಯಮಾವಳಿಗಳಿಗೆ ಅನುಗುಣವಾಗಿ ಪಾರದರ್ಶಕವಾಗಿ ನಡೆಯುತ್ತಿದ್ದು ಎಲ್ಲಿಯೂ ಆರೋಪ ಮತ್ತು ದೂಷಣೆಗೆ ಆಸ್ಪದ ಕಾಣುವುದಿಲ್ಲ.

'ಹೈಕಮಾಂಡ್ ಹೆಸರಿಸಿದ ವ್ಯಕ್ತಿಯನ್ನು ನಾವು ಸರ್ವಾನುಮತದಿಂದ ನಮ್ಮ ಧುರೀಣರನ್ನಾಗಿ ಆಯ್ಕೆ ಮಾಡುತ್ತೇವೆ' ಎನ್ನುವ ಭಾರತದ ರಾಜಕೀಯ ಪಕ್ಷಗಳು ಮತ್ತು ಧುರೀಣರು ಬ್ರಿಟನ್‌ನಲ್ಲಿ ನಡೆಯುತ್ತಿರುವ ಪ್ರಧಾನಿ ಆಯ್ಕೆಯ ಪ್ರಕ್ರಿಯೆ ಬಗ್ಗೆ ಗಮನಹರಿಸಬೇಕು.

ರಮಾನಂದ ಶರ್ಮಾ, ಬೆಂಗಳೂರು

ತಕ್ಷಣದ ಸ್ಪಂದನ ಅಗತ್ಯ

ಭಾರತದ ಸೊಗಸು ಇರುವುದೇ ಬಹುತ್ವದಲ್ಲಿ. ಧರ್ಮ, ಸಂಸ್ಕೃತಿ, ಆಚರಣೆ, ಜಾತಿ ಎಲ್ಲದಕ್ಕೂ ಈ ಮಾತು ಅನ್ವಯಿಸುತ್ತದೆ. ಇಲ್ಲಿನ ಜನರ ನಡೆ- ನುಡಿಯೂ ವಿಭಿನ್ನ. ಇಂತಹ ಬಹುತ್ವಕ್ಕೆ ಪೆಟ್ಟು ಕೊಡುವಂತಹ ಕೃತ್ಯಗಳು ನಡೆದಾಗ ಅಧಿಕಾರಸ್ಥರು ತಕ್ಷಣ ಪ್ರತಿಕ್ರಿಯಿಸಬೇಕು. ಮುಖ್ಯಮಂತ್ರಿ, ಪ್ರಧಾನಿಯಂತಹವರ ಮಾತಿಗೆ ಹೆಚ್ಚು ಬೆಲೆ ಇರುತ್ತದೆ. ಅವರು ಕೂಡಲೇ ಸ್ಪಂದಿಸಬೇಕು. ರಾಜಕೀಯ ಲಾಭ–ನಷ್ಟದ ಲೆಕ್ಕಾಚಾರಗಳನ್ನು ಪಕ್ಕಕ್ಕೆ ಇರಿಸಿ, ಪ್ರತಿಕ್ರಿಯಿಸುವುದು ಮುಖ್ಯ. ಮೌನ ವಹಿಸುವುದು ಶೋಭೆ ತರುವುದಿಲ್ಲ. ಸುಮ್ಮನಿರುವುದು ಬೇರೆಯದೇ ಸಂದೇಶ ರವಾನಿಸುತ್ತದೆ. ಆಡಳಿತದ ಚುಕ್ಕಾಣಿ ಹಿಡಿದವರು ಅದಕ್ಕೆ ಅವಕಾಶ ಮಾಡಿಕೊಡಬಾರದು. ಅದುವೇ ನಿಜ ನಾಯಕರ ಲಕ್ಷಣ.

ಕೆ.ಬಿ.ಹೊನ್ನಾಯ್ಕ, ಸದಲಗಾ, ಬೆಳಗಾವಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬಿಸಿಗಾಳಿಗೆ ನಲುಗುತ್ತಿದೆ ಯುರೋಪ್

ಬಿಸಿಗಾಳಿಯ ತೀವ್ರತೆಗೆ ಐರೋಪ್ಯ ದೇಶಗಳು ತತ್ತರಿಸಿವೆ. ವಾರದ ಹಿಂದೆ ಬ್ರಿಟನ್‌ನಲ್ಲಿ ಕಾಣಿಸಿಕೊಂಡ ಬಿಸಿಗಾಳಿಯು, ಈಗ ಯುರೋಪ್ ಖಂಡದ ಬಹುತೇಕ ದೇಶಗಳಿಗೆ ವ್ಯಾಪಿಸಿದೆ. ಬಿಸಿಲಿನ ತಾಪಕ್ಕೆ ಜನರು ರಸ್ತೆಗಳಲ್ಲೇ ಕುಸಿದುಬೀಳುತ್ತಿದ್ದಾರೆ. ಪಕ್ಷಿಗಳು ಸತ್ತು ಬೀಳುತ್ತಿವೆ, ಪ್ರಾಣಿಗಳು ಬಿಸಿಲಿನ ಝಳಕ್ಕೆ ನಲುಗಿ ಪ್ರಾಣ ಬಿಡುತ್ತಿವೆ. ಇದು ಹವಾಮಾನ ವೈಪರೀತ್ಯದ ಪರಿಣಾಮ ಎಂದು ತಜ್ಞರ ವರದಿಗಳು ಮತ್ತು ಐರೋಪ್ಯ ದೇಶಗಳ ಹವಾಮಾನ ಇಲಾಖೆಗಳು ಹೇಳುತ್ತಿವೆ. ಆದರೆ ಸಾಗರದ ಬಿಸಿನೀರಿನ ಪ್ರವಾಹಗಳು, ಇಂಗ್ಲೆಂಡ್ ಸಮೀಪ ಉಂಟಾದ ವಾಯುಭಾರ ಕುಸಿತ, ಉತ್ತರ ಆಫ್ರಿಕಾದ ಬಿಸಿಗಾಳಿ ಎಲ್ಲವೂ ಯುರೋಪ್‌ನಲ್ಲಿ ಬಿಸಿಗಾಳಿಯ ತೀವ್ರತೆಯನ್ನು ಹೆಚ್ಚಿಸುತ್ತಿವೆ ಎನ್ನಲಾಗಿದೆ.

ಕಾರಣಗಳು ಹಲವು

ಯುರೋಪ್‌ನಲ್ಲಿ ಬೇಸಿಗೆಯು ಜುಲೈ ಮಧ್ಯದ ನಂತರ ಆರಂಭವಾಗುತ್ತದೆ. ಆಗಸ್ಟ್–ಸೆಪ್ಟೆಂಬರ್‌ನಲ್ಲಿ ಕಡುಬೇಸಿಗೆ ಇರುತ್ತದೆ. ಆದರೆ, ಈ ಬಾರಿ ಜುಲೈ ಮೂರನೇ ವಾರದ ವೇಳೆಗೇ ಗರಿಷ್ಠ ಉಷ್ಣಾಂಶವು ದೀರ್ಘಾವಧಿ ಸರಾಸರಿಯನ್ನು ಮೀರಿದೆ.

ಸಾಮಾನ್ಯವಾಗಿ ಈ ಅವಧಿಯಲ್ಲಿ ಯುರೋಪ್‌ನಾದ್ಯಂತ ಉಷ್ಣಾಂಶವು 18 ಡಿಗ್ರಿ ಸೆಲ್ಸಿಯಸ್‌ನಿಂದ 26 ಡಿಗ್ರಿ ಸೆಲ್ಸಿಯಸ್‌ನಷ್ಟು ಇರುತ್ತದೆ. ಕಡುಬೇಸಿಗೆ ಅವಧಿಯಲ್ಲಿ ಉಷ್ಣಾಂಶವು 20 ಡಿಗ್ರಿ ಸೆಲ್ಸಿಯಸ್‌ನಿಂದ 30 ಡಿಗ್ರಿ ಸೆಲ್ಸಿಯಸ್‌ನ ನಡುವೆ ಇರುತ್ತದೆ. ಆದರೆ, ಜುಲೈ ಮೂರನೇ ವಾರದಲ್ಲೇ 20ಕ್ಕೂ ಹೆಚ್ಚು ದೇಶಗಳಲ್ಲಿ ಉಷ್ಣಾಂಶವು 30 ಡಿಗ್ರಿ ಸೆಲ್ಸಿಯಸ್‌ನಷ್ಟು ತೀವ್ರವಾಗಿದೆ. ಬ್ರಿಟನ್‌ನಲ್ಲಿ 40 ಡಿಗ್ರಿ ಸೆಲ್ಸಿಯಸ್‌ನಷ್ಟು ಗರಿಷ್ಠ ಉಷ್ಣಾಂಶ ದಾಖಲಾಗಿದೆ. ಯುರೋಪ್‌ನ ಕೆಲವು ಭಾಗಗಳಲ್ಲಿ ದಿನದ ಗರಿಷ್ಠ ಉಷ್ಣಾಂಶವು 45 ಡಿಗ್ರಿ ಸೆಲ್ಸಿಯಸ್‌ನಷ್ಟು ದಾಖಲಾಗಿದೆ. ಇದು 200 ವರ್ಷಗಳಲ್ಲೇ ಅತ್ಯಂತ ಗರಿಷ್ಠ ಉಷ್ಣಾಂಶ ಎನ್ನಲಾಗುತ್ತಿದೆ.

ಬಿಸಿಗಾಳಿಯು ಇಷ್ಟು ತೀವ್ರತೆ ಪಡೆಯಲು ಹಲವು ಕಾರಣಗಳನ್ನು ಗುರುತಿಸಲಾಗಿದೆ. ಅದರಲ್ಲಿ, ಬ್ರಿಟನ್ ಸುತ್ತಮುತ್ತಲಿನ ಸಾಗರದಲ್ಲಿ ತಲೆದೋರಿದ ವಾಯುಭಾರ ಕುಸಿತ ಪ್ರಮುಖವಾದುದು ಎಂದು ವಿಶ್ಲೇಷಿಸಲಾಗಿದೆ. ಜಾಗತಿಕ ತಾಪಮಾನದಲ್ಲಿ ಏರಿಕೆಯಾಗಿರುವುದರಿಂದಲೇ ಬ್ರಿಟನ್ ಮತ್ತು ಸುತ್ತಲಿನ ಪ್ರದೇಶದಲ್ಲಿ ವಾಯುಭಾರ ಕುಸಿದಿದ್ದು ಎಂದು ತಜ್ಞರು ವಿಶ್ಲೇಷಿಸಿದ್ದಾರೆ. ಜುಲೈ ಎರಡನೇ ವಾರದ ವೇಳೆಗೆ, ಬ್ರಿಟನ್ ಮತ್ತು ಅದರ ಸುತ್ತಲಿನ ಸಮುದ್ರದ ಪ್ರದೇಶದಲ್ಲಿ ಉಷ್ಣಾಂಶ ಏರಿಕೆಯಾಗಿ ವಾಯುಭಾರ ತೀವ್ರವಾಗಿ ಕುಸಿದಿತ್ತು. ಅದರಿಂದ ಅಲ್ಲಿ ನಿರ್ವಾತದ ಪ್ರದೇಶ ಉಂಟಾಗಿತ್ತು. ಅದೇ ಸಂದರ್ಭದಲ್ಲಿ ಉತ್ತರ ಆಫ್ರಿಕಾದಲ್ಲಿ ತೀವ್ರ ಬಿಸಿಗಾಳಿ ಇತ್ತು. ಈ ಬಿಸಿಗಾಳಿಯು, ಬ್ರಿಟನ್ ಪ್ರದೇಶದಲ್ಲಿ ಉಂಟಾಗಿದ್ದ ನಿರ್ವಾತದತ್ತ ನುಗ್ಗಿತ್ತು. ಇದರಿಂದ ಆ ಪ್ರದೇಶದಲ್ಲಿ ಉಷ್ಣಾಂಶ ಏರಿಕೆಯಾಯಿತು ಎಂದು ವಿಶ್ಲೇಷಿಸಲಾಗಿದೆ.

ಬ್ರಿಟನ್‌ನಲ್ಲಿ ಉಂಟಾದ ಬಿಸಿಗಾಳಿಯು ಪೂರ್ವ ಮತ್ತು ಮಧ್ಯ ಯುರೋಪ್‌ಗೆ ವ್ಯಾಪಿಸಿದೆ. ಈ ಎಲ್ಲಾ ದೇಶಗಳಲ್ಲಿ ಗಾಳಿಯ ವೇಗ ಈಗ ತೀರಾ ಕಡಿಮೆ ಇದೆ. ಹೀಗಾಗಿ ಬಿಸಿಗಾಳಿಯು ಇನ್ನಷ್ಟು ವಾರಗಳ ಕಾಲ ಇರಲಿದೆ ಎಂದು ಹವಾಮಾನ ಇಲಾಖೆಗಳು ಹೇಳಿವೆ.

ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಯುರೋಪ್‌ನ ಹಲವು ದೇಶಗಳಲ್ಲಿ ಗರಿಷ್ಠ ಉಷ್ಣಾಂಶ ದಾಖಲಾಗಿತ್ತು. ಈ ವೇಳೆ ವಾತಾವರಣದಲ್ಲಿ ಇದ್ದ ಮತ್ತು ಮೇಲ್ಮೈ ಮಣ್ಣಿನಲ್ಲಿದ್ದ ತೇವಾಂಶವು ಆವಿಯಾಗಿತ್ತು. ಹೀಗಾಗಿ ಈಗ ಬಿಸಿಗಾಳಿಯ ಸಂದರ್ಭದಲ್ಲಿ ವಾತಾವರಣದಲ್ಲಿ ತೇವಾಂಶವೇ ಇಲ್ಲದಂತಾಗಿದೆ. ಇದರಿಂದಲೂ ಉಷ್ಣಾಂಶ ಭಾರಿ ಪ್ರಮಾಣದಲ್ಲಿ ಏರಿಕೆಯಾಗುತ್ತಿದೆ ಎಂದು ತಜ್ಞರು ಹೇಳಿದ್ದಾರೆ.



ದೇಶ	ಉಷ್ಣಾಂಶ
ಬೆಲ್ಜಿಯಂ	18
ನೆದರ್ಲೆಂಡ್ಸ್	18
ಬೋಸ್ನಿಯಾ	31
ಕೊಸೊವೊ	30
ಸ್ಯಾನ್ ಮರಿನೊ	30
ಲಕ್ಸೆಂಬರ್ಗ್	23
ಪೋರ್ಚುಗಲ್	26
ಸ್ಲೊವೇನಿಯಾ	33
ಉತ್ತರ ಮೆಸಿಡೋನಿಯಾ	33
ಕ್ರೊಯೇಷ್ಯಾ	34
ಮೊಲ್ಡೊವಾ	31
ಮೊನಾಕೊ	32
ಅಲ್ಬೇನಿಯಾ	34
ಅಂಡೋರಾ	31
ಅರ್ಮೇನಿಯಾ	34

ಕಾಳ್ಗಿಚ್ಚಿನ ನರ್ತನ

ಉಷ್ಣಾಂಶದ ಭಾರಿ ಹೆಚ್ಚಳದಿಂದ ಯುರೋಪ್‌ನ ಹಲವು ದೇಶಗಳಲ್ಲಿ ಕಾಳ್ಗಿಚ್ಚು ಕಾಣಿಸಿಕೊಂಡಿದೆ. ಬ್ರಿಟನ್, ಸ್ಪೇನ್, ಗ್ರೀಸ್, ಪೋರ್ಚುಗಲ್, ಫ್ರಾನ್ಸ್‌ನಲ್ಲಿ ಅರಣ್ಯಗಳು ಹೊತ್ತಿ ಉರಿಯುತ್ತಿವೆ. ಫ್ರಾನ್ಸ್‌ನ ನೈರುತ್ಯ ಭಾಗದ ಗಿರೊಂಡೆ ಅರಣ್ಯಕ್ಕೆ ಹೊತ್ತಿಕೊಂಡಿದ್ದ ಬೆಂಕಿಯನ್ನು ನಂದಿಸಲು ಹರಸಾಹಸವೇ ನಡೆಯುತ್ತಿದೆ. ವಿಮಾನಗಳ ಮೂಲಕ ನೀರು ಸಿಂಪಡಿಸಿ ಬೆಂಕಿಯನ್ನು ಹತೋಟಿಗೆ ತರಲಾಗುತ್ತಿದೆ. ಈ ವಲಯದಿಂದ ಸುಮಾರು 32 ಸಾವಿರ ಜನರನ್ನು ಸ್ಥಳಾಂತರ ಮಾಡಲಾಗಿದೆ. ಗ್ರೀಸ್‌ನ ಮೌಂಟ್ ಪೆಂಟೇಲಿಯಲ್ಲಿ ಕಾಳ್ಗಿಚ್ಚಿನ ಪ್ರತಾಪ ಜೋರಾಗಿದೆ. ಕಾಡಿಗೆ ಸಮೀಪದ ಪಿಲ್ಲನಿ ಪಟ್ಟಣದಲ್ಲಿ ಮನೆಗಳಿಗೂ ಜ್ವಾಲೆ ವ್ಯಾಪಿಸಿದ್ದರಿಂದ ಜನರು ಬೇರೆಡೆ ಸ್ಥಳಾಂತರಗೊಂಡಿದ್ದಾರೆ. ಸ್ಪೇನ್‌ನ ಹಲವು ಕಡೆಗಳಲ್ಲಿ ಕಾಡು ಉರಿಯುತ್ತಿದೆ. ಗಲಿಸಿಯಾ ಹಾಗೂ ಗ್ರೆಡೊಸ್ ಅರಣ್ಯ ಪ್ರದೇಶಗಳಿಗೆ ಹೊತ್ತಿರುವ ಬೆಂಕಿ ಇನ್ನೂ ನಿಯಂತ್ರಣಕ್ಕೆ ಸಿಕ್ಕಿಲ್ಲ. ಪೋರ್ಚುಗಲ್‌ನ ಎರಡು ಸಕ್ರಿಯ ಕಾಳ್ಗಿಚ್ಚುಗಳನ್ನು ನಂದಿಸಲು 900ಕ್ಕೂ ಹೆಚ್ಚು ಸಿಬ್ಬಂದಿ ಮಗ್ನರಾಗಿದ್ದಾರೆ. ಪೋರ್ಚುಗಲ್ ಮತ್ತು ಗ್ರೀಸ್‌ನಲ್ಲಿ ಸಾವಿರಾರು ಹೆಕ್ಟೇರ್ ಅರಣ್ಯ ಬೆಂಕಿಗೆ ಆಹುತಿಯಾಗಿದೆ. ಸ್ಪೇನ್‌ನ ಕಾಡಂಚಿನ ಝುಮೋರಾ ಎಂಬಲ್ಲಿ ಎಂಟು ಗ್ರಾಮಗಳ ಜನರನ್ನು ಸ್ಥಳಾಂತರ ಮಾಡಲಾಗಿದೆ. ಕುರಿಗಾಹಿಯೊಬ್ಬ ಕಾಳ್ಗಿಚ್ಚಿನಲ್ಲಿ ಮೃತಪಟ್ಟಿದ್ದಾನೆ. ಪೋರ್ಚುಗಲ್ ಒಂದರಲ್ಲೇ 15 ಸಾವಿರ ಹೆಕ್ಟೇರ್ ಅರಣ್ಯ ಕಾಳ್ಗಿಚ್ಚಿಗೆ ಬಲಿಯಾಗಿದೆ. ನೂರಾರು ಎಕರೆ ಹುಲ್ಲುಗಾವಲು ಭಸ್ಮವಾಗಿದೆ.

ಫ್ರಾನ್ಸ್‌ನ ಗಿರೊಂಡೆ ಅರಣ್ಯಕ್ಕೆ ಹೊತ್ತಿಕೊಂಡಿರುವ ಬೆಂಕಿಯನ್ನು ನಂದಿಸುತ್ತಿರುವ ಅಗ್ನಿಶಾಮಕ ಸಿಬ್ಬಂದಿ—ಎಪಿ ಚಿತ್ರ

‘ನೆಲ ಕುದಿಯುತ್ತಿದೆ’

ಜುಲೈನಲ್ಲಿ ಬ್ರಿಟನ್‌ನ ಸರಾಸರಿ ಉಷ್ಣಾಂಶವು 21 ಡಿಗ್ರಿ ಸೆಲ್ಸಿಯಸ್ ಇರುತ್ತದೆ. ರಾತ್ರಿ ವೇಳೆ ಇದು 12 ಡಿಗ್ರಿ ಸೆಲ್ಸಿಯಸ್‌ಗೆ ಸರಿಯುತ್ತದೆ. ಆದರೆ ಈ ಬಾರಿ ಬ್ರಿಟನ್‌ನ ಹಲವು ಕಡೆ ಉಷ್ಣಾಂಶವು 40 ಡಿಗ್ರಿ ಸೆಲ್ಸಿಯಸ್‌ಗೆ ತಲುಪಿದೆ. ಅಂದರೆ ಒಂದು ಪಟ್ಟು ಉಷ್ಣಾಂಶ ಹೆಚ್ಚಾಗಿದ್ದು, ನೆಲವೇ ಕುದಿಯುತ್ತಿರುವ ಅನುಭವವಾಗುತ್ತಿದೆ ಎಂದು ಜನರು ಹೇಳಿದ್ದಾರೆ.

ರೈಲು, ವಿಮಾನ ಸಂಚಾರ ಸ್ಥಗಿತ

ಉಷ್ಣಾಂಶವು ರೈಲ್ವೆ ಸಂಚಾರದ ಮೇಲೆ ಪರಿಣಾಮ ಬೀರಿದೆ. ಬ್ರಿಟನ್‌ನ ಹಲವು ಕಡೆಗಳಲ್ಲಿ ರೈಲ್ವೆ ಹಳಿಗಳಿಗೆ ಹಾನಿಯಾಗಿದೆ. ಜನ ಸಂಚಾರ ಕಡಿಮೆಯಾಗಿದ್ದು, ಪ್ರಮುಖ ರೈಲ್ವೆ ನಿಲ್ದಾಣಗಳು ಬಿಕೊ ಎನ್ನುತ್ತಿವೆ. ರಸ್ತೆಗಳಲ್ಲೂ ಜನರ ಓಡಾಟ ಕಡಿಮೆಯಾಗಿದೆ. ಕೆಲವು ಮಾರ್ಗಗಳಲ್ಲಿ ಕಡಿಮೆ ವೇಗದೊಂದಿಗೆ ರೈಲುಗಳನ್ನು ಓಡಿಸಲಾಗುತ್ತಿದೆ. ಇಟಲಿಯ ಕಾಳ್ಗಿಚ್ಚು ಅಲ್ಲಿನ ರೈಲ್ವೆ ಮೂಲಸೌಕರ್ಯಕ್ಕೆ ಹಾನಿ ಮಾಡಿದೆ. ರೋಮ್ ಹಾಗೂ ಫ್ಲೊರೆನ್ಸ್ ನಡುವಣ ರೈಲು ಸಂಚಾರವನ್ನು ಸ್ಥಗಿತಗೊಳಿಸಲಾಗಿದೆ. ಬೆಂಕಿಯ ಕೆನ್ನಾಲಿಗೆ ವಿಸ್ತರಿಸುತ್ತಿರುವುದರಿಂದ ಸ್ಪೇನ್‌ನ ಮ್ಯಾಡ್ರಿಡ್ ಮತ್ತು ಗಲಿಸಿಯಾ ನಡುವಿನ ರೈಲು ಸಂಚಾರವನ್ನೂ ರದ್ದುಪಡಿಸಲಾಗಿದೆ.

ಅಮೆರಿಕದಲ್ಲೂ ಬಿಸಿ

ಬಿಸಿಗಾಳಿಯು ಕೇವಲ ಯುರೋಪ್‌ಗೆ ಮಾತ್ರ ಸೀಮಿತವಾಗಿಲ್ಲ. ಅಮೆರಿಕದ ಹಲವು ರಾಜ್ಯಗಳಲ್ಲೂ ಬಿಸಿಗಾಳಿ ಇದೆ. ಟೆಕ್ಸಾಸ್, ಒಕ್ಲಹಾಮ, ನ್ಯೂಯಾರ್ಕ್ ಸೇರಿದಂತೆ ಅಮೆರಿಕದ ಸುಮಾರು 10 ಕೋಟಿ ಜನರು ಝಳದಿಂದ ಪರಿತಪಿಸುತ್ತಿದ್ದಾರೆ. ಒಕ್ಲಹಾಮ ನಗರದಲ್ಲಿ 43 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ. ನ್ಯೂಯಾರ್ಕ್ ಜನರು ಬೇಗೆ ಪರಿಹರಿಸಿಕೊಳ್ಳಲು ಕಡಲತೀರಗಳಿಗೆ ಎಡತಾಕುತ್ತಿದ್ದಾರೆ. ಆದರೆ ಯುರೋಪ್‌ನಷ್ಟು ಸಮಸ್ಯೆ ಇಲ್ಲಿಲ್ಲ. ಯುರೋಪ್‌ಗೆ ಹೋಲಿಸಿದರೆ, ಬಹುತೇಕ ಅಮೆರಿಕನ್ನರ ಮನೆಗಳಲ್ಲಿ ಹವಾನಿಯಂತ್ರಣ (ಎ.ಸಿ.) ವ್ಯವಸ್ಥೆಯಿದೆ. ಕಚೇರಿಗಳು, ಸಮುದಾಯ ಅಡುಗೆ ಕೇಂದ್ರಗಳು, ಕಟ್ಟಡಗಳಲ್ಲಿ ಹವಾನಿಯಂತ್ರಣ ವ್ಯವಸ್ಥೆಯನ್ನು ಅಳವಡಿಸಲಾಗುತ್ತಿದೆ. ಹೊರಾಂಗಣ ಚಟುವಟಿಕೆಗಳನ್ನು ಸಾಧ್ಯವಾದಷ್ಟು ಸ್ಥಗಿತಗೊಳಿಸುವಂತೆ ಜನರಿಗೆ ಸೂಚಿಸಲಾಗಿದೆ.

ಜೀವ ತೆಗೆಯುತ್ತಿದೆ ಬಿಸಿಗಾಳಿ

ಬಿಸಿಗಾಳಿಯು ಯುರೋಪಿಯನ್ನರ ಜೀವ ಹಿಂಡುತ್ತಿದೆ. ಬಿಸಿಗಾಳಿ ಸಂಬಂಧಿತ ಅವಘಡಗಳಲ್ಲಿ ಯುರೋಪ್‌ನಲ್ಲಿ ಈವರೆಗೆ 1,500ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ಪೋರ್ಚುಗಲ್ ದೇಶವೊಂದರಲ್ಲೇ ಸಾವಿರಕ್ಕೂ ಅಧಿಕ ಜನರು ಮೃತಪಟ್ಟಿದ್ದಾರೆ ಎಂದು ಎಬಿಸಿ ಸುದ್ದಿಸಂಸ್ಥೆ ವರದಿ ಮಾಡಿದೆ. ಕಳೆದ ಹತ್ತು ದಿನಗಳಲ್ಲಿ ಸ್ಪೇನ್‌ನಲ್ಲಿ 500ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ ಎಂದು ಅಲ್ಲಿನ ಪ್ರಧಾನಿ ಹೇಳಿದ್ದಾರೆ. ಬ್ರಿಟನ್‌ನಲ್ಲಿ 13 ಜನರು ಬಿಸಿಲಿನ ಹೊಡೆತಕ್ಕೆ ಪ್ರಾಣ ಕಳೆದುಕೊಂಡಿದ್ದಾರೆ. ಉಷ್ಣಾಂಶ ತಾಳಲಾರದೇ ಅನಾರೋಗ್ಯಕ್ಕೆ ತುತ್ತಾಗಿ ಮೃತಪಟ್ಟವರು, ಕಾಳ್ಗಿಚ್ಚಿಗೆ ಬಲಿಯಾದವರು ಇದರಲ್ಲಿ ಸೇರಿದ್ದಾರೆ.

ರೋಮ್‌ನಲ್ಲಿ ಪ್ರವಾಸಿಗರು ದಣಿವಾರಿಸಿಕೊಳ್ಳಲು ನಲ್ಲಿ ನೀರು ಕುಡಿದರು —ಎಎಫ್‌ಪಿ ಚಿತ್ರಗಳು

ಬತ್ತುತ್ತಿದೆ ರೈನ್ ನದಿ

ಬಿಸಿಗಾಳಿಯ ಪ್ರತಾಪದಿಂದ ಯುರೋಪ್‌ನ ಪ್ರಮುಖ ರೈನ್ ನದಿಯ ನೀರಿನ ಮಟ್ಟ ತಳಕಂಡಿದೆ. ಜರ್ಮನಿ–ಸ್ವಿಟ್ಜರ್ಲೆಂಡ್–ಆಸ್ಟ್ರಿಯಾ–ದಿ ನೆದರ್ಲೆಂಡ್ಸ್ ಮೂಲಕ ಹರಿಯುವ ಈ ನದಿಯು ಒಳನಾಡು ಸಾರಿಗೆಯಲ್ಲಿ ಮುಖ್ಯ ಪಾತ್ರ ವಹಿಸುತ್ತಿದೆ. ಈಗ ಉಷ್ಣಾಂಶ ಹೆಚ್ಚಳದ ಪರಿಣಾಮ ನದಿಯಲ್ಲಿ ನೀರಿನ ಮಟ್ಟ ತಗ್ಗುತ್ತಿದ್ದು, ಸರಕು ಸಾಗಣೆಗೆ ಹೊಡೆತ ಬಿದ್ದಿದೆ. ರಾಸಾಯನಿಕಗಳು, ಆಹಾರ ಧಾನ್ಯ, ಕಲ್ಲಿದ್ದಲು ಸಾಗಾಟ ಸ್ಥಗಿತಗೊಂಡಿದೆ. ಈ ನದಿಯು ಫ್ರಾನ್ಸ್ ಹಾಗೂ ಜರ್ಮನಿಯ ಗಡಿಯೂ ಆಗಿದೆ.

ಬಿಸಿಲಿನ ಪ್ರತಾಪ

- ಉಷ್ಣಾಂಶ ಹೆಚ್ಚಳದಿಂದ ಮೃಗಾಲಯದ ಪ್ರಾಣಿಗಳು ಪರಿತಪಿಸುತ್ತಿವೆ. ಬ್ರಿಟನ್‌ನ ವಿಲ್ಟ್‌ಶೈರ್ ಲಾಂಗ್‌ಲಿಟ್ ಸಫಾರಿ ಪಾರ್ಕ್‌ನ ಜಿರಾಫೆ, ಮಂಗಗಳಿಗೆ ತಿನ್ನಲು ಐಸ್‌ಕ್ರೀಂ ನೀಡಲಾಗುತ್ತಿದೆ. ಕ್ಯಾರೆಟ್, ಬಾಳೆಹಣ್ಣುಗಳ ಜೊತೆಗೆ ಐಸ್‌ಕ್ರೀಂ ಸೇರಿಸಿ ಆಹಾರ ನೀಡಲಾಗುತ್ತಿದೆ
- ಬ್ರಿಟನ್ ಸೇರಿದಂತೆ ಯುರೋಪಿನ ಹಲವು ಕಡೆ ಶಾಲೆಗಳನ್ನು ಮುಚ್ಚಲಾಗಿದೆ. ಬಿಸಿಗಾಳಿಯಿಂದ ಮಕ್ಕಳಿಗೆ ಹಾನಿಯಾಗುವುದನ್ನು ತಪ್ಪಿಸಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಜನರು ಸೇರುವ ಉದ್ಯಾನಗಳನ್ನು ಬಂದ್ ಮಾಡಲಾಗಿದೆ. ಕಚೇರಿಗಳ ಸಮಯವನ್ನು ಬದಲಿಸಲಾಗಿದೆ
- ಬ್ರಿಟನ್‌ನಲ್ಲಿ ತೀವ್ರ ಶಾಖದಿಂದ ಕೆಲವು ದಿನಗಳಿಂದ ಹವಾನಿಯಂತ್ರಣ ವ್ಯವಸ್ಥೆ (ಎ.ಸಿ.) ಸರಿಯಾಗಿ ಕೆಲಸ ಮಾಡುತ್ತಿಲ್ಲ. ಹೀಗಾಗಿ ಗೂಗಲ್ ಕ್ಲೌಡ್ ಹಾಗೂ ಒರಾಕಲ್ ಕ್ಲೌಡ್ ಸೇವೆಯನ್ನು ಸ್ವಲ್ಪ ಸಮಯ ಸ್ಥಗಿತಗೊಳಿಸಲಾಗಿತ್ತು

ಆಧಾರ: ಬಿಬಿಸಿ, ರಾಯಿಟರ್ಸ್, ಬ್ರಿಟನ್ ಹವಾಮಾನ ಇಲಾಖೆ

ಪ್ರಜಾವಾಣಿ ಪ್ರಜಾಧ್ವನಿ
ಜನರ ಮನದಾಳದ ಮಾತು



ಹವಾಮಾನ ಬದಲಾವಣೆಯು ಜಗತ್ತಿಗೆ ಅತ್ಯಂತ ಗಂಭೀರ ಬೆದರಿಕೆಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ



ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 179

ದಕ್ಷನ ಕಾಡಿದ ಅಪಶಕುನಗಳು

ದಕ್ಷಬ್ರಹ್ಮನನ್ನು ಕೊಂದು, ಆತನ ಯಜ್ಞಕಾರ್ಯವನ್ನು ಧ್ವಂಸಗೊಳಿಸುವಂತೆ ರುದ್ರದೇವ ನೀಡಿದ ಆದೇಶದಂತೆ ಕೋಟ್ಯಂತರ ಗಣಗಳೊಡನೆ ವೀರಭದ್ರ ಹೊರಟಾಗ ಶುಭ ಶಕುನಗಳು ಕಾಣಿಸಿಕೊಂಡರೆ, ಅತ್ತ ದಕ್ಷ ಮತ್ತವನ ಬೆಂಬಲಿತ ದೇವತೆಗಳಿಗೆ ಕೆಟ್ಟ ಶಕುನಗಳು ಕಾಣಿಸಿದವು. ಆಧಿದೈವಿಕ, ಆಧಿಭೌತಿಕ, ಆಧ್ಯಾತ್ಮಿಕ ರೂಪವಾಗಿ ಮೂರು ವಿಧವಾದ ಉತ್ಪಾತಗಳು ಯಜ್ಞನಾಶವನ್ನು ಸೂಚಿಸಿದವು.

ಮೊದಲಿಗೆ ಆಧಿದೈವಿಕವಾಗಿ ಕಾಣಿಸಿಕೊಂಡ ಅಪಶಕುನಗಳಲ್ಲಿ ಮೊದಲಿಗೆ ದಕ್ಷಬ್ರಹ್ಮನ ಎಡಬಾಹು, ಎಡಕಣ್ಣು, ಎಡತೊಡೆಗಳು ಅದುರಿದವು. ಯಾಗಶಾಲೆಯ ಸ್ಥಳದಲ್ಲಿ ಭೂಕಂಪವಾಗಿ ಆಧಿಭೌತಿಕ ಅಪಶಕುನ ಗೋಚರಿಸಿತು. ಇದಲ್ಲದೆ, ಮಟಮಟ ಮಧ್ಯಾಹ್ನದ ಹೊತ್ತಲ್ಲಿ ದಕ್ಷನಿಗೆ ವಿಚಿತ್ರವಾಗಿ ನಕ್ಷತ್ರಗಳು ಕಾಣಿಸಿಕೊಂಡವು. ಹಾಗೇ, ದಿಕ್ಕುಗಳೆಲ್ಲ ಮಲಿನವಾದಂತೆ, ಅನೇಕ ಪರಿವೇಷಗಳಲ್ಲಿ ಸೂರ್ಯನು ಭಯಂಕರವಾಗಿ ಕಾಣಿಸಿದಂತೆ ಅವನಿಗೆ ಭಾಸವಾಯಿತು. ಮಿಂಚಿನಂತೆ ಪ್ರಕಾಶಿಸುವ ನಕ್ಷತ್ರಗಳಲ್ಲಿ ಕೆಲವು ಕಳಚಿಬಿದ್ದರೆ, ಮಿಕ್ಕ ಕೆಲವು ನಕ್ಷತ್ರಗಳು ವಕ್ರವಾಗಿ ಹಾಗೂ ಕೆಳಮುಖವಾಗಿ ಸಂಚರಿಸಿದವು.

ಆಧ್ಯಾತ್ಮಿಕ ರೂಪದ ಅಪಶಕುನಗಳಾಗಿ ಅನೇಕ ಹದ್ದುಗಳು ದಕ್ಷನ ತಲೆಯ ಮೇಲೆ ಹಾರಿ ಸ್ಪರ್ಶಿಸಿಹೋದವು. ಇನ್ನು ಕೆಲ ಹದ್ದುಗಳು ಯಜ್ಞಮಂಡಪವನ್ನು ಮುತ್ತಿದವು; ನರಿಗಳು ಬಂದು ಕೂಗಿದವು. ಯಜ್ಞದ ಸುತ್ತಮುತ್ತ ಉಲ್ಕಾಪಾತವಾಯಿತು. ಅಂದರೆ ಬೆಂಕಿಕೆಂಡಗಳ ಸುರಿಮಳೆಯಾಯಿತು. ಬಿಳಿಯ ಚೇಳುಗಳು ಅಲ್ಲಲ್ಲಿ ಕಾಣಿಸಿದವು. ಧೂಳು ಮತ್ತು ತುಂತುರುಗಳೊಡನೆ ಬಿರುಗಾಳಿಯು ಬೀಸಿತು. ಶಲಭ (ಮಿಡತೆ)ಗಳು ಅಸಂಖ್ಯಾತವಾಗಿ ತಲೆದೋರಿದವು.

ಈತಿಬಾಧೆಯಿಂದಲೂ ಬಿರುಗಾಳಿಯಿಂದಲೂ ದಕ್ಷನ ಯಾಗಮಂಡಪದಲ್ಲಿ ಅಲ್ಲೋಲಕಲ್ಲೋಲವಾಯಿತು. ದಕ್ಷ ಮೊದಲಾದವರು ರಕ್ತಕಾರಿದರು. ಗಾಳಿಗೆ ಸಿಕ್ಕ ದೀಪದಂತೆ ಎಲ್ಲರೂ ನಡುಗಿದರು. ಆಯುಧಗಳ ಪ್ರಹಾರ ತಿಂದವರಂತೆ ಯಾತನೆ ಪಟ್ಟರು. ಅವರಿಗೆಲ್ಲ ಕೆಟ್ಟಶಬ್ದಗಳು ಕೇಳಿಸಿದವು. ಇದರಿಂದ ಪ್ರಾತಃಕಾಲದಲ್ಲಿ ಕಮಲಗಳು ಹಿಮದ ತುಂತುರುಗಳನ್ನು ಎದುರಿಸುವಂತೆ, ಎಲ್ಲರ ಕಣ್ಣಲ್ಲೂ ಕಣ್ಣೀರುದುರಿದವು.

ರಾತ್ರಿಯಲ್ಲಿ ಕಮಲಗಳು ಆಕಸ್ಮಿಕವಾಗಿ ಅರಳುವಂತೆ ದಕ್ಷ ಮೊದಲಾದವರ ಕಣ್ಣುಗಳು ಅರಳಿದುವು. ರಕ್ತದಮಳೆ ಸುರಿಯಿತು. ದಿಕ್ಕುಗಳು ಕತ್ತಲೆಯಿಂದ ಮುಚ್ಚಿದವು. ದಿಕ್ಕುಗಳಲ್ಲಿ ದಾವಾಗ್ನಿಯು ಜ್ವಲಿಸಿತು. ಈ ರೀತಿಯ ಅನೇಕ ಅರಿಷ್ಟಗಳು ಕಾಣಿಸಿದುವು. ಅದರಿಂದ ವಿಷ್ಣು ಮುಂತಾದವರು ತುಂಬಾ ಭಯಪಟ್ಟರು. ದಕ್ಷ ಮೊದಲಾದವರು ‘ಅಯ್ಯೋ! ಕೆಟ್ಟೆನಲ್ಲಾ’ ಎನ್ನುತ್ತಾ ಭೂಮಿಗೆ ಉರುಳಿದರು.

ಭೂಮಿಗೆ ಉರುಳಿಬಿದ್ದ ದಕ್ಷಾದಿಗಳು, ಹೊಡೆತ ತಿಂದ ಕ್ರೂರವಾದ ಸರ್ಪಗಳು ಮೇಲಕ್ಕೆದ್ದು ಬುಸುಗುಟ್ಟುವಂತೆ, ಮೇಲೆದ್ದು ‘ಉಸ್ಸಪ್ಪಾ’ ಅಂತ ಉದ್ಗಾರ ತೆಗೆದರು. ಮೈಕೈಗಾದ ನೋವು ಸಹಿಸಲಾಗದೆ, ಏಟು ತಿಂದ ನಾಯಿಗಳಂತೆ ಊಳಿಟ್ಟರು. ಅವರೆಲ್ಲಾ ಅಳುತ್ತಲೇ ಪರಸ್ಪರ ತಮಗಾಗುತ್ತಿರುವ ಸಂಕಟಗಳನ್ನು ಹೇಳಿಕೊಂಡರು. ಇಂದ್ರಾದಿ ದೇವತೆಗಳೆಲ್ಲರೂ ಶಕ್ತಿಹೀನರಾಗಿ ಮತ್ತೆ ಮಕ್ಕಾಡೆ ಬಿದ್ದು ಮೇಲೇಳಲಾಗದೆ ಆಮೆಗಳಂತೆ ಬಿದ್ದಲ್ಲೇ ಹೊರಳಾಡಿದರು. ಆಗ ಅಶರೀರವಾಣಿಯೊಂದು ಹೇಳಿತು: ‘ಎಲೈ ದಕ್ಷನೇ, ನಿನ್ನ ಜನ್ಮಕ್ಕೆ ಧಿಕ್ಕಾರವಿರಲಿ. ನೀನು ಮಹಾಮೂಢ, ಪಾಪಾತ್ಮ. ನಿನ್ನ ಪಾಪಕ್ಕೆ ಪ್ರಾಯಶ್ಚಿತ್ತವಾಗಿ ನಿನಗೆ ಹರನಿಂದ ಮಹಾಘಾತಕ ಪ್ರಾಪ್ತವಾಗುವುದು. ಈ ಮೂಢರಾದ ದೇವತೆಗಳಿಗೂ ಮಹಾದುಃಖವು ಬರುವುದು.’

ಆಕಾಶವಾಣಿಯನ್ನು ಕೇಳಿ ಮತ್ತು ಅಲ್ಲಿ ನಡೆದ ಅನಿಷ್ಟಗಳನ್ನು ನೋಡಿ ದಕ್ಷ ಮತ್ತು ದೇವತೆಗಳು ತುಂಬಾ ಭಯಗೊಂಡರು. ಆಗ ದಕ್ಷ ಭಯದಿಂದ ನಡುಗುತ್ತಾ ತನ್ನ ಪ್ರಭುವಾದ ಹರಿಯ ಮೊರೆ ಹೋದ. ಹರಿಯ ಕಾಲಿಗೆ ನಮಸ್ಕರಿಸಿದ ದಕ್ಷಬ್ರಹ್ಮ, ತನ್ನನ್ನು ಕಾಪಾಡುವಂತೆ ಪ್ರಾರ್ಥಿಸಿದ ಎಂಬಲ್ಲಿಗೆ ಶಿವಮಹಾಪುರಾಣದ ರುದ್ರಸಂಹಿತೆಯಲ್ಲಿನ ಸತೀಖಂಡದ ಮೂವತ್ತನಾಲ್ಕನೆಯ ಅಧ್ಯಾಯ ಮುಗಿಯುತ್ತದೆ. ●

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಜುಲೈ 22, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ನವಮಿ ಗಂ. 09-33 ನಕ್ಷತ್ರ: ಭರಣಿ ಗಂ. 16-25 ಯೋಗ: ಶೂಲ ಗಂ. 12-30, ಕರಣ: ಗರಜೆ ಗಂ. 09-33, ಕರ್ಕಾಟಕ ಮಾಸದ 05 ನೇ ದಿನ.
ರಾಹುಕಾಲ : ಬೆಳಿಗ್ಗೆ 10:30 – 12:00
ಸೂರ್ಯೋದಯ : 06-17 ಸೂರ್ಯಾಸ್ತ : 06-57
ಮುಸ್ಲಿಂ ದಿನಾಂಕ : 22 ಜುಲ್‌ಹಿಜಾನ್
ಅದೃಷ್ಟ ಸಂಖ್ಯೆ : 3, 5

ಮೇಷ : ಸಂಸ್ಥೆಯೊಂದರ ಸಲಹೆಗಾರರಾಗಿರುವ ನಿಮಗೆ ಹೆಚ್ಚಿನ ಒತ್ತಡ ಮತ್ತು ಸಂದಿಗ್ಧ ಪರಿಸ್ಥಿತಿ ಎದುರಾಗುತ್ತದೆ. ಸ್ನೇಹಿತರ ಮೇಲಿನ ದೃಷ್ಟಿಕೋನ ಬದಲಾಯಿಸುವುದರಿಂದ ಹೆಚ್ಚಿನ ಅನುಕೂಲ. ದ್ವೇಷ ಮನೋಭಾವಗಳು ಸರಿಯಾಗಲಿದೆ.

ವೃಷಭ : ನಿಮ್ಮ ಆರನೇ ಇಂದ್ರಿಯದ ಮಾತಿಗೆ ಬೆಲೆ ಕೊಡುವುದು ಸರಿಯಾದ ತೀರ್ಮಾನವೆಂದು ಅನಿಸುವುದು. ಹಿರಿಯರು ಮತ್ತು ಹಿತೈಷಿಗಳಿಂದ ಆಶೀರ್ವಾದ ಪಡೆಯುವುದು ಶುಭ ಸಮಾರಂಭಗಳಿಗೆ ನಾಂದಿಯಾಗುತ್ತದೆ

ಮಿಥುನ : ಧೈರ್ಯ ಮತ್ತು ಪ್ರೇರಣಾ ಶಕ್ತಿಯ ಭಾವವನ್ನು ಹೊಂದುವುದರಿಂದ ಸಮಸ್ಯೆಯನ್ನು ಸುಲಭವಾಗಿ ಎದುರಿಸಬಹುದು. ಲಲಿತ ಕಲೆಗಳಲ್ಲಿ ಸಫಲತೆಯ ದಾರಿಗಳು ಒದಗಲಿವೆ. ಸೂರ್ಯನಾರಾಯಣನ ಸ್ಮರಣೆ ಮಾಡಿದಲ್ಲಿ ಯಶಸ್ಸು.

ಕರ್ಕಾಟಕ : ನ್ಯಾಯಾಂಗ ವ್ಯಾಜ್ಯಗಳಲ್ಲಿ ಅಪಜಯ ಸಂಭವಿಸಬಹುದು. ಆದರೆ ಒಂದು ಬಾರಿ ನಿರ್ಧರಿಸಿದ ನಿಲುವಿನಿಂದ ಹಿಂದೆ ಸರಿಯಬೇಡಿ. ಹಿರಿಯ ಅಧಿಕಾರಿಗಳ ಸಹಾಯದಿಂದ ವರ್ಗಾವಣೆ ರದ್ದು ಮಾಡಿಸಿಕೊಳ್ಳುವಿರಿ.

ಸಿಂಹ : ನಿಮ್ಮ ಸದ್ಗುಣಗಳ ವ್ಯಕ್ತಿತ್ವದ ಮತ್ತು ಪರೋಪಕಾರಿ ಬದುಕಿನಿಂದ ಜನಪ್ರಿಯತೆ ಹೆಚ್ಚಾಗುವ ಯೋಗವಿರುತ್ತದೆ. ವೃತ್ತಿಪರವಾಗಿ ಕೆಲಸಗಳು ಅಡೆತಡೆಗಳಿಲ್ಲದೆ ಮುಂದುವರೆಯುವುದು. ಮಕ್ಕಳ ಆರೋಗ್ಯದಲ್ಲಿ ಗಮನವಿರಲಿ.

ಕನ್ಯಾ : ದೇವಿ ಕೃಪಾಕಟಾಕ್ಷಕ್ಕೆ ಪಾತ್ರರಾದ ಕಾರಣದಿಂದ ಬರಬೇಕಿದ್ದ ಹಣದಲ್ಲಿ ಅಸಲು ಮೊತ್ತ ಕೈ ಸೇರುವುದು. ಉನ್ನತ ವ್ಯಾಸಂಗ ಮಾಡುತ್ತಿರುವವರಿಗೆ ಉದ್ಯೋಗದ ಬಗ್ಗೆ ಆಸಕ್ತಿ ಹೆಚ್ಚುವುದು, ಆದರೆ ವಿದ್ಯಾಭ್ಯಾಸ ನಿಲ್ಲಿಸಬೇಡಿ.

ತುಲಾ : ಶ್ರಮಕ್ಕೆ ತಕ್ಕಂತಹ ಪ್ರತಿಫಲ ಸಿಗದಿರುವ ಕಾರಣ ದುಃಖವಾಗಬಹುದು. ವಿದ್ಯುತ್ ಇಲಾಖೆ ಸಿಬ್ಬಂದಿಗೆ ತುರ್ತು ಕೆಲಸಗಳ ನಿರ್ವಹಣೆ ಹೆಚ್ಚಾಗಲಿದೆ. ಪರಿಚಿತರಿಂದ ಹೊಸ ಸ್ಥಳದಲ್ಲಿ ಸಕಾಲಕ್ಕೆ ಸರಿಯಾಗಿ ನೆರವು ದೊರೆಯುವುದು.

ವೃಶ್ಚಿಕ : ವ್ಯಾಪಾರ ವಾಣಿಜ್ಯ ಸಂಬಂಧಗಳನ್ನು ಹೆಚ್ಚಿಸಿಕೊಳ್ಳಲು ಪ್ರಯಾಣ ಬೆಳೆಸುವಿರಿ. ಅದರಲ್ಲಿ ನಿಮಗೆ ಯಶಸ್ಸು ಖಚಿತವೆನಿಸಿದ್ದರೂ ಜಾಗ್ರತೆ ವಹಿಸುವುದು ಮೇಲು. ಉದ್ಯೋಗದಲ್ಲಿ ಕ್ರಿಯಾಶೀಲತೆ ಹೆಚ್ಚಲಿದೆ.

ಧನು : ಸಂಸ್ಥೆಯ ಬೆಳವಣಿಗೆಯ ಜತೆಯಲ್ಲಿ ವೈಯಕ್ತಿಕ ಬೆಳವಣಿಗೆಗಳಿಗೂ ಗಮನ ಕೊಡಿ. ಎಲೆಕ್ಟ್ರಾನಿಕ್ ಕ್ಷೇತ್ರದಲ್ಲಿರುವವರಿಗೆ ವ್ಯಾಪಾರ ವ್ಯವಹಾರಗಳಲ್ಲಿ ನಿರೀಕ್ಷೆಗೂ ಮೀರಿದ ಆದಾಯವಿದೆ. ಶ್ರಮದ ದುಡಿಮೆಯೇ ಮಂತ್ರವಾಗಿರಲಿ.

ಮಕರ : ರಾಜಕೀಯ ಭವಿಷ್ಯಕ್ಕೆ ಪಕ್ಷದ ಧುರೀಣರ ಮಾತಿನಂತೆ ನಡೆಯುವುದರಿಂದ ಅನುಕೂಲ ಕಾಣುವಿರಿ. ಎಂಜಿನಿಯರಿಂಗ್ ವ್ಯಾಸಂಗ ಮಾಡುವವರಿಗೆ ಹೆಚ್ಚಿನ ಉತ್ತೇಜನ ದೊರೆಯಲಿದೆ.

ಕುಂಭ : ಧಾರ್ಮಿಕ ಕೆಲಸ ಕಾರ್ಯಗಳಲ್ಲಿ ಆಸಕ್ತಿ ಹೆಚ್ಚಲಿದೆ. ಕಿರುತೆರೆ ಕಲಾವಿದರಿಗೆ ಅವಕಾಶಗಳು ಒದಗಲಿದೆ. ಅಧಿಕ ಪ್ರಯಾಣದಿಂದ ದೇಹಾಯಾಸ ಕಂಡು ಬಂದರೂ ಕಾರ್ಯಾನುಕೂಲವಾಗಿ ಧನ ಲಾಭವಾಗಲಿದೆ.

ಮೀನ : ಹೋಟೆಲ್ ಉದ್ಯಮದವರಿಗೆ ಮತ್ತು ಟ್ರಾವೆಲಿಂಗ್ ಏಜೆಂಟರ್‌ಗೆ ನಿರೀಕ್ಷೆಗೂ ಮೀರಿದ ಆದಾಯವಿದೆ. ಆಹಾರ ಪದಾರ್ಥಗಳ ಮಾರಾಟದಿಂದ ಲಾಭವಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಅರಗಿಸಿಕೊಂಡದ್ದೆಷ್ಟು ?

ಎಷ್ಟು ನೀನುಂಡರೇ? ಪುಷ್ಟಿ ಮೈಗಾಗುವುದು |
ಹೊಟ್ಟೆ ಜೀರ್ಣಿಸುವಷ್ಟೆ! ಮಿಕ್ಕುದೆಲ್ಲ ಕಸ ||
ಎಷ್ಟು ಗಳಿಸಿಟ್ಟೊಡಂ ನಿನಗೆ ದಕ್ಕುವುದೆಷ್ಟು ? |
ಮುಷ್ಟಿಪಿಷ್ಟವು ತಾನೆ? – ಮಂಕುತಿಮ್ಮ || 677 ||

ಪದ-ಅರ್ಥ: ನೀನುಂಡರೇ = ನೀನು + ಉಂಡರೇ(ಉಂಡರೇನು), ಗಳಿಸಿಟ್ಟೊಡಂ = ಗಳಿಸಿ + ಇಟ್ಟೊಡಂ (ಇಟ್ಟರೂ), ಮುಷ್ಟಿಪಿಷ್ಟ = ಹಿಡಿ ಹಿಟ್ಟು.

ವಾಚ್ಯಾರ್ಥ: ನೀನು ಎಷ್ಟು ಊಟ ಮಾಡಿದರೇನು? ಮೈಗೆ ಶಕ್ತಿ ದೊರಕುವುದು ಹೊಟ್ಟೆ ಜೀರ್ಣಿಸಿದಷ್ಟೇ. ಉಳಿದದ್ದೆಲ್ಲ ಕಸವೇ. ಅಂತೆಯೇ ಎಷ್ಟು ಆಸ್ತಿ, ಹಣ ಗಳಿಸಿದರೂ ನಿನಗೆ ದಕ್ಕುವುದು ಎಷ್ಟು? ನೀನುಂಡ ಮುಷ್ಟಿ ಹಿಟ್ಟು ತಾನೇ?

ವಿವರಣೆ: ಮಹಾದೇವ ಭೂಪಾಲ ಕಾಶ್ಮೀರದ ಅರಸು. ಅವನ ಹೆಂಡತಿ ಗಂಗಾದೇವಿ. ಶ್ರೀಮಂತಿಕೆಯಲ್ಲಿಯೇ ಬದುಕಿದವರು. ಬಸವಣ್ಣನ ಮಹಿಮೆಯನ್ನು ಕೇಳಿ ಕಲ್ಯಾಣಕ್ಕೆ ಬಂದರು. ರಾಜ ವೈಭವಗಳನ್ನೆಲ್ಲ ತೊರೆದು ಶರಣ ಜೀವನವನ್ನು ಮೋಳಿಗೆ ಮಾರಯ್ಯ ಮಹಾದೇವಿ ಎಂಬ ಹೆಸರುಗಳಿಂದ ಸಾಗಿಸಿದರು. ಕಟ್ಟಿಗೆ ಮಾರುವ ಕಾಯಕವನ್ನು ಅಪ್ಪಿಕೊಂಡರು. ಶ್ರೀಮಂತಿಕೆಗೆ ಅರ್ಥವಿಲ್ಲ, ಎಷ್ಟು ಗಳಿಸಿದರೂ ಅದಕ್ಕೆ ತೃಪ್ತಿ ಇಲ್ಲ, ಅದರಿಂದ ಪ್ರಯೋಜನವೂ ಇಲ್ಲ ಎಂಬುದನ್ನು ನಡೆದು ತೋರಿದವರು ಈ ದಂಪತಿಗಳು. ಮಾರಯ್ಯನ ವಚನವೊಂದು ಹೀಗಿದೆ.

ಆನೆ ಕುದುರೆ ಭಂಡಾರವಿರ್ದಡೇನೊ ?
ತಾನುಂಬುದು ಪಡಿಯಕ್ಕಿ, ಒಂದಾವಿನ ಹಾಲು,
ಮಲಗುವುದರ್ಧ ಮಂಚ.
ಈ ಹುರುಳಿಲ್ಲದ ಸಿರಿಯ ನೆಚ್ಚಿ ಕೆಡಬೇಡ ಮನುಜಾ.
ಒಡಲು ಭೂಮಿಯ ಸಂಗ, ಒಡವೆ ತಾನೇನಪ್ಪುದೊ?
ಕೈವಿಡಿದ ಮಡದಿ ಪರರಸಂಗ, ಪ್ರಾಣ ವಾಯುವಿನ ಸಂಗ.
ಸಾವಿಂಗೆ ಸಂಗಡವಾರೂ ಇಲ್ಲ ಕಾಣಾ,
ನಿ: ಕಳಂಕ ಮಲ್ಲಿಕಾರ್ಜುನಾ.

ಆನೆ, ಕುದುರೆ, ಬಂಗಾರದ ಕೋಶ ಎಷ್ಟಿದ್ದರೆ ಏನು ಪ್ರಯೋಜನ? ನಮ್ಮ ದೇಹಕ್ಕೆ ಬೇಕಾದದ್ದು ಒಂದು ಮುಷ್ಟಿ ಅಕ್ಕಿ, ಒಂದು ಗುಟುಕು ಹಾಲು, ಉಳಿದದ್ದು ಹೊರೆ. ಆ ಹೊರೆಗೆ ಅಷ್ಟೊಂದು ಒದ್ದಾಟ. ಹೊಟ್ಟೆಗೆ ಹಾಕಿದ್ದೆಲ್ಲ ದಕ್ಕೀತೇ? ಎಷ್ಟು ಜೀರ್ಣವಾಗುತ್ತದೋ ಅದು ಮಾತ್ರ ಪುಷ್ಟಿಯನ್ನು ಕೊಟ್ಟೀತು. ಉಳಿದದ್ದೆಲ್ಲ ಕಸವೆ. ಮಾರಯ್ಯ ಹೇಳುತ್ತಾನೆ, ಇಷ್ಟು ಕಷ್ಟಪಟ್ಟು ದುಡ್ಡು ಸೇರಿಸಿದರೂ ಕೊನೆಗೆ ಆಗುವುದೇನು? ದೇಹ ಮಣ್ಣಿಗೆ, ಒಡವೆಗಳು ಯಾರಿಗೋ, ಹೆಂಡತಿ ಪರರ ಪಾಲು, ಪ್ರಾಣ ಗಾಳಿಯ ಪಾಲು. ನಿನ್ನದೆನ್ನುವುದು ಉಳಿದದ್ದೇನು?

ಕಗ್ಗ ಕೇಳುವುದು ಅದನ್ನೇ. ನೀನು ಎಷ್ಟು ತಿಂದರೂ ಒಂದು ಮುಷ್ಟಿ ಹಿಟ್ಟು ಜೀರ್ಣವಾಗಿ ಶಕ್ತಿ ನೀಡೀತು. ಉಳಿದದ್ದೆಲ್ಲ ವ್ಯರ್ಥ. ಈ ಮಾತು ಕೇವಲ ಅನ್ನಕ್ಕೆ ಮತ್ತು ಹಣಕ್ಕೆ ಸಂಬಂಧಿಸಿದ್ದಲ್ಲ. ಸಾವಿರಾರು ಗ್ರಂಥಗಳನ್ನು ಓದಬಹುದು, ನೂರಾರು ಉಪನ್ಯಾಸ ಮಾಡಬಹುದು. ಆದರೆ ಓದಿದ್ದನ್ನು, ಮಾತನಾಡಿದ್ದನ್ನು ಜೀರ್ಣಿಸಿಕೊಂಡು ಬದುಕಿಗೆ ಅನ್ವಯ ಮಾಡಿಕೊಂಡಿದ್ದೆಷ್ಟು? ಅರಗಿಸಿಕೊಂಡು ಜ್ಞಾನವಾದದ್ದು ಬದುಕಿಗೊಂದು ಸುಗಂಧ, ಉಳಿದದ್ದು ಗಾಳಿಯ ವಾಸನೆ.

ಪದಬಂಧ 5026

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಪಗಡೆ ಆಟದ ದಾಳ (2)
3.ಕಂಬಿ ಹತ್ತಿರ ನಿಂತವಳ ಜಂಬ!(2)
5.ಹಿಂದಿನಿಂದ ಉಳಿದು ಬಂದ ಪ್ರಾಣಿ,ಪಕ್ಷಿಗಳ ಅವಶೇಷ(5)
6.ಗಡಕ್ಕನೆ ಬಂದೆರಗಿದ ಗಂಡು ಕೋತಿ(3)
7.ಇದು ಮಣ್ಣಿಗೆ ಸಂಬಂಧಿಸಿದ್ದು(3)
8.ಸಮಾಜದ ಸರ್ವರಿಗೂ ಸಂಬಂಧಿಸಿದ್ದು(5)
9.ನಿಧಾನವಾಗಿ ನಡೆಸಿರುವ ರಾಜಿ(3)
10.ಗಲಾಟೆಯಿಲ್ಲದೆ ಅತ್ಯಂತ ಶಾಂತವಾದುದು(3)
13.ಕೆಲಸ ಮಾಡಲು ಬೇಕಾದ ಸಾಧನ(5)
14.ತೀವ್ರವಾದ ಆಸಕ್ತಿ ಅಥವಾ ಶ್ರದ್ಧೆಯೂ ಆದೀತು(2)
15.ಹರಕೆಗೆ ಬಲಿಕೊಡುವ ಪ್ರಾಣಿ(2)

ಮೇಲಿಂದ ಕೆಳಕ್ಕೆ
1.ಒಪ್ಪವಾಗಿ ರಾಗದೊಡನೆ ಮೂಡಿದ ಪ್ರೀತಿ (4)
2.ರಕ್ಷಣೆಗೆಂದು ಇಟ್ಟುಕೊಂಡಿರುವ ಸಾಧನ(3)
4.ವರನಿಗೆ ಕೇಳಿಸಿದ್ದು ಮಧುರ ಧ್ವನಿ(4)
5.ಅಂತ್ಯ ಅಥವಾ ಸಾವು ಎಂದರೂ ಸರಿ(5)
7.ಈತ ಅಡುಗೆಯಲ್ಲಿ ಪರಿಣಿತ(5)
9.ಸತ್ತವರೆಂದು ಬದುಕಿಸುವುದೆಂದು ನಂಬಲಾದ ಮೂಲಿಕೆ(4)
11.ಈಕೆ ತೆಳ್ಳಗಿನ ಸೊಂಟದವಳು(4)
12.ಕಲ್ಪನೆಯಲ್ಲಿ ಮೂಡಿರುವ ಇಚ್ಛೆ!(3)



5025ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಡವಿ3.ಅನುರಾಗ5.ಬರ6.ಹತ್ಯಾಕಾಂಡ7.ವರಮಾನತೆರಿಗೆ10.ಅವಧಾನಿ11.ಸತಿ13.ಗರ್ಭಕೋಶ14.ಕುರುಡ

ಮೇಲಿಂದ ಕೆಳಕ್ಕೆ:
1.ಅಚ್ಚು2.ವಿವರ4.ಗರುಡ5.ಬಡವ6.ಹಣತೆ8.ಮಾನಿನಿ9.ಗೆಳತಿ10.ಅಣುಗ11.ಸರಕು12.ಭಂಡ

ಸುಡೊಕು 5412

	4		1		3	5		
7		6	4				3	1
	3				7	4		
6	1				4			
						6		4
8	2						1	
		3		2		9		8
9			3		6		7	5
		1		8			6	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5411 ಸುಡೊಕು

3	5	2	1	9	4	8	6	7
6	1	4	5	8	7	9	3	2
7	9	8	6	3	2	5	1	4
2	7	9	8	1	3	6	4	5
1	3	6	7	4	5	2	9	8
4	8	5	9	2	6	3	7	1
5	4	1	2	6	9	7	8	3
9	2	3	4	7	8	1	5	6
8	6	7	3	5	1	4	2	9

ಸಂಸತ್ತಿನ ಮುಂಗಾರು ಅಧಿವೇಶನ: ರಾಜ್ಯಸಭೆಯಲ್ಲಿ ಒಂದಿಷ್ಟು ಆಶಾಕಿರಣ

ಪ್ರತಿಭಟನೆ ನಡುವೆಯೇ ಪ್ರಶ್ನೋತ್ತರ ಅವಧಿ

ನವದೆಹಲಿ (ಪಿಟಿಐ): ವಿರೋಧ ಪಕ್ಷಗಳ ಪ್ರತಿಭಟನೆ, ಗದ್ದಲಗಳಿಂದ ಮೂರು ದಿನಗಳಿಂದ ಸರಿಯಾಗಿ ನಡೆಯದ ರಾಜ್ಯಸಭೆಯ ಕಲಾಪವು ಗುರುವಾರ ಪ್ರಶ್ನೋತ್ತರ ಅವಧಿಗೆ ಸೀಮಿತವಾಯಿತು.

ವಿರೋಧ ಪಕ್ಷಗಳ ಪ್ರತಿಭಟನೆಯ ನಡುವೆಯೂ ಗುರುವಾರ ಮಧ್ಯಾಹ್ನ 12 ಗಂಟೆಗೆ ಪ್ರಶ್ನೋತ್ತರ ಅವಧಿಗೆ ಅವಕಾಶ ಕಲ್ಪಿಸಲಾಯಿತು. ಈ ವೇಳೆಯಲ್ಲಿ ಕೆಲ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಸಂಬಂಧಿಸಿದ ಸಚಿವರು ಉತ್ತರ ನೀಡಿದರು.

ಗುರುವಾರ ಪ್ರಶ್ನೋತ್ತರ ಅವಧಿಗೆ 15 ಮೌಖಿಕ ಪ್ರಶ್ನೆಗಳನ್ನು ಪಟ್ಟಿ ಮಾಡಲಾಗಿತ್ತು. ಆ ಪೈಕಿ 13 ಪ್ರಶ್ನೆಗಳನ್ನು ಕೇಳಲು ಸಾಧ್ಯವಾಯಿತು. ಇದಕ್ಕೂ ಮುನ್ನ ವಿರೋಧ ಪಕ್ಷಗಳ ಪ್ರತಿಭಟನೆಯ ಕಾರಣದಿಂದ ಕಲಾಪವನ್ನು ಎರಡು ಬಾರಿ ಮುಂದೂಡಲಾಗಿತ್ತು.

ಜಿಎಸ್‌ಟಿ ಮಂಡಳಿಯಲ್ಲಿ ಪ್ರಶ್ನಿಸಿ: 'ಅಗತ್ಯ ವಸ್ತುಗಳ ಮೇಲಿನ ಜಿಎಸ್‌ಟಿ ವಿರೋಧಿಸಿ ವಿರೋಧ ಪಕ್ಷಗಳು ರಾಜ್ಯಸಭೆ, ಲೋಕಸಭೆಯಲ್ಲಿ ಪ್ರತಿಭಟಿಸುವ ಬದಲಿಗೆ, ಜಿಎಸ್‌ಟಿ ಮಂಡಳಿಯಲ್ಲಿ ಧ್ವನಿ ಎತ್ತಿ' ಎಂದು ಕೇಂದ್ರದ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅನುರಾಗ್ ಠಾಕೂರ್ ರಾಜ್ಯಸಭೆಯಲ್ಲಿ ವಿರೋಧ ಪಕ್ಷಗಳಿಗೆ ತಿಳಿಸಿದರು.

'ಜಿಎಸ್‌ಟಿಗೆ ಸಂಬಂಧಿಸಿದ ವಿಷಯಗಳನ್ನು ಅವರು (ಬಿಜೆಪಿಯೇತರ ರಾಜ್ಯ ಸರ್ಕಾರಗಳು) ಜಿಎಸ್‌ಟಿ ಮಂಡಳಿಯಲ್ಲಿ ಚರ್ಚಿಸಬೇಕು. ಅದನ್ನು ಬಿಟ್ಟು ಅಧಿವೇಶನದಲ್ಲಿ ಫಲಕಗಳನ್ನು ಪ್ರದರ್ಶಿಸಿ ಪ್ರತಿಭಟಿಸುವುದು ಸರಿಯಲ್ಲ' ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಅಗತ್ಯ ವಸ್ತುಗಳ ಮೇಲಿನ ಜಿಎಸ್‌ಟಿ, ಕೋವಿಡ್ ಲಸಿಕೆ, ಅಗ್ನಿಪಥ ಯೋಜನೆಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಲ್ಲಿ ಗೊಂದಲ ಸೃಷ್ಟಿಸುವ ನಿಟ್ಟಿನಲ್ಲಿ ಕೆಲ ಜನಪ್ರತಿನಿಧಿಗಳು ಕಾರ್ಯೋನ್ಮುಖರಾಗಿದ್ದಾರೆ' ಎಂದು ಅವರು ಯಾರ ಹೆಸರನ್ನೂ ಹೇಳದೆ ವಿರೋಧ ಪಕ್ಷಗಳ ನಾಯಕರನ್ನು ದೂರಿದರು.

94 ಯುಟ್ಯೂಬ್ ಚಾನೆಲ್‌ಗಳ ನಿಷೇಧ: ಕೇಂದ್ರ ಸರ್ಕಾರ 2021– 22ರಲ್ಲಿ ದೇಶ ವಿರೋಧ ಚಟುವಟಿಕೆಗಳಲ್ಲಿ ತೊಡಗಿದ್ದ 94 ಯುಟ್ಯೂಬ್ ಚಾನೆಲ್‌ಗಳೂ, ಸಾಮಾಜಿಕ ಮಾಧ್ಯಮಗಳಲ್ಲಿನ 19 ಖಾತೆಗಳು ಮತ್ತು 747 ಯುಆರ್‌ಎಲ್‌ಗಳನ್ನು (ಯುನಿಫಾರಂ ರಿಸೋರ್ಸ್ ಲೊಕೇಟರ್) ನಿಷೇಧಿಸಿದೆ ಎಂದು ಸಚಿವರು ಪ್ರಶ್ನೆಯೊಂದಕ್ಕೆ ಮಾಹಿತಿ ನೀಡಿದರು.

ದೇಶ ವಿರೋಧಿ ಚಟುವಟಿಕೆಯಲ್ಲಿ ತೊಡಗಿರುವವರ ವಿರುದ್ಧ ಕ್ರಮಗಳನ್ನು ತೆಗೆದುಕೊಳ್ಳುವ ವಿಚಾರದಲ್ಲಿ ಸರ್ಕಾರ ಯಾವುದೇ ರೀತಿಯಲ್ಲೂ ಹಿಂಜರಿಯುವುದಿಲ್ಲ ಎಂದು ಅವರು ಹೇಳಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಸರ್ಕಾರ (ಸಹಕಾರ ಇಲಾಖೆ)
ಸಹಕಾರ ಸಂಘಗಳ ಸಹಾಯಕ ನಿಬಂಧಕರು, 4ನೇ ವಲಯ, ಬೆಂಗಳೂರು ನಗರ ಜಿಲ್ಲೆರವರ ನ್ಯಾಯಾಲಯ, ನಂ.146, ಸಹಕಾರ ಸೌಧ, 3ನೇ ಮುಖ್ಯರಸ್ತೆ, 8ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–03.

ದಾವಾ ಸಂಖ್ಯೆ : ಯುಬಿಸಿ–3: ಡಿಐಎಸ್:07.2022–23

ವಾದಿ, ಮುಖ್ಯಕಾರ್ಯ ನಿರ್ವಾಹಣಾಧಿಕಾರಿ, ಜಿ.ಎಸ್.ಎಸ್. ಕ್ರೆಡಿಟ್ ಕೋ–ಅಪರೇಟಿವ್ ಸೊಸೈಟಿ ಲಿ., ನಂ.09, ಗಣೇಶ್ ಬಿಲ್ಡಿಂಗ್, 4ನೇ ಅಡ್ಡರಸ್ತೆ, ಲಿಂಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003. V/s ಪ್ರತಿವಾದಿ, 1. ಶ್ರೀ ರಿತೇಶ್ ಆರ್. ನಾಯಕ್ S/o ಲೇಟ್ ಪಿ. ರೋಹಿದಾಸ್ ನಾಯಕ್, ನಂ. ಎ–11, ಸಂಚುರಿ ಕೋರ್ಬಲ್, 60 ಅಡಿ ರಸ್ತೆ, ಐಸಿಐಸಿಐ ಬ್ಯಾಂಕ್ ಹಿಂಭಾಗ, ಸಹಕಾರ ನಗರ, ಬೆಂಗಳೂರು–560092. 2. ಶ್ರೀಮತಿ ಗೀತಾ ಆರ್ ನಾಯಕ್, W/o ಲೇಟ್ ಪಿ. ರೋಹಿದಾಸ್ ನಾಯಕ್, ನಂ. ಎ–11, ಸಂಚುರಿ ಕೋರ್ಬಲ್, 60 ಅಡಿ ರಸ್ತೆ, ಐಸಿಐಸಿಐ ಬ್ಯಾಂಕ್ ಹಿಂಭಾಗ, ಸಹಕಾರ ನಗರ, ಬೆಂಗಳೂರು–560092. 3. ಶ್ರೀಮತಿ ನಿವೇದಿತಾ ನಾಯಕ್, D/o ಲೇಟ್ ಪಿ. ರೋಹಿದಾಸ್ ನಾಯಕ್, ನಂ. ಎ–11, ಸಂಚುರಿ ಕೋರ್ಬಲ್, 60 ಅಡಿ ರಸ್ತೆ, ಐಸಿಐಸಿಐ ಬ್ಯಾಂಕ್ ಹಿಂಭಾಗ, ಸಹಕಾರ ನಗರ, ಬೆಂಗಳೂರು–560092.

ನೋಟೀಸ್

1ನೇ ಪ್ರತಿವಾದಿಯು ಮತ್ತು ಅವರ ತಂದೆಯಾದ ಲೇಟ್ ಶ್ರೀ ರೋಹಿದಾಸ್ ರವರು ಜಂಟಿಯಾಗಿ ವಾದಿ ಸಂಘದಿಂದ ದಿನಾಂಕ: 14.02.2019. ರಂದು ವ್ಯಾಪಾರ ವ್ಯವಹಾರಕ್ಕಾಗಿ ಸ್ಥಿರಾಸ್ತಿ ಭದ್ರತಾ ಸಾಲ ರೂ. 50,00,000/– (ಐವತ್ತು ಲಕ್ಷಗಳು ಮಾತ್ರ) ಪಡೆದು, ಸಾಲ ಮರು ಪಾವತಿಸದೇ ಸುಸ್ತಿದಾರರಾಗಿರುತ್ತಾರೆ. ಸದರಿ ಸಾಲಕ್ಕೆ 2 ಮತ್ತು 3ನೇ ಪ್ರತಿವಾದಿಗಳು ಜಾಮೀನುದಾರರಾಗಿರುತ್ತಾರೆ. ದಿನಾಂಕ: 26.02.2022 ರಂತ್ಯಕ್ಕೆ ಸಾಲದ ಅಸಲು, ಬಡ್ಡಿ, ಸುಸ್ತಿ ಬಡ್ಡಿ ಮತ್ತು ಇತರೆ ಖರ್ಚು ಸೇರಿ ಒಟ್ಟು ರೂ.56,39,090/–ಗಳು ವಾದಿ ಸಂಘಕ್ಕೆ ಬರಬೇಕಾಗಿದ್ದು, ವಸೂಲಾತಿ ಗಾಗಿ ದಾವೆಯನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 70 ರಡಿ ಸಹಕಾರ ಸಂಘಗಳ ಜಂಟಿ ನಿಬಂದಕರು (ಪಟ್ಟಣ ಬ್ಯಾಂಕ್‌ಗಳ ವಿಭಾಗ) ಕೇಂದ್ರ ಕಛೇರಿ, ಬೆಂಗಳೂರು ಅಲ್ಲಿ ಹೂಡಿರುತ್ತಾರೆ. ಸದರಿ ಪ್ರಕರಣವನ್ನು ಕಲಂ 71 (1) (ಬಿ) ರೀತ್ಯಾ ಇತ್ಯರ್ಥ ಪಡಿಸಲು ನನ್ನನ್ನು ಇಲಾಖಾ ಮಧ್ಯಸ್ಥದಾರರನ್ನಾಗಿ ನೇಮಕ ಮಾಡಲಾಗಿರುತ್ತದೆ. ಪ್ರಕರಣವನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಸಂಬಂಧ ಉಭಯತ್ರರಿಗೆ ನೋಟೀಸ್ ಜಾರಿ ಮಾಡಿದ್ದು, ಪ್ರತಿವಾದಿ 03 ರವರ ಪ್ರಸ್ತುತ ವಿಳಾಸ ಗೊತ್ತಿಲ್ಲ ಎಂದು ವಾದಿಯವರು ತಿಳಿಸಿದ್ದರಿಂದ ಪತ್ರಿಕಾ ಪ್ರಕಟಣೆ ಮೂಲಕ ಜಾರಿ ಮಾಡಿದೆ.

ಪ್ರಕರಣದ ವಿಚಾರಣೆಯನ್ನು ದಿನಾಂಕ: 26.07.2022 ರಂದು ಅಪರಾಹ್ನ 3.00 ಗಂಟೆಗೆ ಈ ನ್ಯಾಯಲಯದಲ್ಲಿ ನಿಗದಿಪಡಿಸಲಾಗಿದೆ. ನಿಗದಿಪಡಿಸಿದ ಸಮಯಕ್ಕೆ ಸರಿಯಾಗಿ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲಾತಿ ಮತ್ತು ಸಾಕ್ಷ್ಯಧಾರಗಳೊಂದಿಗೆ ಪ್ರತಿವಾದಿಯು ಹಾಜರಾಗ ತಕ್ಕದ್ದು, ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಲಭ್ಯ ದಾಖಲಾತಿಗಳ ಆಧಾರದ ಮೇರೆಗೆ ನಿಮ್ಮ ವಿರುದ್ಧ ಏಕಪಕ್ಷೀಯ ನಿರ್ಣಯವನ್ನು ಕೈಗೊಳ್ಳಲಾಗುವುದೆಂದು ತಿಳಿಯ ತಕ್ಕದ್ದು.

ಈ ನೋಟೀಸನ್ನು ಸ್ವಸಹಿ ಹಾಗೂ ನ್ಯಾಯಲಯದ ಮೊಹರಿನೊಂದಿಗೆ ದಿನಾಂಕ: 18.07.2022 ರಂದು ನೀಡಲಾಗಿದೆ.

ಸಹಕಾರ ಸಂಘಗಳ ಸಹಾಯಕ ನಿಬಂಧಕರು, 4ನೇ ವಲಯ, ಬೆಂಗಳೂರು ನಗರ ಜಿಲ್ಲೆ.

ಉದ್ಯೋಗಾವಕಾಶ

Engg/ Production Technical

CAREER OPPORTUNITY !!
Skilled & Semi Skilled CNC & Press Machine Operator
Experience : 0 - 5years
QUALIFICATION
ITI/Diploma/GT&TC/NTTF
LOCATION
Kumarswamy Layout JC Industrial Estate
Company Name
Karnataka Enterprises
Mail your CV at kar_entp@yahoo.com
Contact : 9740377949

Marketing & Sales

GRT JEWELLERS
ಸೇಲ್ಸ್ ಸಿಬ್ಬಂದಿ ಬೇಕಾಗಿದ್ದಾರೆ ಬೆಂಗಳೂರು ಶೋರೂಮ್‌ಗಳಿಗೆ
1964 ರಿಂದಲೂ ಅತ್ಯಂತ ವಿಶ್ವಾಸಾರ್ಹ ಜ್ಯುವೆಲ್ಲರಿ ಸಂಸ್ಥೆಯಾದ ಜಿ ಆರ್ ಟಿ ಜ್ಯುವೆಲ್ಲರ್ಸ್‌ನ ಬೆಂಗಳೂರಿನ ಶೋರೂಮ್‌ಗಳಿಗೆ ಸೇಲ್ಸ್ ಸಿಬ್ಬಂದಿ ಬೇಕಾಗಿದ್ದಾರೆ. ಫ್ರೆಶರ್ ಮತ್ತು ಅನುಭವಿ ಅಭ್ಯರ್ಥಿಗಳು ತಮ್ಮ ಸ್ವವಿವರ ಮತ್ತು ಶೈಕ್ಷಣಿಕ ಪ್ರಮಾಣಪತ್ರಗಳೊಂದಿಗೆ ವಾಕ್ ಇನ್ ಸಂದರ್ಶನಕ್ಕೆ ಹಾಜರಾಗಬಹುದು. ಅಭ್ಯರ್ಥಿಗಳು ಕನ್ನಡ ಮಾತನಾಡುವವರಾಗಿರಬೇಕು
ಸೇಲ್ಸ್‌ಮನ್/ಸೇಲ್ಸ್ ಗರ್ಲ್ಸ್
10ನೇ ತರಗತಿ, ಪಿಯುಸಿ ಅಥವಾ ಪದವಿ
ವಯೋಮಿತಿ:18 ರಿಂದ 27
ಸೇಲ್ಸ್ ಅಸಿಸ್ಟೆಂಟ್ಸ್
10ನೇ ತರಗತಿ, ಅಥವಾ ಪಿಯುಸಿ
ವಯೋಮಿತಿ: 18 ರಿಂದ 22
ದಿನಾಂಕ ಮತ್ತು ಸಮಯ:
22 ಜುಲೈ, 2022 (ಶುಕ್ರವಾರ)
ಬೆಳಗ್ಗೆ 10 ರಿಂದ ಸಂಜೆ 5 ವರೆಗೆ
ಸಂದರ್ಶನ ಸ್ಥಳ:
GRT ಜ್ಯುವೆಲ್ಲರ್ಸ್ ಇಂಡಿಯಾ (ಪ್ರೈ) ಲಿಮಿಟೆಡ್ ಹಳೆಯ ನಂ. 1794, ಹೊಸ ನಂ. 530, 2ನೇ ಮುಖ್ಯ ಸಂಪಿಗೆ ರಸ್ತೆ, ಸಂಪಿಗೆ ಥಿಯೇಟರ್ ಹತ್ತಿರ, ಮಲ್ಲೇಶ್ವರಂ, ಬೆಂಗಳೂರು - 560 003.
ಸಂದರ್ಶನದ ಸಮಯದಲ್ಲಿ ಅಭ್ಯರ್ಥಿಗಳು ತಮ್ಮ ಆಧಾರ್ ಕಾರ್ಡ್ ಜೆರಾಕ್ಸ್ ಕಾಪಿಯೊಂದಿಗೆ ಬರಬೇಕು.
ಸಂಪರ್ಕ ಸಂಖ್ಯೆಗಳು: 9686702520, 9686905786, 9686799888
ಇಮೇಲ್: recruitment@grtjewels.com

General

ತಕ್ಷಣ ಬೇಕಾಗಿದ್ದಾರೆ: ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಊಟ,ವಸತಿ ಉಚಿತ. ಸಂಬಳ:12,000 ರಿಂದ15,000/-. ಇಎಸ್‌ಐ,ಪಿಎಫ್ ಸೌಲಭ್ಯವಿರುತ್ತದೆ.ಬೆಂಗಳೂರು-76. ತಕ್ಷಣ ಸಂಪರ್ಕಿಸಿ:9606385001, 9606523337.

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು. ಮನೆಕೆಲಸಕ್ಕೆ, ಅಡುಗೆಗೆ ಮಹಿಳೆಯರು ಹೋಂ ನರ್ಸಗಳು ಹುಡುಗಿಯರು ಬೇಕಾಗಿದ್ದಾರೆ. ಊಟವಸತಿಯಿದೆ. 10,000- 15,000, 8951315839, 9880545002

ಕಂಪನಿಗಳಿಗೆ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ: 18000- 20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

Drivers

ಬೆಂಗಳೂರಿನಲ್ಲಿ ಶಾಲೆಗೆ ಬಸ್ ಚಾಲಕರು ಬೇಕಾಗಿದ್ದಾರೆ. ಕೆನ್ಮೋರ್ ಶಾಲೆ 31, ಕನಕಪುರ ರಸ್ತೆ, ಬಸವನಗುಡಿ, ಬೆಂಗಳೂರು 04. ಸಂಬಳ ತಿಂಗಳಿಗೆ 10,000 ರಿಂದ 14,000. ಉಚಿತ ಶಿಕ್ಷಣ ಮತ್ತು ವಸತಿ ಲಭ್ಯವಿದೆ. Ph/ whatsapp 9901501185 ಅನ್ನು ಸಂಪರ್ಕಿಸಿ :

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ಶ್ರೀ ಶಕ್ತಿ ಕೇರ್ ಗೆ ಯುವಕರು ಮಸಾಜ್ ಥೆರಪಿ ಕೆಲಸಮಾಡಲು ಕೆಲಸಕ್ಕೆ ಬೇಕಾಗಿದ್ದಾರೆ. ವಯೋಮಿತಿ 20ರಿಂದ 30 ವರ್ಷದೊಳಗೆ. ತಿಂಗಳಿಗೆ ವೇತನ 15,000/- ರಿಂದ 17,000/- ಸ್ಥಳ: ಶೇಷಾದ್ರಿಪುರಂ, ಬೆಂಗಳೂರು- 90196 26612

ವ್ಯಾಪಾರ

Business to Business

Services

ಬಿಸಿನೆಸ್ ಮೆನ್ ಗಾಗಿ ಕೇಂದ್ರ ಸರಕಾರದ ಬ್ಯಾಂಕಿಂಗ್ ಮಾಹಿತಿಗಾಗಿ ಸಂಪರ್ಕಿಸಿ. 7795228716, 7259427360, 9972076049

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

Airport Road

BDA BIAAPA Approved Corner Sites For Sale 14 Kms Before Airport Near Stone Hill School Direct Owner 8904050690

ಭವಿಷ್ಯ

Astrology

★॥ಶ್ರೀಕೇದಾರನಾಥ॥★ ಆರಾಧನೆಯಿಂದ ಪ್ರೀತಿಪ್ರೇಮ, ಸ್ತ್ರೀಪುರುಷ ವಶೀಕರಣ, ದಾಂಪತ್ಯ, ಜನವಶೀಕರಣ, ಧನವಶೀಕರಣ, ಕೋರ್ಟ್‌ಕಛೇರಿ ಸಾಲಬಾಧೆ ಯಾವುದೇ ಸಮಸ್ಯೆಯಿದ್ದರೂ. 100% ಶಾಶ್ವತ ಪರಿಹಾರ. 9148773459

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಪ್ರವಾಸ

Travel

ಸುಸಜ್ಜಿತ ಪ್ರವಾಸಗಳು: 04.09.2022 11.10.2022 ರಿಂದ 15 ದಿನಗಳ ಚಾರ್‌ಧಾಮ್ ಯಾತ್ರೆ. 13.09.2022 06.10.2022 ರಿಂದ 12 ದಿನಗಳ ಕಾಶಿ,ಗಯಾ. 02.10.2022 20.10.2022 ರಿಂದ 8 ದಿನಗಳ ಶಿಮ್ಲಾ,ಮನಾಲಿ. 13.09.2022 19.10.2022 ರಿಂದ 11 ದಿನಗಳ ಕಾಶಿ,ನೇಪಾಳ. 07.10.2022 ರಿಂದ 12 ದಿನಗಳ ಶಿಮ್ಲಾ ಅಮೃತ್ಸರ್ ವೈಷ್ಣೋದೇವಿ, 06.09.2022 ರಿಂದ 6/16 ದಿನಗಳ ಪುರಿ,ಕಲ್ಕತ್ತ ನೇಪಾಳ ಪ್ರವಾಸಗಳು. ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್. 11/08/22 ಶಿರಿಡಿ. 12/08/22 ಪುರಿ ಜಗನ್ನಾಥ್.11/08/22 ಮಧ್ಯಪ್ರದೇಶ 2 ಜ್ಯೋತಿರ್ಲಿಂಗ.18/08/22 ಕಾಶಿ ವಿಶ್ವನಾಥ. 9964527782

DH DECCAN HERALD
ಪ್ರಜಾವಾಣಿ

Classifieds
EDUCATION SPECIAL
SPECIAL RATES FOR
Admission Notice,
Education Success
Congratulation Ads
For More Details Contact:
Jerry Louis : 9731810277
Ravichandra : 9901641752
Vishal GM : 9845114560
Tanveer : 9886213331
Email : dhclassifieds@deccanherald.co.in

ಲೋಕಸಭೆ: ಕಲಾಪ ಮುಂದೂಡಿಕೆ

ನವದೆಹಲಿ (ಪಿಟಿಐ): ಭಾರತೀಯ ಅಂಟಾರ್ಕಟಿಕ್ ಮಸೂದೆ–2022ರ ಮಂಡನೆ ಸಂದರ್ಭದಲ್ಲಿ ವಿರೋಧ ಪಕ್ಷಗಳ ಸದಸ್ಯರು ಹಾಜರಿರುವುದು ಸೂಕ್ತ ಎಂದು ಕೇಂದ್ರ ಸರ್ಕಾರ ಮನವಿ ಮಾಡಿದ ಬಳಿಕ ಲೋಕಸಭಾ ಸ್ಪೀಕರ್, ಕಲಾಪವನ್ನು ಗುರುವಾರ ದಿನದ ಮಟ್ಟಿಗೆ ಮುಂದೂಡಿದರದು.

ಲೋಕಸಭಾ ಕಲಾಪ ಬೆಳಿಗ್ಗೆ ಆರಂಭವಾಗುತ್ತಿದ್ದಂತೆ ಕಾಂಗ್ರೆಸ್ ಸದಸ್ಯರು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ಜಾರಿ ನಿರ್ದೇಶನಾಲಯ ವಿಚಾರಣೆಗೆ ಒಳಪಡಿಸಿದ ಕ್ರಮವನ್ನು ಖಂಡಿಸಿದ ಕಾಂಗ್ರೆಸ್ ಸಂಸದರು, ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ಪ್ರತಿಭಟಿಸಿದರು. ಬಳಿಕ ಸ್ಪೀಕರ್ ಓಂ ಬಿರ್ಲಾ ಅವರು ಕಲಾಪವನ್ನು ಕೆಲ ನಿಮಿಷಗಳ ಕಾಲ ಮುಂದೂಡಿದರು.

ಮತ್ತೆ 11.30ಕ್ಕೆ ಕಲಾಪ ಆರಂಭವಾದಾಗ, ಕಾಂಗ್ರೆಸ್ ಸದಸ್ಯರು ಸದನಕ್ಕೆ ಬರಲಿಲ್ಲ. ಡಿಎಂಕೆ ಸದಸ್ಯರು ಕಲಾಪ ಬಹಿಷ್ಕರಿಸಿ ಹೊರನಡೆದರು.

ಮಧ್ಯಾಹ್ನ 2.15ಕ್ಕೆ ಮತ್ತೆ ಕಲಾಪ ಆರಂಭವಾದಾಗ, ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಅವರು, ಭಾರತೀಯ ಅಂಟಾರ್ಕಟಿಕ್ ಮಸೂದೆ– 2022 ಅತ್ಯಂತ ಮಹತ್ವದ್ದಾಗಿದ್ದು, ಸದನದಲ್ಲಿ ವಿರೋಧ ಪಕ್ಷಗಳು ಹಾಜರಿದ್ದಾಗ ಮಸೂದೆಯನ್ನು ಮಂಡನೆಗೆ ಪರಿಗಣಿಸುವುದು ಸೂಕ್ತ ಎಂದು ಸ್ಪೀಕರ್ ಬಳಿ ಮನವಿ ಮಾಡಿದರು.ಸದನದಲ್ಲಿ ವಿರೋಧ ಪಕ್ಷಗಳ ಸದಸ್ಯರು ಕಡಿಮೆ ಸಂಖ್ಯೆಯಲ್ಲಿ ಹಾಜರಿದ್ದುದನ್ನು ಗಮನಿಸಿದ ಸ್ಪೀಕರ್ ಕಲಾಪವನ್ನು ದಿನದ ಮಟ್ಟಿಗೆ ಮುಂದೂಡಿದರು.

ನೂಪುರ್ ಬೆಂಬಲಿಸಿದ ವ್ಯಕ್ತಿಗೆ ಹಲ್ಲೆ: ಇಬ್ಬರ ಬಂಧನ

ಮಧ್ಯಪ್ರದೇಶ (ಪಿಟಿಐ): ಬಿಜೆಪಿ ಮಾಜಿ ವಕ್ತಾರೆ ನೂಪುರ್ ಶರ್ಮಾ ಅವರನ್ನು ಬೆಂಬಲಿಸಿದ ವ್ಯಕ್ತಿಯೊಬ್ಬರ ಮೇಲೆ ಜನರ ಗುಂಪೊಂದು ಮಾರಕಾಸ್ತ್ರಗ-ಳಿಂದ ಹಲ್ಲೆ ನಡೆಸಿದ್ದು, ವ್ಯಕ್ತಿ ತೀವ್ರಗಾಯಗೊಂಡ ಘಟನೆ ಅಗರ್ ಮಾಲ್ವಾ ಜಿಲ್ಲೆಯಲ್ಲಿ ಬುಧವಾರ ನಡೆದಿದೆ. ಪ್ರಕರಣ ಸಂಬಂಧ 13 ಜನರ ವಿರುದ್ಧ ಪ್ರಕರಣ ದಾಖಲಾಗಿದ್ದು, ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಪ್ರವಾದಿ ಮಹಮ್ಮದ್ ಕುರಿತು ವಿವಾದಿತ ಹೇಳಿಕೆ ನೀಡಿದ ಆರೋಪ ಎದುರಿಸುತ್ತಿರುವ ನೂಪುರ್ ಶರ್ಮಾ ಅವರನ್ನು ಬೆಂಬಲಿಸಿದರೆನ್ನುವ ಕಾರಣಕ್ಕೆ ಆಯುಷ್ ಜಾದಮ್ (25) ಎನ್ನುವವರ ಮೇಲೆ ದಾಳಿ ನಡೆದಿದೆ. ಪ್ರಕರಣದ ತನಿಖೆ ನಡೆಯುತ್ತಿದೆ ಎಂದು ಎಸ್‌ಪಿ ರಾಕೇಶ್ ಸಾಗರ್ ತಿಳಿಸಿದ್ದಾರೆ.

ತಲೆಗೆ ಪೆಟ್ಟು ಬಿದ್ದಿರುವ ಜಾದಮ್ ಚೇತರಿಸಿಕೊಳ್ಳುತ್ತಿ-ದ್ದಾರೆ. ಹಲ್ಲೆ ನಡೆಸಿದ ಆರೋ-ಪಿಗಳೆಲ್ಲರೂ ಅಗರ್ ಮಾಲ್ವಾದ ನಿವಾಸಿಗಳು ಎಂದು ದೂರುದಾರ ಅಶುತೋಷ್ ಸೋನಿ ತಿಳಿಸಿದ್ದಾರೆ. ಬಂಧಿತರ ಹೆಸರು ಬಹಿರಂಗಪಡಿ-ಸಲು ಅಗರ್ ಮಾಲ್ವಾ ಕೊತ್ವಾಲಿ ಠಾಣೆ ಪ್ರಭಾರ ಅಧಿಕಾರಿ ಹರೀಶ್ ಜೆಜುರಿಕರ್ ನಿರಾಕರಿಸಿದ್ದಾರೆ.

ಘಟನೆ ಖಂಡಿಸಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದ ಬಲಪಂಥೀಯ ಸಂಘಟನೆಗಳ ಮುಖಂಡರು ಎಲ್ಲ ಆರೋಪಿಗಳನ್ನು ಬಂಧಿಸುವಂತೆ ಆಗ್ರಹಿಸಿದ್ದಾರೆ.

ಸುದ್ದಿ 2 ನಿಮಿಷ

'ಗುಜರಾತ್‌ನಲ್ಲಿ ಅಧಿಕಾರ ಸಿಕ್ಕರೆ 300 ಯುನಿಟ್ ವಿದ್ಯುತ್ ಉಚಿತ'

ಸೂರತ್ (ಪಿಟಿಐ): 'ಗುಜರಾತ್ ವಿಧಾನಸಭೆಗೆ ಇದೇ ವರ್ಷ ನಡೆಯಲಿರುವ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷ ಅಧಿಕಾರಕ್ಕೆ ಬಂದರೆ ತಿಂಗಳಿಗೆ 300 ಯುನಿಟ್‌ವರೆಗೆ ವಿದ್ಯುತ್ ಅನ್ನು ಉಚಿತವಾಗಿ ಪೂರೈಸಲಾಗುವುದು. ಅಲ್ಲದೇ, ಈ ವರ್ಷದ ಡಿಸೆಂಬರ್ 31ರವರೆಗಿನ ಎಲ್ಲ ವಿದ್ಯುತ್ ಬಿಲ್ ಬಾಕಿ ಮನ್ನಾ ಮಾಡಲಾಗುವುದು' ಎಂದು ಪಕ್ಷದ ರಾಷ್ಟ್ರೀಯ ಸಂಚಾಲಕ, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಘೋಷಿಸಿದ್ದಾರೆ.



ಇಲ್ಲಿ ಗುರುವಾರ ನಡೆದ ಟೌನ್ ಹಾಲ್ ಸಭೆಯಲ್ಲಿ ಜನತೆ ಉದ್ದೇಶಿಸಿ ಮಾತನಾಡಿದ ಅವರು, ಯಾವುದೇ ಕಡಿತ, ವ್ಯತ್ಯಯವಿಲ್ಲದೇ ನಿರಂತರ ವಿದ್ಯುತ್ ಪೂರೈಸಲಾಗುವುದು ಎಂದು ಆಶ್ವಾಸನೆ ನೀಡಿದರು.

'ಒಮ್ಮೆ ನಾವು ರಾಜ್ಯದಲ್ಲಿ ಅಧಿಕಾರಕ್ಕೆ ಬಂದರೆ, ಎಲ್ಲ ಭರವಸೆಗಳನ್ನು ಖಂಡಿತ ಈಡೇರಿಸುತ್ತೇವೆ. ಇದರಲ್ಲಿ ನಾವು ಎಡವಿದರೆ, ನಂತರದ ಚುನಾವಣೆಯಲ್ಲಿ ನೀವು ನಮ್ಮ ಪಕ್ಷಕ್ಕೆ ಮತ ಹಾಕಲೇಬೇಡಿ' ಎಂದು ಹೇಳಿದರು.

'ರಾಜ್ಯದಲ್ಲಿ ಬಿಜೆಪಿಯ 27 ವರ್ಷಗಳ ಆಡಳಿತದಿಂದ ಜನತೆ ಬೇಸತ್ತಿದ್ದಾರೆ. ಜನತೆ ಬದಲಾವ-ಣೆಯನ್ನು ಬಯಸಿದ್ದಾರೆ. ಪಕ್ಷವನ್ನು ಅಧಿಕಾರಕ್ಕೆ ತರಲು ಹೊಂದಿರುವ ಯೋಜನೆಗಳು ಮತ್ತು ಕಾರ್ಯ-ಸೂಚಿಗಳನ್ನು ಕೆಲವೇ ದಿನಗಳಲ್ಲಿ ಗುಜರಾತ್ ಜನತೆಯ ಮುಂದಿಡಲಾಗುವುದು' ಎಂದು ಹೇಳಿದರು.

ಕೇರಳ: ಅಸಂಘಟಿತ ಮಹಿಳಾ ಕಾರ್ಮಿಕರಿಗೆ 'ಅಪಾರ್ಟ್‌ಮೆಂಟ್'

ತಿರುವನಂತಪುರ (ಪಿಟಿಐ): ಸುರಕ್ಷತೆ ಮತ್ತು ಭದ್ರತೆ ದೃಷ್ಟಿಯಿಂದ ಅಸಂಘಟಿತ ವಲಯದಲ್ಲಿ ಕೆಲಸ ಮಾಡುವ ಮಹಿಳೆಯರ ವಾಸ್ತವ್ಯಕ್ಕೆ ಕೇರಳ ಸರ್ಕಾರ ರಾಜ್ಯಾದಾದ್ಯಂತ 'ಸ್ಟುಡಿಯೊ ಅಪಾರ್ಟ್‌ಮೆಂಟ್' ಸ್ಥಾಪಿಸಲು ಯೋಜನೆ ರೂಪಿಸಿದೆ.

ಕಳೆದ ವರ್ಷ ಕಾರ್ಮಿಕ ಮತ್ತು ಕೌಶಲ ಇಲಾಖೆಯು ಪೈಲಟ್ ಯೋಜನೆಯಾಗಿ ಮೀನಂಕುಳಂ ಸಮೀಪದ ಕಿನ್‌ಫ್ರಾ ಇಂಟರ್‌ನ್ಯಾಷನಲ್ ಅಪಾರೆಲ್ ಪಾರ್ಕ್‌ನಲ್ಲಿ ಕಟ್ಟಡ ನಿರ್ಮಾಣ ಕಾರ್ಯ ಕೈಗೆತ್ತಿಕೊಂಡಿದೆ. ಭೂಮಿ, ಅನುದಾನ ಲಭ್ಯತೆ ನೋಡಿಕೊಂಡು ಯೋಜನೆಯನ್ನು ಇತರೆ ಜಿಲ್ಲೆಗಳಿಗೂ ವಿಸ್ತರಿಸಲಾಗುವುದು ಎಂದು ಕಾರ್ಮಿಕ ಸಚಿವ ವಿ. ಶಿವನ್‌ಕುಟ್ಟಿ ಹೇಳಿದ್ದಾರೆ. ಬಾಡಿಗೆ ಆಧಾರದ ಮೇಲೆ ಉದ್ಯೋಗಸ್ಥ ಮಹಿಳಾ ಕಾರ್ಮಿಕರಿಗೆ ಯೋಗ್ಯ, ಸುರಕ್ಷಿತ ವಸತಿ ಸೌಲಭ್ಯವನ್ನು ಒದಗಿಸಲು ಯೋಜಿಸಲಾಗಿದೆ. ಮೊದಲ ಹಂತದಲ್ಲಿ ಆರು ಮಹಡಿಯ ಅಪಾರ್ಟ್‌ಮೆಂಟ್ ನಿರ್ಮಿಸಲಾಗುತ್ತಿದೆ ಎಂದರು.

ಹರಿಯಾಣ ಸರ್ಕಾರ ಆದೇಶ

ಡಿವೈಎಸ್ಪಿ ಹತ್ಯೆ: ನ್ಯಾಯಾಂಗ ತನಿಖೆ

ಚಂಡೀಗಡ (ಪಿಟಿಐ): ಮೇವಾಟ್ ಪ್ರದೇಶದಲ್ಲಿ ಅಕ್ರಮ ಕಲ್ಲು ಗಣಿಗಾರಿಕೆ ತಡೆಯಲು ಮುಂದಾದ ಡಿವೈಎಸ್‌ಪಿ ಸುರೇಂದ್ರ ಸಿಂಗ್ ಅವರನ್ನು ಗಣಿ ಮಾಫಿಯಾ ಹತ್ಯೆ ಮಾಡಿರುವ ಪ್ರಕರಣದ ನ್ಯಾಯಾಂಗ ತನಿಖೆಗೆ ಹರಿಯಾಣ ಸರ್ಕಾರ ಆದೇಶಿಸಿದೆ.

ಹರಿಯಾಣದ ನೂಹ್ ಜಿಲ್ಲೆಯ ಅರಾವಳಿ ಬೆಟ್ಟ ಪ್ರದೇಶದಲ್ಲಿ ನಡೆಯುತ್ತಿರುವ ಅಕ್ರಮ ಕಲ್ಲು ಗಣಿಗಾರಿಕೆ ತಡೆಯಲು ಮುಂದಾಗಿದ್ದ ಡಿವೈಎಸ್‌ಪಿ ಸುರೇಂದ್ರ ಸಿಂಗ್‌ಮೇಲೆ ಅಕ್ರಮ ಕಲ್ಲುಗಣಿಗಾರಿಕೆ ಮಾಫಿಯಾದವರು ಟ್ರಕ್ ಹರಿಸಿ ಮಂಗಳವಾರ ಹತ್ಯೆ ಮಾಡಿದ್ದರು. ಈ ಪ್ರಕರಣದ ನ್ಯಾಯಾಂಗ ತನಿಖೆಗೆ ಸರ್ಕಾರ ತೀರ್ಮಾನಿಸಿದೆ. ಅರಾವಳಿ ಬೆಟ್ಟಪ್ರದೇಶದಲ್ಲಿ ನಡೆದಿರುವ ಅಕ್ರಮ ಗಣಿಗಾರಿಕೆ ಬಗ್ಗೆ ಎಲ್ಲ ಆಯಾಮ ಗಳಿಂದ ತನಿಖೆ ನಡೆಸಲಾಗುವುದು. ಅಕ್ರಮ ಗಣಿಗಾರಿಕೆ ಸೇರಿ ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿರುವವರ ವಿರುದ್ಧ ಬಿಜೆಪಿ ನೇತೃತ್ವದ ಸರ್ಕಾರವು ಕಠಿಣ ಕಾನೂನು ಕ್ರಮ ಜರುಗಿಸಲಿದೆ ಎಂದು ವಿಜ್ ತಿಳಿಸಿದ್ದಾರೆ.

ಪ್ರಕರಣದ ಪ್ರಮುಖ ಆರೋಪಿ ಸಬ್ಬೀರ್ ಅಲಿಯಾಸ್ ಮಿತ್ತರ್‌ನನ್ನು ರಾಜಸ್ಥಾನದ ಭರತ್‌ಪುರ ಜಿಲ್ಲೆಯಲ್ಲಿ ಬಂಧಿಸಲಾಗಿದೆ. ಪ್ರಕರಣದ ಮತ್ತೊಬ್ಬ ಆರೋಪಿ ಇಕ್ಕರ್‌ನನ್ನು ನೂಹ್ ಪೊಲೀಸರು ಬಂಧಿಸಿ, ವಿಚಾರಣೆಗೆ ಒಳಪಡಿಸಿದ್ದಾರೆ.

ಸುಪ್ರೀಂ ಸಮ್ಮತಿ: ಡಿವೈಎಸ್‌ಪಿ ಹತ್ಯೆಗೆ ಸಂಬಂಧಿಸಿದಂತೆ ನಡೆಯುವ ಕಾರ್ಯಪಾಲನಾ ವರದಿಯನ್ನು (ಎಟಿಆರ್) ಪರಿಶೀಲಿಸಬೇಕೆಂದು ಕೋರಿ ಸಲ್ಲಿಸಲಾದ ಮನವಿಯನ್ನು ಪರಿಶೀಲಿಸಲು ಸುಪ್ರೀಂ ಕೋರ್ಟ್ ಸಮ್ಮತಿ ಸೂಚಿಸಿದೆ. ಈ ಪ್ರದೇಶದಲ್ಲಿನ ಅಕ್ರಮ ಗಣಿಗಾರಿಕೆಯ ಮೇಲ್ವಿಚಾರಣೆಯನ್ನು ನ್ಯಾಯಮೂರ್ತಿ ಎ.ಎಂ. ಖಾನ್ವಿಲ್ಕರ್ ನೇತೃತ್ವದ ಪೀಠ ನಡೆಸುತ್ತಿದೆ.

ನೀಟ್: ಮತ್ತೆ ಇಬ್ಬರ ಬಂಧನ

ಕೊಲ್ಲಂ (ಕೇರಳ) (ಪಿಟಿಐ): 'ನೀಟ್' ಬರೆಯುವ ಮುನ್ನ ವಿದ್ಯಾರ್ಥಿನಿಯೊ-ಬ್ಬರ ಒಳ ಉಡುಪು ತೆಗೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಪರೀಕ್ಷಾ ಮೇಲ್ವಿಚಾ-ರಕರಿಬ್ಬರನ್ನು ಗುರುವಾರ ಪೊಲೀಸರು ಬಂಧಿಸಿದ್ದಾರೆ.

ವಿಚಾರಣೆಗೆ ಒಳಪಡಿಸಿದ ಬಳಿಕ ನೀಟ್ ವೀಕ್ಷಕ ಶಮ್ನದ್ ಜೆ. ಮತ್ತು ಪರೀಕ್ಷಾ ಸಂಯೋಜಕರಾದ ಪ್ರಿಜಿ ಕುರಿಯನ್ ಇಸಾಕ್ ಅವರನ್ನು ಬಂಧಿಸಲಾಗಿದೆ. ಇದರೊಂದಿಗೆ ಪ್ರಕರಣದಲ್ಲಿ ಬಂಧಿತರ ಸಂಖ್ಯೆ 7ಕ್ಕೇರಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪರೀಕ್ಷಾ ಕರ್ತವ್ಯದಲ್ಲಿದ್ದ ಐವರು ಮಹಿಳೆಯರನ್ನು ಮಂಗಳವಾರ ಬಂಧಿಸಲಾಗಿದೆ. ಬಂಧಿತರ ಪೈಕಿ ಮೂವರು ಎನ್‌ಟಿಎ ಗುತ್ತಿಗೆ ಪಡೆದಿದ್ದ ಸಂಸ್ಥೆಯೊಂದರ ಉದ್ಯೋಗಿಗಳು. ಇನ್ನಿಬ್ಬರು ಕೊಲ್ಲಂನ ಅಯುರ್ ಖಾಸಗಿ ಶಿಕ್ಷಣ ಸಂಸ್ಥೆಗೆ ಸೇರಿದವರಾಗಿದ್ದಾ-ರೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಕೊಲ್ಲಂಗೆ ಭೇಟಿ ನೀಡಿ, ಪರಿಶೀಲಿಸಲು ಎನ್‌ಟಿಎ ಸತ್ಯಶೋಧನಾ ಸಮಿತಿ ರಚಿಸಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಚಿರಸ್ಮರಣೆ

ಶ್ರೀಮತಿ॥ ನಾಗಮ್ಮನವರು
(ದಿವಂಗತ ಶ್ರೀ ಜಿ. ರಾಮಕೃಷ್ಣಪ್ಪ ರೆಡ್ಡಿಯವರ ಧರ್ಮಪತ್ನಿ)
ನಿಧನ: 22.7.2010
ನೀವು ನಮ್ಮನ್ನಗಲಿ ಇಂದಿಗೆ 12 ವರ್ಷಗಳಾದರೂ ನಿಮ್ಮ ನೆನಪು ನಮ್ಮಲ್ಲಿ ಸದಾ ಹಸಿರಾಗಿದೆ. ನಿಮ್ಮ ದಿವ್ಯಾತ್ಮಕ್ಕೆ ಶಾಂತಿಯನ್ನು ಬಯಸುವ
ಸೊಸೆ: ಕೆ.ಜೆ.ಯಶೋದಾ
ಮಕ್ಕಳು, ಅಳಿಯಂದಿರು ಮತ್ತು ಮೊಮ್ಮಕ್ಕಳು

ಒಬಿಸಿಗೆ ಶೇ 33 ಮೀಸಲು

ಒಂದನೇ ಪುಟದಿಂದ...

ಆದರೆ, ಎಸ್‌ಸಿ, ಎಸ್‌ಟಿ ಮತ್ತು ಹಿಂದುಳಿದ ವರ್ಗಗಳ ಒಟ್ಟು ಮೀಸಲಾತಿ ಪ್ರಮಾಣ ಶೇ 50 ಮೀರಬಾರದು ಎಂದೂ ಶಿಫಾರಸಿನಲ್ಲಿ ಪ್ರತಿಪಾದಿಸಿದೆ.

1996, 2001, 2010 ಮತ್ತು 2015ರಲ್ಲಿ ನಡೆದ ನಗರ, ಸ್ಥಳೀಯ ಸಂಸ್ಥೆಗಳ ಚುನಾವಣೆಗಳ ಪ್ರಾಯೋಗಿಕ ದತ್ತಾಂಶವನ್ನು ವಿಶ್ಲೇಷಿಸಿದಾಗ ಹಿಂದುಳಿದ ವರ್ಗಗಳ ಎ ಮತ್ತು ಬಿ ಪ್ರವರ್ಗದ ಸಮುದಾಯಗಳು ಇನ್ನೂ ಸಾಮಾಜಿಕ, ರಾಜಕೀಯವಾಗಿ ಹಿಂದುಳಿದಿವೆ ಎಂದೂ ಆಯೋಗ ಹೇಳಿದೆ.

ಪ್ರಮುಖ ಶಿಫಾರಸುಗಳು:

- ಬಿಬಿಎಂಪಿಯಲ್ಲಿ ಮೇಯರ್ ಮತ್ತು ಉಪಮೇಯರ್ ಹುದ್ದೆಗಳಲ್ಲೂ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡಲು ಪರಿಶೀಲಿಸಬೇಕು.
- ಬಿಬಿಎಂಪಿ ಮೇಯರ್ ಮತ್ತು ಉಪ ಮೇಯರ್ ಅವಧಿಯನ್ನು 30 ತಿಂಗಳಿಗೆ ನಿಗದಿಪಡಿಸುವ ಸಂಬಂಧ 'ಕರ್ನಾಟಕ ಪುರಸಭೆ ನಗರಸಭೆ ಕಾಯ್ದೆ 1976' ರ 'ಸೆಕ್ಷನ್ 12'ಕ್ಕೆ ತಿದ್ದುಪಡಿ ತರಬೇಕು. ಈ ಕಾಯ್ದೆ ಪ್ರಕಾರ ಮೇಯರ್ ಮತ್ತು ಉಪ ಮೇಯರ್ ಅಧಿಕಾರ ಅವಧಿ 12 ತಿಂಗಳು. ಬಿಬಿಎಂಪಿ ಕಾಯ್ದೆ 2020ರ ಪ್ರಕಾರ ಈ ಹುದ್ದೆಗಳ ಅಧಿಕಾರ ಅವಧಿ 30 ತಿಂಗಳು.
- ಎಲ್ಲ ನಗರ ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣಾ ವಿಭಾಗಗಳನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಡಿ ತರಬೇಕು.

ಆಯೋಗ ನೇಮಕದ ಹಿನ್ನೆಲೆ: ಹಿಂದುಳಿದ ವರ್ಗಗಳಿಗೆ ರಾಜಕೀಯ ಮೀಸಲಾತಿ ನೀಡುವ ಸಂಬಂಧ ಸುಪ್ರೀಂಕೋರ್ಟ್ 2010ರಲ್ಲಿ ತೀರ್ಪು ನೀಡಿ, 'ನಿಖರವಾದ ಅಂಕಿ– ಅಂಶಗಳ ಆಧಾರದಲ್ಲಿ ಮೂರು ಹಂತದಲ್ಲಿ ಪರಿಶೀಲನೆ ನಡೆಸಿ, ಆಯಾ ಸಮುದಾಯಗಳ ರಾಜಕೀಯ ಹಿಂದುಳಿದಿರುವಿಕೆಯನ್ನು ಖಾತರಿಪಡಿಸಿದ ಬಳಿಕವೇ ರಾಜಕೀಯ ಮೀಸಲಾತಿ ನೀಡಬೇಕು' ಎಂದಿತ್ತು.

2021ರ ಮಾರ್ಚ್‌ನಲ್ಲೂ ಸುಪ್ರೀಂ ಕೋರ್ಟ್ ಈ ಮಾತು ಪುನರುಚ್ಚರಿಸಿತ್ತು. 2022ರ ಜನವರಿಯಲ್ಲಿ ಮಹಾರಾಷ್ಟ್ರ ಹಾಗೂ ಮಧ್ಯಪ್ರದೇಶ ರಾಜ್ಯಗಳ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಮೂರು ಹಂತದ ಪರಿಶೀಲನೆ ಇಲ್ಲದೆ ಹಿಂದುಳಿದ ವರ್ಗಗಳಿಗೆ ಮೀಸಲು ನೀಡಲು ಅವಕಾಶ ನಿರಾಕರಿಸಿತ್ತು. ಈ ಆದೇಶ ಇಡೀ ದೇಶಕ್ಕೆ ಅನ್ವಯವಾಗುತ್ತದೆ ಎಂದೂ ಸುಪ್ರೀಂಕೋರ್ಟ್ ಸ್ಪಷ್ಟಪಡಿಸಿತ್ತು.

ಈ ತೀರ್ಪುಗಳಿಂದಾಗಿ ರಾಜ್ಯದಲ್ಲಿ ಬಿಬಿಎಂಪಿ, ಪಂಚಾಯತ್, ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗೆ ಮೊದಲೇ ಮೀಸಲಾತಿ ನಿಗದಿ ಮಾಡುವುದು ಅನಿವಾರ್ಯವಾಗಿತ್ತು. ಹೀಗಾಗಿ ಹಿಂದುಳಿದ ವರ್ಗಗಳಿಗೆ ರಾಜಕೀಯ ಮೀಸಲಾತಿ ಕಲ್ಪಿಸಲು ಉಂಟಾಗಿದ್ದ ತೊಡಕು ನಿವಾರಿಸಲು ಮಾರ್ಚ್ 31ರಂದು ನಡೆದಿದ್ದ ಸರ್ವಪಕ್ಷಗಳ ಸಭೆಯಲ್ಲಿ ಆಯೋಗವನ್ನು ರಚಿಸಲು ತೀರ್ಮಾನಿಸಲಾಗಿತ್ತು. ಅದರ ಪ್ರಕಾರ ಭಕ್ತವತ್ಸಲ ನೇತೃತ್ವದಲ್ಲಿ ಆಯೋಗ ರಚಿಸಿ, ನಿವೃತ್ತ ಐಎಎಸ್ ಅಧಿಕಾರಿ ಸಿ.ಆರ್. ಚಿಕ್ಕಮಠ ಅವರನ್ನು ಸದಸ್ಯರಾಗಿ ನೇಮಿಸಲಾಯಿತು.

ಶೇ 50ರೊಳಗೆ ಶೇ 33ರಷ್ಟು ಹೇಗೆ?

ಒಬಿಸಿ ಮೀಸಲಾತಿ ಪ್ರಮಾಣವನ್ನು ಶೇ 33ಕ್ಕೆ ಹೆಚ್ಚಿಸಬೇಕು, ಆದರೆ ಒಟ್ಟು ಮೀಸಲಾತಿ ಪ್ರಮಾಣ ಶೇ 50 ಅನ್ನು ಮೀರಬಾರದು ಎಂದು ನ್ಯಾ.ಭಕ್ತವತ್ಸಲ ಸಮಿತಿ ಹೇಳಿರುವುದು ಗೊಂದಲಕ್ಕೆ ಕಾರಣವಾಗಿದೆ.

ರಾಜ್ಯದಲ್ಲಿ ಪರಿಶಿಷ್ಟ ಜಾತಿಗೆ (ಎಸ್‌ಸಿ) ಶೇ 17, ಪರಿಶಿಷ್ಟ ಪಂಗಡಕ್ಕೆ (ಎಸ್‌ಟಿ) ಶೇ 5 ಹಾಗೂ ಇತರೆ ಹಿಂದುಳಿದ ವರ್ಗಕ್ಕೆ (ಒಬಿಸಿ) ಶೇ 27ರಷ್ಟು ಮೀಸಲಾತಿ ಇದೆ. ಒಟ್ಟು ಕೂಡಿದರೆ ಶೇ 49ರಷ್ಟಾಗಲಿದೆ.

ಸಾಮಾನ್ಯವಾಗಿ ಒಬಿಸಿಗೆ 1/3 ಎಂದೂ ಹೇಳಲಾಗುತ್ತದೆ. ಆದರೆ, ಪ್ರದೇಶ ಅಥವಾ ಜಿಲ್ಲಾವಾರು ಜನಸಂಖ್ಯೆ ಆಧರಿಸಿ ಮೀಸಲಾತಿ ವರ್ಗೀಕರಣ ಮಾಡುವಾಗ ಸ್ಥಳೀಯವಾಗಿ ಪ್ರಮಾಣ ವ್ಯತ್ಯಯ ಆಗುತ್ತದೆಯಾದ-ರೂ ಒಟ್ಟು ಮೀಸಲಾತಿ ಶೇ 50ರಷ್ಟನ್ನು ಮೀರುವುದಿಲ್ಲ. ಒಬಿಸಿಗೆ ಶೇ 27ರಷ್ಟೇ ಮೀಸಲಾತಿ ಸಿಗುತ್ತದೆ.

ಭಕ್ತವತ್ಸಲ ಸಮಿತಿಯು ಶೇ 33ರಷ್ಟು ಮೀಸಲಾತಿ ನೀಡುವಂತೆ ಶಿಫಾರಸು ಮಾಡಿದೆ. ಪರಿಶಿಷ್ಟ ಜಾತಿ/ಪಂಗಡಗಳ ಶೇ 22ರಷ್ಟನ್ನು ಸೇರಿಸಿದರೆ ಮೀಸಲಾತಿ ಪ್ರಮಾಣ ಶೇ 55ಕ್ಕೆ ಏರಲಿದೆ. ಶಿಕ್ಷಣ-ಉದ್ಯೋಗದ ಮೀಸಲಾತಿ ಲೆಕ್ಕದಲ್ಲಿ ಎಸ್‌ಸಿ -15, ಎಸ್‌ಟಿ -ಶೇ 3ರಷ್ಟಿದ್ದು, ಒಬಿಸಿಗೆ ಶೇ 32ರಷ್ಟಿದೆ ಇದು ಶೇ 50ರೊಳಗೆ ಇದೆ. ಶೇ 50ರ ಮಿತಿಯೊಳಗೆ ಒಬಿಸಿಗೆ ಶೇ 33ರಷ್ಟನ್ನು ಹೇಗೆ ನೀಡಲಾಗುತ್ತದೆ ಎಂಬುದರ ಬಗ್ಗೆ ವರದಿಯಲ್ಲಿ ಸ್ಪಷ್ಟತೆಯಿಲ್ಲ ಎಂದು ಕಾನೂನು ತಜ್ಞರು ಹೇಳುತ್ತಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ರಾಜ್ಯಕ್ಕೆ ಅಗ್ರಸ್ಥಾನ

ಒಂದನೇ ಪುಟದಿಂದ...

'ಪ್ರಮುಖ ರಾಜ್ಯಗಳು', 'ಈಶಾನ್ಯ ಮತ್ತು ಗುಡ್ಡಗಾಡು ಪ್ರದೇಶದ ರಾಜ್ಯಗಳು' ಹಾಗೂ 'ಕೇಂದ್ರಾಡಳಿತ ಮತ್ತು ನಗರ ರಾಜ್ಯಗಳು' ಎಂಬ ವಿಭಾಗಗಳ ಅಡಿಯಲ್ಲಿ ಸೂಚ್ಯಂಕ ಸಿದ್ಧಪಡಿಸಲಾಗಿದೆ.

ಕರ್ನಾಟಕವು 18.01 ಅಂಕ ಗಳಿಸಿದರೆ, ತೆಲಂಗಾಣ ಮತ್ತು ಹರಿಯಾಣ ಕ್ರಮವಾಗಿ 17.66 ಮತ್ತು 16.35 ಅಂಕ ಪಡೆದಿವೆ. ಬಿಹಾರ, ಒಡಿಶಾ ಹಾಗೂ ಛತ್ತೀಸಗಡ ಕ್ರಮವಾಗಿ ಕೊನೆಯ ಮೂರು ಸ್ಥಾನಗಳಲ್ಲಿ ಕಾಣಿಸಿಕೊಂಡಿವೆ. ಛತ್ತೀಸಗಡವು ಅತಿ ಕಡಿಮೆ (10.97) ಅಂಕ ಕಲೆಹಾಕಿದೆ. ಪ್ರಮುಖ ರಾಜ್ಯಗಳ ಪಟ್ಟಿಯಲ್ಲಿ ಮಹಾರಾಷ್ಟ್ರ, ತಮಿಳುನಾಡು, ಪಂಜಾಬ್, ಉತ್ತರ ಪ್ರದೇಶ, ಕೇರಳ, ಆಂಧ್ರಪ್ರದೇಶ, ಜಾರ್ಖಂಡ್, ಪಶ್ಚಿಮ ಬಂಗಾಳ, ರಾಜಸ್ಥಾನ, ಮಧ್ಯಪ್ರದೇಶ, ಗುಜರಾತ್ ಕೂಡ ಇದ್ದವು.

'ಕೇಂದ್ರಾಡಳಿತ ಮತ್ತು ನಗರ ರಾಜ್ಯಗಳ ಪಟ್ಟಿಯಲ್ಲಿ ಚಂಡೀಗಡಕ್ಕೆ (27.88 ಅಂಕ) ಅಗ್ರಪಟ್ಟ ಒಲಿದಿದೆ. ನವದೆಹಲಿ (27.00) ಹಾಗೂ ಅಂಡಮಾನ್ ಮತ್ತು ನಿಕೋಬಾರ್ (17.29) ನಂತರದ ಸ್ಥಾನಗಳಲ್ಲಿವೆ. ಪುದುಚೇರಿ, ಗೋವಾ, ಜಮ್ಮು ಮತ್ತು ಕಾಶ್ಮೀರ, ದಾದ್ರಾ–ನಗರ ಹವೇಲಿ ಮತ್ತು ಡಿಯು–ದಾಮನ್, ಲಕ್ಷದ್ವೀಪ ಹಾಗೂ ಲಡಾಖ್ ಕೂಡ ಈ ಪಟ್ಟಿಯಲ್ಲಿಇದ್ದವು.

ಈಶಾನ್ಯ ಮತ್ತು ಗುಡ್ಡಗಾಡು ಪ್ರದೇಶದ ರಾಜ್ಯಗಳ ಪಟ್ಟಿಯಲ್ಲಿ ಮಣಿಪುರ (19.37 ಅಂಕ) ಮೊದಲ ಸ್ಥಾನ ಪಡೆದಿದೆ. ಉತ್ತರಾಖಂಡ, ಮೇಘಾಲಯ, ಅರುಣಾಚಲ, ಹಿಮಾಚಲಪ್ರದೇಶ, ಸಿಕ್ಕಿಂ, ಮಿಜೋರಾಂ, ತ್ರಿಪುರ, ಅಸ್ಸಾಂ, ನಾಗಾಲ್ಯಾಂಡ್ ಕ್ರಮವಾಗಿ ಎರಡರಿಂದ 10ನೇ ಸ್ಥಾನಗಳಲ್ಲಿವೆ.

ವಿಹಾನ್ ಇಲ್ಲಿ ಕ್ರಿಕೆಟ್ ಚಾಂಪಿಯನ್

ನಟ ರಕ್ಷಿತ್ ಶೆಟ್ಟಿ ಅವರ 'ಸೆವೆನ್ ಆಡ್ಸ್' ತಂಡದಲ್ಲಿದ್ದ ಚಂದ್ರಜಿತ್ ಆ್ಯಕ್ಷನ್ ಕಟ್ ಹೇಳಲಿರುವ ಹೊಸ ಚಿತ್ರಕ್ಕೆ 'ಪಂಚತಂತ್ರ' ಖ್ಯಾತಿಯ ವಿಹಾನ್ ನಾಯಕರಾಗಿ ಆಯ್ಕೆಯಾಗಿದ್ದಾರೆ. ರೊಮ್ಯಾನ್ಸ್ ಡ್ರಾಮಾ ಕಥಾಹಂದರದ ಈ ಚಿತ್ರದ ಶೀರ್ಷಿಕೆ ಇನ್ನಷ್ಟೇ ಅನಾವರಣವಾಗಬೇಕಿದ್ದು, ಹೊಸ ಪ್ರಾಜೆಕ್ಟ್ ಬಗ್ಗೆ ವಿಹಾನ್ ಸಿನಿಮಾ ಪುರವಣಿ ಜೊತೆ ಮಾತಿಗಿಳಿದದ್ದು ಹೀಗೆ...

ಅಭಿಲಾಷ್ ಪಿ.ಎಸ್.

- **'ಪಂಚತಂತ್ರ' ಬಳಿಕ ತೆರೆಯಿಂದ ಕೊಂಚ ದೂರ ಉಳಿದಿದ್ದೇಕೆ?**

ನನಗೆ ಸಿನಿಮಾ ನಟನಾಗುವ ಯಾವುದೇ ಕನಸು ಇರಲಿಲ್ಲ. ನಾನು ಓದಿನಲ್ಲಿ ತೊಡಗಿಸಿಕೊಂಡಿದ್ದೆ. ನಿರ್ದೇಶಕ ಯೋಗರಾಜ್ ಭಟ್ ಅವರ ಮನೆ, ನಮ್ಮ ಮನೆಯ ಸಮೀಪವೇ ಇದೆ. ಅವರ ಮೂಲಕವೇ ಚಂದನವನದಲ್ಲಿ ನನ್ನ ಪಯಣ ಅನಿರೀಕ್ಷಿತವಾಗಿ ಆರಂಭವಾಯಿತು. ನಾನು ಯಾವುದೇ ನಟನೆಯ ತರಬೇತಿ ಪಡೆದಿಲ್ಲ. ನನಗೆ ಸಿನಿಮಾದ ಯಾವ ಹಿನ್ನೆಲೆಯೂ ಇಲ್ಲ. ಹೀಗಿರುವಾಗ ಯೋಗರಾಜ್ ಭಟ್ ಅವರಂತಹ ಮೇರು ನಿರ್ದೇಶಕರು ನನ್ನ ಬೆಂಬಲಕ್ಕೆ ನಿಂತಾಗ, ನಾನೂ ಇಲ್ಲಿ ತೊಡಗಿಸಿಕೊಂಡೆ. 'ಕಾಲ್ ಕೆ.ಜಿ ಪ್ರೀತಿ' ಸಿನಿಮಾ ಬಳಿಕ ಭಟ್ರೇ ನನಗೆ 'ಪಂಚತಂತ್ರ'ದಲ್ಲಿ ಆ್ಯಕ್ಷನ್ ಕಟ್ ಹೇಳಿದರು. ವರ್ಷಕ್ಕೆ ನಾಲ್ಕೈದು ಸಿನಿಮಾ ಒಪ್ಪಿಕೊಳ್ಳಲು ನನಗೆ ಸಾಧ್ಯವಿಲ್ಲ. ಆಯ್ಕೆಯಲ್ಲಿ ನಾನು ಬಹಳ ಸೂಕ್ಷ್ಮ. ಒಂದು ಚಿತ್ರ ಒಪ್ಪಿಕೊಂಡರೆ, ಆ ಸಿನಿಮಾದಲ್ಲಿ ನಾನು ಪೂರ್ಣವಾಗಿ ತೊಡಗಿಸಿಕೊಳ್ಳುತ್ತೇನೆ.

'ಪಂಚತಂತ್ರ' ಬಳಿಕ ಬಹಳ ಜಾಗರೂಕತೆಯಿಂದ ಹೊಸ ಸಿನಿಮಾ ಆಯ್ಕೆ ಮಾಡುತ್ತಿದ್ದೇನೆ. ನಾನು ಪೂರ್ಣವಾಗಿ ಸಿನಿಮಾವನ್ನೇ ಅವಲಂಬಿಸಿಲ್ಲ. ನಾನು ಒಬ್ಬ ಉದ್ಯಮಿ. ಉದ್ಯಮದ ಜೊತೆಗೆ ವರ್ಷಕ್ಕೊಂದು ಸಿನಿಮಾ ಮಾಡಬೇಕು ಎನ್ನುವ ಗುರಿ ಇದೆ. ಆದರೆ ಇದಕ್ಕೇ ಅಂಟಿಕೊಂಡಿಲ್ಲ. ನಮ್ಮದು ಮಧ್ಯಮ ವರ್ಗದ ಕುಟುಂಬ. ಜೀವನವನ್ನು ಪ್ರ್ಯಾಕ್ಟಿಕಲ್ ಆಗಿ ನೋಡುತ್ತೇನೆ. ಹೀಗಾಗಿ ಒಂದನ್ನೇ ನಂಬಿಕೊಂಡು ಜೀವಿಸುವುದಿಲ್ಲ.

- **'ಪರಂವಃ' ನಿಮ್ಮನ್ನು ನಾಯಕನನ್ನಾಗಿ ಆಯ್ಕೆ ಮಾಡಿದ ಕುರಿತು...**

'ಪಂಚತಂತ್ರ' ಬಳಿಕ, ಉತ್ತಮ ಕಥೆಯಿದ್ದರಷ್ಟೇ ಸಿನಿಮಾ ಆಯ್ಕೆ ಮಾಡಿಕೊಂಡು ನಟಿಸುವ ನಿರ್ಧಾರ ತೆಗೆದುಕೊಂಡಿದ್ದೆ. ಇಂತಹ ಸಂದರ್ಭದಲ್ಲಿ ಪರಂವಃ ಸ್ಟುಡಿಯೋಸ್‌ನಿಂದ ಈ ಆಫರ್ ಬಂತು. ಚಿತ್ರದ ಕಥೆ ನನ್ನನ್ನು ಕಾಡಿತು, ಇದೊಂದು ಡ್ರಾಮಾ/ಲವ್ ಸ್ಟೋರಿ. ಚಿತ್ರದಲ್ಲಿ ಕಾಲೇಜು ವಿದ್ಯಾರ್ಥಿ, ಕ್ರಿಕೆಟ್ ಆಟಗಾರ ಹಾಗೂ ಉದ್ಯಮಿ ಹೀಗೆ ಮೂರು ಶೇಡ್‌ಗಳಿವೆ. ನಾನು ಮಗನಾಗಿ ಇಲ್ಲಿ ಕಾಣಸಿಗುತ್ತೇನೆ. ಪ್ರೇಕ್ಷಕರು ನನ್ನಲ್ಲಿ ಮನೆಯ ಹುಡುಗನನ್ನು ಕಾಣಬಹುದು, ಒಬ್ಬ ಯಶಸ್ವಿ ಉದ್ಯಮಿಯನ್ನು ಕಾಣಬಹುದು. ಇಲ್ಲಿ ನಟನೆಗೆ ಹೆಚ್ಚಿನ ಪ್ರಾಶಸ್ತ್ಯವಿದೆ.

ಜೊತೆಯಲ್ಲಿ ಪರಂವಃ ಸ್ಟುಡಿಯೋಸ್‌ನಿಂದ ನಿರ್ಮಾಣವಾಗುತ್ತಿರುವ ಸಿನಿಮಾ ಆಗಿರುವ ಕಾರಣ ಜವಾಬ್ದಾರಿ ಹೆಚ್ಚಿದೆ. ಪರಂವಃ ಎನ್ನುವುದು ದೊಡ್ಡ ಬ್ರ್ಯಾಂಡ್. ಇದರಡಿ ಬಂದಂತಹ ಎಲ್ಲ ಸಿನಿಮಾಗಳೂ ದೇಶದಾದ್ಯಂತ ಜನರನ್ನು ಸೆಳೆದಿವೆ. ಇವರ ಬ್ಯಾನರ್‌ನಡಿ ಬಂದ ಸಿನಿಮಾಗಳ ಕಥೆ, ಸಂಗೀತ, ಆ ಸಿನಿಮ್ಯಾಟಿಕ್ ಅನುಭವವೇ ಒಂದು ಮಜಾ. ಜನರು ಬೇಗ ಈ ಸಿನಿಮಾಗಳಿಗೆ ಕನೆಕ್ಟ್ ಆಗುತ್ತಿದ್ದಾರೆ. ಜೀವನಕ್ಕೆ ತುಂಬಾ ಹತ್ತಿರವಾದ ಕಥೆಗಳು ಇಲ್ಲಿವೆ. ಇದೇ ತಂಡದ, ನಿರ್ದೇಶಕರಾದ ಚಂದ್ರಜಿತ್ ಬೆಳ್ಳಿಯಪ್ಪ ಅವರು ಕಥೆಯಲ್ಲಿ ತುಂಬಾ ಸ್ಟ್ರಾಂಗ್. ಸಂಭಾಷಣೆಯಲ್ಲಿ ಬಹಳ ಹಿಡಿತ ಸಾಧಿಸಿದ್ದಾರೆ. ಇವರ ಬರವಣಿಗೆಯಲ್ಲಿ ಮಣಿರತ್ನಂ ಅವರ ಶೈಲಿಯಿದೆ. ಇಂಥ ಕಥೆಗೆ ಪರಂವಃ ಖಂಡಿತವಾಗಿಯೂ ನ್ಯಾಯ ದೊರಕಿಸಿಕೊಡುತ್ತದೆ. ಹೀಗಾಗಿ, ಈ ಸಿನಿಮಾಗೆ ನನ್ನನ್ನು ನಾಯಕನನ್ನಾಗಿ ಆಯ್ಕೆ ಮಾಡಿರುವುದಕ್ಕೆ ಪರಂವಃಗೆ ಕೃತಜ್ಞತೆ.

- **ಹೊಸ ಚಿತ್ರಕ್ಕೆ ತಯಾರಿ ಹೇಗಿದೆ?**

'ಪಂಚತಂತ್ರ' ನನ್ನ ಸಿನಿ ಜೀವನಕ್ಕೆ ತಿರುವು ನೀಡಿದ ಸಿನಿಮಾ. ಇಲ್ಲಿ 19–20 ವಯಸ್ಸಿನ ಹುಡುಗನಾಗಿ ಕಾಣಿಸಿಕೊಳ್ಳಲು 12 ಕೆ.ಜಿ ತೂಕ ಇಳಿಸಿಕೊಂಡಿದ್ದೆ. ಹೊಸ ಚಿತ್ರಕ್ಕೂ ದೈಹಿಕವಾಗಿ ನಾನು ಬಹಳಷ್ಟು ಬದಲಾವಣೆಗೆ ಒಳಗಾಗಬೇಕು. ಇದಕ್ಕೂ ಬಹಳ ಸಮಯ ಹಿಡಿಯಲಿದೆ. ಸದ್ಯಕ್ಕೆ ಈಗ ದೈಹಿಕವಾಗಿ ಹೇಗೆ ಇದ್ದೇನೋ ಅದೇ ಶೇಡ್‌ನ ಚಿತ್ರೀಕರಣ ಮೊದಲು ನಡೆಯಲಿದೆ. ಮೂರು ಶೇಡ್‌ಗಳನ್ನು ನಿಭಾಯಿಸುವ ದೊಡ್ಡ ಸವಾಲು ನನ್ನ ಮುಂದಿದೆ. ಇದಕ್ಕೆ ಪೂರಕವಾಗಿ ಹೋಂವರ್ಕ್ ಮಾಡಬೇಕು. ಸದ್ಯ ನಾಯಕಿಯರು, ಕಲಾವಿದರೊಂದಿಗೆ ಹೊಂದಾಣಿಕೆ ಬರಲು ಪೂರ್ವತಯಾರಿ ಆರಂಭವಾಗಿದೆ. ರೊಮ್ಯಾನ್ಸ್ ಡ್ರಾಮಾ ಶೈಲಿಯ ಸಿನಿಮಾವಾದರೂ ಇಲ್ಲಿಯೂ ಸಾಹಸ ದೃಶ್ಯಗಳಿವೆ. ಸೆಪ್ಟೆಂಬರ್‌ನಿಂದ ಶೂಟಿಂಗ್ ಆರಂಭವಾಗುವ ನಿರೀಕ್ಷೆಯಿದೆ.

- **ಕ್ರಿಕೆಟ್ ಫೀಲ್ಡ್‌ಗೆ ಯಾವಾಗ ಇಳಿಯೋದು?**

ಕ್ರಿಕೆಟ್ ಚಾಂಪಿಯನ್ ಆಗಿ ಚಿತ್ರದಲ್ಲಿ ನನ್ನ ಪಾತ್ರವಿದೆ. ಹೀಗಾಗಿ ತರಬೇತಿ ಅಗತ್ಯ. ನಾನು ಹಾರ್ಡ್‌ಬಾಲ್ ಕ್ರಿಕೆಟ್ ಆಟಗಾರ. ಜಿಲ್ಲಾ ಮಟ್ಟದಲ್ಲಿ ಆಡಿ ರಾಜ್ಯ ಮಟ್ಟಕ್ಕೂ ಆಯ್ಕೆ ಆಗಿದ್ದೆ. ಆದರೆ ಕಾರಣಾಂತರಗಳಿಂದ ಇದನ್ನು ಮುಂದುವರಿಸಲು ಆಗಲಿಲ್ಲ. ಇದೀಗ, ಕ್ರಿಕೆಟ್ ಆಡಿ ಬಹಳ ವರ್ಷಗಳೇ ಕಳೆದಿವೆ. ಹೀಗಾಗಿ ತರಬೇತಿ ಅಗತ್ಯ. ಈ ನಡುವೆ 'ಜೆರ್ಸಿ' ಸಿನಿಮಾವನ್ನೂ ನೋಡಿದ್ದೇನೆ. ಅದೇ ರೀತಿ ಕ್ರಿಕೆಟ್ ತರಬೇತಿ ಪಡೆಯಬೇಕು.

- **ಒಪ್ಪಿಕೊಂಡಿರುವ ಪ್ರಾಜೆಕ್ಟ್ ಹಾಗೂ ಹೊಸ ಪ್ರಾಜೆಕ್ಟ್‌ಗಳ ಮಾಹಿತಿ...**

ಎಂ. ಸುಭಾಷ್‌ಚಂದ್ರ ನಿರ್ದೇಶನದ 'ಲೆಗಸಿ' ಸಂಪೂರ್ಣ ಆ್ಯಕ್ಷನ್ ಜಾನರ್‌ನ ಸಿನಿಮಾ. ಇದು ಎರಡು ಭಾಗಗಳಲ್ಲಿ ತೆರೆಕಾಣಲಿದೆ. ಚಿತ್ರದ ಮೊದಲ ಭಾಗದ ಚಿತ್ರೀಕರಣ ಅಂತಿಮ ಹಂತದಲ್ಲಿದೆ. 2023ರ ಆರಂಭದಲ್ಲಿ ಇದು ತೆರೆಕಾಣಲಿದೆ. ನಿರ್ದೇಶಕ ರವೀಂದ್ರನಾಥ್ ಅವರ 'ಪುಷ್ಪಕ ವಿಮಾನ' ಸಿನಿಮಾಗೂ ನಾನು ಕಾಲ್‌ಶೀಟ್ ನೀಡಿದ್ದೇನೆ. ಅದೂ ಮುಂದಿನ ವರ್ಷದಿಂದ ಚಿತ್ರೀಕರಣ ಆರಂಭವಾಗಲಿದೆ. ಇದೂ ಕೂಡಾ ಆ್ಯಕ್ಷನ್ ಜಾನರ್‌ನ ಸಿನಿಮಾ. ❖

ನನ್ನ ಸ್ಫೂರ್ತಿ ಮಣಿರತ್ನಂ

'ಟೆಕ್ಕಿ ಆಗಿದ್ದವರ ಕೈ ಲೇಖನಿ ಏಕೆ ಹಿಡಿಯಿತು' ಎನ್ನುವ ಪ್ರಶ್ನೆಗೆ ಉತ್ತರಿಸುವ ನಿರ್ದೇಶಕ ಚಂದ್ರಜಿತ್ ಬೆಳ್ಳಿಯಪ್ಪ, 'ಫಿಲ್ಮ್‌ಮೇಕರ್ ಆಗುವ ಕನಸೇನೂ ಹೊಸದಲ್ಲ. ಬರೆಯುವ ಹವ್ಯಾಸವಿದೆ. ಎಂಜಿನಿಯರಿಂಗ್ ಸೇರಿದ ಬಳಿಕ ಕಿರುಚಿತ್ರಗಳನ್ನು ಮಾಡತೊಡಗಿದೆ. ಇಂಗ್ಲಿಷ್‌ನಲ್ಲಿ ಬ್ಲಾಗ್ ಬರೆಯುವ ಗೀಳು ಇತ್ತು. ಈಗ ನಿರ್ದೇಶನಕ್ಕೆ ಆಯ್ದುಕೊಂಡಿರುವ ಕಥೆಯನ್ನು ಬ್ಲಾಗ್‌ನಲ್ಲಿ ಬರೆದಿದ್ದೆ. ಅದನ್ನು 2015ರಲ್ಲಿ ರಕ್ಷಿತ್ ಶೆಟ್ಟಿ ಅವರಿಗೂ ಕಳುಹಿಸಿದ್ದೆ. ನಂತರದಲ್ಲಿ ಟೆಕ್ಕಿ ಜೀವನ ಬಿಟ್ಟು ಸಿನಿಮಾ ಕ್ಷೇತ್ರಕ್ಕೆ ಕಾಲಿಟ್ಟೆ. 'ಅವನೇ ಶ್ರೀಮನ್ನಾರಾಯಣ' ಸಿನಿಮಾದಲ್ಲಿ ಕೆಲಸ ಮಾಡಿದ ಬಳಿಕ ನಿರ್ದೇಶಕನಾಗಬೇಕು ಎನ್ನುವ ದೃಢ ನಿರ್ಧಾರ ಮಾಡಿದೆ. ಬ್ಲಾಗ್‌ನಲ್ಲಿ ಬರೆದ ಕಥೆಗೇ ಸಿನಿಮಾಕಥೆಯ ಮರುಸ್ವರೂಪ ನೀಡಿದೆ. ಮಣಿರತ್ನಂ ಅವರ ಸಿನಿಮಾಗಳು ನನಗೆ ಬಹಳ ಇಷ್ಟ. ಇವರ ಪ್ರೇಮಕಥೆಗಳಿಗೆ ಸಾಟಿಯಿಲ್ಲ. ಚಿತ್ರದಲ್ಲಿ ಅಂಕಿತಾ ಅಮರ್ ಅವರು ಮೊದಲ ನಾಯಕಿ. ಮತ್ತೊಬ್ಬರು ಚಿತ್ರತಂಡ ಸೇರಿಕೊಳ್ಳಲಿದ್ದು, ಅದನ್ನು ಮುಂದಿನ ದಿನಗಳಲ್ಲಿ ಘೋಷಿಸುತ್ತೇವೆ' ಎಂದರು.

ಹನಿ ಹನಿ ಸಿನಿ ಕಹಾನಿ...

ಸಿನಿ ಶೆಟ್ಟಿ

ಬಾಲಚಂದ್ರ ಎಚ್.

ಫಳಫಳ ಹೊಳೆಯುತ್ತಿದ್ದ ಗುಲಾಬಿ ಬಣ್ಣದ ವಸ್ತ್ರ ತೊಟ್ಟು ಮಿಸ್ ಇಂಡಿಯಾ ಕಿರೀಟ ಮುಡಿಗೇರಿಸಿಕೊಂಡು ಉಡುಪಿಯ ರಸ್ತೆಯಲ್ಲಿ ಕರಾವಳಿ ಬೆಡಗಿ ಸಿನಿ ಶೆಟ್ಟಿ ಹೂ ನಗೆ ಚೆಲ್ಲುತ್ತಾ ಸಾಗಿದಾಗ ಅದೇನು ಸಂಭ್ರಮ. ಅಲಂಕೃತ ಸಾರೋಟಿನಲ್ಲಿ ಕುಳಿತು ಗಾಳಿಯಲ್ಲಿ ಕೈಬೀಸುತ್ತಾ ಸಾಗಿದ ಕುಡ್ಲದ ಸುಂದರಿಯ ನೋಟಕ್ಕೆ, ಸೌಂದರ್ಯಕ್ಕೆ ಎಲ್ಲರೂ ಮನಸೋತವರೇ.

ಫೆಮಿನಾ ಮಿಸ್ ಇಂಡಿಯಾ ಸ್ಪರ್ಧೆಯಲ್ಲಿ ವಿಜೇತರಾದ ಬಳಿಕ ಮೊದಲ ಬಾರಿಗೆ ತವರು ಜಿಲ್ಲೆ ಉಡುಪಿಗೆ ಬಂದ ಸಿನಿ ಶೆಟ್ಟಿಗೆ ಸಿಕ್ಕಿದ್ದು ಅದ್ದೂರಿ ಸ್ವಾಗತ. ಇಲ್ಲಿನ ಅಮ್ಮಣ್ಣಿ ರಾಮಣ್ಣ ಶೆಟ್ಟಿ ಹಾಲ್‌ನಲ್ಲಿ ಕರಾವಳಿಯ ಬಂಟರ ಯಾನೆ ನಾಡವರ ಮಾತೃ ಸಂಘ ಅವರನ್ನು ಸನ್ಮಾನಿಸಿ ಗೌರವಿಸಿತು.

ವೃತ್ತಿ ಜೀವನ ಹಾಗೂ ಭವಿಷ್ಯದ ಕನಸುಗಳನ್ನು ತೆರೆದಿಟ್ಟ ಸಿನಿ ಶೆಟ್ಟಿ ಕಂಗಳಲ್ಲಿ ಹೊಳಪು ಎದ್ದು ಕಾಣುತ್ತಿತ್ತು. ಮಾತೃಭಾಷೆ ತುಳುವಿನಲ್ಲಿ ಪಟಪಟನೆ ಮಾತನಾಡಿದ ಸಿನಿ, 'ಮಿಸ್ ಇಂಡಿಯಾ ಕನಸು ನನಸಾಗಿದೆ. ಮಿಸ್ ವರ್ಲ್ಡ್ ಕಿರೀಟ ಮುಡಿಯುವ ಮಹದಾಸೆ ಇದೆ' ಎಂದು ಕಣ್ಣರಳಿಸಿ ಆತ್ಮವಿಶ್ವಾಸದ ನಗೆ ಚೆಲ್ಲಿದರು.

'ದೈವ ದೇವರ ಹಾಗೂ ಜನರ ಆಶೀರ್ವಾದ ಇದ್ದರೆ ಖಂಡಿತ ವಿಶ್ವ ಸುಂದರಿ ಆಗುತ್ತೇನೆ. ಸಾಧನೆಯ ಹಾದಿ ಸುಲಭವಲ್ಲ ಎಂಬ ಅರಿವಿದೆ. ಸಾಧಿಸುವ ಛಲವೂ ನನ್ನೊಳಗಿದೆ. ಮಿಸ್ ವರ್ಲ್ಡ್ ಪ್ರಶಸ್ತಿ ಗೆಲ್ಲಲು ಬೇಕಾದ ಸಿದ್ಧತೆ ಮಾಡಿಕೊಳ್ಳುತ್ತಿರುವೆ' ಎಂದರು ಸಿನಿ.

'ಜೀವನ ಎಂಬುದು ನಿರಂತರ ಕಲಿಕೆ. ಪ್ರತಿಕ್ಷಣವೂ ಹೊಸತನ್ನು ಕಲಿಕೆಯಲು ಅವಕಾಶ ಹಾಗೂ ವೇದಿಕೆ ಸೃಷ್ಟಿಯಾಗುತ್ತದೆ. ಶಿಕ್ಷಣದ ಜ್ಞಾನ ಸಂಪಾದನೆಗೆ ವಾಣಿಜ್ಯ ವಿಷಯದಲ್ಲಿ ಪದವಿ ಮಾಡಿದೆ. ಡ್ಯಾನ್ಸ್ ಕಲಿಯುತ್ತಲೇ ಸೃಜನಶೀಲತೆ ಮೈಗೂಡಿಸಿಕೊಂಡೆ. ಮಾಡೆಲಿಂಗ್ ಕ್ಷೇತ್ರದಲ್ಲಿ ಜಗತ್ತಿನ ಮುಂದೆ ಸೌಂದರ್ಯ ಅನಾವರಣಗೊಳಿಸುವ ಕಲೆ ಸಿದ್ಧಿಸಿತು. ನೇರ ನಡೆ ನುಡಿ ವ್ಯಕ್ತಿತ್ವವನ್ನು ರೂಪಿಸಿತು. ವೆಬ್ ಸೀರಿಸ್‌ನಲ್ಲಿನ ಅಭಿನಯ ನನ್ನೊಳಗಿದ್ದ ನಟನೆಯ ಪ್ರತಿಭೆ ಅನಾವರಣಗೊಳಿಸಿತು. ಹೀಗೆ ಬದುಕಿನ ಪ್ರತಿಕ್ಷಣವನ್ನು ವಿದ್ಯಾರ್ಥಿಯಾಗಿ ಕಲಿಯುತ್ತಲೇ ಸಾಗಿದ್ದೇನೆ' ಎಂದರು ಕುಡ್ಲದ ಸುಂದರಿ.

'ಅಪ್ಪ ಅಮ್ಮ ಹೋಟೆಲ್ ಉದ್ಯಮದಲ್ಲಿರುವುದರಿಂದ ಅತಿಥಿ ಸತ್ಕಾರ ಬಳುವಳಿಯಾಗಿ ಬಂದಿದೆ. ಮನೆಗೆ ಬಂದವರ ಜತೆ ಪ್ರೀತಿಯಿಂದ ಮಾತನಾಡುವುದು, ಸತ್ಕರಿಸುವುದು, ಗೌರವ ನೀಡುವುದು ಹಾಗೂ ನಮ್ರತೆಯನ್ನು ಪೋಷಕರಿಂದ ಕಲಿತಿದ್ದೇನೆ. ಕರಾವಳಿಯ ದೈವ, ದೇವರ ಬಗ್ಗೆ ಅಪಾರವಾದ ನಂಬಿಕೆ ಇದೆ. ತುಳನಾಡಿನ ಸಂಸ್ಕೃತಿಯ ಬಗ್ಗೆ ಗೌರವ ಇದೆ. ಮಾತೃಭಾಷೆ ತುಳು ಬಗ್ಗೆ ಪ್ರೀತಿ ಇದೆ. ಮಿಸ್ ಇಂಡಿಯಾ ಕಿರೀಟ ಗೆಲ್ಲಲು ಈ ಎಲ್ಲ ಗುಣಗಳು ಪ್ರಮುಖ ಪಾತ್ರ ವಹಿಸಿವೆ' ಎಂದೂ ಸಿನಿ ಹೇಳಿದರು.

ಮಿಸ್ ವರ್ಲ್ಡ್ ಪ್ರಶಸ್ತಿ ಗೆಲ್ಲಲು ಮಾಡಿಕೊಂಡಿರುವ ತಯಾರಿ ಬಗ್ಗೆ ಮಾತನಾಡಿದ ಸಿನಿ 'ಏಕಾಂಗಿಯಾಗಿ ವಿಶ್ವ ಸುಂದರಿ ಪ್ರಶಸ್ತಿ ಗೆಲ್ಲಲು ಸಾಧ್ಯವಿಲ್ಲ. ಮಿಸ್ ಇಂಡಿಯಾ ತಂಡದ ಪ್ರತಿ ಸದಸ್ಯರ ಶ್ರಮವೂ ಅಗತ್ಯ. ಅಂತರರಾಷ್ಟ್ರೀಯ ವೇದಿಕೆಯಲ್ಲಿ ನಡೆ, ನುಡಿ ಹೇಗಿರಬೇಕು. ಸೌಂದರ್ಯ ಅಭಿವ್ಯಕ್ತಿ, ರ್‍ಯಾಂಪ್ ವಾಕ್, ಭಾರತದ ಶ್ರೇಷ್ಠತೆಯನ್ನು ಹೇಗೆ ಜಗತ್ತಿನ ಮುಂದಿಡಬೇಕು ಎಂಬುದನ್ನು ಕಲಿಯುತ್ತಿದ್ದೇನೆ. ಮುಂದೆ, ತುಳು ಸಿನಿಮಾದಲ್ಲಿ ಅವಕಾಶ ಸಿಕ್ಕರೆ ಖಂಡಿತ ನಟಿಸುತ್ತೇನೆ' ಎಂದು ಅವರು ಮಾತಿಗೆ ಬ್ರೇಕ್ ಹಾಕಿದರು. ❖

ಸ್ಯಾಂಡಲ್‌ವುಡ್‌ನಲ್ಲಿ ರೇಚಲ್ ಡೇವಿಡ್ ಬ್ಯುಸಿ!

ಮಲಯಾಳಂ ಸಿನಿಮಾ ಮೂಲಕ ಬೆಳ್ಳಿತೆರೆಗೆ ಹೆಜ್ಜೆಇಟ್ಟು, 'ಲವ್ ಮಾಕ್ಟೇಲ್–2'ರಲ್ಲಿ 'ಸಿಹಿ'ಯಾಗಿ ಅಭಿನಯಿಸಿದ್ದ ರೇಚಲ್ ಡೇವಿಡ್ ಸದ್ಯ ಚಂದನವನದಲ್ಲಿ ಸಾಲು ಸಾಲು ಸಿನಿಮಾಗಳಿಗೆ ಕಾಲ್‌ಶೀಟ್ ನೀಡುತ್ತಿದ್ದಾರೆ. ಇತ್ತೀಚೆಗಷ್ಟೇ ಪ್ರಮೋದ್–ಪೃಥ್ವಿ ಅಂಬಾರ್ ನಟನೆಯ 'ಭುವನಂ ಗಗನಂ' ಸಿನಿಮಾ ಸೆಟ್‌ಗೆ ಪ್ರವೇಶಿಸಿದ್ದ ರೇಚಲ್, ಇದೀಗ ಮತ್ತೊಂದು ಸಿನಿಮಾಗೆ ಗ್ರೀನ್ ಸಿಗ್ನಲ್ ಕೊಟ್ಟಿದ್ದಾರೆ.

ದೀಪಕ್ ಮಧುವನಹಳ್ಳಿ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಹೊಸ ಸಿನಿಮಾದಲ್ಲಿ ರೇಚಲ್ ನಾಯಕಿ. ಈ ಚಿತ್ರಕ್ಕೆ 'ರಾಮಾ ರಾಮಾ ರೇ' ಸಿನಿಮಾ ಖ್ಯಾತಿಯ ನಿರ್ದೇಶಕ ಸತ್ಯ ಪ್ರಕಾಶ್ ಅವರು ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ಮಾಣದ ಜವಾಬ್ದಾರಿ ಹೊತ್ತಿದ್ದಾರೆ. ಈ ಚಿತ್ರದ ಮೂಲಕ ಯುವನಟರೊಬ್ಬರು ನಾಯಕನಾಗಿ ಬೆಳ್ಳಿತೆರೆಗೆ ಹೆಜ್ಜೆ ಇಡಲಿದ್ದಾರೆ. 2018ರಲ್ಲಿ ತೆರೆಕಂಡ ಅನಂತನಾಗ್ ಅಭಿನಯದ 'ವೀಕೆಂಡ್' ಸಿನಿಮಾದಲ್ಲಿ ನಟಿಸಿದ್ದ ಮಿಲಿಂದ್ ಈ ಚಿತ್ರದ ನಾಯಕ. ನೂತನ ಚಿತ್ರದ ಶೀರ್ಷಿಕೆ ಶೀಘ್ರದಲ್ಲೇ ಅನಾವರಣಗೊಳ್ಳಲಿದೆ ಎಂದಿದೆ ಚಿತ್ರತಂಡ.

'ಭಾಗ್ಯರಾಜ್', 'ರಾಜು ಜೇಮ್ಸ್ ಬಾಂಡ್', 'ಕಳ್ಬೆಟ್ಟದ ದರೋಡೆಕೋರರು' ಸಿನಿಮಾ ನಿರ್ದೇಶಿಸಿರುವ ದೀಪಕ್ ಮಧುವನಹಳ್ಳಿ ಅವರ ನಾಲ್ಕನೇ ಸಿನಿಮಾ ಇದು. ರೋಮ್ಯಾಂಟಿಕ್ ಕಾಮಿಡಿ ಕಥಾಹಂದರ ಹೊಂದಿರುವ ಈ ಚಿತ್ರಕ್ಕೆ ಅನೂಪ್ ಸೀಳಿನ್ ಸಂಗೀತ, ಲವಿತ್ ಛಾಯಾಗ್ರಹಣ ಹಾಗೂ ಅಜಯ್ ಸಂಕಲನವಿದೆ. ❖



'Love ಲಿ'ಗೆ ಸ್ಟೆಫಿ ಜೋಡಿ

ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ತಮ್ಮ ಕಂಚಿನ ಕಂಠ, ನಟನೆಯಿಂದ ಪಾತ್ರಗಳಿಗೆ ಜೀವತುಂಬುತ್ತಿರುವ ನಟ ವಸಿಷ್ಠ ಸಿಂಹ ಅವರ ಹೊಸ ಸಿನಿಮಾ 'Love ಲಿ' ತಿಂಗಳ ಹಿಂದಷ್ಟೇ ಸೆಟ್ಟೇರಿತ್ತು. ರೌಡಿಸಂ ಕಥಾಹಂದರದ ಈ ಚಿತ್ರದಲ್ಲಿ, 'ಚಿಟ್ಟೆ' ಖ್ಯಾತಿಯ ವಸಿಷ್ಠ ಅವರಿಗೆ ಜೋಡಿ ಯಾರು ಎನ್ನುವ ಪ್ರಶ್ನೆ ಸಹಜವಾಗಿಯೇ ಮೂಡಿತ್ತು. ಅದಕ್ಕೆ ಇದೀಗ ಚಿತ್ರತಂಡ ಉತ್ತರಿಸಿದೆ.

ಸ್ಟೆಫಿ ಪಟೇಲ್

ಚಿತ್ರಕ್ಕೆ ನಾಯಕಿಯಾಗಿ ಜಾರ್ಖಂಡ್ ಮೂಲದ ಸ್ಟೆಫಿ ಪಟೇಲ್ ಆಯ್ಕೆಯಾಗಿದ್ದಾರೆ. ಹಿಂದಿ, ತಮಿಳು ಭಾಷೆಗಳ ಸಿನಿಮಾ ಮತ್ತು ವೆಬ್ ಸರಣಿಗಳಲ್ಲಿ ನಟಿಸಿರುವ ಸ್ಟೆಫಿ ಅವರಿಗೆ ಇದು ಮೊದಲ ಕನ್ನಡ ಸಿನಿಮಾ. ಈಗಾಗಲೇ ಸ್ಟೆಫಿ ಪಟೇಲ್ 'Love ಲಿ' ಚಿತ್ರತಂಡ ಸೇರಿಕೊಂಡಿದ್ದು ಜುಲೈ 19ರಿಂದ ಚಿತ್ರದ ಎರಡನೇ ಹಂತದ ಚಿತ್ರೀಕರಣ ಆರಂಭವಾಗಲಿದೆ. ವಸಿಷ್ಠ ಸಿಂಹ ಹಾಗೂ ಸ್ಟೆಫಿ ಕಾಂಬಿನೇಶನ್ ಒಳಗೊಂಡ ವಿಶೇಷ ಪೋಸ್ಟರ್ ಒಂದನ್ನು ಜುಲೈ 21ರಂದು ಚಿತ್ರತಂಡ ಬಿಡುಗಡೆ ಮಾಡಲಿದೆ.

'Love...ಲಿ' ಪ್ರೇಮಕಥೆಯಾಗಿದ್ದು, ಜೊತೆಗೆ ರೌಡಿಸಂನ ವಿಭಿನ್ನ ಕಥಾಹಂದರವನ್ನು ಸಿನಿಮಾ ಒಳಗೊಂಡಿದೆ. 'ಮಫ್ತಿ' ನಿರ್ದೇಶಕ ನರ್ತನ್ ಜೊತೆ ಕೆಲಸ ಮಾಡಿ ಅನುಭವವಿರುವ ಚೇತನ್ ಕೇಶವ್ ಈ ಸಿನಿಮಾಗೆ ನಿರ್ದೇಶನ ಮಾಡುತ್ತಿದ್ದಾರೆ. ಚಿತ್ರವನ್ನು ಎಂ.ಆರ್. ರವೀಂದ್ರ ಕುಮಾರ್ ನಿರ್ಮಿಸುತ್ತಿದ್ದು, ಹರೀಶ್ ಕೊಮ್ಮೆ ಸಂಕಲನ, ಅಶ್ವಿನ್ ಕೆನಡಿ ಛಾಯಾಗ್ರಹಣ ಹಾಗೂ ಅನೂಪ್ ಸೀಳಿನ್ ಸಂಗೀತ ನಿರ್ದೇಶನ ಚಿತ್ರಕ್ಕಿದೆ. ❖

ಇಶಾನ್

ಇಶಾನ್‌ಗೆ ಚೇತನ್ ಆ್ಯಕ್ಷನ್ ಕಟ್

'ಜೇಮ್ಸ್' ಚಿತ್ರದ ಬಳಿಕ ನಿರ್ದೇಶಕ ಚೇತನ್ ಕುಮಾರ್ ಅವರ ಹೊಸ ಚಿತ್ರಕ್ಕೆ ಯಾರು ಹೀರೊ ಎನ್ನುವ ಕುತೂಹಲಕ್ಕೆ ತೆರೆಬಿದ್ದಿದೆ.

ಇನ್ನಷ್ಟೇ ಬಿಡುಗಡೆಯಾಗಬೇಕಿರುವ ಪವನ್ ಒಡೆಯರ್ ನಿರ್ದೇಶನದ 'ರೇಮೊ' ಚಿತ್ರದ ನಾಯಕ ಇಶಾನ್, ಚೇತನ್ ಅವರ ಮುಂದಿನ ಚಿತ್ರಕ್ಕೆ ಆಯ್ಕೆಯಾಗಿದ್ದಾರೆ. ಈಗಾಗಲೇ ತಮ್ಮ ಸ್ಟೈಲ್ ಮೂಲಕವೇ ಚಂದನವನದಲ್ಲಿ ಹೆಸರು ಮಾಡಿರುವ ಇಶಾನ್, 'ರೇಮೊ' ಬಿಡುಗಡೆಗೆ ಕಾಯುತ್ತಿದ್ದಾರೆ.

ನಟ ದಿವಂಗತ ಪುನೀತ್ ರಾಜ್‌ಕುಮಾರ್ ಅವರು ನಾಯಕನಾಗಿ ನಟಿಸಿದ್ದ ಕೊನೆಯ ಕಮರ್ಷಿಯಲ್ ಸಿನಿಮಾ 'ಜೇಮ್ಸ್' ಬಾಕ್ಸ್ ಆಫೀಸ್‌ನಲ್ಲಿ ದೊಡ್ಡ ಸದ್ದು ಮಾಡಿತ್ತು. 'ಜೇಮ್ಸ್' ಬಿಡುಗಡೆಯನ್ನು ಹಬ್ಬದಂತೆ ಅಭಿಮಾನಿಗಳು ಆಚರಿಸಿದ್ದರು. ಚಿತ್ರವು ಚೇತನ್ ಅವರ ನಿರ್ದೇಶನದ ಪಯಣಕ್ಕೂ ದೊಡ್ಡ ತಿರುವು ನೀಡಿತ್ತು. 'ರೇಮೊ' ಚಿತ್ರದ ಬಿಡುಗಡೆ ನಂತರ ಹೊಸ ಚಿತ್ರದ ಚಿತ್ರೀಕರಣ ಆರಂಭವಾಗಲಿದೆ. ಚಿತ್ರದ ಶೀರ್ಷಿಕೆ ಹಾಗೂ ಹೆಚ್ಚಿನ ಮಾಹಿತಿಯನ್ನು ಮುಂದಿನ ದಿನಗಳಲ್ಲಿ ನೀಡುತ್ತೇವೆ ಎನ್ನುತ್ತಾರೆ ಚೇತನ್ ಕುಮಾರ್. ❖

ದ್ರೌಪದಿ ಮುರ್ಮು ರಾಷ್ಟ್ರಪತಿ

ಒಂದನೇ ಪುಟದಿಂದ

ಬುಡಕಟ್ಟು ಸಮುದಾಯಕ್ಕೆ ಸೇರಿದ ದ್ರೌಪದಿ ಮುರ್ಮು ಪರವಾಗಿ ಅರುಣಾಚಲ ಪ್ರದೇಶದ ನಾಲ್ವರನ್ನು ಹೊರತುಪಡಿಸಿ ಉಳಿದೆಲ್ಲ ಶಾಸಕರು ಮತ ಹಾಕಿದ್ದಾರೆ.

ಮೂಲಗಳ ಪ್ರಕಾರ, 17 ಸಂಸದರು ಅಡ್ಡ ಮತದಾನ ಮಾಡಿದ್ದು, ಮುರ್ಮು ಪರವಾಗಿ ಮತ ಚಲಾಯಿಸಿದ್ದಾರೆ.

ಸೋಲೊಪ್ಪಿಕೊಂಡಿರುವ ಯಶವಂತ್ ಸಿನ್ಹಾ ಅವರು, ಮುರ್ಮು ಅವರಿಗೆ ಶುಭಾಶಯ ಕೋರಿದ್ದಾರೆ.

‘ನಿಷ್ಪಕ್ಷಪಾತವಾಗಿ ಹಾಗೂ ನಿರ್ಭೀತಿಯಿಂದ ಸಂವಿಧಾನದ ರಕ್ಷಕಿಯಾಗಿ ನೂತನ ರಾಷ್ಟ್ರಪತಿ ಕೆಲಸ ಮಾಡಬೇಕು ಎಂಬುದು ಎಲ್ಲ ಭಾರತೀಯರ ನಿರೀಕ್ಷೆಯಾಗಿದೆ’ ಎಂದು ಅವರು ಹೇಳಿದ್ದಾರೆ. ತಮ್ಮನ್ನು ಒಮ್ಮತದ ಅಭ್ಯರ್ಥಿಯಾಗಿ ಆಯ್ಕೆ ಮಾಡಿದ ವಿರೋಧ ಪಕ್ಷಗಳಿಗೆ ಸಿನ್ಹಾ ಅವರು ಧನ್ಯವಾದ ಹೇಳಿದ್ದಾರೆ.

ಮುರ್ಮು ಅವರ ನಿವಾಸಕ್ಕೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಭೇಟಿ ನೀಡಿ ಶುಭ ಕೋರಿದ್ದಾರೆ. ಭಾರಿ ಸಂಖ್ಯೆಯ ಮತಗಳನ್ನು ಪಡೆದ ಮುರ್ಮು ಅವರನ್ನು ಅಭಿನಂದಿಸಿರುವ ಕೇಂದ್ರ ಸಚಿವ ರಾಜನಾಥ ಸಿಂಗ್, ಈ ಗೆಲುವು ಭಾರತದ ಪ್ರಜಾಪ್ರಭುತ್ವದ ಸಾಮರ್ಥ್ಯವನ್ನು ಬಿಂಬಿಸುತ್ತದೆ ಎಂದು ಹೇಳಿದ್ದಾರೆ.

ಒಡಿಶಾದಲ್ಲಿ ಪುರಸಭೆ ಸದಸ್ಯೆಯಾಗಿ ರಾಜಕೀಯ ಜೀವನ ಆರಂಭಿಸಿದ ಮುರ್ಮು ಅವರು ರಾಷ್ಟ್ರದ ಅತ್ಯುನ್ನತ ಹುದ್ದೆಗೇರಲಿದ್ದಾರೆ. ಜಾರ್ಖಂಡ್‌ನ ರಾಜ್ಯಪಾಲರಾಗಿ ಅವರು ಕೆಲಸ ಮಾಡಿದ್ದಾರೆ.

ಈ ಹುದ್ದೆಗೆ ಏರಲಿರುವ ಬುಡಕಟ್ಟು ಸಮುದಾಯದ ಮೊದಲ ಮಹಿಳೆಯಾಗಲಿದ್ದಾರೆ.

> **ಭಾರತ ಇತಿಹಾಸ ಬರೆದಿದೆ. ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಿಸುವ ಸಮಯದಲ್ಲಿ ಬುಡಕಟ್ಟು ಸಮುದಾಯದ ಮಗಳು ರಾಷ್ಟ್ರದ ಅತ್ಯುನ್ನತ ಹುದ್ದೆಗೆ ಆಯ್ಕೆಯಾಗಿದ್ದಾರೆ**
> **ನರೇಂದ್ರ ಮೋದಿ,** ಪ್ರಧಾನಿ

> **ಫಲಾಪೇಕ್ಷೆ ಇಲ್ಲದೆ ಕೆಲಸ ಮಾಡು ಎಂದು ಉಪದೇಶಿಸಿದ ಶ್ರೀಕೃಷ್ಣನ ಕರ್ಮಯೋಗವನ್ನು ನಾನು ಅನುಸರಿಸಿದ್ದೇನೆ. ನನ್ನ ಪರ ಮತ ಚಲಾಯಿಸಿದ, ಬೆಂಬಲಿಸಿದ ಎಲ್ಲರಿಗೂ ಧನ್ಯವಾದ**
> **ಯಶವಂತ್ ಸಿನ್ಹಾ,** ಪ್ರತಿಪಕ್ಷಗಳ ಅಭ್ಯರ್ಥಿ

ವಿಜಯೋತ್ಸವ

ರಾಷ್ಟ್ರಪತಿ ಚುನಾವಣೆಯಲ್ಲಿ ದ್ರೌಪದಿ ಮುರ್ಮು ಅವರು ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಗುರುವಾರ ಹೈದರಾಬಾದ್‌ನಲ್ಲಿ ಬಿಜೆಪಿ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು. ಪಿಟಿಐ ಚಿತ್ರ

ಸುದ್ದಿ 2 ನಿಮಿಷ

ಅತಿ ಹಿರಿಯ ಗಂಡು ಪಾಂಡಾ ಸಾವು

ಹಾಂಗ್‌ಕಾಂಗ್ (ಎ.ಪಿ): ಬಂಧನದಲ್ಲಿ ಇರುವ ಜಗತ್ತಿನ ಅತಿ ಹಿರಿಯ ಗಂಡು ಪಾಂಡಾ ಎಂದು ಗುರುತಿಸಲಾಗಿದ್ದ, ಪಾಂಡಾವು 35 ವಯಸ್ಸಿನಲ್ಲಿ ಇಲ್ಲಿನ ಮೃಗಾಲಯದಲ್ಲಿ ಗುರುವಾರ ಅನಾರೋಗ್ಯದಿಂದ ಮೃತಪಟ್ಟಿತು.

ಚೀನಾವು ಈ ಪಾಂಡಾ ಹಾಗೂ ಮತ್ತೊಂದು ಹೆಣ್ಣು ಪಾಂಡಾವನ್ನು 1999ರಲ್ಲಿ ಕೊಡುಗೆ ನೀಡಿತ್ತು. 38 ವರ್ಷದ ಹೆಣ್ಣು ಪಾಂಡಾವು 2016ರಲ್ಲಿಯೇ ಮೃತಪಟ್ಟಿದೆ. ಬಂಧನದಲ್ಲಿದ್ದ ಅತ್ಯಂತ ಹಿರಿಯ ಹೆಣ್ಣು ಪಾಂಡಾ ಎಂದು ಅದನ್ನು ಗುರುತಿಸಲಾಗಿತ್ತು.

‘ಗಂಡು ಪಾಂಡಾ 35 ವರ್ಷ ಜೀವಿಸಿದೆ. ಇದು, ಮನುಷ್ಯನ 105 ವರ್ಷದ ಜೀವಿತಾವಧಿಗೆ ಸಮನಾದುದು. ಇದರ ಜೊತೆಗೆ ಸಿಬ್ಬಂದಿ, ಸ್ಥಳೀಯರು ಅವಿನಾಭಾವ ಬಾಂಧವ್ಯ ಹೊಂದಿದ್ದರು’ ಎಂದು ಓಷಿಯನ್ ಪಾರ್ಕ್‌ನ ಅಧಿಕಾರಿಗಳು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಆಗಸ್ಟ್ ಅಂತ್ಯಕ್ಕೆ ಚಂದ್ರಕಕ್ಷೆಗೆ ರಾಕೆಟ್ ಉಡಾವಣೆ –ನಾಸಾ

ಕೇಪ್ ಕೆನಾವರಲ್ (ಎಪಿ): ಆಗಸ್ಟ್ ಅಂತ್ಯದಲ್ಲಿ ಚಂದ್ರನ ಕಕ್ಷೆಗೆ ಬೃಹತ್ ರಾಕೆಟ್ ಉಡಾವಣೆ ನಡೆಯಲಿದೆ ಎಂದು ನಾಸಾ ತಿಳಿಸಿದೆ. ಚಂದ್ರನ ಅಂಗಳದ ಕಾಲಿಟ್ಟಿದ್ದ ‘ಅಪೊಲೊ 11’ ಉಪಗ್ರಹ ಉಡಾವಣೆಯ 53ನೇ ವಾರ್ಷಿಕೋತ್ಸವ ದಿನದಂದು ಈ ಕ್ರಮಪ್ರಕಟಿಸಿದೆ.

ಆಗಸ್ಟ್ 29ಕ್ಕೆ ಮೊದಲೇ ಪ್ರಯೋಗಾರ್ಥ ಪರೀಕ್ಷೆ ನಡೆಯಲಿದೆ. ಉಪಗ್ರಹ ಉಡಾವಣೆಗೆ ಸೆಪ್ಟೆಂಬರ್ ತಿಂಗಳಿನ ಎರಡು ದಿನಾಂಗಗಳು ನಾಸಾದ ಚಿಂತನೆಯಲ್ಲಿವೆ. ಪರೀಕ್ಷಾರ್ಥ ಉಡಾವಣೆಗಾಗಿ ಎರಡು ವಾರ ಕಾಯಬೇಕಾಗುತ್ತದೆ ಎಂದು ಹೇಳಿದೆ.

ನಾಸಾದ ಜಿಮ್ ಫ್ರೀ ಅವರು, ‘ಚಂದ್ರಗ್ರಹಕ್ಕೆ ಮರಳುವ ಈ ಯೋಜನೆಗೆ ‘ಆರ್ಟೆಮಿಸ್’ ಎಂದು ಹೆಸರಿಸಲಾಗಿದೆ. ಗ್ರೀಕ್ ನಂಬಿಕೆಯ ಅನುಸಾರ, ಅರ್ಟೆಮಿಸ್ ಎಂಬುದು ಅಪೊಲೊವಿನ ಸೋದರಿಯ ಹೆಸರು ಎಂದು ತಿಳಿಸಿದ್ದಾರೆ.

ಉಪರಾಷ್ಟ್ರಪತಿ ಚುನಾವಣೆಯಲ್ಲಿ ಭಾಗಿಯಾಗುವುದಿಲ್ಲ: ಟಿಎಂಸಿ

ಪ್ರತಿಪಕ್ಷಗಳ ಅಭ್ಯರ್ಥಿಯಾಗಿ ಮಾರ್ಗರೇಟ್ ಆಳ್ವ ಅವರನ್ನು ಆಯ್ಕೆ ಮಾಡುವ ವೇಳೆ ತಮ್ಮ ಪಕ್ಷದ ಜೊತೆ ಸಮಾಲೋಚನೆ ನಡೆಸಿಲ್ಲ ಎಂದು ಆರೋಪಿಸಿರುವ ತೃಣಮೂಲ ಕಾಂಗ್ರೆಸ್ (ಟಿಎಂಸಿ), ಉಪರಾಷ್ಟ್ರಪತಿ ಚುನಾವಣೆಯಲ್ಲಿ ಭಾಗಿಯಾಗದಿರಲು ನಿರ್ಧರಿಸಿದೆ.

ಜುಲೈ 17ರಂದು ಸಭೆ ನಡೆಸಿದ್ದ ಪ್ರತಿಪಕ್ಷಗಳ ನಾಯಕರು ಆಳ್ವ ಅವರನ್ನು ಒಮ್ಮತದ ಅಭ್ಯರ್ಥಿ ಎಂದು ಪ್ರಕಟಿಸಿದ್ದರು. ಈ ಸಭೆಯಲ್ಲಿ ಟಿಎಂಸಿ ಭಾಗಿಯಾಗಿರಲಿಲ್ಲ.

ಎನ್‌ಡಿಎ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವ ಪಶ್ಚಿಮ ಬಂಗಾಳದ ರಾಜ್ಯಪಾಲ ಜಗದೀಪ್ ಧನಕರ್ ಅವರನ್ನು ಬೆಂಬಲಿಸುವ ಪ್ರಶ್ನೆಯೇ ಇಲ್ಲ ಎಂದು ಟಿಎಂಸಿ ಮುಖಂಡ ಅಭಿಷೇಕ್ ಬ್ಯಾನರ್ಜಿ ಸ್ಪಷ್ಟಪಡಿಸಿದ್ದಾರೆ.

ಶ್ರೀಲಂಕಾದ ನೂತನ ಅಧ್ಯಕ್ಷರಾಗಿ ರಾನಿಲ್ ವಿಕ್ರಮಸಿಂಘೆ ಗುರುವಾರ ಅಧಿಕಾರ ಸ್ವೀಕರಿಸಿದರು –ಎಎಫ್‌ಪಿ ಚಿತ್ರ

ಮಹಾರಾಷ್ಟ್ರ ಸರ್ಕಾರಕ್ಕೆ ಬಾಂಬೆ ಹೈಕೋರ್ಟ್ ಸೂಚನೆ

ಅಂಬೇಡ್ಕರ್, ಸಮಾಜ ಸುಧಾರಕರ ಬರಹಗಳ ಜಾಗೃತಿ ಮೂಡಿಸಿ

ಮುಂಬೈ (ಪಿಟಿಐ): ಮಹಾರಾಷ್ಟ್ರ ಸರ್ಕಾರ ತನ್ನ ಮನಸ್ಥಿತಿಯನ್ನು ಕಾಲಕ್ಕೆ ತಕ್ಕಂತೆ ಬದಲಾಯಿಸಿಕೊಂಡು ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ಇತರೆ ಸಮಾಜ ಸುಧಾರಕರ ಬರಹಗಳ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲು ಪ್ರಯತ್ನಿಸಬೇಕು ಎಂದು ಬಾಂಬೆ ಹೈಕೋರ್ಟ್ ಗುರುವಾರ ಹೇಳಿದೆ.

ನ್ಯಾಯಮೂರ್ತಿಗಳಾದ ಪ್ರಸನ್ನ ವರಾಳೆ ಮತ್ತು ಕಿಶೋರ್ ಸಂತ ಅವರ ವಿಭಾಗೀಯ ಪೀಠ, ಮಹಾರಾಷ್ಟ್ರ ಸರ್ಕಾರ ಹಲವಾರು ಸಮಾಜ ಸುಧಾರಕರ ಕೈಬರಹದ ಸಾಹಿತ್ಯದ ಅದ್ಭುತ ಸಂಪುಟಗಳನ್ನು ಪ್ರಕಟಿಸಿದೆ. ಆದರೆ, ದುರದೃಷ್ಟವಶಾತ್ ಅನೇಕರಿಗೆ ತಿಳಿದಿಲ್ಲ. ಈ ಬಗ್ಗೆ ಜಾಗೃತಿ ಮೂಡಿಸಬೇಕು ಎಂದು ಹೇಳಿದೆ.

ಅಂಬೇಡ್ಕರ್ ಸಾಹಿತ್ಯ ಪ್ರಕಟಿಸುವ ಯೋಜನೆಯನ್ನು ಮಹಾರಾಷ್ಟ್ರ ಸರ್ಕಾರ ಸ್ಥಗಿತಗೊಳಿಸಿದೆ ಎಂದು ಮಾಧ್ಯಮಗಳು ವರದಿ ಮಾಡಿದ ನಂತರ ಕಳೆದ ಡಿಸೆಂಬರ್‌ನಲ್ಲಿ ಸ್ವಯಂ ಪ್ರೇರಿತವಾಗಿ ತೆಗೆದುಕೊಂಡ ಅರ್ಜಿಯನ್ನು ಪೀಠವು ವಿಚಾರಣೆ ನಡೆಸುತ್ತಿದೆ.

‘ಹಲವು ಸಮಾಜ ಸುಧಾರಕರ ಸಂಪುಟಗಳನ್ನು (ಬರಹಗಳ) ಸರ್ಕಾರ ಪ್ರಕಟಿಸಿದೆ. ಆದರೆ, ಎಷ್ಟು ಜನರಿಗೆ ಇದರ ಬಗ್ಗೆ ತಿಳಿದಿದೆ? ಈ ಸಂಪುಟಗಳು ದಶಕಗಳ ಹಿಂದೆ ಪ್ರಕಟವಾದವು ಮತ್ತು ಅವುಗಳಲ್ಲಿ ಕೆಲವು ಅದ್ಭುತವಾದವು. ಓದುಗರನ್ನು ಪುಸ್ತಕ ಮಳಿಗೆಗೆ ಕರೆತರಬೇಕು’ ಎಂದು ನ್ಯಾಯಾಲಯ ಹೇಳಿದೆ.

‘ಮೊದಲು ಜನರು ಪುಸ್ತಕದ ಅಂಗಡಿಗಳಿಗೆ ಹೋಗುತ್ತಿದ್ದರು. ಆದರೆ, ಈಗ ಅವುಗಳು ಮನೆ ಬಾಗಿಲಲ್ಲಿ ಲಭ್ಯವಿದೆ. ಪ್ರಕಾಶಕರು ಜನರನ್ನು ಅಂಗಡಿಗಳಿಗೆ ಕರೆ ತರಬೇಕು. ಅನೇಕ ಜನರಿಗೆ ಸರ್ಕಾರಿ ಪುಸ್ತಕ ಮಳಿಗೆಗಳು ಎಲ್ಲಿವೆ ಎಂಬುದೇ ತಿಳಿದಿಲ್ಲ’ ಎಂದು ನ್ಯಾಯಮೂರ್ತಿ ವರಾಳೆ ಹೇಳಿದರು.

ಜ್ಞಾನವಾಪಿ ಮಸೀದಿ ಅರ್ಜಿ: ಅಕ್ಟೋಬರ್‌ನಲ್ಲಿ ‘ಸುಪ್ರೀಂ’ ವಿಚಾರಣೆ

ನವದೆಹಲಿ (ಪಿಟಿಐ): ಜ್ಞಾನವಾಪಿ ಮಸೀದಿ ಸ್ಥಳ ಸಮೀಕ್ಷೆಗೆ ಕೋರ್ಟ್ ಕಮಿಷನರ್ ನೇಮಕ ಮಾಡಿದ ವಾರಾಣಸಿ ಜಿಲ್ಲಾ ನ್ಯಾಯಾಧೀಶರ ಆದೇಶವನ್ನು ಎತ್ತಿ ಹಿಡಿದ ಅಲಹಾಬಾದ್ ಹೈಕೋರ್ಟ್ ತೀರ್ಪು ಪ್ರಶ್ನಿಸಿ ಜ್ಞಾನವಾಪಿ ಮಸೀದಿ ಸಮಿತಿ ಸಲ್ಲಿಸಿರುವ ಅರ್ಜಿಯನ್ನು ಅಕ್ಟೋಬರ್ ಮೊದಲ ವಾರ ಕೈಗೆತ್ತಿಕೊಳ್ಳುವುದಾಗಿ ಸುಪ್ರೀಂಕೋರ್ಟ್ ಗುರುವಾರ ಹೇಳಿದೆ.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್, ಸೂರ್ಯಕಾಂತ್ ಮತ್ತು ಪಿ.ಎಸ್.ನರಸಿಂಹ ಅವರಿದ್ದ ಪೀಠವು, ಹಿಂದೂ ಭಕ್ತರು ಸಲ್ಲಿಸಿರುವ ಸಿವಿಲ್ ಮೊಕದ್ದಮೆಯನ್ನು ಪ್ರಶ್ನಿಸಿ ಜ್ಞಾನವಾಪಿ ಮಸೀದಿ ಸಮಿತಿಯು ಅರ್ಜಿಯಲ್ಲಿ ಎತ್ತಿರುವ ಆಕ್ಷೇಪಣೆಗೆ ಸಂಬಂಧಿಸಿ ವಾರಾಣಸಿಯ ಜಿಲ್ಲಾ ನ್ಯಾಯಾಧೀಶರು ಕೈಗೊಳ್ಳುವ ತೀರ್ಮಾನ ಎದುರು ನೋಡಲಾಗುತ್ತಿದೆ ಎಂದು ಹೇಳಿದೆ.

ತ್ರಿಸದಸ್ಯ ಪೀಠವು, ಜಿಲ್ಲಾ ನ್ಯಾಯಾಧೀಶರ ಮುಂದೆ ಈ ಅರ್ಜಿಯ ವಿಚಾರಣೆ ಇನ್ನೂ ನಡೆಯುತ್ತಿದ್ದು, ಇದು ಪೂರ್ಣವಾಗುವವರೆಗೆ, ತೀರ್ಪು ಹೊರಬೀಳುವವರೆಗೂ ಜ್ಞಾನವಾಪಿ ಮಸೀದಿ ಸಮಿತಿಯ ಮನವಿಯನ್ನು ಬಾಕಿ ಇರಿಸುವುದು ಸೂಕ್ತ ಎಂದು ಅಭಿಪ್ರಾಯಪಟ್ಟಿತು.

ಮೇ 20ರಂದು ಸುಪ್ರೀಂ ಕೋರ್ಟ್, ಜ್ಞಾನವಾಪಿ ಮಸೀದಿ ಬಗ್ಗೆ ಹಿಂದೂ ಭಕ್ತರು ಸಲ್ಲಿಸಿದ್ದ ಸಿವಿಲ್ ಮೊಕದ್ದಮೆಯನ್ನು ವಾರಾಣಸಿಯ ಸಿವಿಲ್ ನ್ಯಾಯಾಲಯದಿಂದ (ಹಿರಿಯ ವಿಭಾಗ) ಜಿಲ್ಲಾ ನ್ಯಾಯಾಧೀಶರಿಗೆ ವರ್ಗಾಯಿಸಿತ್ತು. ‘ಇದೊಂದು ಸಂಕೀರ್ಣ ಮತ್ತು ಸೂಕ್ಷ್ಮ ವಿಚಾರ. ಈ ಪ್ರಕರಣವನ್ನು 25-30 ವರ್ಷಗಳ ಕಾಲ ನಿರ್ವಹಿಸಿರುವ ನ್ಯಾಯಾಂಗದ ಹಿರಿಯ ಅಧಿಕಾರಿಗಳೇ ನಿಭಾಯಿಸುವುದು ಉತ್ತಮ’ ಎಂದು ಸುಪ್ರೀಂಕೋರ್ಟ್ ಹೇಳಿದೆ.

ಭಾರತಕ್ಕೆ 150ನೇ ಸ್ಥಾನ: ಸಂಘಟನೆ ತೀರ್ಮಾನ ಒಪ್ಪದ ಕೇಂದ್ರ ಸರ್ಕಾರ

ನವದೆಹಲಿ (ಪಿಟಿಐ): ವಿಶ್ವ ಪತ್ರಿಕಾ ಸ್ವಾತಂತ್ರ್ಯ ಸೂಚ್ಯಂಕದಲ್ಲಿ 180 ರಾಷ್ಟ್ರಗಳ ಪೈಕಿ ಭಾರತಕ್ಕೆ 150ನೇ ಸ್ಥಾನ ನೀಡಿದ ‘ರಿಪೋರ್ಟರ್ಸ್ ವಿದೌಟ್ ಬಾರ್ಡರ್ಸ್’ ಸಂಘಟನೆ ರೂಪಿಸಿದ ತೀರ್ಮಾನಗಳನ್ನು ಒಪ್ಪುವುದಿಲ್ಲ ಎಂದು ಸರ್ಕಾರ ಗುರುವಾರ ಸಂಸತ್ತಿಗೆ ತಿಳಿಸಿದೆ.

ರಾಜ್ಯಸಭೆಯಲ್ಲಿ ಲಿಖಿತ ಉತ್ತರ ನೀಡಿರುವ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅನುರಾಗ್ ಠಾಕೂರ್, ‘ಪ್ರಜಾಪ್ರಭುತ್ವದ ಮೂಲಭೂತ ಅಂಶಗಳಿಗೆ ಕಡಿಮೆ ಅಥವಾ ಯಾವುದೇ ತೂಕವಿಲ್ಲ, ಪ್ರಶ್ನಾರ್ಹ ಮತ್ತು ಪಾರದರ್ಶಕವಲ್ಲದ ವಿಧಾನ ಅಳವಡಿಸಿಕೊಳ್ಳುವುದು’ ಸೇರಿದಂತೆ ವಿವಿಧ ಕಾರಣಗಳಿಗಾಗಿ ಸಂಸ್ಥೆ ರೂಪಿಸಿದ ತೀರ್ಮಾನ ಸರ್ಕಾರ ಒಪ್ಪುವುದಿಲ್ಲ ಎಂದು ತಿಳಿಸಿದ್ದಾರೆ.

ಸಂವಿಧಾನದ ಪರಿಚ್ಛೇದ 19ರ ಅಡಿ ಪ್ರತಿಪಾದಿಸಿರುವ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕು ಖಚಿತಪಡಿಸಿಕೊಳ್ಳಲು ಸರ್ಕಾರ ಬದ್ಧವಾಗಿದೆ ಎಂದು ಸಚಿವರು ಹೇಳಿದರು.

ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಮತ್ತು ಎಎಪಿ ಸದಸ್ಯ ಸಂಜಯ್ ಸಿಂಗ್ ಕೇಳಿದ ಪ್ರತ್ಯೇಕ ಪ್ರಶ್ನೆಗಳಿಗೆ ಠಾಕೂರ್ ಪ್ರತಿಕ್ರಿಯಿಸಿದರು.

ಪತ್ರಿಕಾ ಸ್ವಾತಂತ್ರ್ಯ ಕಾಪಾಡಲು ಮತ್ತು ಪತ್ರಿಕೆ, ಸುದ್ದಿ ಸಂಸ್ಥೆಗಳ ಗುಣಮಟ್ಟ ಸುಧಾರಿಸಲು 1978ರಲ್ಲಿ ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾ (ಪಿಸಿಐ) ಸ್ಥಾಪಿಸಲಾಗಿದೆ. ಪತ್ರಿಕಾ ಸ್ವಾತಂತ್ರ್ಯ ಮೊಟಕುಗೊಳಿಸುವುದಕ್ಕೆ ಸಂಬಂಧಿಸಿದಂತೆ ಸಲ್ಲಿಸಲಾದ ದೂರುಗಳನ್ನು ಪಿಸಿಐ ಪರಿಶೀಲಿಸುತ್ತದೆ ಎಂದು ಅವರು ಹೇಳಿದರು.

ಷೇರುಪೇಟೆ ವಹಿವಾಟು ▲284



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,520
ಇಂದಿನ ಅಂತ್ಯ	16,604
▲	84
ದಿನದ ಗರಿಷ್ಠ	16,626

ವಿನಿಮಯ ದರ

$ ಡಾಲರ್	79.85
£ ಪೌಂಡ್	95.39
€ ಯುರೊ	81.47
¥ ಯೆನ್ (100ಕ್ಕೆ)	58

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹445
12 ಮೊಟ್ಟೆಗೆ	₹67
ಮೈಸೂರು	
100 ಮೊಟ್ಟೆಗೆ	₹445

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1640 (1640)
ಸೋಯಾ (ರಿಫೈನ್ಡ್)	₹1225 (1250)
ಸೂರ್ಯಕಾಂತಿ (ರಿಫೈನ್ಡ್)	₹1580 (1600)
ಪಾಮೋಲಿನ್	₹1185 (1202)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹312-510
ದ್ವಿತಳಿ (ಬಿ.ವಿ)	₹300-733

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹170.50
ಆರ್‌ಎಸ್‌ಎಸ್-5	₹161.50
ಗುಡ್ ಲಾಟ್	₹155.50

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1000-1400
ಮಧ್ಯಮ	₹600-1000
ಸಣ್ಣ	₹200-600

ಆಟೊಮೊಬೈಲ್ ಉದ್ಯಮವನ್ನು ಕಾಡುತ್ತಿರುವ ಸೆಮಿಕಂಡಕ್ಟರ್ ಚಿಪ್ ಕೊರತೆ

ಗ್ರಾಹಕರಿಗೆ 6.5 ಲಕ್ಷ ಕಾರು ಹಸ್ತಾಂತರ ಬಾಕಿ

ನವದೆಹಲಿ (ಪಿಟಿಐ): ದೇಶದ ಪ್ರಮುಖ ಕಾರು ತಯಾರಿಕಾ ಕಂಪನಿಗಳು ಸೆಮಿಕಂಡಕ್ಟರ್ ಚಿಪ್ ಕೊರತೆಯ ಕಾರಣದಿಂದಾಗಿ ಅಂದಾಜು 6.5 ಲಕ್ಷ ವಾಹನಗಳನ್ನು ಗ್ರಾಹಕರಿಗೆ ಹಸ್ತಾಂತರಿಸುವುದು ಇನ್ನೂ ಬಾಕಿ ಇದೆ.

ಸೆಮಿಕಂಡಕ್ಟರ್ ಕೊರತೆಯಿಂದಾಗಿ ಕಾರು ತಯಾರಿಕೆ ವೇಗವಾಗಿ ಆಗುತ್ತಿಲ್ಲ. ಇದರಿಂದಾಗಿ ಗ್ರಾಹಕರಿಗೆ ಕಾಯುವಿಕೆ ಅವಧಿಯು ಹೆಚ್ಚುತ್ತಿದೆ.

ದೇಶದ ಅತಿದೊಡ್ಡ ಕಾರು ತಯಾರಿಕಾ ಕಂಪನಿಯಾಗಿರುವ ಮಾರುತಿ ಸುಜುಕಿ ಅಂದಾಜು 3.4 ಲಕ್ಷ ವಾಹನಗಳನ್ನು ಗ್ರಾಹಕರಿಗೆ ತಲುಪಿಸಬೇಕಿದೆ. ಹುಂಡೈ ಮತ್ತು ಮಹೀಂದ್ರ ಆ್ಯಂಡ್ ಮಹೀಂದ್ರ ಒಟ್ಟಾಗಿ ಅಂದಾಜು 3 ಲಕ್ಷ ವಾಹನಗಳನ್ನು ಗ್ರಾಹಕರಿಗೆ ತಲುಪಿಸಬೇಕಿದೆ. ಟಾಟಾ ಮೋಟರ್ಸ್, ಕಿಯಾ ಮತ್ತು ಹೋಂಡಾ ಕಾರ್ಸ್ ಕಂಪನಿಗಳಿಂದ ಗ್ರಾಹಕರಿಗೆ ತಲುಪಬೇಕಿರುವ ವಾಹನಗಳ ಸಂಖ್ಯೆ ಕೂಡ ದೊಡ್ಡದಾಗಿಯೇ ಇದೆ.

‘ನಾವು ಗ್ರಾಹಕರಿಗೆ ಹಸ್ತಾಂತರ ಮಾಡಬೇಕಿರುವ ಕಾರುಗಳ ಸಂಖ್ಯೆಯು 3.4 ಲಕ್ಷಕ್ಕಿಂತ ಹೆಚ್ಚಿದೆ’ ಎಂದು ಮಾರುತಿ ಸುಜುಕಿ ಇಂಡಿಯಾ ಕಂಪನಿಯ ಹಿರಿಯ ಕಾರ್ಯನಿರ್ವಾಹಕ ನಿರ್ದೇಶಕ (ಮಾರುಕಟ್ಟೆ ಮತ್ತು ಮಾರಾಟ) ಶಶಾಂಕ್ ಶ್ರೀವಾಸ್ತವ ತಿಳಿಸಿದ್ದಾರೆ.

‘ಕಳೆದ ಎರಡು ತ್ರೈಮಾಸಿಕಗಳಲ್ಲಿ ವಾಹನ ಮಾರಾಟವು ಒಂಭತ್ತು ಲಕ್ಷದ ಗಡಿಯನ್ನು ದಾಟಿದೆ. ಒಂಭತ್ತು ಲಕ್ಷದ ಗಡಿಯು ಸತತ ಎರಡು ತ್ರೈಮಾಸಿಕಗಳಲ್ಲಿ ದಾಟಿರುವುದು ಇದೇ ಮೊದಲು. ಬೇಡಿಕೆಯು ಚೆನ್ನಾಗಿದೆ ಎಂಬುದು ಇದರ ಅರ್ಥ’ ಎಂದು ಹೇಳಿದ್ದಾರೆ.

ಪ್ರಯಾಣಿಕ ವಾಹನಗಳಿಗೆ ಕಾಯುವಿಕೆ ಅವಧಿಯು ವಾಹನದ ಮಾದರಿ, ಬಣ್ಣ ಆಧರಿಸಿ ನಾಲ್ಕರಿಂದ ಹನ್ನೆರಡು ವಾರಗಳವರೆಗೆ ಇದೆ ಎಂದು ಟಾಟಾ ಮೋಟರ್ಸ್‌ನ ವಕ್ತಾರರು ಹೇಳಿದ್ದಾರೆ. ಇ.ವಿ. ಕಾಯುವಿಕೆ ಅವಧಿಯು ಗರಿಷ್ಠ ಆರು ತಿಂಗಳವರೆಗೂ ಇದೆ ಎಂದಿದ್ದಾರೆ.

ಕಂಪನಿಯ ಕಾರುಗಳಿಗೆ ಕಾಯುವಿಕೆ ಅವಧಿಯು 2 ತಿಂಗಳಿಂದ 9 ತಿಂಗಳವರೆಗೆ ಇದೆ ಎಂದು ಹೋಂಡಾ ಕಾರ್ಸ್ ಇಂಡಿಯಾ ಕಂಪನಿಯ ಮಾರುಕಟ್ಟೆ ಮತ್ತು ಮಾರಾಟ ವಿಭಾಗದ ನಿರ್ದೇಶಕ ಯುಇಚಿ ಮುರಾಟಾ ಹೇಳಿದ್ದಾರೆ.

ಮುಖ್ಯಾಂಶಗಳು

- ಚಿಪ್ ಕೊರತೆ: ಕಾರು ತಯಾರಿಕೆಗೆ ಅಡ್ಡಿ
- 3.4 ಲಕ್ಷ ವಾಹನ ನೀಡಬೇಕಿರುವ ಮಾರುತಿ ಸುಜುಕಿ
- ಕಾರು ಪಡೆಯಲು ಕಾಯುವಿಕೆ ಅವಧಿ ಹೆಚ್ಚಳ

‘ಸುರಕ್ಷತೆ: 13 ಲಕ್ಷ ವಾಹನ ಹಿಂದಕ್ಕೆ’

ನವದೆಹಲಿ (ಪಿಟಿಐ): ಸುರಕ್ಷತೆಗೆ ಸಂಬಂಧಿಸಿದ ವಿಷಯಗಳಿಗಾಗಿ 2021–22ರಲ್ಲಿ ಹಿಂದಕ್ಕೆ ಕರೆಸಿಕೊಂಡ ದ್ವಿಚಕ್ರ ವಾಹನಗಳು ಹಾಗೂ ಪ್ರಯಾಣಿಕ ವಾಹನಗಳ ಒಟ್ಟು ಸಂಖ್ಯೆ 13 ಲಕ್ಷಕ್ಕೂ ಹೆಚ್ಚು ಎಂದು ಕೇಂದ್ರ ಸರ್ಕಾರವು ಲೋಕಸಭೆಗೆ ತಿಳಿಸಿದೆ.

8.64 ಲಕ್ಷ ದ್ವಿಚಕ್ರ ವಾಹನಗಳನ್ನು, 4.67 ಲಕ್ಷ ಪ್ರಯಾಣಿಕ ವಾಹನಗಳನ್ನು 2021–22ರಲ್ಲಿ ಹಿಂದಕ್ಕೆ ಕರೆಸಿಕೊಳ್ಳಲಾಗಿದೆ ಎಂದು ಕೇಂದ್ರ ಹೆದ್ದಾರಿ ಮತ್ತು ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ ಲಿಖಿತ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಪ್ರಸಕ್ತ ಹಣಕಾಸು ವರ್ಷದ ಜುಲೈ 15ರವರೆಗೆ 1.60 ಲಕ್ಷ ದ್ವಿಚಕ್ರ ವಾಹನಗಳನ್ನು ಹಾಗೂ 25 ಸಾವಿರ ಪ್ರಯಾಣಿಕ ವಾಹನಗಳನ್ನು ಹಿಂದಕ್ಕೆ ಕರೆಸಿಕೊಳ್ಳಲಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ

5ನೇ ದಿನವೂ ಸೂಚ್ಯಂಕ ಏರಿಕೆ

ರೂಪಾಯಿ ಮೌಲ್ಯ ಚೇತರಿಕೆ, ವಿದೇಶಿ ಹೂಡಿಕೆ ನೆರವು

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳು ಸತತ ಐದನೇ ದಿನವೂ ಗಳಿಕೆ ಕಂಡುಕೊಂಡವು. ಹೂಡಿಕೆದಾರರು ಇಂಧನ, ಹಣಕಾಸು ಮತ್ತು ಐ.ಟಿ. ವಲಯದ ಷೇರುಗಳನ್ನು ಹೆಚ್ಚು ಖರೀದಿ ಮಾಡಿದ್ದರಿಂದ ಗುರುವಾರದ ವಹಿವಾಟು ಸಕಾರಾತ್ಮಕವಾಗಿ ಅಂತ್ಯವಾಯಿತು.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಚೇತರಿಕೆ ಮತ್ತು ವಿದೇಶಿ ಬಂಡವಾಳ ಒಳಹರಿವು ಸೂಚ್ಯಂಕಗಳ ಓಟಕ್ಕೆ ಬಲ ನೀಡಿದವು ಎಂದು ವರ್ತಕರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 284 ಅಂಶ ಏರಿಕೆ ಕಂಡರೆ, ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 84 ಅಂಶ ಹೆಚ್ಚಾಯಿತು.

ಸೆನ್ಸೆಕ್ಸ್‌ನಲ್ಲಿ ಇಂಡಸ್‌ಇಂಡ್ ಬ್ಯಾಂಕ್ ಷೇರು ಮೌಲ್ಯ ಶೇ 7.88ರಷ್ಟು ಗರಿಷ್ಠ ಏರಿಕೆ ಕಂಡಿತು. ಜೂನ್ ತ್ರೈಮಾಸಿಕದಲ್ಲಿ ಬ್ಯಾಂಕ್‌ನ ನಿವ್ವಳ ಲಾಭ ಶೇ 60.5ರಷ್ಟು ಹೆಚ್ಚಳ ಕಂಡಿರುವುದರಿಂದ ಷೇರು ಮೌಲ್ಯ ಈ ಪ್ರಮಾಣದ ಏರಿಕೆ ಕಂಡಿದೆ.

ಬಿಎಸ್‌ಇ ಮಿಡ್ ಕ್ಯಾಪ್ ಶೇ 1.24ರಷ್ಟು ಮತ್ತು ಸ್ಮಾಲ್‌ಕ್ಯಾಪ್ ಶೇ 0.90ರಷ್ಟು ಏರಿಕೆ ಕಂಡವು.

ದೇಶಿ ಷೇರುಪೇಟೆಗಳು ಜಾಗತಿಕ ಮಾರುಕಟ್ಟೆಗಳ ಒತ್ತಡದಿಂದ ಹೊರಬರಲು ವಿದೇಶಿ ಸಾಂಸ್ಥಿಕ ಹೂಡಿಕೆಯು (ಎಫ್‌ಐಐ) ನೆರವಿಗೆ ಬಂತು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರ ಶೇ 3.90ರಷ್ಟು ಇಳಿಕೆ ಕಂಡು ಒಂದು ಬ್ಯಾರಲ್‌ಗೆ 102.8 ಡಾಲರ್‌ಗೆ ತಲುಪಿತು.

ಐದು ದಿನಗಳ ವಹಿವಾಟಿನಲ್ಲಿ ಬಿಎಸ್‌ಇ ಹೂಡಿಕೆದಾರರ ಸಂಪತ್ತು ಮೌಲ್ಯ ₹ 9.76 ಲಕ್ಷ ಕೋಟಿ ವೃದ್ಧಿಯಾಗಿದೆ. ಷೇರುಪೇಟೆಯ ಒಟ್ಟಾರೆ ಬಂಡವಾಳ ಮೌಲ್ಯ ₹ 260.42 ಲಕ್ಷ ಕೋಟಿಗೆ ಏರಿಕೆ ಆಗಿದೆ.

ವಲಯವಾರು ಗಳಿಕೆ (%)

ದೂರಸಂಪರ್ಕ	2.16
ಬಂಡವಾಳ ಸರಕುಗಳು	2.08
ಕೈಗಾರಿಕೆಗಳು	1.45
ತೈಲ ಮತ್ತು ಅನಿಲ	1.32

₹ 50 ಸಾವಿರಕ್ಕಿಂತ ಕೆಳಗಿಳಿದ ಚಿನ್ನ

ನವದೆಹಲಿ (ಪಿಟಿಐ/ ರಾಯಿಟರ್ಸ್): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ಚಿನ್ನದ ದರ 10 ಗ್ರಾಂಗೆ ₹ 478ರಷ್ಟು ಇಳಿಕೆ ಕಂಡು ₹ 49,830ರಂತೆ ಮಾರಾಟವಾಯಿತು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆ ಆಗಿರುವುದೇ ಇದಕ್ಕೆ ಕಾರಣ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ. ಬೆಳ್ಳಿ ಧಾರಣೆ ಕೆ.ಜಿ.ಗೆ ₹ 1,265ರಷ್ಟು ಇಳಿಕೆ ಆಗಿ ₹ 54,351ಕ್ಕೆ ತಲುಪಿತು.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಮೌಲ್ಯ ವೃದ್ಧಿ ಆಗಿರುವುದು ಹಾಗೂ ಷೇರುಪೇಟೆಗಳ ಗಳಿಕೆಯಿಂದಾಗಿ ಚಿನ್ನದ ದರ ಇಳಿಕೆ ಆಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ತಪನ್ ಪಟೇಲ್ ತಿಳಿಸಿದ್ದಾರೆ.

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು	
1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಮುಂಬೈ ಧಾರಣೆ

ಶೇಂಗಾ 21-7-2022

ಜಾವಾ 70/80(ಹೊಸ)	11300-11350
ಜಾವಾ 80/90(ಹೊಸ)	10700-10750
ದಪ್ಪ ಮಧ್ಯಪ್ರದೇಶ(ಹೊಸ)	9950-10000
ದಪ್ಪ ಗುಜರಾತ್(ಹೊಸ)	10700-10750

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1650 (1650)
ಒಂದು ವಾರದ ಡೆಲಿವರಿ	1645 (1645)
ಸೋಯಾ ಕಚ್ಚಾ	1160 (1175)
ಪಾಮ್ ವಾರದ ಡೆಲಿವರಿ	1183 (1200)
ಸೂರ್ಯಕಾಂತಿ ಎಣ್ಣೆ ಕಚ್ಚಾ	1500 (1530)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 49,900 (50,400)

ಬೆಳ್ಳಿ ಕೆ.ಜಿ 54,100 (55,450)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಪೂರ್ವಿಕಾದಲ್ಲಿ ಮಾರಾಟ ಮೇಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲೆಕ್ಟ್ರಾನಿಕ್ ಉಪಕರಣಗಳನ್ನು ಮಾರಾಟ ಮಾಡುವ ಪೂರ್ವಿಕಾ ಮಳಿಗೆಗಳಲ್ಲಿ ಆಗಸ್ಟ್ 15ರವರೆಗೆ ‘ಕ್ರೇಜಿ ಡೀಲ್ಸ್ ಸೇಲ್’ ಇರಲಿದೆ. ಆಕರ್ಷಕ ಕೊಡುಗೆಗಳು, ಬೆಲೆ ಕಡಿತ, ಉಚಿತ ಕೊಡುಗೆಗಳು ಈ ಸಂದರ್ಭದಲ್ಲಿ ಗ್ರಾಹಕರಿಗೆ ಸಿಗಲಿವೆ.

ಆಗಸ್ಟ್ 12ರಿಂದ 15ರವರೆಗೆ ಸ್ವಾತಂತ್ರ್ಯ ದಿನಾಚರಣೆ ಮಾರಾಟ ಮೇಳ ಇರಲಿದೆ. ಸ್ಮಾರ್ಟ್‌ಫೋನ್, ಲ್ಯಾಪ್‌ಟಾಪ್ ಮತ್ತು ಇತರ ಎಲೆಕ್ಟ್ರಾನಿಕ್ಸ್ ಉಪಕರಣಗಳಿಗೆ ಹಲವು ಕೊಡುಗೆಗಳು ಇರಲಿವೆ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ. ಗೃಹೋಪಯೋಗಿ ವಸ್ತುಗಳನ್ನು ಖರೀದಿಸಿದಾಗ ಬೆಳ್ಳಿಯ ಅಥವಾ ಚಿನ್ನದ ನಾಣ್ಯ ಉಚಿತವಾಗಿ ಸಿಗಲಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-55500
ಚಿತ್ರದುರ್ಗ	
ಅಪಿ	49439-49829
ಬೆಟ್ಟೆ	39210-39679
ಕೆಂಪುಗೋಟು	29300-29700
ರಾಶಿ	48919-49369
ಕುಮಟ	
ಚಿಪ್ಪು	23609-31369
ಕೋಕ	19209-30819
ಹೊಸಚಾಲಿ	34269-39379
ಶಿವಮೊಗ್ಗ	
ಬೆಟ್ಟೆ	51059-53519
ಗೊರಬಲು	17039-37899
ರಾಶಿ	44899-49600
ಸರಕು	59100-79896
ಸಾಗರ	
ಬಿಳಿಗೋಟು	19499-30099
ಚಾಲಿ	29699-37599
ಕೋಕ	21119-32915
ಕೆಂಪುಗೋಟು	24290-38099
ರಾಶಿ	34989-49719
ಸಿಪ್ಪೆಗೋಟು	6590-20831
ಸಿದ್ದಾಪುರ	
ಬಿಳಿಗೋಟು	23399-31639
ಚಾಲಿ	34599-38839
ಕೋಕ	24499-32800
ಕೆಂಪುಗೋಟು	29909-29909
ರಾಶಿ	47399-48099
ತಟ್ಟಿಬೆಟ್ಟೆ	39399-49269
ಶಿರಸಿ	
ಬೆಟ್ಟೆ	38098-42910
ಬಿಳಿಗೋಟು	23109-32899
ಚಾಲಿ	37699-39401
ರಾಶಿ	46123-47123
ಯಲ್ಲಾಪುರ	
ಬಿಳಿಗೋಟು	26899-32899
ಚಾಲಿ	34699-38969
ಕೋಕ	21212-29299
ಕೆಂಪುಗೋಟು	32219-34221
ರಾಶಿ	47692-53600
ತಟ್ಟಬೆಟ್ಟೆ	38899-45669

ಮುಡಿಗೆರೆ ಕಾಫಿ (50 ಕೆ.ಜಿಗೆ)

	ಮುದ್ರಮನೆ
ಎಪಿ	16000
ಎಸಿ	8680
ಆರ್‌ಪಿ	9500
ಆರ್‌ಸಿ	4700

ಶೇ 7ರಷ್ಟು ಬೆಳವಣಿಗೆ: ಫಿಕ್ಕಿ ಅಂದಾಜು

ಮುಂಬೈ (ರಾಯಿಟರ್ಸ್): ದೇಶದ ಅರ್ಥ ವ್ಯವಸ್ಥೆಯು ಪ್ರಸಕ್ತ ಆರ್ಥಿಕ ವರ್ಷದಲ್ಲಿ ಶೇಕಡ 7ರಷ್ಟು ಬೆಳವಣಿಗೆ ಸಾಧಿಸಬಹುದು ಎಂದು ಭಾರತೀಯ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಘ (ಫಿಕ್ಕಿ) ನಡೆಸಿದ ಸಮೀಕ್ಷೆಯು ಅಂದಾಜಿಸಿದೆ.

ರಷ್ಯಾ–ಉಕ್ರೇನ್ ಯುದ್ಧವು ಹಣದುಬ್ಬರ ಪ್ರಮಾಣವನ್ನು ಹೆಚ್ಚಿನ ಮಟ್ಟದಲ್ಲಿಯೇ ಇರಿಸಲಿದೆ ಎಂದು ಹೇಳಿದೆ. ಹಣದುಬ್ಬರ ನಿಯಂತ್ರಿಸಲು ಆರ್‌ಬಿಐ ಬಿಗಿಯಾದ ಹಣಕಾಸಿನ ನೀತಿಯನ್ನು ಅನುಸರಿಸಲಿದೆ ಎಂದು ಹೇಳಿದೆ.

ಈ ಹಣಕಾಸು ವರ್ಷದ 4ನೇ ತ್ರೈಮಾಸಿಕದ ನಂತರ ಚಿಲ್ಲರೆ ಹಣದುಬ್ಬರ ನಿಯಂತ್ರಣಕ್ಕೆ ಬರಬಹುದು ಎಂದಿದೆ. ಚಿಲ್ಲರೆ ಹಣದುಬ್ಬರ 6 ತಿಂಗಳುಗಳಿಂದ ಶೇ 6ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇದೆ.

‘ಸರಕುಗಳ ಬೆಲೆ ಹೆಚ್ಚಾಗುತ್ತಿರುವುದು, ಪೂರೈಕೆ ವ್ಯವಸ್ಥೆಯಲ್ಲಿನ ಸಮಸ್ಯೆಗಳು, ಜಾಗತಿಕ ಬೆಳವಣಿಗೆಯ ಅಂದಾಜು ಉತ್ತಮವಾಗಿಲ್ಲದಿರುವುದು ಹಾಗೂ ಯುರೋಪಿನಲ್ಲಿ ಸಂಘರ್ಷವು ದೀರ್ಘಕಾಲ ಮುಂದುವರಿಯುವುದು ದೇಶದ ಅರ್ಥ ವ್ಯವಸ್ಥೆಯ ಚೇತರಿಕೆಗೆ ಇರುವ ಅಪಾಯಗಳು’ ಎಂದು ಹೇಳಿದೆ.

‘ಐಎಸ್‌ಐ ಮಾರ್ಕ್ ಇರುವ ಆಟಿಕೆಯನ್ನೇ ಖರೀದಿಸಿ’

ನವದೆಹಲಿ (ಪಿಟಿಐ): ಐಎಸ್‌ಐ ಗುರುತು ಇರುವ ಆಟಿಕೆಗಳನ್ನೇ ಖರೀದಿಸಬೇಕು ಎಂದು ಭಾರತೀಯ ಮಾನದಂಡ ಮಂಡಳಿಯು (ಬಿಐಎಸ್) ಗ್ರಾಹಕರಿಗೆ ಮನವಿ ಮಾಡಿದೆ.

ಐಎಸ್‌ಐ ಗುರುತು ಇರುವ ಆಟಿಕೆಗಳಿಗೆ ಗುಣಮಟ್ಟದ ಪ್ರಮಾಣೀಕರಣವು ಕಡ್ಡಾಯ ಆಗಿರುವುದರಿಂದ ಇಂತಹ ಉತ್ಪನ್ನಗಳನ್ನೇ ಖರೀದಿಸುವಂತೆ ಹೇಳಿದೆ.

ಐಎಸ್‌ಐ ಗುರುತು ಇಲ್ಲದ ಆಟಿಕೆಗಳನ್ನು ಕಂಡರೆ ದೂರು ನೀಡುವಂತೆ ಗ್ರಾಹಕರಿಗೆ ತಿಳಿಸಿದೆ. ಬಿಐಎಸ್ ಕೇರ್ ಆ್ಯಪ್ ಮೂಲಕ ಅಥವಾ complaints@bis.gov.inಗೆ ದೂರು ನೀಡುವಂತೆ ಪ್ರಕಟಣೆಯಲ್ಲಿ ತಿಳಿಸಿದೆ.

ಆಟಿಕೆಗಳಲ್ಲಿ ಗುಣಮಟ್ಟದ ಪ್ರಮಾಣೀಕರಣ ಇರುವುದನ್ನು 2021ರ ಜನವರಿಯಿಂದ ಕಡ್ಡಾಯಗೊಳಿಸಲಾಗಿದೆ. 800ಕ್ಕೂ ಹೆಚ್ಚು ಆಟಿಕೆ ತಯಾರಕರು ಗುಣಮಟ್ಟ ಪ್ರಮಾಣಪತ್ರ ಪಡೆದುಕೊಂಡಿದ್ದಾರೆ.

ಐಟಿಸಿ: ಮಾರ್ಸ್ ಆ್ಯಪ್ ಮೂಲಕ ಕೃಷಿ ವಹಿವಾಟು ವೃದ್ಧಿ ಗುರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಟಿಸಿ ಮಾರ್ಸ್ (ITC MAARS) ಆ್ಯಪ್ ಮೂಲಕ ಕೃಷಿ ವಹಿವಾಟು ಹೆಚ್ಚಿಸಿಕೊಳ್ಳಲು ಐಟಿಸಿ ಲಿಮಿಟೆಡ್ ಮುಂದಾಗಿದೆ.

ಗುರುವಾರ ವರ್ಚುವಲ್ ಆಗಿ ಸುದ್ದಿಗೋಷ್ಠಿ ನಡೆಸಿದ ಕಂಪನಿಯ ಸಿಎಂಡಿ ಸಂಜೀವ್ ಪುರಿ, ‘ಉತ್ತಮ ಗುಣಮಟ್ಟ ಮತ್ತು ಯೋಗ್ಯವಾದ ದರದಲ್ಲಿ ಕೃಷಿಗೆ ಬೇಕಾದ ಉತ್ಪನ್ನಗಳು ಸಿಗುವಂತೆ ಮಾಡಿ, ಕೃಷಿ ಸಲಕರಣೆಗಳು, ಮಾರುಕಟ್ಟೆ ಲಭ್ಯತೆಯ ಜೊತೆಗೆ ಹಣಕಾಸಿನ ನೆರವು ಕಲ್ಪಿಸಿಕೊಡುವ ಮೂಲಕ ಈ ಸೂಪರ್ ಆ್ಯಪ್ ರೈತರನ್ನು ಇನ್ನಷ್ಟು ಬಲಪಡಿಸಲಿದೆ’ ಎಂದರು.

‘ಪ್ರಾದೇಶಿಕ ಭಾಷೆಗಳಲ್ಲಿಯೂ ಈ ಆ್ಯಪ್ ಸೇವೆ ಇರಲಿದೆ. ಬೆಳೆಗೆ ರೋಗ ತಗುಲಿದ್ದರೆ ಆ್ಯಪ್ ಮೂಲಕ ಅದರ ಚಿತ್ರವನ್ನು ತೆಗೆದು ಪೋಸ್ಟ್ ಮಾಡಿದರೆ, ಅದು ಯಾವ ರೋಗ, ಅದಕ್ಕೆ ಕಾರಣ ಮತ್ತು ಪರಿಹಾರ ಹೇಗೆ ಎನ್ನುವುದನ್ನು ತಜ್ಞರು ತಿಳಿಸಿಕೊಡಲಿದ್ದಾರೆ. ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನಗಳ ಬಳಕೆ ಮತ್ತು ಆದಾಯ ಹೆಚ್ಚಿಸಿಕೊಳ್ಳುವ ಬಗ್ಗೆ ಮಾಹಿತಿ ಸಿಗಲಿದೆ. ಈ ಆ್ಯಪ್ ಮೂಲಕ ರೈತರು ತಮ್ಮ ಉತ್ಪನ್ನಗಳನ್ನು ಎಫ್‌ಪಿಓಗಳಿಗೆ ಅಥವಾ ಐಟಿಸಿಯಂತಹ ಕಂಪನಿಗಳಿಗೆ ಮಾರಾಟ ಮಾಡಬಹುದು’ ಎಂದರು.

‘ಮೊದಲ ಹಂತದಲ್ಲಿ ಏಳು ರಾಜ್ಯಗಳಲ್ಲಿ ಈ ಆ್ಯಪ್ ಬಿಡುಗಡೆ ಮಾಡಲಾಗಿದ್ದು, ಇದರಲ್ಲಿ 200 ರೈತ ಉತ್ಪಾದಕ ಸಂಸ್ಥೆಗಳು (ಎಫ್‌ಪಿಒ) ಮತ್ತು 40 ಸಾವಿರ ರೈತರು ಇದ್ದಾರೆ. 4 ಸಾವಿರ ಎಫ್‌ಪಿಒ ಮತ್ತು 1 ಕೋಟಿ ರೈತರನ್ನು ತಲುಪುವ ಗುರಿ ಹೊಂದಲಾಗಿದೆ’ ಎಂದು ತಿಳಿಸಿದರು.

ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್: 5,000 ಮೀಟರ್ಸ್‌ನಲ್ಲಿ ಪಾರುಲ್ ಚೌಧರಿಗೆ ನಿರಾಸೆ

ಜಾವೆಲಿನ್ ಫೈನಲ್‌ಗೆ ಅನುರಾಣಿ

ಯೂಜೀನ್, ಅಮೆರಿಕ (ಪಿಟಿಐ/ ರಾಯಿಟರ್ಸ್): ಭಾರತದ ಅನುರಾಣಿ ಅವರು ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ ಮಹಿಳಾ ಜಾವೆಲಿನ್ ಥ್ರೊ ಸ್ಪರ್ಧೆಯ ಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ.

ಇಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಅರ್ಹತಾ ಸುತ್ತಿನಲ್ಲಿ ಗುರುವಾರ 59.60 ಮೀಟರ್ಸ್ ಸಾಧನೆ ಮಾಡಿದ ಅವರು, ವಿಶ್ವ ಅಥ್ಲೆಟಿಕ್ಸ್‌ನಲ್ಲಿ ಎರಡನೇ ಬಾರಿ ಫೈನಲ್ ತಲುಪಿದ ಹೆಗ್ಗಳಿಕೆಗೆ ಪಾತ್ರರಾದರು.

ಅರ್ಹತಾ ಸುತ್ತಿನ ಮೊದಲ ಎಸೆತವನ್ನು ಫೌಲ್ ಮಾಡಿದ ಅವರು ಸ್ಪರ್ಧೆಯಿಂದ ಹೊರಬೀಳುವ ಆತಂಕ ಎದುರಿಸಿದರು. ಎರಡನೇ ಯತ್ನದಲ್ಲಿ 55.35 ಮೀಟರ್ಸ್ ದಾಖಲಿಸಿದರು. ಆದರೆ ಮೂರನೇ ಪ್ರಯತ್ನದಲ್ಲಿ 59.60 ಮೀ. ದೂರ ಜಾವೆಲಿನ್ ಎಸೆದು ಫೈನಲ್ ಅರ್ಹತೆ ಗಳಿಸುವಲ್ಲಿ ಯಶಸ್ವಿಯಾದರು. ಇದು ಅವರ ವೈಯಕ್ತಿಕ ಶ್ರೇಷ್ಠ ಸಾಧನೆಗಿಂತ ಕಡಿಮೆ ದೂರವಾಗಿತ್ತು.

ಬಿ ಗುಂಪಿನ ಅರ್ಹತಾ ಸುತ್ತಿನಲ್ಲಿ ಐದನೇಯವರಾದ ಅವರು, ಒಟ್ಟಾರೆ ಎಂಟನೇ ಸ್ಥಾನ ಗಳಿಸಿದರು. 63.82 ಮೀಟರ್ಸ್ ಅನುರಾಣಿ ವೈಯಕ್ತಿಕ ಶ್ರೇಷ್ಠ ಸಾಧನೆಯಾಗಿದ್ದು, ರಾಷ್ಟ್ರೀಯ ದಾಖಲೆಯೂ ಅವರ ಹೆಸರಿನಲ್ಲಿದೆ. ಈ ವರ್ಷದ ಮೇನಲ್ಲಿ ಜಮ್ಷೆಡ್‌ಪುರದಲ್ಲಿ ನಡೆದ ಇಂಡಿಯನ್ ಓಪನ್‌ನಲ್ಲಿ ಅವರು ರಾಷ್ಟ್ರೀಯ ದಾಖಲೆ ಉತ್ತಮಪಡಿಸಿಕೊಂಡಿದ್ದರು.

29 ವರ್ಷದ ಅಥ್ಲೀಟ್ ಅರ್ಹತಾ ಸುತ್ತಿನಲ್ಲಿ 60 ಮೀ. ಸಾಧನೆ ಮೀರಿದಿದ್ದರೂ ಫೈನಲ್‌ನಲ್ಲಿ ಉತ್ತಮ ಸಾಮರ್ಥ್ಯ ತೋರುವ ಅವಕಾಶವಿದೆ. ಕಳೆದ ಬಾರಿಯ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ (2019) ಅನುರಾಣಿ 61.12 ಮೀ. ಸಾಧನೆಯೊಂದಿಗೆ ಎಂಟನೇ ಸ್ಥಾನ ಗಳಿಸಿದ್ದರು. ಒಟ್ಟಾರೆ ಮೂರನೇ ಬಾರಿ ಅವರು ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸಿದ್ದಾರೆ.

ಅನುಭವಿ ಅಥ್ಲೀಟ್ ಅಮೆರಿಕದ ಮ್ಯಾಗಿ ಮ್ಯಾಲೋನ್ (54.19 ಮೀ.) ಅವರಿಗೆ ಈ ವಿಭಾಗದಲ್ಲಿ ಫೈನಲ್ ತಲುಪಲು ಸಾಧ್ಯವಾಗಲಿಲ್ಲ. ಹಾಲಿ ಚಾಂಪಿಯನ್, ಆಸ್ಟ್ರೇಲಿಯಾದ ಕೆಲ್ಸಿ ಲೀ ಬಾರ್ಬರ್ (61.27 ಮೀ.) ಒಟ್ಟಾರೆ ಐದನೇ ಸ್ಥಾನದೊಂದಿಗೆ ಫೈನಲ್ ಪ್ರವೇಶಿಸಿದರು.

ಸಮಿಫೈನಲ್ ತಲುಪದ ಪಾರುಲ್ ವಿಫಲ: ಮಹಿಳೆಯರ 5,000 ಮೀ. ಸಮಿಫೈನಲ್ ತಲುಪಲು ಭಾರತದ ಪಾರುಲ್ ಚೌಧರಿ ಅವರಿಗೆ ಸಾಧ್ಯವಾಗಲಿಲ್ಲ. ಎರಡನೇ ಹೀಟ್‌ನಲ್ಲಿ 15 ನಿಮಿಷ 54.03 ಸೆಕೆಂಡು ತೆಗೆದುಕೊಂಡು 17ನೇ ಸ್ಥಾನ ಗಳಿಸಿದ ಅವರು ಒಟ್ಟಾರೆ 31ನೇ ಸ್ಥಾನಕ್ಕೆ ಸಮಾಧಾನಪಡಬೇಕಾಯಿತು.

ಸ್ಟೀಪಲ್‌ಚೇಸ್‌ನಲ್ಲಿ ಜೆರುಟೊ ಕೂಟ ದಾಖಲೆ: ಕಜಕಸ್ತಾನದ ನೊರಾಹ್ ಜೆರುಟೊ ಮಹಿಳೆಯರ 3,000 ಮೀಟರ್ಸ್ ಸ್ಟೀಪಲ್‌ಚೇಸ್‌ನಲ್ಲಿ ಕೂಟ ದಾಖಲೆಯೊಂದಿಗೆ ಚಿನ್ನ ಜಯಿಸಿದರು. ಅವರು 8 ನಿಮಿಷ 53.02 ಸೆಕೆಂಡುಗಳಲ್ಲಿ ಗುರಿ ತಲುಪಿದರು.

ಈ ಹಿಂದಿನ ದಾಖಲೆಯನ್ನು ಕೆನ್ಯಾದ ಬೀಟ್ರೈಸ್ ಚೆಪ್ಕೊಚ್ (2019ರಲ್ಲಿ ದೋಹಾದಲ್ಲಿ; 8 ನಿ. 53.59) ಅವರ ಹೆಸರಿನಲ್ಲಿತ್ತು.

ಇಥಿಯೋಪಿಯಾದ ವರ್ಕುಹಾ ಗೆಟಾಚೆವ್ ಬೆಳ್ಳಿ ಮತ್ತು ಮೆಕೆಡಿಸ್ ಅಡಿಬೆ ಕಂಚು ಜಯಿಸಿದರು. ಮಹಿಳೆಯರ ವಿಭಾಗದ ಡಿಸ್ಕಸ್ ಥ್ರೊ ಚಿನ್ನದ ಪದಕವು ಚೀನಾದ ಫೆಂಗ್ ಬಿನ್ (69.12 ಮೀ.) ಅವರ ಪಾಲಾಯಿತು. ಕ್ರೊವೇಷ್ಯಾದ ಸ್ಯಾಂಡ್ರಾ ಪೆರ್ಕೊವಿಚ್ ಮತ್ತು ಅಮೆರಿಕದ ಅಲಮನ್ ಕ್ರಮವಾಗಿ ಬೆಳ್ಳಿ ಮತ್ತು ಕಂಚು ಜಯಿಸಿದರು.

ಫೈನಲ್: ಶನಿವಾರ ಬೆಳಿಗ್ಗೆ 6.30 (ಭಾರತೀಯ ಕಾಲಮಾನ)

3000 ಮೀ. ಸ್ಟೀಪಲ್‌ಚೇಸ್‌ನಲ್ಲಿ ಚಿನ್ನ ಗೆದ್ದ ನೊರಾಹ್ ಜೆರುಟೊ– ಎಎಫ್‌ಪಿ ಚಿತ್ರ

ಅರ್ಹತಾ ಸುತ್ತಿನಲ್ಲಿ ಸ್ಪರ್ಧಿಸಿದ್ದ ಭಾರತದ ಅನುರಾಣಿ– ಎಎಫ್‌ಪಿ ಚಿತ್ರ

ನೀರಜ್ ಚೋಪ್ರಾ

ನೀರಜ್ ಇಂದು ಕಣಕ್ಕೆ

ಟೋಕಿಯೊ ಒಲಿಂಪಿಕ್ ಚಾಂಪಿಯನ್, ಭಾರತದ ಜಾವೆಲಿನ್ ಸ್ಪರ್ಧಿ ನೀರಜ್ ಚೋಪ್ರಾ ಶುಕ್ರವಾರ ಕಣಕ್ಕಿಳಿಯಲಿದ್ದಾರೆ. ಅರ್ಹತಾ ಸುತ್ತಿನ ಎ ಗುಂಪಿನಲ್ಲಿ ಅವರಿದ್ದಾರೆ. ಒಲಿಂಪಿಕ್ ಬೆಳ್ಳಿ ಪದಕ ವಿಜೇತ, ಜೆಕ್ ಗಣರಾಜ್ಯದ ಜಾಕುಬ್ ವಾಡ್ಲೆಜ್ ಮತ್ತು 2012ರ ಲಂಡನ್ ಒಲಿಂಪಿಕ್ ಚಿನ್ನದ ಪದಕ ವಿಜೇತ, ಟ್ರಿನಿಡಾಡ್ ಆ್ಯಂಡ್ ಟೊಬ್ಯಾಗೊದ ಕೆಶಾರ್ನ್ ವಾಲ್ಕಾಟ್ ಕೂಡ ಇದೇ ಗುಂಪಿನಲ್ಲಿದ್ದು ನೀರಜ್ ಅವರಿಗೆ ತೀವ್ರ ಪೈಪೋಟಿಯೊಡ್ಡುವ ಸಾಧ್ಯತೆಯಿದೆ.

ಭಾರತದ ರೋಹಿತ್ ಯಾದವ್ ಕೂಡ ಅದೃಷ್ಟಪರೀಕ್ಷೆಸಲಿದ್ದಾರೆ.

ಪುರುಷರ ಜಾವೆಲಿನ್ ಥ್ರೊ ಫೈನಲ್ ಭಾನುವಾರ ನಡೆಯಲಿದೆ.

ಅರ್ಹತಾ ಸುತ್ತಿನ ಸ್ಪರ್ಧೆ ಆರಂಭ: ಬೆಳಿಗ್ಗೆ 5.30 (ಭಾರತೀಯ ಕಾಲಮಾನ)

ನೇರ ಪ್ರಸಾರ: ಸೋನಿ ನೆಟ್‌ವರ್ಕ್, ಸೋನಿ ಲಿವ್ ಆ್ಯಪ್

‘ಏಕದಿನ ಕ್ರಿಕೆಟ್ ಸ್ಥಗಿತಗೊಳಿಸಿ’

ಪಾಕಿಸ್ತಾನ ದಿಗ್ಗಜ ಕ್ರಿಕೆಟಿಗ ವಾಸೀಂ ಅಕ್ರಂ ಅಭಿಪ್ರಾಯ

ಲಂಡನ್ (ಪಿಟಿಐ): ‘ಇಂಗ್ಲೆಂಡ್ ಆಲ್‌ರೌಂಡರ್ ಬೆನ್ ಸ್ಟೋಕ್ಸ್ ಏಕದಿನ ಕ್ರಿಕೆಟ್ ಮಾದರಿಗೆ ನಿವೃತ್ತಿ ಘೋಷಿಸಿರುವ ನಿರ್ಧಾರವನ್ನು ಪಾಕಿಸ್ತಾನ ಕ್ರಿಕೆಟ್ ದಿಗ್ಗಜ ವಾಸೀಂ ಅಕ್ರಂ ಬೆಂಬಲಿಸಿದ್ದಾರೆ.

‘ಇತ್ತೀಚಿನ ಕಾಲಘಟ್ಟದಲ್ಲಿ ಏಕದಿನ ಕ್ರಿಕೆಟ್ ಮಾದರಿಯು ಆಕರ್ಷಣೆ ಕಳೆದುಕೊಳ್ಳುತ್ತಿದೆ. ಆಟಗಾರರಿಗೆ ಮೂರು ಮಾದರಿಗಳಲ್ಲಿ ಆಡುವುದು ಅಪಾರ ಒತ್ತಡ ಉಂಟು ಮಾಡುತ್ತಿದೆ. ಟಿ20 ಮಾದರಿಯು ಜನಪ್ರಿಯವಾಗಿರುವ ಹೊತ್ತಿನಲ್ಲಿ 50-50 ಪಂದ್ಯಗಳ ಆಟವು ಸುಮ್ಮನೆ ಎಳೆದಂತಿರುವ ಭಾವ ಮೂಡಿಸುತ್ತದೆ. ಒಬ್ಬ ವೀಕ್ಷಕ ವಿವರಣೆಗಾರನಾಗಿ ನನ್ನ ಅನುಭವ ಇದು. ಪಂದ್ಯದ ಮೊದಲ ಹತ್ತು ಓವರ್‌ಗಳಲ್ಲಿ ಬ್ಯಾಟರ್‌ಗಳು ಬೀಸಾಟವಾಡುವುದರಿಂದ ಆಸಕ್ತಿ ಹೆಚ್ಚುತ್ತದೆ. ನಂತರದ 40ನೇ ಓವರ್‌ನವರೆಗೂ ವಿಕೆಟ್ ಉಳಿಸಿಕೊಂಡು ಆಡಲು ಒತ್ತು ನೀಡುವಾಗ ತಂಡದ ಮೊತ್ತ 200, 220ರವರೆಗೂ ಬೆಳೆಯಬಹುದು. ಕೊನೆಯ ಹತ್ತು ಓವರ್‌ಗಳಲ್ಲಿ ಮತ್ತೆ ನೂರು ರನ್ ಗಳಿಸುವ ಅವಕಾಶ ಲಭಿಸುತ್ತದೆ. ಒಟ್ಟಿನಲ್ಲಿ ಇಡೀ 50 ಓವರ್ ಇನಿಂಗ್ಸ್‌ನಲ್ಲಿ 20 ಓವರ್‌ಗಳ ಆಟವನ್ನಷ್ಟೇ ಗಮನ ಸೆಳೆಯುತ್ತದೆ’ ಎಂದು ವಾಸಿ ಮತ್ತು ಟಫರ್ಸ್ ಕ್ರಿಕೆಟ್ ಕ್ಲಬ್ ಪಾಡ್‌ಕಾಸ್ಟ್‌ನಲ್ಲಿ ಹೇಳಿದ್ದಾರೆ.

‘ಟಿ20 ಮಾದರಿ ವೇಗವಾಗಿ ಬೆಳೆಯುತ್ತಿರುವ ಇಂದಿನ ಕಾಲದಲ್ಲಿ ಏಕದಿನ ಕ್ರಿಕೆಟ್‌ಗೆ ಭವಿಷ್ಯವಿಲ್ಲ. ನಾಲ್ಕು ತಾಸುಗಳಲ್ಲಿ ಟಿ20 ಪಂದ್ಯ ಮುಗಿಯುತ್ತದೆ. ಅಪಾರ ಆದಾಯವೂ ತರುತ್ತದೆ. ಅದರಿಂದಾಗಿ ಆಟಗಾರರು ಹಣಕಾಸು ಮಾದರಿಯಲ್ಲೇ ಹೆಚ್ಚು ಗಮನ ನೀಡುತ್ತಿದ್ದಾರೆ. ಟೆಸ್ಟ್ ಮತ್ತು ಟಿ20 ಮಾತ್ರ ಜನಾಕರ್ಷಣೆಯಾಗಿ ಉಳಿಯುವ ಸಾಧ್ಯತೆಗಳಿವೆ’ ಎಂದು ವಿಶ್ಲೇಷಿಸಿದರು.

‘ಟೆಸ್ಟ್ ಮಾದರಿಯು ಕ್ರಿಕೆಟ್‌ನ ಮೂಲಬೇರು. ನಾನಂತೂ ಯಾವಾಗಲೂ ಟೆಸ್ಟ್ ಕ್ರಿಕೆಟ್ ಬಗ್ಗೆ ಹೆಚ್ಚು ಒಲವು ಹೊಂದಿದ್ದೇನೆ. ಏಕದಿನ ಮಾದರಿಯು ಕೇವಲ ಮನರಂಜನೆಗೆ ಸೀಮಿತ. ಟೆಸ್ಟ್‌ನಲ್ಲಿ ಒಬ್ಬ ಆಟಗಾರನ ಸಾಮರ್ಥ್ಯ ಸಾಬೀತಾಗುತ್ತದೆ. ಅವರಿಗೆ ಮಾನ್ಯತೆ ಸಿಗುತ್ತದೆ’ ಎಂದರು.

ಪ್ಯಾರಾ ಶೂಟಿಂಗ್ ವಿಶ್ವಕಪ್: ಭಾರತಕ್ಕೆ 10 ಪದಕ

ಮ್ಯೂನಿಕ್ (ಪಿಟಿಐ): ಪ್ಯಾರಾಲಿಂಪಿಕ್ ಪದಕ ವಿಜೇತ ಸಿಂಗರಾಜ್ ಅಧಾನ ಪ್ಯಾರಾ ಶೂಟಿಂಗ್ ವಿಶ್ವಕಪ್‌ನಲ್ಲಿ ಎರಡು ಚಿನ್ನದ ಪದಕ ಜಯಿಸಿದರು. ಇದರೊಂದಿಗೆ ಗುರುವಾರ ಕೊನೆಗೊಂಡ ಟೂರ್ನಿಯಲ್ಲಿ ಭಾರತ ಒಟ್ಟು 10 ಪದಕಗಳನ್ನು ತನ್ನದಾಗಿಸಿಕೊಂಡಿತು. ಆ ಮೂಲಕ ಸಾರ್ವಕಾಲಿಕ ಶ್ರೇಷ್ಠ ಸಾಮರ್ಥ್ಯ ತೋರಿತು.

ಒಟ್ಟು ಆರು ಚಿನ್ನ, ಮೂರು ಬೆಳ್ಳಿ ಮತ್ತು ಒಂದು ಕಂಚಿನ ಪದಕ ಭಾರತದ ಶೂಟರ್‌ಗಳಿಗೆ ಒಲಿದವು.

ಬಿಸಿಸಿಐ: ಅಮಿಕಸ್ ಕ್ಯೂರಿ ಮಣಿಂದರ್ ನೇಮಕ

ನವದೆಹಲಿ (ಪಿಟಿಐ): ನಿಯಮಾವಳಿ ಪರಿಷ್ಕರಣೆಗೆ ಅನುಮತಿ ಕೋರಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಸಲ್ಲಿಸಿರುವ ಮೇಲ್ಮನವಿ ವಿಚಾರಣೆಗೆ ಸಂಬಂಧಿಸಿದಂತೆ ಮಣಿಂದರ್ ಸಿಂಗ್ ಅವರನ್ನು ಅಮಿಕಸ್ ಕ್ಯೂರಿಯಾಗಿ ಸುಪ್ರೀಂ ಕೋರ್ಟ್ ನೇಮಕ ಮಾಡಿದೆ.

ಈ ಮೇಲ್ಮನವಿಯ ವಿಚಾರಣೆಯು ಜುಲೈ 28ರಂದು ನಡೆಯಲಿದೆ. ಈ ಮೊದಲು ಈ ಪ್ರಕರಣಕ್ಕೆ ಸಂಬಂಧಿಸಿ ಅಮಿಕಸ್ ಕ್ಯೂರಿ ಆಗಿದ್ದ ಪಿ.ಎಸ್. ನರಸಿಂಹ ಅವರು ನ್ಯಾಯಾಧೀಶರಾಗಿ ಬಡ್ತಿ ಹೊಂದಿದ್ದರಿಂದ ಸ್ಥಾನ ತೆರವಾಗಿತ್ತು. ಅವರ ಜಾಗಕ್ಕೆ ಮಣಿಂದರ್ ಅವರನ್ನು ನೇಮಕ ಮಾಡಲಾಗಿದೆ ಎಂದು ನ್ಯಾಯಪೀಠ ಘೋಷಿಸಿತು.

ಮುಖ್ಯ ನ್ಯಾಯಮೂರ್ತಿ ಎನ್‌.ವಿ. ರಮಣ, ನ್ಯಾಯಾಧೀಶರಾದ ಕೃಷ್ಣ ಮುರಾರಿ ಹಾಗೂ ಹಿಮಾ ಕೊಹ್ಲಿ ಅವರ ಪೀಠವು ಬಿಸಿಸಿಐ ಮೇಲ್ಮನವಿಯ ವಿಚಾರಣೆ ನಡೆಸುತ್ತಿದೆ.

ನಿವೃತ್ತ ನ್ಯಾಯಮೂರ್ತಿ ಆರ್‌.ಎಂ. ಲೋಧಾ ಸಮಿತಿಯು ಮಾಡಿದ್ದ ಶಿಫಾರಸುಗಳ ಆಧಾರದಲ್ಲಿ ರಚಿಸಲಾದ ನಿಯಮಾವಳಿಯನ್ನು ಮಂಡಳಿಯಲ್ಲಿ ಜಾರಿಗೊಳಿಸಲಾಗಿತ್ತು. ಈ ನಿಯಮದ ಕೂಲಿಂಗ್ ಆಫ್ ನಿಯಮದ ಪ್ರಕಾರ ಅಧ್ಯಕ್ಷ ಸೌರವ್ ಗಂಗೂಲಿ ಮತ್ತು ಕಾರ್ಯದರ್ಶಿ ಜಯ್ ಶಾ ಅವರ ಕಾರ್ಯಾವಧಿ ಮುಕ್ತಾಯವಾಗಿದೆ. ಆದರೆ ಈ ನಿಯಮ ಪರಿಷ್ಕರಿಸಲು ಅನುಮತಿ ನೀಡುವಂತೆ ಕೋರಿ ಮಂಡಳಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದೆ.

ಈ ನಿಯಮದ ಪ್ರಕಾರ ಬಿಸಿಸಿಐ ಅಥವಾ ರಾಜ್ಯ ಸಂಸ್ಥೆಗಳ ಯಾವುದೇ ಪದಾಧಿಕಾರಿಯು ಸತತ ಆರು ವರ್ಷ (ಮೂರು ವರ್ಷಗಳ ಎರಡು ಅವಧಿ) ಅಧಿಕಾರದಲ್ಲಿದ್ದರೆ, ನಂತರದ ಮೂರು ವರ್ಷ ಸ್ಥಾನದಿಂದ ದೂರ ಇರಬೇಕು. ಗಂಗೂಲಿ ಮತ್ತು ಶಾ ಕ್ರಮವಾಗಿ ಬಂಗಾಳ ಮತ್ತು ಗುಜರಾತ್ ಕ್ರಿಕೆಟ್ ಸಂಸ್ಥೆಗಳಲ್ಲಿ ಆರು ವರ್ಷ ಅಧಿಕಾರ ನಡೆಸಿದ್ದರು.

28ರಿಂದ ಟಿಟಿ

ಬೆಂಗಳೂರು: ಮೈಸೂರು ಜಿಲ್ಲಾ ಟೇಬಲ್ ಟೆನಿಸ್ ಸಂಸ್ಥೆಯ ಇದೇ 28ರಿಂದ 31ರವರೆಗೆ ರಾಜ್ಯ ರ‍್ಯಾಂಕಿಂಗ್ ಟೂರ್ನಿಯನ್ನು ಆಯೋಜಿಸಲಿದೆ.

ಮೈಸೂರಿನ ಮಹಾರಾಜ ಕಾಲೇಜು ಒಳಾಂಗಣ ಕ್ರೀಡಾಂಗಣದಲ್ಲಿ 11, 13, 15,17,19 ವರ್ಷದೊಳಗಿನವರ ಮತ್ತು ನಾನ್ ಮೆಡಲಿಸ್ಟ್ ವಿಭಾಗಗಳಲ್ಲಿ ಟೂರ್ನಿ ನಡೆಯಲಿದೆ. http://karnatakatt.com/mysore2022 ವಿಳಾಸಕ್ಕೆ ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಕೆಟಿಟಿಎ ಖಜಾಂಚಿ ಮಂಜುನಾಥ್ (ಮೊಬೈಲ್ ಸಂಖ್ಯೆ 98809 77827) ಅವರನ್ನು ಸಂಪರ್ಕಿಸಬೇಕು ಎಂದು ಕರ್ನಾಟಕ ಟೇಬಲ್ ಟೆನಿಸ್ ಸಂಸ್ಥೆಯ (ಕೆಟಿಟಿಎ) ಕಾರ್ಯದರ್ಶಿ ಟಿ.ಜಿ. ಉಪಾಧ್ಯ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಾಯೋಜಕತ್ವ ಹಸ್ತಾಂತರಕ್ಕೆ ಮನವಿ

ನವದೆಹಲಿ (ಪಿಟಿಐ): ಭಾರತದೊಳಗಿನ ಕ್ರಿಕೆಟ್ ಟೂರ್ನಿಗಳಿಗೆ ತಾನು ಹೊಂದಿರುವ ಟೈಟಲ್ ಪ್ರಾಯೋಜಕತ್ವ ಹಕ್ಕುಗಳನ್ನು ಬೇರೆ ಕಂಪನಿಗೆ ವರ್ಗಾಯಿಸಬೇಕೆಂದು ಪೇಟಿಎಂ ಸಂಸ್ಥೆಯು ಬಿಸಿಸಿಐಗೆ ಮನವಿ ಸಲ್ಲಿಸಿದೆ.

2019ರಲ್ಲಿ ಪೇಟಿಎಂ ಬಿಸಿಸಿಐನೊಂದಿಗೆ ಒಪ್ಪಂದ ಮಾಡಿಕೊಂಡಿತ್ತು. ಇದೀಗ ಪ್ರಾಯೋಜಕತ್ವದಿಂದ ಹಿಂದೆ ಸರಿಯುವ ನಿರ್ಧಾರ ಮಾಡಿದ್ದು, ಮಾಸ್ಟರ್‌ಕಾರ್ಡ್ ಸಂಸ್ಥೆಗೆ ಪ್ರಾಯೋಜಕತ್ವ ವರ್ಗಾಯಿಸಲು ಅನುಮತಿ ಕೋರಿದೆ. ಪೇಟಿಎಂ ಒಪ್ಪಂದವು 2023ರ ಮಾರ್ಚ್ 31ರವರೆಗೆ ಇದೆ. ಗುರುವಾರ ನಡೆದ ಅಪೆಕ್ಸ್ ಕೌನ್ಸಿಲ್ ಸಭೆಯಲ್ಲಿ ಈ ಕುರಿತು ಚರ್ಚೆ ನಡೆಯಿತು. ಪೇಟಿಎಂ ಮನವಿಗೆ ಅನುಮೋದನೆ ನೀಡಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಬೈಜುಸ್ ಬಾಕಿ: ಭಾರತ ಕ್ರಿಕೆಟ್ ತಂಡದ ಆಟಗಾರರ ಪೋಷಾಕು ಪ್ರಾಯೋಕತ್ವ ಪಡೆದುಕೊಂಡಿರುವ ಬೈಜುಸ್ ಸಂಸ್ಥೆಯು ಬಿಸಿಸಿಐಗೆ ₹ 86.21 ಕೋಟಿ ಬಾಕಿ ಪಾವತಿಸಬೇಕಿದೆ ಎಂದು ಸಭೆಯಲ್ಲಿ ಪ್ರಸ್ತಾವ ಮಾಡಲಾಯಿತು.

2019ರಿಂದ2023ರ ಏಕದಿನ ವಿಶ್ವ ಕಪ್ ಟೂರ್ನಿಯ ಮುಕ್ತಾಯದವರೆಗೂ ಸಂಸ್ಥೆಯು ಒಪ್ಪಂದಮಾಡಿಕೊಂಡಿದೆ.

’ಬಿಸಿಸಿಐನೊಂದಿಗೆ ಒಪ್ಪಂದವನ್ನು ವಿಸ್ತರಿಸಿಕೊಂಡಿದ್ದೇವೆ. ಒಪ್ಪಂದಗಳಿಗೆ ಹಸ್ತಾಕ್ಷರ ಹಾಕುವ ಕಾರ್ಯ ಬಾಕಿಯಿದೆ. ಅದಾದ ನಂತರ ಒಪ್ಪಂದದ ಪ್ರಕಾರ ಹಣ ಪಾವತಿಸಲಾಗುವುದು. ನಮ್ಮಿಂದ ಯಾವುದೇ ರೀತಿಯ ಹಣ ನೀಡುವುದು ಬಾಕಿ ಇಲ್ಲ‘ ಎಂದು ಬೈಜುಸ್ ವಕ್ತಾರ ತಿಳಿಸಿದ್ದಾರೆ.

ಪೂರ್ಣಪ್ರಮಾಣದ ದೇಶಿ ಕ್ರಿಕೆಟ್ ಋತು

ದುಲೀಪ್ ಟ್ರೋಫಿ ಮರುಆರಂಭ: ಡಿಸೆಂಬರ್‌ನಲ್ಲಿ ರಣಜಿ

ಮುಂಬೈ (ಪಿಟಿಐ): ಮುಂಬರುವ ದೇಶಿ ಕ್ರಿಕೆಟ್ ಋತುವನ್ನು ಮೊದಲಿನಂತೆಯೇ ಪೂರ್ಣಪ್ರಮಾಣದಲ್ಲಿ ಆಯೋಜಿಸಲಾಗುವುದು ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಅಧ್ಯಕ್ಷ ಸೌರವ್ ಗಂಗೂಲಿ ಹೇಳಿದ್ದಾರೆ.

2022–23ರ ದೇಶಿ ಕ್ರಿಕೆಟ್ ಋತುವಿನಲ್ಲಿ ಪೂರ್ಣಪ್ರಮಾಣದ ರಣಜಿ ಟ್ರೋಫಿ ಟೂರ್ನಿಯನ್ನು ನಡೆಸಲು ಬಿಸಿಸಿಐ ಒಲವು ತೋರಿದೆ. ಇದಲ್ಲದೇ; ಮೂರು ಋತುಗಳಿಂದ ಸ್ಥಗಿತವಾಗಿದ್ದ ದುಲೀಪ್ ಟ್ರೋಫಿ ಮತ್ತು ಇರಾನಿ ಟ್ರೋಫಿ ಟೂರ್ನಿಗಳನ್ನು ಮರು ಆರಂಭಿಸುವ ಕುರಿತು ಚಿಂತನೆ ನಡೆಸುತ್ತಿದೆ.

ಗುರುವಾರ ನಡೆದ ಬಿಸಿಸಿಐ ಅಪೆಕ್ಸ್ ಕೌನ್ಸಿಲ್ ಸಭೆಯಲ್ಲಿ ಈ ಕುರಿತು ಚರ್ಚೆ ನಡೆಯಿತು. ನಂತರ ಅಧ್ಯಕ್ಷರು ಈ ವಿಷಯ ಬಹಿರಂಗಪಡಿಸಿದ್ದಾರೆ.

ಕೋವಿಡ್ ಸೃಷ್ಟಿಸಿದ ಬಿಕ್ಕಟ್ಟಿನಿಂದಾಗಿ 2020ರಲ್ಲಿ ರಣಜಿ ಟ್ರೋಫಿ ಟೂರ್ನಿಯನ್ನು ರದ್ದು ಮಾಡಲಾಗಿತ್ತು. ಭಾರತದ ದೇಶಿ ಕ್ರಿಕೆಟ್ ಇತಿಹಾಸದಲ್ಲಿ ಮೊದಲ ಬಾರಿ ಟೂರ್ನಿ ರದ್ದಾಗಿತ್ತು. ಹೋದ ಋತುವಿನಲ್ಲಿ ಕಡಿಮೆ ಪಂದ್ಯಗಳ ವೇಳಾಪಟ್ಟಿ ಇದ್ದ ರಣಜಿ ಟೂರ್ನಿಯನ್ನು ಆಯೋಜಿಸಲಾಗಿತ್ತು. ಆದರೆ ಮೂರು ಋತುಗಳಿಂದ ಇರಾನಿ ಮತ್ತು ದುಲೀಪ್ ಟ್ರೋಫಿ ಟೂರ್ನಿಗಳನ್ನು ಆಯೋಜಿಸಿಲ್ಲ.

ಸೆಪ್ಟೆಂಬರ್ 8ರಿಂದ ದುಲೀಪ್ ಟ್ರೋಫಿ ಟೂರ್ನಿ ಆರಂಭಿಸುವ ಸಾಧ್ಯತೆ ಇದೆ. ಅಕ್ಟೋಬರ್ 1ರಿಂದ 5ರವರೆಗೆ ಇರಾನಿ ಕಪ್ ಟ್ರೋಫಿ ನಡೆಯಲಿದೆ. ಅ.11ರಿಂದ ಮುಷ್ತಾಕ್ ಅಲಿ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿ ಮತ್ತು ನವೆಂಬರ್‌12ರಿಂದ ವಿಜಯ್ ಹಜಾರೆ ಏಕದಿನ ಟ್ರೋಫಿ ಟೂರ್ನಿ ನಡೆಸುವ ಸಾಧ್ಯತೆ ಇದೆ. ಡಿಸೆಂಬರ್ 13ರಿಂದ ರಣಜಿ ಟೂರ್ನಿ ಆರಂಭಿಸುವ ನಿರೀಕ್ಷೆ ಇದೆ. ಫೆಬ್ರುವರಿ 1ರಿಂದ ನಾಕೌಟ್ ಹಂತದ ಪಂದ್ಯಗಳನ್ನು ಆಯೋಜಿಸಲು ಉದ್ದೇಶಿಸಲಾಗಿದೆ.

16 ವರ್ಷದೊಳಗಿನ ಬಾಲಕಿಯರ ವಿಭಾಗದ ಟೂರ್ನಿಯನ್ನೂ ಮುಂದಿನ ಋತುವಿನಿಂದ ಆರಂಭಿಸಲಾಗುವುದು ಎಂದೂ ಗಂಗೂಲಿ ತಿಳಿಸಿದರು.

ಯುಎಇಯಲ್ಲಿ ಏಷ್ಯಾಕಪ್: ಶ್ರೀಲಂಕಾದಲ್ಲಿ ನಿಗದಿಯಾಗಿದ್ದ ಏಷ್ಯಾಕಪ್ ಟಿ20 ಟೂರ್ನಿಯನ್ನು ಯುನೈಟೆಡ್ ಅರಬ್ ಎಮಿರೇಟ್ಸ್‌ಗೆ (ಯುಎಇ) ಸ್ಥಳಾಂತರ ಮಾಡಲಾಗಿದೆ ಎಂದು ಗಂಗೂಲಿ ಹೇಳಿದರು. ಶ್ರೀಲಂಕಾದಲ್ಲಿ ಅಶಾಂತಿ ತಲೆದೋರಿರುವ ಕಾರಣ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಏಷ್ಯಾಕಪ್ ಆಗಸ್ಟ್ 27ರಿಂದ ನಿಗದಿಯಾಗಿದೆ.

ಬ್ಯಾಡ್ಮಿಂಟನ್: ಕ್ವಾರ್ಟರ್‌ಗೆ ತನಿಶಾ

ತೈಪೆ (ಪಿಟಿಐ): ಭಾರತದ ತನಿಶಾ ಕ್ರಾಸ್ಟೊ ಅವರು ಇಲ್ಲಿ ನಡೆಯುತ್ತಿರುವ ತೈಪೆ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಮಹಿಳಾ ಮತ್ತು ಮಿಶ್ರ ಡಬಲ್ಸ್ ವಿಭಾಗಗಳಲ್ಲಿ ಕ್ವಾರ್ಟರ್‌ಫೈನಲ್ ತಲುಪಿದ್ದಾರೆ.

ಗುರುವಾರ ನಡೆದ ಮಿಶ್ರ ಡಬಲ್ಸ್ ವಿಭಾಗದ ಪ್ರೀಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ತನಿಶಾ ಮತ್ತು ಇಶಾನ್ ಭಟ್ನಾಗರ್ ಜೋಡಿ 21-14, 21-17ರಿಂದ ಚೀನಾ ತೈಪೆಯ ಚೆಂಗ್ ಕಾಯ್ ವೆನ್ ಮತ್ತು ವಾಂಗ್ ಯಿ ಕಿಯಾವೊ ಎದುರು ಜಯಿಸಿದರು.

ಮಹಿಳಾ ಡಬಲ್ಸ್‌ನ ಎರಡನೇ ಸುತ್ತಿನ ಪಂದ್ಯದಲ್ಲಿ ಶ್ರುತಿ ಮಿಶ್ರಾ ಜೊತೆಗೂಡಿದ ತನಿಶಾ 21-14, 21-8ರಿಂದ ಸ್ಥಳೀಯ ಆಟಗಾರ್ತಿಯರಾದ ಜಿಯಾ ಯಿನ್ ಲಿನ್ ಮತ್ತು ಲಿನ್ ಯು ಹಾವೊ ಎದುರು ಗೆದ್ದರು.

ಪುರುಷರ ಸಿಂಗಲ್ಸ್‌ನಲ್ಲಿ ಪರುಪಳ್ಳಿ ಕಶ್ಯಪ್ ಎಂಟರಘಟ್ಟ ತಲುಪಿದರು. ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ಅವರು 21-10, 21-19ರಿಂದ ಚೀನಾ ತೈಪೆಯ ಚಿಯಾ ಹಾವೊ ಲೀ ಎದುರು ಗೆದ್ದರು. ಮಿಥುನ್ ಮಂಜುನಾಥ್, ಕಿರಣ್ ಜಾರ್ಜ್ ಮತ್ತು ಪ್ರಿಯಾಂಶು ರಾಜಾವತ್ ಎರಡನೇ ಸುತ್ತಿನ ತಡೆ ದಾಟುವಲ್ಲಿ ವಿಫಲರಾದರು.

ಡೇವಿಸ್ ಕಪ್ ತಂಡದಲ್ಲಿ ಸುಮಿತ್

ನವದೆಹಲಿ (ಪಿಟಿಐ): ಸುಮಿತ್ ನಗಾಲ್ ಅವರು ನಾರ್ವೆ ಎದುರಿನ ವಿಶ್ವ ಗುಂಪು 1ರ ಪಂದ್ಯಕ್ಕೆ ಭಾರತ ಡೇವಿಸ್ ಕಪ್ ಟೆನಿಸ್ ತಂಡದಲ್ಲಿ ಸ್ಥಾನ ಗಿಟ್ಟಿಸಿದ್ದಾರೆ. ಡಬಲ್ಸ್ ಆಟಗಾರ ದಿವಿಜ್ ಶರಣ್ ಅವರನ್ನು ಕೈಬಿಡಲಾಗಿದೆ.

ರಾಮಕುಮಾರ್ ರಾಮನಾಥನ್, ಪ್ರಜ್ಞೇಶ್ ಗುಣೇಶ್ವರನ್, ಶಶಿಕುಮಾರ್ ಮುಕುಂದ್, ಯೂಕಿ ಭಾಂಬ್ರಿ, ರೋಹನ್ ಬೋಪಣ್ಣ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ನಾರ್ವೆಯಲ್ಲಿ ಸೆಪ್ಟೆಂಬರ್ 16ರಿಂದ 17ರವರೆಗೆ ಪಂದ್ಯ ನಡೆಯಲಿದೆ.

ಭಾರತ–ವೆಸ್ಟ್ ಇಂಡೀಸ್ ಮೊದಲ ಏಕದಿನ ಪಂದ್ಯ ಇಂದು

ಕೆರಿಬಿಯನ್ ಬಳಗಕ್ಕೆ ಶಿಖರ್ ಸೆಡ್ಡು



ಶಿಖರ್ ಧವನ್

ನಿಕೋಲಸ್ ಪೂರನ್

ಪೋರ್ಟ್ ಆಫ್ ಸ್ಪೇನ್, ಟ್ರಿನಿಡಾಡ್(ಪಿಟಿಐ): ಏಕದಿನ ಮಾದರಿಯ ಕ್ರಿಕೆಟ್ ಅಸ್ತಿತ್ವದ ಕುರಿತ ಚರ್ಚೆ ಈಗ ಜೋರಾಗಿಯೇ ನಡೆಯುತ್ತಿದೆ. ಇದೇ ಹೊತ್ತಿನಲ್ಲಿ ಭಾರತ ಮತ್ತು ವೆಸ್ಟ್ ಇಂಡೀಸ್ ತಂಡಗಳ ಏಕದಿನ ಕ್ರಿಕೆಟ್ ಸರಣಿಯು ಶುಕ್ರವಾರ ಆರಂಭವಾಗಲಿದೆ.

ಅನುಭವಿ ಮತ್ತು ಪ್ರಮುಖ ಆಟಗಾರರು ವಿಶ್ರಾಂತಿ ಪಡೆದಿರುವ ಭಾರತ ತಂಡವನ್ನು ಶಿಖರ್ ಧವನ್ ಮುನ್ನಡೆಸಲಿದ್ದಾರೆ. ಯುವ ಆಟಗಾರರ ಬಳಗಕ್ಕೆ ನಿಕೋಲಸ್ ಪೂರನ್ ನಾಯಕತ್ವದ ವಿಂಡೀಸ್ ಪಡೆಯು ಸವಾಲೊಡ್ಡಲಿದೆ. ಹೋದ ಫೆಬ್ರುವರಿಯಲ್ಲಿ ವಿಂಡೀಸ್ ಬಳಗವು ಭಾರತ ಪ್ರವಾಸ ಮಾಡಿತ್ತು. ಆಗ ಉಭಯ ತಂಡಗಳು ಮೂರು ಏಕದಿನ ಮತ್ತು ಮೂರು ಟಿ20 ಪಂದ್ಯಗಳ ಸರಣಿಗಳನ್ನು ಆಡಿತ್ತು. ಈ ಬಾರಿ ಆತಿಥೇಯ ವಿಂಡೀಸ್ ಮತ್ತು ಭಾರತ ತಂಡಗಳು ಮೂರು ಏಕದಿನ ಮತ್ತು ಐದು ಟಿ20 ಪಂದ್ಯಗಳಲ್ಲಿ ಮುಖಾಮುಖಿಯಾಗಲಿವೆ.

ಟಿ20 ವಿಶ್ವಕಪ್ ಇದೇ ಅಕ್ಟೋಬರ್‌ನಲ್ಲಿ ನಡೆಯಲಿದ್ದು, ಈ ಮಾದರಿಯಬಗ್ಗೆ ಆಟಗಾರರಿಗೆ ಹೆಚ್ಚು ಒಲವು ಇರುವುದು ಸಹಜ. ಅದರಿಂದಾಗಿ ಏಕದಿನ ಮಾದರಿಯ ಆಕರ್ಷಣೆ ಕಡಿಮೆಯಾಗಿದೆ. ಕಳೆದ ಕೆಲವು ಸಮಯದಿಂದ ಶಿಖರ್ ಧವನ್ ಏಕದಿನ ಮಾದರಿಯಲ್ಲಿ ಆಡುತ್ತಿದ್ದಾರೆ. ಇಂಗ್ಲೆಂಡ್‌ನಲ್ಲಿ ಏಕದಿನ ಮತ್ತು ಟಿ20 ಸರಣಿಗಳನ್ನು ಗೆದ್ದಿರುವ ಭಾರತ ತಂಡದ ನಾಯಕ ರೋಹಿತ್ ಶರ್ಮಾ ವಿಶ್ರಾಂತಿ ಪಡೆದಿದ್ದಾರೆ.

ವಿರಾಟ್ ಕೊಹ್ಲಿ, ಮೊಹಮ್ಮದ್ ಶಮಿ, ಜಸ್‌ಪ್ರೀತ್ ಬೂಮ್ರಾ, ರಿಷಭ್ ಪಂತ್ ಮತ್ತು ಹಾರ್ದಿಕ್ ಪಾಂಡ್ಯ ಅವರು ವಿಶ್ರಾಂತಿ ಪಡೆದಿರುವುದರಿಂದ ಯುವ ಆಟಗಾರರಿಗೆ ತಮ್ಮ ಸಾಮರ್ಥ್ಯ ಮೆರೆಯಲು ಈ ಸರಣಿಯಲ್ಲಿ ಅವಕಾಶ ಸಿಗಲಿದೆ.

ಶುಭಮನ್ ಗಿಲ್ ಮತ್ತು ಋತುರಾಜ್ ಗಾಯಕವಾಡ, ಅಮೋಘ ಲಯದಲ್ಲಿರುವ ದೀಪಕ್ ಹೂಡಾ, ಸೂರ್ಯಕುಮಾರ್ ಯಾದವ್ ತಮ್ಮ ಬ್ಯಾಟಿಂಗ್ ಕೌಶಲದ ಮೂಲಕ ಗಮನ ಸೆಳೆಯಲು ಉತ್ಸುಕರಾಗಿದ್ದಾರೆ. ಆವೇಶ್ ಖಾನ್, ಪ್ರಸಿದ್ಧಕೃಷ್ಣ ಮತ್ತು ಅರ್ಷದೀಪ್ ಸಿಂಗ್ ಅವರಿಗೂ ತಮ್ಮ ಖಾತೆಗೆ ವಿಕೆಟ್‌ಗಳನ್ನು ಸೇರಿಸಿಕೊಳ್ಳಲು ಸದವಕಾಶ. ವಿಕೆಟ್‌ಕೀಪರ್ ಸಂಜು ಸ್ಯಾಮ್ಸನ್ ಅವರಿಗೂ ಅಂತಿಮ ಹನ್ನೊಂದರಲ್ಲಿ ಕಣಕ್ಕಿಳಿಯುವ ಅವಕಾಶ ಸಿಗುವ ಸಾಧ್ಯತೆ ಇದೆ.

ವಿಂಡೀಸ್ ತಂಡವು ಇತ್ತೀಚೆಗೆ ಬಾಂಗ್ಲಾ ವಿರುದ್ಧ ತನ್ನದೇ ನೆಲದಲ್ಲಿ ಸರಣಿ ಸೋತಿದೆ. ಈಗ ಪುಟಿದೇಳುವ ಛಲದಲ್ಲಿದೆ. ಆಲ್‌ರೌಂಡರ್ ಜೇಸನ್ ಹೋಲ್ಡರ್ ಮರಳಿರುವುದು ತಂಡದ ಬಲ ಹೆಚ್ಚಿಸಿದೆ. ಇನಿಂಗ್ಸ್‌ನ ಸಂಪೂರ್ಣ 50 ಓವರ್‌ಗಳನ್ನು ಆಡುವುದೇ ತಂಡದ ಮುಂದಿರುವ ಸವಾಲು.

2019ರ ವಿಶ್ವಕಪ್ ಟೂರ್ನಿಯ ನಂತರ ವಿಂಡೀಸ್ ತಂಡವು 39 ಇನಿಂಗ್ಸ್ ಆಡಿದೆ. ಆದರೆ ಅದರಲ್ಲಿ ಆರು ಬಾರಿ ಮಾತ್ರ 50 ಓವರ್‌ಗಳನ್ನು ಆಡಿದೆ.

‘ಭಾರತದ ಉತ್ತಮ ಬೌಲಿಂಗ್ ಪಡೆಯನ್ನು ಎದುರಿಸಿ 50 ಓವರ್ ಬ್ಯಾಟಿಂಗ್ ಮಾಡುವ ಸವಾಲನ್ನು ಯಶಸ್ವಿಯಾಗಿ ಎದುರಿಸಬೇಕಿದೆ’ ಎಂದು ವಿಂಡೀಸ್ ಮುಖ್ಯ ಕೋಚ್ ಫಿಲ್ ಸಿಮನ್ಸ್ ಕೂಡ ಹೇಳಿದ್ದಾರೆ.

ಬಲಾಬಲ (ಏಕದಿನ)

136	ಪಂದ್ಯ
67	ಭಾರತ ಜಯ
63	ವಿಂಡೀಸ್ ಜಯ
6	ಫಲಿತಾಂಶವಿಲ್ಲ

ನಾಲ್ಕು ವರ್ಷಗಳಲ್ಲಿ ಮುಖಾಮುಖಿ

15	ಪಂದ್ಯ
11	ಭಾರತ ಗೆಲುವು
2	ವಿಂಡೀಸ್ ಜಯ
2	ಫಲಿತಾಂಶವಿಲ್ಲ

ಪಂದ್ಯ ಆರಂಭ: ರಾತ್ರಿ 7

ನೇರಪ್ರಸಾರ
ಸೋನಿ ನೆಟ್‌ವರ್ಕ್
ಡಿಡಿ ಸ್ಪೋರ್ಟ್ಸ್, ಫ್ಯಾನ್ ಕೋಡ್

ನಾಯಕರ ಬಲಾಬಲ (ಏಕದಿನ)

ಆಟಗಾರ	ದೇಶ	ಪಂದ್ಯ	ರನ್	ಶ್ರೇಷ್ಠ	ಶತಕ	ಅರ್ಧಶತಕ
ಶಿಖರ್ ಧವನ್	ಭಾರತ	152	6325	143	17	35
ನಿಕೊಲಸ್ ಪೂರನ್	ವಿಂಡಿಸ್	46	1293	118	1	9

ರಾಹುಲ್‌ಗೆ ಕೋವಿಡ್

ರಾಹುಲ್

ಮುಂಬೈ(ಪಿಟಿಐ): ಭಾರತದ ಬ್ಯಾಟರ್ ಕೆ.ಎಲ್. ರಾಹುಲ್ ಅವರಿಗೆ ಕೋವಿಡ್ ಇರುವುದು ಖಚಿತವಾಗಿದೆ. ಇದರಿಂದಾಗಿ ಅವರು ಮುಂಬರಲಿರುವ ವೆಸ್ಟ್ ಇಂಡೀಸ್ ವಿರುದ್ಧದ ಟಿ20 ಸರಣಿಯಿಂದ ಹೊರಬಿದ್ದಿದ್ದಾರೆ.

ಗುರುವಾರ ಬಿಸಿಸಿಐ ಅಪೆಕ್ಸ್ ಕೌನ್ಸಿಲ್ ಸಭೆಯ ನಂತರ ಅಧ್ಯಕ್ಷ ಸೌರವ್ ಗಂಗೂಲಿ ಈ ವಿಷಯ ತಿಳಿಸಿದರು.

ರಾಹುಲ್ ಈಚೆಗಷ್ಟೇ ಜರ್ಮನಿಯಲ್ಲಿ ಹರ್ನಿಯಾ ಶಸ್ತ್ರಚಿಕಿತ್ಸೆಗೊಳಗಾಗಿದ್ದರು. ಬೆಂಗಳೂರಿನ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯಲ್ಲಿ ಅವರು ಪುನಶ್ಚೇತನ ಮತ್ತು ಆರೈಕೆ ಪಡೆಯುತ್ತಿದ್ದರು. ಅದರಿಂದಾಗಿ ಶುಕ್ರವಾರ ವೆಸ್ಟ್ ಇಂಡೀಸ್‌ನಲ್ಲಿ ಆರಂಭವಾಗಲಿರುವ ಏಕದಿನ ಸರಣಿಯಲ್ಲಿ ಆಡದಿರಲು ನಿರ್ಧರಿಸಿದ್ದರು. ಗುರುವಾರ ರಾಹುಲ್, ಎನ್‌ಸಿಎನಲ್ಲಿ ಲೆವಲ್ ತ್ರಿ ಕೋಚ್ ಸರ್ಟಿಫಿಕೇಷನ್ ಕೋರ್ಸ್ ಅಭ್ಯರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ್ದರು.

ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಸ್ಪರ್ಧಿಸಲು ತೆರಳಿರುವ ಭಾರತ ಮಹಿಳಾ ತಂಡದ ಆಟಗಾರ್ತಿಯೊಬ್ಬರಿಗೆ ಕೂಡ ಕೋವಿಡ್ ಆಗಿದೆ ಎಂದು ಗಂಗೂಲಿ ತಿಳಿಸಿದರು.

ರಾಜ್ಯ ಸಂಘದ ಸ್ಥಾಪನೆ ಪ್ರಸ್ತಾವದ ನಂತರ ಹೆಚ್ಚಾದ ಒಳಸುಳಿ; ಶೀಘ್ರ ಸಭೆಗೆ ನಿರ್ಧಾರ

ಕಂಬಳ: ಅಂಗಳದಾಚೆ ‘ಕೆಸರು’ ಎರಚಾಟ

• ವಿಕ್ರಂ ಕಾಂತಿಕೆರೆ

> **ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿಲ್ಲ. ಅದಕ್ಕೆ ನಾನು ತಲೆಕೆಡಿಸಿಕೊಂಡಿಲ್ಲ. ನ್ಯಾಯಾಲಯದಲ್ಲಿ ದಾವೆ ಹೂಡಲು ಸಿದ್ಧತೆ ನಡೆಸುತ್ತಿದ್ದೇನೆ**
> **ಮುಚ್ಚೂರು ಲೋಕೇಶ್ ಶೆಟ್ಟಿ**
> ಪೊಲೀಸರಿಗೆ ದೂರು ನೀಡಿರುವವರು

> **ಸಮಿತಿಯಲ್ಲಿ ಗೊಂದಲಗಳಿಲ್ಲ. ಸಣ್ಣಪುಟ್ಟ ಭಿನ್ನಾಭಿಪ್ರಾಯ ದೂರ ಮಾಡುವ ಪ್ರಯತ್ನಗಳು ನಡೆಯುತ್ತಿದ್ದು ಕೆಲವೇ ದಿನಗಳಲ್ಲಿ ಎಲ್ಲವೂ ತಿಳಿಯಾಗಲಿದೆ. ರೋಹಿತ್ ಹೆಗ್ಡೆ ಎರ್ಮಾಳ್**
> ಜಿಲ್ಲಾ ಕಂಬಳ ಸಮಿತಿ ಅಧ್ಯಕ್ಷ

ಮಂಗಳೂರು: ಈ ಋತುವಿನ ಕಂಬಳ ಆರಂಭವಾಗಲು ಒಂದು ತಿಂಗಳು ಉಳಿದಿದ್ದು ಕಂಬಳ ಸಂಘಟನೆಯಲ್ಲಿ ಸಕ್ರಿಯರಾಗಿರುವವರ ನಡುವೆ ಪರಸ್ಪರ ಕೆಸರೆರಚಾಟವು ತಾರಕಕ್ಕೇರಿದೆ.

‘ಕೇವಲ ಒಂದು ಬಾಳೆಗೊನೆ ಅಥವಾ ವೀಳ್ಯದ ಗೌರವಕ್ಕಾಗಿ ಕಣದಲ್ಲಿ ಭಾರಿ ಪೈಪೋಟಿ ಕಂಡುಬರುತ್ತಿದ್ದ ಕಂಬಳಕ್ಕೆ ‘ದಾಖಲೆಯ ಕಳೆ’ ತುಂಬಲು ಪ್ರಯತ್ನಿಸಿದ್ದು ಅನಾರೋಗ್ಯಕರ ಪೈಪೋಟಿಗೆ ಹಾದಿಯೊದಗಿಸಿತು. ಮನಸ್ತಾಪ ಸೃಷ್ಟಿಯಾಗಲು ಅದುವೇ ಕಾರಣ’ ಎಂಬುದು ಒಂದು ಕಡೆಯವರ ಅಭಿಪ್ರಾಯ. ‘ಸ್ಥಳೀಯ ಕಂಬಳ ಸಮಿತಿಗಳನ್ನು ಒಟ್ಟುಗೂಡಿಸಿ ರಾಜ್ಯ ಕಂಬಳ ಸಂಸ್ಥೆ ಆರಂಭಿಸುವ ಪ್ರಸ್ತಾವ ಕೇಳಿದಾಗ ಪ್ರತಿಷ್ಠೆಗಳು ಮುಂಚೂಣಿಗೆ ಬಂದಿರುವುದು ಗೊಂದಲಗಳಿಗೆ ಕಾರಣ’ ಎಂಬುದು ಇನ್ನು ಕೆಲವರ ಅಭಿಮತ.

‘ಗುಣಪಾಲ ಕಡಂಬ ಅವರು ಕಂಬಳ ಅಕಾಡೆಮಿ ಆರಂಭಿಸಿ ತಮ್ಮದೇ ಸಾಮ್ರಾಜ್ಯ ಕಟ್ಟಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ’ ಎಂದು ಕಂಬಳ ಸಮಿತಿಯ ಕೆಲವರು ವಾದಿಸಿದರೆ, ‘ಈ ಕ್ರೀಡೆಯ ಗೌರವ ಹೆಚ್ಚಿಸಲು ನಡೆಸುತ್ತಿರುವ ಪ್ರಯತ್ನಗಳನ್ನು ತಡೆಯಲು ಕುತಂತ್ರಗಳನ್ನು ಹೆಣೆಯುತ್ತಿದ್ದಾರೆ’ ಎಂಬುದು ಗುಣಪಾಲ ಅವರ ಆರೋಪ.

ಸಮಿತಿ ರಚನೆಯಲ್ಲಿ ಆರಂಭವಾದ ಗೊಂದಲ: ಜಿಲ್ಲಾ ಕಂಬಳ ಸಮಿತಿಯ ಆಯ್ಕೆ ಎರಡು ವರ್ಷಗಳಿಗೊಮ್ಮೆ ನಡೆಯುತ್ತದೆ. ಮಹಾಸಭೆಯಲ್ಲಿ 90 ಮಂದಿ ಸದಸ್ಯರು ಪದಾಧಿಕಾರಿಗಳನ್ನು ಆಯ್ಕೆ ಮಾಡುತ್ತಾರೆ. ಸೂಚಿತ ವ್ಯಕ್ತಿಯ ಪರವಾಗಿ ಕೈ ಮೇಲಕ್ಕೆತ್ತುವ ಮೂಲಕ ಆಯ್ಕೆ ನಡೆಯುತ್ತದೆ. ಪ್ರತಿ ಋತುವಿನ ಕಂಬಳದ ದಿನಾಂಕಗಳನ್ನು ನಿಗದಿ ಮಾಡುವುದು, ರೆಫರಿಗಳನ್ನು ಆಯ್ಕೆ ಮಾಡುವುದು ಸೇರಿದಂತೆ ಕಂಬಳದ ಎಲ್ಲ ಆಗುಹೋಗುಗಳು ಈ ಸಮಿತಿಯ ಕಣ್ಗಾವಲಿನಲ್ಲಿ ನಡೆಯುತ್ತವೆ.

ಕೊರೊನಾ ಸಂದರ್ಭದಲ್ಲಿ ಯಾರಿಗೂ ಮಾಹಿತಿ ನೀಡಿದೆ ತಮಗೆ ಬೇಕಾದವರನ್ನು ಮಾತ್ರ ಕರೆದು ಆಯ್ಕೆ ಪ್ರಕ್ರಿಯೆ ನಡೆಸಲಾಗಿದೆ ಎಂದು ಆರೋಪಿಸಿ ಸಮಿತಿಯ ಆಜೀವ ಸದಸ್ಯ ಮುಚ್ಚೂರು ಲೋಕೇಶ್ ಶೆಟ್ಟಿ ಅವರು ನ್ಯಾಯಾಲಯದ ಮೊರೆ ಹೋಗಿದ್ದರು.

ಈ ನಡುವೆ ಕಳೆದ ಏಪ್ರಿಲ್‌ನಲ್ಲಿ ರಾಜ್ಯ ಕಂಬಳ ಸಂಸ್ಥೆ ಸ್ಥಾಪಿಸಲು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಮುಂದಾಯಿತು. ವಿಧಾನಸಭಾಧ್ಯಕ್ಷರ ನೇತೃತ್ವದಲ್ಲಿ ನಡೆದ ಸಭೆಯ ನಂತರ, ಅಂತಿಮ ನಿರ್ಧಾರ ಕೈಗೊಳ್ಳುವ ಜವಾಬ್ದಾರಿಯನ್ನು ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗೆ ವಹಿಸಲಾಗಿದೆ.

‘ಕಂಬಳಕ್ಕೆ ವಿವಿಧ ಆಯಾಮಗಳಿವೆ. ಅದೆಲ್ಲವನ್ನೂ ಪರಿಶೀಲಿಸಿ ಮುಂದಿನ ತಿಂಗಳ ಮೊದಲ ವಾರದಲ್ಲಿ ತೀರ್ಮಾನ ಕೈಗೊಳ್ಳಲಾಗುವುದು’ ಎಂದು ಜಿಲ್ಲಾಧಿಕಾರಿ ಡಾ.ರಾಜೇಂದ್ರ ಕೆ.ವಿ ’ಪ್ರಜಾವಾಣಿ’ಗೆ ತಿಳಿಸಿದರು.

ರಾಜ್ಯ ಸಂಸ್ಥೆ ಆರಂಭಿಸುವ ಪ್ರಯತ್ನದ ಬೆನ್ನಲ್ಲೇ ಅಕಾಡೆಮಿ, ಜಿಲ್ಲಾ ಸಮಿತಿ ಮತ್ತು ಎರಡೂ ಕಡೆಯವರನ್ನು ವಿರೋಧಿಸುವವರ ನಡುವಿನ ಆಂತರಿಕ ಕಲಹ ಭುಗಿಲೆದ್ದಿದೆ.

ಅಕಾಡೆಮಿಯ ಸ್ಥಾಪಕ ಗುಣಪಾಲ, ದಾಖಲೆ ಬರೆದಿರುವ ಶ್ರೀನಿವಾಸ ಗೌಡ ಮತ್ತು ಲೇಸರ್ ಬೀಮ್ ತಂತ್ರಜ್ಞಾನ ಅಳವಡಿಸಿದ ಸ್ಕೈವ್ ವೀವ್ ಸಂಸ್ಥೆಯ ರತ್ನಾಕರ ಅವರ ಮೇಲೆ ಪೊಲೀಸ್ ಠಾಣೆಗೆ ದೂರು ನೀಡುವ ಮಟ್ಟಕ್ಕೆ ಕಲಹ ಬೆಳೆದಿದೆ

ಸಂಕ್ಷಿಪ್ತ ಸುದ್ದಿ

ಬ್ರೇಸ್‌ವೆಲ್ ಹ್ಯಾಟ್ರಿಕ್

ಬ್ರೇಸ್‌ವೆಲ್

ಬೆಲ್‌ಫಾಸ್ಟ್ (ಎಎಫ್‌ಪಿ): ಆಫ್‌ಸ್ಪಿನ್ನರ್ ಮಿಚೆಲ್ ಬ್ರೇಸ್‌ವೆಲ್ (5ಕ್ಕೆ3) ಹ್ಯಾಟ್ರಿಕ್ ಬಲದಿಂದ ನ್ಯೂಜಿಲೆಂಡ್ ತಂಡವು ಐರ್ಲೆಂಡ್ ಎದುರಿನ ಟಿ20 ಪಂದ್ಯದಲ್ಲಿ 88 ರನ್‌ಗಳಿಂದ ಜಯಿಸಿತು.

ಸಿವಿಲ್ ಸರ್ವಿಸ್ ಕ್ರಿಕೆಟ್ ಕ್ಲಬ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕಿವೀಸ್ ಬಳಗವು ಕ್ಲೀವರ್ ಬ್ಯಾಟಿಂಗ್ ಬಲದಿಂದ 20 ಓವರ್‌ಗಳಲ್ಲಿ 4ಕ್ಕೆ179 ರನ್ ಗಳಿಸಿತು. ಅದಕ್ಕುತ್ತರವಾಗಿ ಐರ್ಲೆಂಡ್ ತಂಡವು 13.5 ಓವರ್‌ಗಳಲ್ಲಿ 91 ರನ್ ಗಳಿಸಿ ಆಲೌಟ್ ಆಯಿತು.

ಸಂಕ್ಷಿಪ್ತ ಸ್ಕೋರ್: ನ್ಯೂಜಿಲೆಂಡ್: 20 ಓವರ್‌ಗಳಲ್ಲಿ 4ಕ್ಕೆ 179 (ಫಿನ್ ಅಲೆನ್ 35, ಡೆನ್ ಕ್ಲೀವರ್ ಔಟಾಗದೆ 78, ಗ್ಲೆನ್ ಫಿಲಿಪ್ಸ್ 23, ಕ್ರೇಗ್ ಯಂಗ್ 34ಕ್ಕೆ2, ಜೊಶುವಾ ಲಿಟಲ್ 31ಕ್ಕೆ2) ಐರ್ಲೆಂಡ್: 13.5 ಓವರ್‌ಗಳಲ್ಲಿ 91 (ಪಾಲ್ ಸ್ಟರ್ಲಿಂಗ್ 21, ಮಾರ್ಕ್ ಅಡೇರ್ 27, ಜೇಕಬ್ ಡಫಿ 20ಕ್ಕೆ2, ಈಶ್ ಸೋಧಿ 21ಕ್ಕೆ3, ಮಿಚೆಲ್ ಬ್ರೇಸ್‌ವೆಲ್ 5ಕ್ಕೆ3) ಫಲಿತಾಂಶ: ನ್ಯೂಜಿಲೆಂಡ್‌ಗೆ 88 ರನ್‌ಗಳ ಜಯ.

ಕೆಬಿಎ ಮಾನ್ಯತೆ ರದ್ದು ಕ್ರಮಕ್ಕೆ ತಡೆ

ಬೆಂಗಳೂರು: ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆಯ ಮಾನ್ಯತೆಯನ್ನು ರದ್ದುಗೊಳಿಸಿರುವ ಭಾರತ ಬ್ಯಾಡ್ಮಿಂಟನ್ ಸಂಸ್ಥೆ (ಬಿಎಐ) ಕ್ರಮಕ್ಕೆ ತಡೆ ನೀಡಿರುವ ಹೈಕೋರ್ಟ್ ಮಧ್ಯಂತರ ಆದೇಶ ಹೊರಡಿಸಿದೆ. ಬಿಎಐ ಕ್ರಮವನ್ನು ಪ್ರಶ್ನಿಸಿ ಕೆಬಿಎ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್‌.ಜಿ. ಪಂಡಿತ್ ಆದೇಶ ನೀಡಿದ್ದಾರೆ.

ಪರಿಷ್ಕೃತ ನಿಯಮಾವಳಿಯನ್ನು ನಿಗದಿತ ಸಮಯದೊಳಗೆ ಜಾರಿಗೊಳಿಸಿಲ್ಲವೆಂದು ಕಾರಣ ನೀಡಿದ್ದ ಬಿಎಐ, ಕೆಬಿಎ ಮಾನ್ಯತೆಯನ್ನು ಈಚೆಗೆ ರದ್ದುಗೊಳಿಸಿತ್ತು.

‘ಮುಂದಿನ ನಡೆಯ ಕುರಿತು ಎಲ್ಲ ಸದಸ್ಯರ ತುರ್ತು ಸಭೆ ನಡೆಸಿ ನಿರ್ಧರಿಸಲಾಗುವುದು. ಇದೇ ತಿಂಗಳ ಅಂತ್ಯದಲ್ಲಿ ಸಭೆ ನಡೆಸಲಾಗುವುದು. ಟೂರ್ನಿಗಳು ವೇಳಾಪಟ್ಟಿಯ ಪ್ರಕಾರವೇ ನಡೆಯಲಿವೆ. ಈ ಬೆಳವಣಿಗೆ ಕುರಿತು ಬಿಎಐಗೂ ಮಾಹಿತಿ ನೀಡಿದ್ದೇವೆ’ ಎಂದು ಕೆಬಿಎ ಅಧಿಕಾರಿಗಳು ತಿಳಿಸಿದ್ದಾರೆ.

ಬೆಂಗಳೂರು ಗಾಲ್ಫ್: ಸೆಹೆರ್‌ಗೆ ಮುನ್ನಡೆ

ಬೆಂಗಳೂರು: ಉತ್ತಮ ಆಟ ಮುಂದುವರಿಸಿದ ಸೆಹೆರ್ ಅತ್ವಾಲ್ ಅವರು ಹೀರೊ ಮಹಿಳಾ ಪ್ರೊ ಗಾಲ್ಫ್ ಟೂರ್ 10ನೇ ಲೆಗ್ ಟೂರ್ನಿಯ ಎರಡನೇ ಸುತ್ತಿನ ಬಳಿಕ ಮುನ್ನಡೆ ಕಾಪಾಡಿಕೊಂಡಿದ್ದಾರೆ.

ಇಲ್ಲಿನ ಪ್ರೆಸ್ಟೀಜ್ ಗಾಲ್ಫ್‌ಶೈರ್ ಅಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಮೊದಲ ಸುತ್ತಿನಲ್ಲಿ ಬುಧವಾರ ಸೆಹೆರ್ ಮತ್ತು ನೇಹಾ ತ್ರಿಪಾಠಿ ಜಂಟಿ ಮುನ್ನಡೆಯಲ್ಲಿದ್ದರು. ಆದರೆ ಗುರುವಾರ ನೇಹಾ ಅವರನ್ನು ಹಿಂದಿಕ್ಕುವಲ್ಲಿ ಸೆಹೆರ್ ಯಶಸ್ವಿಯಾದರು.

ಲೈಂಗಿಕ ಸಮಸ್ಯೆ



ಪೌರುಷ ದೌರ್ಬಲ್ಯ ದೂರ ಮಾಡಿಕೊಳ್ಳಿ. ಇಂದ್ರಿಯದ ಆಕಾರ ಹೆಚ್ಚಿಸಿಕೊಳ್ಳಿ. ದಾಂಪತ್ಯ ಜೀವನದ ಅಸಲಿ ಆನಂದ ಪಡೆಯಿರಿ. ಇಂದೇ ಖರೀದಿಸಿದಲ್ಲಿ 50% ಡಿಸ್ಕೌಂಟ್ ಪಡೆಯಿರಿ

ನಿಮ್ಮ ಸಮಸ್ಯೆಗೆ ಸತ್ಯ ಹಾಗೂ ಆಯುರ್ವೇದಿಕ ಔಷಧಿ ಪಡೆಯಿರಿ ಮತ್ತು ಆನಂದಮಯ ಜೀವನ ನಿಮ್ಮದಾಗಿಸಿಕೊಳ್ಳಿ.

02262676816